ಸಂವಾದ

ನವೆಂಬರ್ 2012 · ರೂ. 20



ಚರ್ಚೆ:

ಗಾಂಧಿ ದರ್ಶನ;
ಖಡ್ಗ ಹಿಡಿದ ಲೇಖಕ

ಮನುಷ್ಯತ್ವದ ಒಡಲಿಗೆ ಜಾತಿ-ಧರ್ಮದ

ಗೆದ್ದಲು

PRISTINE BREAKFAST
HEALTHY ORGANIC BREAKFAST CEREAL RANGE
Wheat
Net wt : 300g
Rs.150.00
Mixed Millet
Net wt : 300g
Rs.150.00
Corn
Net wt : 300g
Rs.150.00
Ragi
Net wt : 300g
Rs.150.00
Organic Cereal Flakes
~ CORN ~
Customer Care
1800 425 2216
Certified Organic
Rich in Vitamins and Minerals
Pristine Organics Pvt. Ltd. #44/2A, Kodigehalli Gate, Sahakarnagar Post, NH-7, Bengaluru - 560092.
info@pristineorganics.com | www.pristineorganics.com

ಸಂವಾದ

ಮಾಸ ಪತ್ರಿಕೆ

ಸಂಪುಟ 11 ಸಂಚಿಕೆ 1

ನವೆಂಬರ್ 2012

ಸಂಪಾದಕ:
ಇಂದೂಧರ ಹೊನ್ನಾಪುರ

ಉಪ ಸಂಪಾದಕ:
ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ **Editorial: 9448048306**
✆ **Circulation: 9945264687**
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

ಒಳಪುಟಗಳಲ್ಲಿ



- ಪತ್ರಗಳು ೦೪
- ಸಂಪಾದಕರೊಂದಿಗೆ ಸಂವಾದ:
  - ಜಿ.ವಿ ಸುಂದರ್ ೦೬
  - ಮಾರುತಿ ಹೆಚ್ ೦೭
  - ಹರಿಶಂಕರ್ ಆರ್ ೦೯
- ಗಾಂಧಿ ದರ್ಶನ; ಖಡ್ಗ ಹಿಡಿದ ಲೇಖಕ
  - ಎಸ್.ಮರಿಸ್ವಾಮಿ ೧೦
- ಶಾಶ್ವತ ಪರಿಹಾರದೆಡೆಗೆ ಕಾವೇರಿ ಚಳವಳಿ
  - ಡಾ॥ ವಾಸು ಎಚ್.ವಿ ೧೪

- ಚಿಲ್ಲರೆ ವ್ಯಾಪಾರ ವಿದೇಶಿ ಬಂಡವಾಳ
  - ಮ.ಶ್ರೀ ಮುರಳಿಕೃಷ್ಣ ೧೮
- ನೇರ ವಿದೇಶಿ ಹೂಡಿಕೆಯಿಂದ ಯಾರ ಅಭಿವೃದ್ಧಿ ಆಗಲಿದೆ?
  - ಮೂಲ: ರಾಜೇಂದ್ರ ಸಾಚಾರ್
  - ಅನು: ಸುರೇಶ್ ಭಟ್ ಬಾಕ್ರಬೈಲು ೨೨
- ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ರಾಜಕಾರಣದ ಕುಸಿತ
  - ಮಲ್ಲಿಕಾರ್ಜುನ ಗುಮ್ಮಗೋಳ ೨೪
- ಮನುಷ್ಯತ್ವದ ಒಡಲಿಗೆ ಜಾತಿ-ಧರ್ಮದ ಗೆದ್ದಲು
  - ನಾರಾಯಣ್ ತಿರುಮಲಾಪುರ ೨೬
- ದಲಿತರ ಮೀಸಲಾತಿ ವರ್ಗೀಕರಣ
  - ನರಸಿಂಹ ಗುಂಜಹಳ್ಳಿ ೩೦
- ಬತ್ತದ ಬಯಲು-೧೦
  - ಡಾ॥ ಬಿ.ಎಂ ಪುಟ್ಟಯ್ಯ ೩೪
- ನೋಯುವ ಹಲ್ಲಿಗೆ ಹೊರಳುವ ನಾಲಿಗೆ-೧೨
  - ಡಾ॥ ಎಚ್.ಎಸ್ ಅನುಪಮಾ ೩೮
- ಹೊಸ ಪುಸ್ತಕ ೪೧
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ ಎಸ್ ಮರಿಸ್ವಾಮಿ ೪೨
- ಮುಲ್ಲಾ ನಸ್ರುದ್ದೀನ್ ಕಥೆಗಳು ೪೮
- ಕವನಗಳು:
  - ಒಂಟಿ ಮರವೂ ಮೈ ದಾನವೂ ೨೯
  - ನಿರ್ವಾಣ ೪೭

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಜನಪದ ಮಹಾಭಾರತ: ಕೃಷಿ ಸಂಸ್ಕೃತಿಗೆತ್ತಿದ ಹೊನ್ನಾರು

ಮಾನ್ಯ ಸಂಪಾದಕರೇ,

ಯುಗಾದಿ ಹಬ್ಬವೆಂದರೆ ಹೊಸ ವರುಷದ ಆರಂಭ. ಆ ನಂತರ ಮುಂಗಾರು ಮಳೆ ಬಿದ್ದ ಹೊಲದಲ್ಲಿ ಗೇಯುವ ಮೊದಲ ಉಳುಮೆಗೆ ಹೊನ್ನಾರು ಎತ್ತುವುದು, ಹೊನ್ನಾರು ಕಟ್ಟುವುದು, ಹೊನ್ನಾರು ಮಾಡುವುದು ಮುಂತಾಗಿ ಕರೆಯುತ್ತಾರೆ. ಇದು ಭೂಮಿ ದೇವಿಗೆ ಹೊನ್ನ ಹಾರವೂ, ರೈತನ ಪಾಲಿಗೆ ಸಂಪತ್ ಸಮೃದ್ಧಿಯ ಆರಂಭವೂ ಹೌದು. ಹೊನ್+ಆರು=ನೇಗಿಲು>ಹೊನ್ನಿನ ನೇಗಿಲು ಹಾಗೂ ಹೊನ್ನಿನ+ಹಾರ=ಹೊನ್ನಾರು ಎಂದಾಗುತ್ತದೆ. ಕೃಷಿ ಸಂಸ್ಕೃತಿಯಲ್ಲಿ ಈ ಎರಡೂ ಪದಗಳು ಏಕೀಭವಿಸಿ ಧ್ವನಿಪೂರ್ಣವೆನಿಸಿವೆ. ಆರುಕಟ್ಟಿ ಆರಂಭಿಸುವ ಕೆಲಸವೇ ಕೃಷಿ. ಹೊನ್ನಾರು ಹೂಡುವುದೆಂದರೆ ಆ ವರ್ಷದ ಬೇಸಾಯ ಆರಂಭ. ಅದೊಂದು ಆಚರಣೆ(ರಿಚುಯಲ್). ಯುಗಾದಿ ಹಬ್ಬದೂಟ ಆದ ಮೇಲೆ ಊರ ಪಟೇಲರು, ಗೌಡರು, ಜೋಯಿಸರು ಅರಳಿಕಟ್ಟೆಯಲ್ಲಿ ಕಲೆತು ಪಂಚಾಂಗ ಫಲವನ್ನು ಓದಿಸಿ ಕೇಳುತ್ತಾರೆ. ಪಂಚಾಂಗ ಕೇಳುವುದೆಂದರೆ ಆ ವರ್ಷ ಅನ್ನ ಹೆಚ್ಚೋ ಚಿನ್ನ ಹೆಚ್ಚೋ: ಹೊನ್ನಾರು ಕಟ್ಟುವುದಕ್ಕೆ ಯಾರ ಹೆಸರುಬಲ ಕೂಡಿಬರುತ್ತದೆ; ಮುಂದ್ಲಾರಿಗೆ ಯಾವ ಬಣ್ಣದ ಹೋರಿಗಳನ್ನು ಹೂಡಬೇಕು; ಅದನ್ನು ಪೂಜೆ ಮಾಡುವವರು ಯಾರು- ಇತ್ಯಾದಿ ವಿಚಾರಗಳನ್ನು ನಿಗದಿ ಮಾಡುವುದು.

ಆ ಪ್ರಕಾರ ಆರುಕಟ್ಟಿ, ಸೆಗಣಿ ಬೆನಕನಿಗೆ ಪೂಜೆ ಮಾಡಿ, ನೆನೆಯಕ್ಕಿ ನೆನೆಗಡಲೆ ಹಸಿ ತಂಬಿಟ್ಟುಗಳನ್ನು ಬಸವಣ್ಣನಿಗೆ ತಿನ್ನಿಸಿ ಹೊನ್ನಾರು ಹೊಡೆಯುತ್ತಾರೆ. ಪ್ರತಿ ಮನೆಯಿಂದಲೂ ಒಂದೊಂದು ನೇಗಿಲು ಬರುತ್ತವೆ. ಅವು ಊರು ಸುತ್ತ ಮೂರು ಸುತ್ತು ಬಂದು ನಿಲ್ಲುತ್ತವೆ. ಉಳಿದಂತೆ ಅವರವರ ನೇಗಿಲು ಅವರವರ ಹೊಲದಲ್ಲಿಯೂ ಹಾಗೇ ಹೊನ್ನಾರು ಹಡೆದು ಬೇಸಾಯಕ್ಕೆ ನಾಂದಿ ಮಾಡುವವು. ಈ ಆಚರಣೆ ಕೆಲವು ಕಡೆ ಯುಗಾದಿ ಹಬ್ಬದ ದಿನವೇ (ಮಳೆ ಬಂದಿದ್ದರೆ) ನಡೆಯುವುದುಂಟು. ಇನ್ನು ಕೆಲವು ಕಡೆ ಮುಂಗಾರು ಮಳೆ ಬಿದ್ದ ಮೇಲೆ ಅದೂ ಭರಣಿ ಮಳೆಯಲ್ಲಿ ಹೊನ್ನಾರು ಹೂಡುವ ಸಂಪ್ರದಾಯ ಕಂಡು ಬರುತ್ತದೆ. ಇದು ಕೃಷಿ ಸಂಸ್ಕೃತಿಯ ನಾಂದಿ; ಅದರ ಸಲ್ಲಕ್ಷಣ. ಜನಪದ ಮಹಾಭಾರತದ ಕಲಿಪ್ರಭಾವ ಪರ್ವದಲ್ಲಿ ಈ ಆಚರಣೆಯ ಪ್ರಸ್ತಾಪ ಬರುತ್ತದೆ.

ಈ ಹಿನ್ನಲೆಯಿಂದ ನೋಡಿದರೆ ಜನಪದ ಮಹಾಭಾರತವು ಕೃಷಿ ಸಂಸ್ಕೃತಿಯ ಉಳುಮೆ(ಅನ್ವೇಷಣೆ) ಗೆತ್ತಿದ ಹೊನ್ನಾರಿನಂತೆ ಕಂಡುಬರುತ್ತದೆ.

ಪ್ರೊ. ಶಿವರಾಮಯ್ಯ, ಬೆಂಗಳೂರು

ಪ್ರಜ್ಞಾವಂತರ ಪತ್ರಿಕೆ

ಸಹೃದಯರೇ,

ಕನ್ನಡದಲ್ಲಿ ಇಂದು ಹತ್ತಾರು ವಾರಪತ್ರಿಕೆಗಳು, ಮಾಸಪತ್ರಿಕೆಗಳು ಮಾರುಕಟ್ಟೆಯಲ್ಲಿ ಲಭ್ಯ. ಬೆರಳೆಣಿಕೆಯ ಸಾಹಿತ್ಯ ಪತ್ರಿಕೆಗಳೂ ಹೊರಬರುತ್ತಿವೆ. ಆದರೆ ಕನ್ನಡದ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಚಿಂತಿಸುವ, ವೈಚಾರಿಕ ಪ್ರಜ್ಞೆಯನ್ನು ಬಿತ್ತಿ ಬೆಳೆಯುವ ಬದ್ಧತೆಯುಳ್ಳ ಪತ್ರಿಕೆಗಳು ವಿರಳ. ಈ ಕೊರತೆಯನ್ನು ಶ್ರೀ ಇಂದೂಧರ ಹೊನ್ನಾಪುರ ಅವರ ಸಂಪಾದಕತ್ವದ 'ಸಂವಾದ' ಮಾಸಪತ್ರಿಕೆ ತುಂಬುತ್ತಿರುವುದು ಸಂತೋಷ. ಪತ್ರಿಕೆಯ ಒಳ-ಹೊರಗಣ ವಿನ್ಯಾಸ, ವಸ್ತು-ಹೂರಣ ಎಲ್ಲವೂ ಅಚ್ಚುಮೆಚ್ಚು. ಎಲ್ಲ ಪ್ರಜ್ಞಾವಂತ ಓದುಗರ ಮೆಚ್ಚಿನ ಈ ಪತ್ರಿಕೆ ಎಲ್ಲ ಮನೆಗಳಿಗೂ-ಗ್ರಂಥಾಲಯಗಳಿಗೂ ಭೂಷಣ. ಸಂಪಾದಕ ಮಂಡಳಿ, ಪತ್ರಿಕೆಯ ಬೆನ್ನ ಹಿಂದಿರುವ ಎಲ್ಲ ಕಾರ್ಮಿಕ ವರ್ಗಕ್ಕೆ ಅಭಿನಂದನೆಗಳು.

ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಡಂಬಳ



ಪತ್ರಾಗಾರ

ಹೊನ್ನಾರು; ಇನ್ನಷ್ಟು ಬೆಳಕು ಚೆಲ್ಲಲಿ...

ಮಾನ್ಯ ಸಂಪಾದಕರೇ,

ಸೆಪ್ಟೆಂಬರ್-2012ರ 'ಸಂವಾದ'ದ ಸಂವಾದಲ್ಲಿ ಹೊಸಳ್ಳಿ ರಾಜೇಗೌಡ ಅವರು ವಡ್ಡಗೆರೆ ನಾಗರಾಜಯ್ಯ ಅವರ 'ಗೋಸಂಗಿ'ಗಳ ಕುರಿತಾದ ಲೇಖನಕ್ಕೆ (ಸಂವಾದ ಆಗಸ್ಟ್ 2012) ಅದ್ಭುತವಾಗಿ ಪ್ರತಿಕ್ರಿಯಿಸಿದ್ದಾರೆ. ಇದೊಂದು ಪ್ರತಿಕ್ರಿಯೆಯಾದರೂ, ಒಂದು ಸತ್ಯಶೋಧಕ ಒಳನೋಟಗಳಿಂದ ಕೂಡಿದ ಸರಳ ಬರಹವಾಗಿದೆ. ಭಗವಾನರ ಲೇಖನಕ್ಕೆ ಚುಟುಕಿನಲ್ಲೆ ಕುಟುಕಿರುವುದೂ ಸಮಂಜಸವಾಗಿದೆ. ಹಾಗೆಯೇ ಮಹದೇವ ಬಣಕಾರರ... ಹುಲ್ಲೋಣಗಿ ಬೆಳೆವುದಲ?? ಕೂಡ ಒಂದು ಉತ್ತಮ ಲೇಖನ.

ಇನ್ನು, ಹೊನ್ನಾರಿನ ಬಗ್ಗೆ, ಭಗವಾನರ ಪಕ್ಕದ ತಾಲೂಕಿನವನಾದ (ಕೆ.ಆರ್.ನಗರ) ನನ್ನ ಅನುಭವ; ನಮ್ಮ ಕಡೆ ಹೊನ್ನಾರು ಕಟ್ಟುವಾಗ, ನೇಗಿಲಿನ ಈಚಿಗೆ, ಮೇಣಿಯ ಕೊರಳಿಗೆ, ನೊಗದ ಎರಡೂ ಬದಿಗೆ ಹೊಂಗದಾರ ಕಟ್ಟುತ್ತಿದ್ದರು. ಈ ಹೊಂಗದಾರವೆಂಬುದು, ನೆನೆಸಿದ ಅರಿಶಿಣಪುಡಿಯನ್ನು ಹಸಿನೂಲಿನ ದಾರಕ್ಕೆ ಸವರಿದ್ದಂತಹದು. ಹಳದಿ ಲೋಹ ಚಿನ್ನಕ್ಕೆ ಮೌಲ್ಯಯುತವಾದ ಚಾಲನೆ ಬಂದಾಗ, ಅದರ ಆಭರಣಗಳ ತೊಡುಗೆ ಸಂಪತ್ತಿನ (ಸೌಂದರ್ಯದ ಜತೆಗೆ) ಸಂಕೇತವಾಗಿದ್ದು, ಬಡವರು ತಮ್ಮ ತಾಳಿಗಾಗಿಯೇ ಚಿನ್ನ ಕಾಣದಂತಹ ಸಂದರ್ಭದಲ್ಲಿ ತತ್ಕಾಲದ ಪರಿಹಾರವಾಗಿ (ಅಪದ್ಧರ್ಮದಂತೆ) ಒಂದು ಹೊಂಗದಾರದ ನಡುಭಾಗಕ್ಕೆ ಅರಿಶಿನ ಕೊಂಬನ್ನು ಕಟ್ಟಿ ಅದನ್ನೇ ಮಾಂಗಲ್ಯವಾಗಿ ಭಾವಿಸುವುದುಂಟು. ಭಗವಾನರ ಲೇಖನದಲ್ಲಿ ಈ 'ಹೊಂಗದಾರ'ವೇ ಮಾಯವಾಗಿ ನೇಗಿಲಿಗೆ ಬರೀ ಅರಿಶಿಣ-ಕುಂಕುಮವಷ್ಟೇ ಪ್ರಸ್ತಾಪವಾಗಿದೆ. (ಈ ಅರಿಶಿಣ-ಕುಂಕುಮಗಳನ್ನು ಬರೀ ಹೊನ್ನಾರಿನ ಸಮಯದಲ್ಲಷ್ಟೇ ಅಲ್ಲ, ರೈತಾಪಿಗಳು ತಮ್ಮ ಸುತ್ತಲಿನ ಜಾತ್ರೆಗೆ, ರಾಸುಗಳ ಗಾಡಿಕಟ್ಟಿಕೊಂಡು ಹೊರಡುವಾಗ, ಗಾಡಿಯ ಮೂಕಿಗೆ, ನೊಗಕ್ಕೆ ಲೇಪಿಸಿ ದೇವರ ಗುಡಿಗೆ ಪೂಜೆ ಮಾಡಿಸುತ್ತಿದ್ದದ್ದೂ ಉಂಟು)

ಹೊನ್ನಾರು ಪದ್ಧತಿ ಬೌದ್ಧರಿಂದ ಬಂದದ್ದೆಂದು ಶ್ರೀ ಭಗವಾನರ ಪ್ರತಿಪಾದ (ಸಂ-ಶೋಧ)ನೆ! 'ಏಕೆಂದರೆ, ಶುದ್ಧೋದನ ಬೌದ್ಧನಂತೂ ಆಗಿದ್ದಿಲ್ಲ; ಸಿದ್ಧಾರ್ಥ ಬುದ್ಧನಾದ ನಂತರ ಈ ಪದ್ಧತಿ ಜಾರಿಗೆ ಬಂದಿತೆಂಬುದು ಲೇಖಕರ ಭಾವನೆಯಿದ್ದಂತಿದೆ. ಹಾಗಾದರೆ, ಉತ್ತರ ಭಾರತದ, ಬಿಹಾರ, ಉತ್ತರ ಪ್ರದೇಶ ಮುಂತಾದ ರೈತಾಪಿಗಳಲ್ಲಿ ಈಗಲೂ ಈ ಪದ್ಧತಿ ಚಾಲ್ತಿಯಲ್ಲಿರಬೇಕಲ್ಲ? ಹಾಗೆಯೇ ದಕ್ಷಿಣದ ಆಂಧ್ರ, ತಮಿಳುನಾಡು, ಉತ್ತರ ಕರ್ನಾಟಕದಲ್ಲೂ ಕೂಡ? ಈ ಬಗ್ಗೆ ಲೇಖಕರು ಹೆಚ್ಚು ಬೆಳಕು ಚೆಲ್ಲುವರೆಂದು ಆಶಿಸುತ್ತೇನೆ. ಮತ್ತೊಂದು ಮುಖ್ಯಮಾತು; 'ಆರು' ಎಂದರೆ, ಮಳೆ, ಹೊಳೆ, ನೀರು ಎಂದರ್ಥ. ಇದರ ಬೆನ್ನಿಗೇ ಹುಟ್ಟಿಕೊಂಡ ಶಬ್ದ ಆರಂಭ. ಇದರಲ್ಲಿ 'ಅಡಿಗಾರು'ಕ್ಕೆ (ಮಾಗಿ ಉಳುಮೆ)ಯೂ ಒಂದು. ಈ ಶಬ್ದ ಅಚ್ಚ ದ್ರಾವಿಡ ಶಬ್ದ; 'ಪಾಲಾರ್' (ಹಾಲಿನ ಹೊಳೆ) ಪೊನ್ನಾರು (ಚಿನ್ನದ ಹೊಳೆ) ಕಾರ್‌ಮೋಡ 'ಮುಂಗಾರು' ಇತ್ಯಾದಿಗಳನ್ನೂ ಇಲ್ಲಿ ಪ್ರಸ್ತಾಪಿಸಬಹುದು.

ಬಹಳ ಮುಖ್ಯವಾಗಿ, ಲೇಖಕರು ತಾವು ಮೆಚ್ಚುವ ಸ್ವಾಮಿಗಳನ್ನು ಕುವೆಂಪು ಮುಖಾಂತರ ಬುದ್ಧನೆಡೆಗೆ ದಾಟಿಸಿರುವುದು! ನಿಜಕ್ಕೂ ಬುದ್ಧ ನಗುತ್ತಾನಲ್ಲವೇ?

ಬಿ. ರಾಜಣ್ಣ, ಬೆಂಗಳೂರು.

ಒಕ್ಕಲಿಗರು ಒಕ್ಕಲಿಗರೇ ಹೌದು!

ಮಾನ್ಯ ಸಂಪಾದಕರೇ,

ಇತಿಹಾಸವನ್ನು ತಿರುಚುವ ಕೆಲಸ ಹಿಂದೆಯೂ ನಡೆದಿದೆ, ಇಂದಿಗೂ ಮುನ್ನಡೆಯುತ್ತಿದೆ. ಜ್ಞಾನ, ವಿದ್ಯೆ, ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ನಂಬಿರುವವರು ಶೋಷಣೆಯನ್ನು ಮುಂದುವರಿಸುತ್ತಲೇ ಇದ್ದಾರೆ. ಶೂದ್ರರು ಮಾತ್ರ, ತಲೆದೂಗುತ್ತ ಬಲಿಪಶುಗಳಾಗುತ್ತಲೇ ಇದ್ದಾರೆ. ಬೆರಳೆಣಿಕೆಯ ಶೂದ್ರರು ಮಾತ್ರ ಇತಿಹಾಸಕ್ಕಾಗಿರುವ ಅಪಚಾರವನ್ನು ಅವಲೋಕಿಸಿ ಸಾಧಾರವಾಗಿ ಖಂಡಿಸುವ, ತಿದ್ದುವ ಕೆಲಸ ಮಾಡುತ್ತಿದ್ದರೂ, ಅಜ್ಞಾನದಿಂದ ನಿಜ ಎಂದು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ಇಲ್ಲದಿರುವ ಜನರನ್ನು ಒಪ್ಪಿಸುವುದಕ್ಕೆ ಇನ್ನೂ ಎಷ್ಟು ವರ್ಷಗಳು ಬೇಕೋ ಗೊತ್ತಾಗುತ್ತಿಲ್ಲ!

ಆಗಸ್ಟ್ 2012 ಸಂ.10 ಸಂ.10ರ 'ಸಂವಾದ' ಮಾಸ ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರೊ. ಕೆ.ಎಸ್. ಭಗವಾನ್‌ರ 'ಒಕ್ಕಲಿಗರು ಬೌದ್ಧರೇ?' ಎಂಬ ಲೇಖನ ಗಾಢ ಸಂಶೋಧನೆ, ವಿಚಾರದ ಮಂಥನದೊಡನೆ ಒಕ್ಕಲಿಗರು ಹೇಗಿರಬೇಕೆಂಬುದನ್ನು ಮನೋಜ್ಞವಾಗಿ ವಿಶ್ಲೇಷಣೆ ಮಾಡಿದೆ.

ಒಕ್ಕಲಿಗರು ಯಾವಾಗಲೂ ನೀಡಿದವರೇ ವಿನಃ ಪಡೆದವರಲ್ಲ. ಆದರೂ ಸಮಾಜದಲ್ಲಿ ಪರಸ್ಪರ ಅವಲಂಬನೆ ಕೊಳ್ಳುವುದು-ಕೊಡುವುದಿಲ್ಲದೆ ಬದುಕಲು ಸಾಧ್ಯವಿಲ್ಲ.

ಕ್ರೈಸ್ತರಿಗೆ ಕ್ರಿಸ್ತ, ಮುಸ್ಲಿಂರಿಗೆ ಪೈಗಂಬರ್, ಯಾದವರಿಗೆ ಕೃಷ್ಣ, ಸಿಖ್‌ರಿಗೆ ಗುರುನಾನಕ್, ವೀರಶೈವರಿಗೆ ಬಸವಣ್ಣ, ದಲಿತರಿಗೆ ಅಂಬೇಡ್ಕರ್, ಅದ್ವೈತಿಗಳಿಗೆ ಶಂಕರಾಚಾರ್ಯ, ದ್ವೈತಿಗಳಿಗೆ ಮಧ್ವಾಚಾರ್ಯ, ಆದರೆ ಒಕ್ಕಲಿಗರಿಗೆ, ಒಕ್ಕಲುತನ ಮಾಡುವವರಿಗೆ ಆದಿ ಪುರುಷರೇ ಇಲ್ಲ! ಜಾತಿಯತೆ ಮತಾಂಧತೆಯೂ ಒಕ್ಕಲಿಗರಲ್ಲಿಲ್ಲ.

ಕುವೆಂಪು, ಬಾಲಗಂಗಾಧರ ಸ್ವಾಮೀಜಿ ಹಳೆ ಮೈಸೂರು ಭಾಗದ ಒಕ್ಕಲಿಗ ವಿದ್ಯಾವಂತರಲ್ಲಿ 'ಸ್ಥಾನ' ಪಡೆದಿದ್ದರೂ, ಶೇ. 5ರಷ್ಟೂ ಜನ ಕುವೆಂಪು ಸಾಹಿತ್ಯ ಓದಿಲ್ಲ. ಅವರು ಹೇಳಿದಂತೆ ಬದುಕುತ್ತಿಲ್ಲ. ಬಾಲಗಂಗಾಧರನಾಥ ಸ್ವಾಮಿಗಳು ದೇಶದ ಇಡೀ ಒಕ್ಕಲು ಮಾಡುವವರಿಗೆಲ್ಲ ಸ್ವಾಮಿಗಳಾಗಿಲ್ಲ.

ದೇಶದಲ್ಲಿ ಒಕ್ಕಲುತನ ಮಾಡುವವರೆಲ್ಲ ಒಂದಾಗಬೇಕು, ಒಂದು ಮಾಡುವ ನೇತಾರ ಬೇಕು. ಬುದ್ಧ, ಅಶೋಕ, ವಿವೇಕಾನಂದರು ಮನುಷ್ಯರ ಪರವಾಗಿ ಮಾತನಾಡಿದ ಮಹಾಪುರುಷರು. ಇವರ್‍ಯಾರೂ ಜಗದ್ಗುರುಗಳಲ್ಲ. ಇಂದು ಜಗದ್ಗುರುಗಳೆಂದು ಬೀಗುವವರು ಜಾತಿ ವರ್ತುಲದಿಂದ ಹೊರಗೆ ಬಂದಿಲ್ಲ! ವಿವೇಕಾನಂದ, ಅಂಬೇಡ್ಕರ್, ಕುವೆಂಪು ಬುದ್ಧನ ನಿಜವಾದ ಸಂದೇಶವನ್ನು ಹೆಕ್ಕಿ ತೆಗೆದವರು. ಅವರ ಹೃದಯ ವೈಶಾಲ್ಯತೆಯನ್ನು, ಮಾನವ ಪ್ರೀತಿಯನ್ನು ಅನಾವರಣ ಮಾಡಿ ಜಾತ್ಯತೀತವಾಗಿ, ಸರಳವಾಗಿ, ಸಹಜವಾಗಿ ಬದುಕಬೇಕೆಂದು ಕರೆ ನೀಡಿದವರು. ಗೌತಮ ಬುದ್ಧ ಒಕ್ಕಲಿಗನಾಗಿದ್ದ ಎಂಬುದನ್ನು ತರ್ಕಬದ್ಧವಾಗಿ ಸಾಕ್ಷ್ಯ ಸಮೇತ ತೋರಿಸಿರುವ ಭಗವಾನ್ ಅವರು ಅಭಿನಂದನೆಗೆ ಅರ್ಹರು.

ಅವರ ಆಶಯದಂತೆ ಭರತ ಖಂಡದಲ್ಲಿ ವ್ಯವಸಾಯ ಮಾಡುವ ಒಕ್ಕಲಿಗರೆಲ್ಲ ಒಂದಾಗಬೇಕು, ಆಗಲೇ ಗಾಂಧಿ ಕಂಡ ರಾಮರಾಜ್ಯ ನನಸಾದೀತು. ಪುರೋಹಿತರು ವ್ಯಾಖ್ಯಾನಿಸುವ ಸ್ವರ್ಗಕ್ಕಿಂತ ಭೂಮಿಯ ಮೇಲೆ ಸ್ವರ್ಗ ಸ್ಥಾಪನೆ ಮಾಡುವುದು ಇಂದಿನ ಅಗತ್ಯವೆಂದು ನನ್ನ ಭಾವನೆ.

ಡಾ. ಅರ್ಜುನಪುರಿ ಅಪ್ಪಾಜಿಗೌಡ, ಮದ್ದೂರು.

ಗೋಸಂಗಿಗಳ ಬದುಕು ಅನಾವರಣ; ಸ್ತುತ್ಯ ಕಾರ್ಯ

ಮಾನ್ಯ ಸಂಪಾದಕರೇ,

ಗೋಸಂಗಿ ಜನಾಂಗದವರನ್ನು ಕುರಿತ ವಡ್ಡಗೆರೆ ನಾಗರಾಜಯ್ಯ ಅವರ ಅಧ್ಯಯನ ಹೊಸ ಬಗೆಯದು. ವಿದ್ವಾಂಸರು, ಸಂಸ್ಕೃತಿ ಚಿಂತಕರು ಮತ್ತು ಆಸಕ್ತರ ಗಮನ ಸೆಳೆಯುತ್ತದೆ. ಇದುವರೆಗೆ ಅಪರಿಚಿತವಾಗಿ ಉಳಿದಿದ್ದ ಒಂದು ಸಮುದಾಯದ ಬಗ್ಗೆ ಅದರೆಲ್ಲ ಮೂಲಗಳನ್ನು ಗೊತ್ತು ಮಾಡಲು ನಡೆಸಿರುವ ಅವರ ಪ್ರಯತ್ನ ಸ್ತುತ್ಯವಾದುದು; ವ್ಯಾಪಕವಾದ ಓದಿನಿಂದ ಗಟ್ಟಿಗೊಂಡಿದೆ. ಕೆ.ಎಸ್. ಸಿಂಗ್, ನಂದೂರಾಮ್, ಕೋಟಗಾನಹಳ್ಳಿ ರಾಮಯ್ಯ, ಚಿಲುಮೂರಿ ಶ್ರೀನಿವಾಸರಾವು, ಎಂಡ್ಲೂರಿ ಸುಧಾಕರ್ ಮುಂತಾದವರ ಸಂಶೋಧನೆಗಳನ್ನು ಅವರು ಚೆನ್ನಾಗಿ ಗಮನಿಸಿದ್ದಾರೆ.

ಒಂದು ದಮನಿತ, ಅವಮಾನಿತ ಜನಾಂಗ ಹಾಗೇ ಮುಂದುವರಿಯುವುದು ಸರಿಯಲ್ಲ. ಅದಕ್ಕೂ ಎಲ್ಲ ನಾಗರಿಕತೆಯ ಸೌಲಭ್ಯಗಳು ದೊರಕಬೇಕು. ದೊರಕಿಸಿಕೊಡಲು ಸಂಬಂಧಪಟ್ಟವರು. ಸರ್ಕಾರ ಮತ್ತು ಅದರ ಅಧಿಕಾರಿಗಳು ತೊಡಗುವುದು ಮಾನವೀಯವಾದುದು. ಗೋಸಂಗಿಗಳು ಮುಗ್ಧವಾಗಿ ಅನುಸರಿಸಿಕೊಂಡು ಬಂದಿರುವ ಸಂಸ್ಕೃತಿಯೇ ಒಂದು ರೀತಿಯಲ್ಲಿ ಅವರ ಈಗಿನ ಸ್ಥಿತಿಗೆ ಕಾರಣ ಎಂದರೆ ತಪ್ಪಲ್ಲ. ಅವರು ಪ್ರತ್ಯೇಕವಾಗಿಯೇ ಉಳಿಯುವುದು ಸರಿ ಎನಿಸದು. ಉಪನದಿ ಮುಖ್ಯ ನದಿಗೆ ಸೇರಿ ಹರಿಯುವಂತೆ ಅವರು ಪ್ರಗತಿಪರವಾದ ವಿಶ್ವವ್ಯಾಪಕ ಸಂಸ್ಕೃತಿಯಲ್ಲಿ ಸಂಪರ್ಕ ಹೊಂದುವುದು ಹಿತಕಾರಿ. ಜಾಗತೀಕರಣ ಭರದಿಂದ ಸಾಗುತ್ತಿರುವಾಗ ದ್ವೀಪವಾಗಿ ಉಳಿಯಲು ಸಾಧ್ಯವಿಲ್ಲ.

ಕತ್ತಲೆಯಲ್ಲಿ ಇರುವ ಜನರ ಬಗ್ಗೆ ಬೆಳಕು ಹರಿಸಿದ ವಡ್ಡಗೆರೆ ನಾಗರಾಜಯ್ಯ ಅಭಿನಂದಾರ್ಹರು. ಸಂವಾದಕ್ಕೆ ನಮನಗಳು.

ಕೆ.ಎಸ್. ಭಗವಾನ್, ಮೈಸೂರು.

ಚಂದಾ ವಿವರ

ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/–
ಪೋಷಕ ಚಂದಾ ರೂ.10,000/–

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:
A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಚಂದಾದಾರರ ಗಮನಕ್ಕೆ

'ಸಂವಾದ' ಪತ್ರಿಕೆಯ ಚಂದಾ ವಿವರ, ಹೊಸದಾಗಿ ಚಂದಾರರಾಗುವವರು, ಚಂದಾ ನವೀಕರಿಸುವವರು ಹಾಗೂ ಪತ್ರಿಕೆ ಸರಬರಾಜಿನಲ್ಲಾಗುವ ಯಾವುದೇ ವ್ಯತ್ಯಯ-ದೂರುಗಳನ್ನು ಕುರಿತ ಮಾಹಿತಿಗಾಗಿ ಈ ಕೆಳಕಂಡ ಫೋನ್ ಸಂಖ್ಯೆಗಳನ್ನು ಮಾತ್ರ ಸಂಪರ್ಕಿಸಬೇಕಾಗಿ ವಿನಂತಿ.

ಮೊಬೈಲ್: 9945264687
ದೂರವಾಣಿ: 080–23480278
ಇ–ಮೇಲ್: samvaadacirculation@gmail.com

ಸಂಪಾದಕರೊಡನೆ ಸಂವಾದ

ಜಿ.ವಿ ಸುಂದರ್

ಪ್ರಿಯ ಸಂಪಾದಕರೇ,

ಕೆಳ ಮಧ್ಯಮ ವರ್ಗಗಳ ಮನೆಗಳಲ್ಲಿ ಚಿಕ್ಕ ತಮ್ಮನೊಬ್ಬನಿದ್ದು ಅವನು ಸ್ವಲ್ಪ ದಡ್ಡನೂ ಆಗಿದ್ದಲ್ಲಿ, ಮನೆಯ ಸಣ್ಣಪುಟ್ಟ ಒಳಹೊರಗಿನ ಕೆಲಸಗಳ ಜವಾಬ್ದಾರಿ ಅವನ ಮೇಲೆ ಬೀಳುವುದು ಸ್ವಾಭಾವಿಕ. ಅಂಥ ದಡ್ಡರ ಪೈಕಿ ನಾನೂ ಒಬ್ಬನಾದ್ದರಿಂದ, ನಾನು ಸಣ್ಣವನಾಗಿದ್ದಾಗ ಮನೆಯ ಹಲವು ಸಣ್ಣಪುಟ್ಟ ಕೆಲಸಗಳ ಜವಾಬ್ದಾರಿ ನನ್ನ ಪಾಲಿಗೆ ಬರುತ್ತಿತ್ತು. ಅಂತಹ ಕೆಲಸಗಳೆಂದರೆ, ತಿಂಗಳಿಗೊಮ್ಮೆ ನೀರೊಲೆಗೆ ಬೇಕಾದ ಸೌದೆಯನ್ನು ಸೌದೆ ಅಂಗಡಿಯಲ್ಲಿ ತೂಗಿಸಿ, ಒಡೆಸಿ ಮನೆಗೆ ತಂದು ಸ್ನಾನದ ಮನೆಯ ಅಟ್ಟದ ಮೇಲೋ ಅಥವಾ ಇನ್ನಾವುದಾದರೂ ಜಾಗದಲ್ಲಿ ಪೇರಿಸುವುದು. ತಿಂಗಳ ಲೈಟ್ ಬಿಲ್ಲು, ನೀರಿನ ಬಿಲ್ಲನ್ನು ಕಟ್ಟುವುದು, ದಿನಸಿ ಅಂಗಡಿಯಿಂದ ಮನೆಗೆ ಸಾಮಾನು ತರುವುದು, ರೇಶನ್ ಕಾರ್ಡಿನಿಂದ ಸಕ್ಕರೆ ಮತ್ತು ಸೀಮೆಎಣ್ಣೆ ತರುವುದು, ಹಿಟ್ಟನ್ನು ಮತ್ತು ಮೆಣಸಿನ ಪುಡಿಯನ್ನು ಮಾಡಿಸಿಕೊಂಡು ಬರುವುದು, ದೊಡ್ಡವರ ಬಟ್ಟೆಗಳನ್ನು ಇಸ್ತ್ರಿ ಮಾಡುವುದು, ತರಕಾರಿ ತರುವುದು, ಹೀಗೆ ಹತ್ತು ಹಲವು ಕೆಲಸಗಳು. ಜೊತೆಗೆ ಗಲಾಟೆ ಮಾಡುವ ಮಕ್ಕಳನ್ನು ಆಡಿಸುವುದು, ಇತ್ಯಾದಿ.

ದಿನಸಿ ತರುವುದಕ್ಕೆ ನಾನು ಹೋಗುತ್ತಿದ್ದುದು ಶೆಟ್ಟರ ಅಂಗಡಿಗಳು ಇಲ್ಲಾ ಸೇಟು ಅಂಗಡಿಗಳಿಗೆ. ಆಗೆಲ್ಲಾ ಇತರರ ಅಂಗಡಿಗಳು ಕಡಿಮೆ. ಆಗೆಲ್ಲಾ ಅಂದರೆ, ಎಪ್ಪತ್ತರ ದಶಕದ ಮೊದಲ ವರ್ಷಗಳಲ್ಲಿ, ಬೆಂಗಳೂರಿನ ಬಡಾವಣೆಗಳಲ್ಲಿ ದೊಡ್ಡ ದಿನಸಿ ಅಂಗಡಿಗಳು ಕಡಿಮೆಯೆ. ಸುಮಾರು ಒಂದು ಕಾರ್ ಶೆಡ್ಡಿನಷ್ಟು ದೊಡ್ಡದಿರುವ ಅಂಗಡಿಗಳೇ ಜಾಸ್ತಿ. ಸ್ವಲ್ಪ ದೊಡ್ಡದು ಎಂದರೆ, ಎರಡು ಶೆಡ್ಡಿನಷ್ಟು ಅಗಲವಿರುವ ಅಂಗಡಿಗಳು. ಸಿಟಿ ಮಾರ್ಕೆಟಿನಲ್ಲಿ, ಮಲ್ಲೇಶ್ವರದಲ್ಲಿ ಅಥವಾ ಗಾಂಧಿಬಜಾರಿನಲ್ಲಿ ದೊಡ್ಡ ಅಂಗಡಿಗಳಿದ್ದವು. ಬೇರೆಲ್ಲಾ ಬಡಾವಣೆಗಳಲ್ಲಿ ಇದ್ದದ್ದು ಇಂಥಾ ಸಣ್ಣಪುಟ್ಟ ಅಂಗಡಿಗಳು ಮಾತ್ರ. ಮನೆಯಲ್ಲಿರುವ ಬ್ಯಾಗು, ಚೀಲ, ಬುಟ್ಟಿ ಎಲ್ಲವನ್ನು ಹೊಂದಿಸಿಕೊಂಡು, ಗಂಟೆಗಟ್ಟಲೆ ಅಂಗಡಿಯೆದುರು ನಿಂತು ಕಣ್ಣಲ್ಲಿ ಕಣ್ಣಿಟ್ಟು ತೂಕ ಹಾಕುವುದನ್ನು ನೋಡಿ, ಸಾಮಾನು ಕಟ್ಟಿಸಿ ಎರಡು ಮೂರು ಬಾರಿ ಮನೆಗೆ ಓಡಾಡಿ, ಕೈ ನೋವು, ಕಾಲು ನೋವು ಮಾಡಿಕೊಂಡು, ತಿಂಗಳ ದಿನಸಿ ತಂದು ಹಾಕಿದರೆ, ತಂದಾದ ಮೇಲೆ, ಒಂದೊಂದೇ ಆರೋಪಗಳು, ಗಲಾಟೆಗಳು ಶುರುವಾಗುತ್ತಿದ್ದವು.

ಒಂದು ಸಾರಿ "ಅಕ್ಕಿಯಲ್ಲಿ ಬರೀ ಕಲ್ಲು, ಕಸ ಮತ್ತೆ ನುಚ್ಚೇ ಜಾಸ್ತಿ. ಅಕ್ಕಿ ಆರಿಸಿ, ಆರಿಸಿ ಸಾಕಾಗಿ ಹೋಯ್ತು" ಎನ್ನುವ ಗೊಣಗಾಟವಾದರೆ "ಹೊಸ ಅಕ್ಕಿ ಕೊಟ್ಟಿದ್ದಾನೆ, ಅನ್ನ ಬರೀ ಗಂಜಿ ಗಂಜಿ" ಎನ್ನುವುದು ಇನ್ನೊಂದು ಸಾರಿ. "ಬೇಳೆ ಬೇಯುವುದೇ ಇಲ್ಲ, ಅದನ್ನು ಬೇಯಿಸುವುದಕ್ಕೆ ಸ್ಟೋವ್‌ನ ಸೀಮೆಎಣ್ಣೆ ಪೂರ್ತಿ ಖಾಲಿಯಾಯ್ತು" ಅಂತ ಕಂಪ್ಲೆಂಟ್. "ಕಾಫಿಯಲ್ಲಿ ಏನೋ ಸೀಮೆಎಣ್ಣೆ ವಾಸನೆ ಬರುತ್ತೆ" ಅಂತ ನನ್ನ ನಸ ನಸೆ ಅಕ್ಕನ ಕಂಪ್ಲೆಂಟ್.

ಊಟ ಮಾಡುವಾಗ ಯಾರಿಗಾದರೂ ಊಟದಲ್ಲಿ ಕಲ್ಲು ಸಿಕ್ಕಿ 'ಕಟಂ', ಎಂದರೆ, ಎಲ್ಲರೂ ನಾನೇನೋ ಅಪರಾಧ ಮಾಡಿದ್ದೇನೆ ಎಂದು ನನ್ನ ಕಡೆಗೆ ನೋಡುವರು. "ಏ ವಾಪಸ್ಸು ಕೊಟ್ಟು ಬೇರೇದು ತೊಗಂಡು ಬಾರೋ" ಎಂದು ದೊಡ್ಡವರ ಆಜ್ಞೆ. ಹೀಗೇನೆ, ಬೂಸ್ಟು ಹಿಡಿದ ಕೊಬ್ಬರಿ, ಕೆಟ್ಟು ಹೋಗಿರುವ ತೆಂಗಿನಕಾಯಿ ವಾಪಸ್ಸು ಕೊಡಲು ಹೋದರೆ, 'ಬೇರೆ ಯಾವುದೋ ಅಂಗಡೀದು ತಂದು ನಮ್ಮ ತಲೆಗೆ ಕಟ್ಟಕ್ಕೆ ಬರ್ತೀಯ' ಎಂದು ಅಂಗಡಿಯವನ ತಕರಾರು. ಅಂಗಡಿಯವನು ವಾಪಾಸ್ಸು ತೆಗೆದುಕೊಳ್ಳುವುದಿಲ್ಲ, ಮನೆಯವರು ಬಿಡುವುದಿಲ್ಲ. ಇವರಿಬ್ಬರ ಜಗ್ಗಾಟದಲ್ಲಿ ನಾನು ಸುಸ್ತು.

ಒಂದು ಸಂಕ್ರಾಂತಿಯ ದಿನ, ಮನೆಯಲ್ಲಿ ಹುಗ್ಗಿ ಅಂದರೆ ಪೊಂಗಲ್ ಮಾಡಿದ್ದರು. ಬಹಳ ರುಚಿಯಾಗಿತ್ತು, ಆದರೆ, ಮಧ್ಯಾಹ್ನದ ಹೊತ್ತಿಗೆ ಎಲ್ಲರಿಗೂ ಎರಡೆರಡು ಸಾರಿ ಭೇದಿ. ಕಾರಣ ಆಮೇಲೆ ಗೊತ್ತಾಯಿತು, ಕರಿಮೆಣಸಿನಲ್ಲಿ, ಪರಂಗಿ ಹಣ್ಣಿನ ಬೀಜ ಸೇರಿಸಿದ್ದರು ಅಂತ. ಹೀಗೆ ಒಂದಲ್ಲಾ ಒಂದು ಕಲಬೆರಕೆ, ತೂಕದಲ್ಲಿ ಹೆಚ್ಚುಕಮ್ಮಿ. ಎಲ್ಲದಕ್ಕೂ ಎಲ್ಲರ ಗೊಣಗಾಟಕ್ಕೂ ನಾನೇ ಗುರಿ.

ಇದೆಲ್ಲಿಯ ಗ್ರಹಚಾರ ಎಂದು ನಾನು ಪರಿಪಾಟಲು ಪಡುತ್ತಿರಬೇಕಾದರೆ, 'ಅಹಮ್ಮದ್ ಸ್ಟೋರ್ಸ್' ಎನ್ನುವ ಹೊಸ ಅಂಗಡಿಯೊಂದು ನಮ್ಮ ಬಡಾವಣೆಯಲ್ಲಿ ಶುರುವಾಯಿತು. ಹೆಸರು ಕೇಳಿ ಸ್ವಲ್ಪ ಹಿಂಜರಿಕೆಯಾದರೂ, ಅಲ್ಲಿ ಎಲ್ಲರೂ 'ಕಾಕ' ಅಂಗಡಿಯವರಂತೆ ಕಂಡರು. ಬೇರೆ ಎಲ್ಲಾ ಅಂಗಡಿಗಳಿಗಿಂತ ದೊಡ್ಡ ಅಂಗಡಿ. ಕನ್ನಡ ಸರಿಯಾಗಿ ಬರದಿದ್ದರೂ, ಎಲ್ಲರೂ ಸಮಾಧಾನದಿಂದ ಮಾತನಾಡಿಸುತ್ತಿದ್ದುದರಿಂದ, ಪ್ರತಿ ತಿಂಗಳೂ ಅಹಮ್ಮದ್ ಸ್ಟೋರ್ಸ್‌ಗೆ ಹೋಗಿ ಸಾಮಾನು ತರಲಾರಂಭಿಸಿದೆ.

ಮೊದಲೆಲ್ಲಾ, ಸಾಮಾನು ಕಟ್ಟುವ ತನಕ ಅಲ್ಲೇ ನಿಂತು ಅಂಗಡಿಯ ಹುಡುಗನ ಜೊತೆ ಸಾಮಾನು ಹೊರೆಸಿಕೊಂಡು ಮನೆಗೆ ಬರುತ್ತಿದ್ದೆ. ಆಮೇಲಾಮೇಲೆ, ಪಟ್ಟಿ ಕೊಟ್ಟು ಅಂಗಡಿಯ ಹುಡುಗ ಮನೆಗೆ ಸಾಮಾನು ತಂದಾದ ಮೇಲೆ, ಸರಿಯಾಗಿದೆಯೇ ಎಂದು ನೋಡಿ ದುಡ್ಡು ಕೊಟ್ಟು ಕಳುಹಿಸುತ್ತಿದ್ದೆವು.

ಆಗ, ಚಿಲ್ಲರೆಗೆ ಬರಗಾಲ. ಅಂಗಡಿಗಳಲ್ಲಿ, ಹೋಟೆಲುಗಳಲ್ಲಿ ಚಿಲ್ಲರೆಗೆ ಪರದಾಟ, ಜಗಳ. ಅಹಮ್ಮದ್ ಸ್ಟೋರ್ಸ್‌ನಲ್ಲಿ ಮಾತ್ರ ಯಾವಾಗಲೂ ಚಿಲ್ಲರೆಗೆ ತೊಂದರೆಯಿಲ್ಲ. ಎರಡು ರೂಪಾಯಿಯ ಸಾಮಾನು ಕೊಂಡು, ನೂರರ ನೋಟನ್ನು ಕೊಟ್ಟರೂ ಬೇಜಾರಿಲ್ಲದೆ, 98 ರೂ. ಗಳನ್ನು ಎಣಿಸಿ ಕೊಡುತ್ತಾನೆ. ಹಾಗೆಯೇ 50 ಪೈಸೆ ಸಾಮಾನಿಗೆ 5 ರೂ. ಕೊಟ್ಟರೂ ಚಿಲ್ಲರೆ ಕೊಡುತ್ತಾನೆ. ಇವನಿಗೆ ಹ್ಯಾಗೆ ಇಷ್ಟೊಂದು ಚಿಲ್ಲರೆ ಸಿಗುತ್ತೆ ಅಂತ ಎಲ್ಲರಿಗೂ ಆಶ್ಚರ್ಯ!

ತಿರುಪತಿ, ಧರ್ಮಸ್ಥಳದ ದೇವಸ್ಥಾನದ ಹುಂಡಿಯಿಂದ ಚಿಲ್ಲರೆ ತರಿಸುತ್ತಾನೆಂದು ಹೇಳುವವರೂ

(8ನೇ ಪುಟಕ್ಕೆ)

ವಿದೇಶಿ ಕಂಪನಿಗಳು, ತಮ್ಮ ಅನುಭವ ಮತ್ತು ಅಗಾಧ ಬಂಡವಾಳ ಹೂಡಿಕೆಯಿಂದ ನಮ್ಮ ಬೆಳೆಗಾರರಿಗೆ ಮತ್ತು ಉತ್ಪಾದಕರಿಗೆ ಬೇಕಾಗುವ ಅನುಕೂಲಗಳನ್ನು ನಮ್ಮ ದೇಶದಲ್ಲಿ ಮಾಡಿಕೊಟ್ಟು, ಮಧ್ಯವರ್ತಿಗಳ ಕದಂಬಬಾಹುಗಳಿಂದ ರೈತರನ್ನು ಬಿಡುಗಡೆ ಮಾಡಿ, ಅವರಿಗೆ ಉತ್ತಮ ಬೆಲೆ ಸಿಗುವಂತೆ ಹಾಗು ಗ್ರಾಹಕರಿಗೂ ಅನುಕೂಲವಾಗುವ ವಾತಾವರಣವನ್ನು ತರುತ್ತಾರೆಂದು ಹಲವರ ಅಭಿಪ್ರಾಯ.

ರೈತರ ಹಿತ ಕಾಯುವುದಾದರೆ ವಿದೇಶಿ ಮಾಲ್‌ಗಳಿಗೆ ವಿರೋಧ ಏಕೆ?

ಸಂಪಾದಕರೊಡನೆ ಸಂವಾದ

ಜನ ವಿರೋಧಿ ಖಾಸಗಿ ವಿಶ್ವ ವಿದ್ಯಾಲಯಗಳು ಬೇಡ

ಮಾರುತಿ ಹೆಚ್

ಪ್ರಿಯ ಸಂಪಾದಕರೇ,

ಉನ್ನತ ಶಿಕ್ಷಣ ಪಡೆಯುವವರ ಪ್ರಮಾಣವನ್ನು ಶೇ.30ಕ್ಕೆ ಹೆಚ್ಚಿಸುವ ಕಾರಣ ನೀಡಿ ರಾಜ್ಯ ಸರಕಾರ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಕೆಲವು ನಿರ್ದಿಷ್ಟ ಮಾನದಂಡಗಳ ಅಡಿಯಲ್ಲಿ ಅನುಮತಿ ನೀಡಲು ಮುಂದಾಗಿರುವುದು ಆತಂಕಕಾರಿ ವಿಚಾರವಾಗಿದೆ.

ಸರಕಾರವು ಖಾಸಗಿ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಲು ಮುಂದಾಗಿರುವುದರ ಹಿಂದೆ ಉನ್ನತ ಶಿಕ್ಷಣವನ್ನು ಎಲ್ಲರಿಗೂ ದೊರಕಿಸಿಕೊಡುವ ತನ್ನ ಪ್ರಾಥಮಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ ಅಲ್ಲದೆ ಉನ್ನತ ಶಿಕ್ಷಣವನ್ನು ಮಾರಾಟದ ಸರಕನ್ನಾಗಿ ಪರಿವರ್ತಿಸಿ, ಖಾಸಗಿ ವ್ಯಕ್ತಿ, ಕಂಪನಿಗಳ ಲಾಭಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶ ಬಹಳ ಸ್ಪಷ್ಟವಾಗಿದೆ.

ಇತ್ತೀಚೆಗೆ ನಡೆದ ಉನ್ನತ ಶಿಕ್ಷಣ ಪರಿಷತ್ ಸಭೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು, ನಾನಾ ವಿ.ವಿ.ಕುಲಪತಿಗಳು, ವಿಶ್ರಾಂತ ಕುಲಪತಿಗಳು ಹಾಗೂ ಉನ್ನತ ಶಿಕ್ಷಣ ಸಚಿವರನ್ನು ಒಳಗೊಂಡ ತಂಡ, ಖಾಸಗಿ ಸಂಸ್ಥೆಗಳಿಗೆ ಮುಕ್ತ ಸ್ವಾತಂತ್ರ್ಯ, ವಿ.ವಿ.ಕ್ಯಾಂಪಸ್ ವಿಸ್ತಾರ, ಸೀಟು ಹಂಚಿಕೆ ಪ್ರಮಾಣ, ಶುಲ್ಕ ನಿಗಧಿ, ವಿ.ವಿ.ಗಳ ಮೇಲೆ ನಿಗಾ ಇಡಲು ನಿಯಂತ್ರಣ ಪ್ರಾಧಿಕಾರ, ಇತ್ಯಾದಿ ವಿಚಾರಗಳನ್ನು ಚರ್ಚಿಸಿ 40 ಖಾಸಗಿ ವಿ.ವಿ. ಆರಂಭಿಸಲು ಹಸಿರು ನಿಶಾನೆ ತೋರಿರುವುದು ನಮ್ಮ ಸರಕಾರಿ ವಿ.ವಿ.ಗಳು ತಮ್ಮ ನೈತಿಕತೆ, ಸ್ವಾಯತ್ತತೆ ಕಳೆದುಕೊಂಡು ಬೀಗ ಜಡಿಯುವಂತೆ ಮಾಡುವುದು ಖಚಿತವಾಗಿದೆ. ಈ ಹಿಂದೆಯೂ ಕೇಂದ್ರದ ಎನ್.ಡಿ.ಎ. ಸರಕಾರ ಉನ್ನತ ಶಿಕ್ಷಣ ಕ್ಷೇತ್ರವನ್ನು ಖಾಸಗಿ ಮತ್ತು ವಿದೇಶಿ ವಿ.ವಿ.ಗಳು ತೆರೆಯುವ ಸಲುವಾಗಿ ಉದ್ಯಮಿ ಕುಮಾರ ಮಂಗಳಂ ಬಿರ್ಲಾರನ್ನು ಅಧ್ಯಕ್ಷರನ್ನಾಗಿ ಮಾಡಿತು.

ರಾಜ್ಯದಲ್ಲಿರುವ ಎಲ್ಲಾ ವಿಶ್ವ ವಿದ್ಯಾಲಯಗಳಿಗೆ ಕುಲಾಧಿಪತಿ(ಚಾನ್ಸಲರ್) ಆಗಿರುವಂತೆ ರಾಜ್ಯಪಾಲರು ಈ ಖಾಸಗಿ ವಿ.ವಿ.ಗಳಿಗೂ ಅವರೇ ಆಗಿರುತ್ತಾರೆ. ಈ ವಿ.ವಿ.ಗಳಿಗೆ ಕೇವಲ ಸಂದರ್ಶಕರಾಗಿ, ಸಭೆ ಸಮಾರಂಭ, ಪದವಿ ಪ್ರದಾನಗಳಿಗೆ ಅಧ್ಯಕ್ಷತೆ ವಹಿಸುವ ಕೆಲಸವಷ್ಟೆ ಅವರದಾಗಲಿದೆ. ಜೀವನ ಪರ್ಯಂತ ಕುಲಾಧಿಪತಿ, ಪರಮಾಧಿಕಾರ ಎಲ್ಲವೂ ಖಾಸಗಿ ಸಂಸ್ಥೆಯ ಮಾಲೀಕರಿಗೆ ಸಂಪೂರ್ಣ ನಿಯಂತ್ರಣವಿರುತ್ತದೆ.

ಇನ್ನೂ ಈ ವಿ.ವಿ.ಗಳಿಗೆ ನೇಮಿಸುವ ಉಪಕುಲಪತಿ (ವಿ.ಸಿ.) ಕುಲಸಚಿವರು(ರಿಜಿಸ್ಟ್ರರ್) ಪ್ರತಿ ನಿಖಾಯಗಳಿಗೆ(ವಿಭಾಗಗಳಿಗೆ) ಪ್ರೊಫೆಸರ್, ರೀಡರ್, ಉಪನ್ಯಾಸಕರ ನೇಮಕಾತಿ, ವಿವಿಧ ಸಮಿತಿಗಳ ನೇಮಕ, ಪಠ್ಯಕ್ರಮ, ಪ್ರವೇಶಾವಕಾಶ, ಶುಲ್ಕ ನಿಗದಿ ಹೀಗೆ ಆಡಳಿತದ ಎಲ್ಲಾ ವಿಚಾರಗಳಿಗೂ ಖಾಸಗಿ ವಿ.ವಿ.ಯ ಮಾಲೀಕರೇ ಎಲ್ಲಾ ಅಂತಿಮ ತೀರ್ಮಾನಿಕರು.

ಈ ಹಿನ್ನಲೆಯಲ್ಲಿ ಖಾಸಗಿ ಸಂಸ್ಥೆಗಳ ಕುಟುಂಬ ಕೇಂದ್ರಿತ ಆಡಳಿತ ರಾಜಕೀಯ, ಸ್ವಜನ ಪಕ್ಷಪಾತ, ಕ್ಯಾಪಿಟೇಷನ್ ಶುಲ್ಕ, ದುಬಾರಿ ಶುಲ್ಕ, ಅಧ್ಯಾಪಕರಿಗೆ ಕಡಿಮೆ ಸಂಬಳ, ವಿದ್ಯಾರ್ಥಿಗಳಿಗೆ ದರ್ಜೆ (ಶ್ರೇಣಿ) ನೀಡುವುದರಲ್ಲಿ ಎಸಗುವ ಅಕ್ರಮಗಳು, ಪರೀಕ್ಷಾ ಅಕ್ರಮಗಳು ಇವೇ ಮುಂತಾದ ಗಂಭೀರ ಸಮಸ್ಯೆಗಳು ಉಲ್ಬಣಿಸುತ್ತವೆ.

ಖಾಸಗಿ ವಿ.ವಿ.ಗಳ ಒಟ್ಟು ಸೀಟುಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಕೇವಲ ಶೇ.30ರಷ್ಟು ಸೀಟುಗಳನ್ನಷ್ಟೇ ಕಲ್ಪಿಸಲಾಗಿದೆ. ಅದನ್ನು ಶೇ.50ಕ್ಕೆ ವಿಸ್ತರಿಸುವಂತೆ ಚರ್ಚೆ ನಡೆಯುತ್ತಿದೆ ಅಷ್ಟೆ. ಅದು ಕಾರ್ಯಾಗತಗೊಂಡಾಗಲೇ ನಿಜ. ರಾಜ್ಯದ ವಿದ್ಯಾರ್ಥಿಗಳು ಖಾಸಗಿ ವಿ.ವಿ.ಗಳು ನಿರ್ಧರಿಸಲಿರುವ ಪ್ರವೇಶ ಪರೀಕ್ಷೆ (ಸಿ.ಇ.ಟಿ)ಯ ಎಲ್ಲಾ ಮಾನದಂಡ ಪೂರೈಸಿದರೆ ಮಾತ್ರ ಸೀಟು ಇಲ್ಲವೇ ಹೊರ ರಾಜ್ಯದ, ಹೊರ ದೇಶದ ಇತರೆ ಸಾಮಾನ್ಯವರ್ಗದ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳುತ್ತವೆ. ಇಲ್ಲಿ ಸರಕಾರಿ ಸಂಸ್ಥೆಗಳಲ್ಲಿ ದಲಿತರಿಗೆ, ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ ಇರುವ ಮೀಸಲಾತಿಯ ಪ್ರಸ್ತಾಪ ಇಲ್ಲದೆ ಸಾಮಾಜಿಕ ನ್ಯಾಯಕ್ಕೆ ಸಂಪೂರ್ಣವಾಗಿ ತಿಲಾಂಜಲಿ ಇಡಲಾಗುತ್ತದೆ.

2009ರ ಪ್ರಕಾರ ಭಾರತದಲ್ಲಿ ಒಟ್ಟು 127 ಪರಿಭಾವಿತ ಅಥವಾ ಸ್ವಾಯತ್ತ ವಿಶ್ವವಿದ್ಯಾಲಯಗಳಿವೆ. (Deemed University) ಇದರಲ್ಲಿ 41 ಸರಕಾರಿ ಹಾಗೂ 86 ಖಾಸಗಿ ಸ್ವಾಮ್ಯದಲ್ಲಿವೆ. ಕರ್ನಾಟಕದಲ್ಲಿ 15 ಪರಿಭಾವಿತ ವಿ.ವಿ.ಗಳಿದ್ದು, ಅವುಗಳಲ್ಲಿ 12 ಖಾಸಗಿ ಆಡಳಿತದಲ್ಲಿವೆ. ಇವುಗಳ ಗುಣಾತ್ಮಕತೆ, ಕಾರ್ಯವೈಖರಿ, ಸಂಶೋಧನೆ, ಆಡಳಿತ ಇತರೆ ವಿಚಾರಗಳು ಸೇರಿದಂತೆ ಉನ್ನತ ಶಿಕ್ಷಣದ ಪುನಶ್ಚೇತನ ಮತ್ತು ಸುಧಾರಣೆಗಾಗಿ ಕೇಂದ್ರ ಸರಕಾರ ಆಗಿನ ಯು.ಜಿ.ಸಿ ಅಧ್ಯಕ್ಷ ಪ್ರೊ॥ ಯಶ್‌ಪಾಲ್ ನೇತೃತ್ವದ ಸಮಿತಿಯನ್ನು 1993ರಲ್ಲಿ ನೇಮಿಸಿತು. ಈ ಸಮಿತಿ ಅಂತಿಮವಾಗಿ 2009ರ ಜೂನ್‌ನಲ್ಲಿ ತನ್ನ ವರದಿ ಸಲ್ಲಿಸಿತು. ವರದಿಯ ಶಿಫಾರಸ್ಸುಗಳು ಸತ್ಯವನ್ನು ಕಣ್ಣಿಗೆ ರಾಚುವಂತೆ ಮಾಡಿತು. ಸ್ವಾಯತ್ತ ವಿ.ವಿ.ಗಳ ಬಗ್ಗೆ ಕೂಲಂಕಷವಾಗಿ ಅಧ್ಯಯನ ನಡೆಸಿದ ಸಮಿತಿ, ಭಾರತೀಯ ಶಿಕ್ಷಣದ ಮೇಲೆ ಆಗಿರುವ ನಕಾರಾತ್ಮಕ ಪರಿಣಾಮಗಳನ್ನು ತಿಳಿಸಿತು. ಡೀಮ್ಡ್ ವಿ.ವಿ.ಗಳು ಸೂಕ್ತ ರೀತಿಯಲ್ಲಿ ಪಾಠ ಪ್ರವಚನಗಳನ್ನು ನಡೆಸದರಿವುದು, ಮೂಲ ಸೌಕರ್ಯ, ಸಿಬ್ಬಂದಿ ಇಲ್ಲದಿದ್ದದ್ದು, ಗರಿಷ್ಠ ಶುಲ್ಕ, ನಿಯಮಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಲ್ಪಿಸಿದ ಹಲವು ಲೋಪಗಳ ಹಿನ್ನಲೆಯಲ್ಲಿ ಸ್ವಾಯತ್ತತೆ ನೀಡುವ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸುವಂತೆ ಮತ್ತು ಸ್ವಾಯತ್ತತೆ ಹಿಂಪಡೆಯುವ ಕುರಿತು ಶಿಫಾರಸ್ಸು ಮಾಡಿತು. ಇದು ಖಾಸಗಿ ವಿ.ವಿ, ಡೀಮ್ಡ್ ವಿ.ವಿ.ಗಳ ನಿಜಬಣ್ಣ ಬಯಲು ಮಾಡಿದವು. ಅಲ್ಲದೇ ಉನ್ನತ ಶಿಕ್ಷಣ ಕ್ಷೇತ್ರದ ಬಿಕ್ಕಟ್ಟಿಗೆ ಮೂಲ ಕಾರಣವಾಗಿಯೂ ಪರಿಣಮಿಸಿತು.

ಖಾಸಗಿ ವಿ.ವಿ.ಗಳಿಗೆ ನಮ್ಮ ನೆಲದ ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಇತ್ಯಾದಿಗಳು ಬೇಕಾಗಿಲ್ಲ, ಕೇವಲ ಜಾಗತಿಕ ಬಂಡವಾಳಶಾಹಿಗಳ ಮಾರುಕಟ್ಟೆಗೆ ಪೂರಕವಾದ ಐಟಿ-ಬಿಟಿ ಮ್ಯಾನೇಜ್‌ಮೆಂಟ್ ಸ್ಟಡೀಸ್, ಯುದ್ಧಮಾರಕ ಅಸ್ತ್ರಗಳನ್ನು ಒದಗಿಸುವ ತಂತ್ರಜ್ಞಾನದ ಪಠ್ಯಕ್ರಮಕ್ಕೆ ಹೆಚ್ಚು ಒತ್ತು ನೀಡುತ್ತವೆ. ಆ ಮೂಲಕ ಕಾರ್ಪೋರೇಟ್ ಉದ್ಯಮಗಳ ಬೇಡಿಕೆಗೆ ತಕ್ಕಂತೆ ದುಡಿಮೆಗಾರರನ್ನು ರೂಪಿಸಿಕೊಳ್ಳುವ

(8ನೇ ಪುಟಕ್ಕೆ)

ಈಗ ಇರುವ ಸರಕಾರಿ ವಿ.ವಿ.ಗಳ ಶುಲ್ಕ ಭರಿಸಲಾಗದೇ ಉನ್ನತ ಶಿಕ್ಷಣವನ್ನು ಪಡೆಯಲಾಗದಂತಹ ಸ್ಥಿತಿ ರಾಜ್ಯದ ವಿದ್ಯಾರ್ಥಿಗಳಿಗೆ ಇರುವಾಗ, ತಮಗೆ ಇಚ್ಚಿಸಿದಷ್ಟು ವಂತಿಗೆ ವಸೂಲಿಮಾಡುವ, ತಮಗೆ ಅರ್ಹ ಎನಿಸಿದವರನ್ನು ನೇಮಿಸಿಕೊಳ್ಳುವ ಸಂವಿಧಾನದ ಆಶಯವಾದ ಮೀಸಲಾತಿ ಮಾನದಂಡವನ್ನು ಕೈಬಿಡುವ ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರನ್ನು ಉನ್ನತ ಶಿಕ್ಷಣದಿಂದ ದೂರಗೊಳಿಸುವ ಅಂಶ ಬಿಟ್ಟರೆ ಈ ಖಾಸಗಿ ವಿ.ವಿ.ಗಳಿಂದ ಮತ್ತೇನು ಸಾಧನೆಯಾಗದು.

(6ನೇ ಪುಟದಿಂದ)

ರೈತರ ಹಿತ ಕಾಯುವುದಾದರೆ...

ಇದ್ದರು. ಸಾಮಾನು, ಅಪರೂಪಕ್ಕೆ ಬೇಡ ಎನ್ನಿಸಿ ಹಿಂದಕ್ಕೆ ಕೊಟ್ಟರೆ ಯಾವ ಬೇಜಾರಿಲ್ಲದೆ, ದೂಸ್ರಾ ಮಾತಿಲ್ಲದೆ ವಾಪಸ್ಸು ತೆಗೆದುಕೊಂಡು ಬೇರೆ ಪದಾರ್ಥ ಕೊಡುತ್ತಿದ್ದ, ಇಲ್ಲ, ದುಡ್ಡು ವಾಪಸ್ಸು ಕೊಡುತ್ತಿದ್ದ. ಮತ್ತೆ ಅಂಗಡಿ ಯಾವಾಗಲೂ, ಅಂದರೆ ಬೆಳಿಗ್ಗೆ 7 ರಿಂದ ರಾತ್ರಿ 10 ಗಂಟೆಯ ತನಕ ತೆಗೆದಿರುತ್ತಿತ್ತು. ಶೆಟ್ಟರು, ಸೇಟುಗಳ ಹಾಗೆ, ಮಧ್ಯಾಹ್ನ ಮುಚ್ಚುತ್ತಿರಲಿಲ್ಲ. ಭಾನುವಾರವೂ ತೆಗೆದಿರುತ್ತಿದ್ದ ಅಂಗಡಿ, ಪ್ರತಿ ಶುಕ್ರವಾರ ಮಾತ್ರ ಮಧ್ಯಾಹ್ನದ ಮೇಲೆ ಮುಚ್ಚಿರುತ್ತಿತ್ತು.

ಅಹಮ್ಮದ್ ಸ್ಟೋರ್ಸ್‌ನ ವ್ಯಾಪಾರ ಜೋರಾಗುತ್ತಲೇ ಕೆಲವೊಂದು ಇತರೆ ಅಂಗಡಿಗಳು ಮುಚ್ಚಿದವು ಮತ್ತು ಬೇರೆ ಅಂಗಡಿಗಳು ತಮ್ಮ ನಿಲುವನ್ನು ಬದಲಿಸಿ ಗಿರಾಕಿಗಳಿಗೆ ಕ್ಲೀನ್ ಮಾಡಿದ ಪದಾರ್ಥಗಳನ್ನು ಮಾರುವುದಕ್ಕೆ ಶುರುಮಾಡಿದವು. ಈಗ ಬೆಂಗಳೂರಿನಲ್ಲಿ ಯಾವ ಸಣ್ಣ, ದೊಡ್ಡ ಅಂಗಡಿಯಾದರೂ ಸರಿಯೇ, ಮನೆಗೆ ಸಾಮಾನನ್ನು "ಫ್ರೀ ಡೆಲಿವರಿ" ಮಾಡುತ್ತಾರೆ. ಕ್ಲೀನಾದ ಮತ್ತು ಪ್ಯಾಕ್ ಮಾಡಿದ ಸಾಮಾನನ್ನು ಮಾರುತ್ತಾರೆ.

ಇತ್ತೀಚೆಗೆ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಬಗ್ಗೆ ಬಹು ದೊಡ್ಡ ಚರ್ಚೆ ದೇಶದಲ್ಲಿ ನಡೆಯುತ್ತಿದೆ. ಕ್ಯಾರಿಫೂರ್, ವಾಲ್‌ಮಾರ್ಟ್‌ಗಳಂತಹ ಬಹು ದೊಡ್ಡ ವಿದೇಶಿ ಕಂಪನಿಗಳು ನಮ್ಮ ದೇಶದಲ್ಲಿ ಹಣಹೂಡಲು ಮುಂದಾಗಿದ್ದು. ಅದರ ಬಗ್ಗೆ ಹಲವು ಆಕ್ಷೇಪಗಳು, ಆತಂಕಗಳು ಕೇಳಿ ಬರುತ್ತಿವೆ. ಈಗಾಗಲೆ, ನಮ್ಮ ದೇಶದ ದೊಡ್ಡ ಕಂಪನಿಗಳಾದ, ಟಾಟಾ, ಬಿರ್ಲಾ ಮತ್ತು ರಿಲಾಯನ್ಸ್ ಮುಂತಾದ ಕಂಪನಿಗಳು, ಸಾವಿರಾರು ಕೋಟಿ ಬಂಡವಾಳ ಹೂಡಿ, ನೂರಾರು ಕಿರಾಣಿ ಮಾಲ್‌ಗಳನ್ನು (ಮಲ್ಟಿಬ್ರಾಂಡ್) ದೇಶಾದ್ಯಂತ ಹಲವು ವರ್ಷಗಳಿಂದ ನಡೆಸುತ್ತಿವೆ. ಆದರೆ ಇವೆಲ್ಲವು ಆರಂಭದಿಂದಲೂ, ನಷ್ಟದಲ್ಲಿಯೆ ನಡೆಯುತ್ತಿವೆ. ಹೀಗಿದ್ದರೂ, ಕ್ಯಾರಿವೂರ್, ವಾಲ್‌ಮಾರ್ಟ್‌ಗಳಂತ ವಿದೇಶಿ ಕಂಪನಿಗಳೇಕೆ ನಮ್ಮ ದೇಶಕ್ಕೆ ಬರಲು ತುದಿಗಾಲಿನಲ್ಲಿ ನಿಂತಿವೆ? ಇದೊಂದು ಅರ್ಥವಾಗದ ಸಂಕೀರ್ಣ ವಿಷಯ.

ಇನ್ನೊಂದು ಮಗ್ಗಲಿನಿಂದ ನೋಡುವುದಾದರೆ ಹಣ್ಣು, ತರಕಾರಿಗಳನ್ನು ಬೆಳೆಯುವುದರಲ್ಲಿ ನಮ್ಮ ದೇಶ ಮುಂಚೂಣಿಯಲ್ಲಿದೆ. ಈ ಹೆಮ್ಮೆಯ ವಿಷಯದ ಜೊತೆಗೆ ವಿಶಾದನೀಯ ವಿಷಯವೆಂದರೆ ಶೇಕಡ ನಲವತ್ತರಷ್ಟು, ಹಣ್ಣು ತರಕಾರಿಗಳು, ಸಾಗಾಣಿಕೆಯಲ್ಲಿ ಮತ್ತು ಶೇಕರಿಸಿಡಲು ಸರಿಯಾದ ಶೈತ್ಯಾಗಾರ ಮತ್ತಿತರ ವ್ಯವಸ್ಥೆಗಳಿಲ್ಲದೆ, ಕೊಳೆತು ಹೋಗುತ್ತವೆ. ಗ್ರಾಹಕರನ್ನು ತಲುಪುವುದು ಕೇವಲ ಶೇಕಡ ಅರವತ್ತರಷ್ಟು ಮಾತ್ರ. ಇಷ್ಟೊಂದು ಅಗಾಧವಾದ ನಷ್ಟವನ್ನು ನಮ್ಮ ರೈತರು, ಬೆಳೆಗಾರರು ಅನುಭವಿಸುತ್ತಿದ್ದಾರೆ. ಇದಲ್ಲದೆ, ಅನೇಕ ಮಧ್ಯವರ್ತಿಗಳಿಂದ ಕೂಡಿದ ಈ ಮಾರುಕಟ್ಟೆ ವ್ಯವಸ್ಥೆಯಲ್ಲಿ, ರೈತರಿಗೆ ಸರಿಯಾದ ಬೆಲೆ ದೊರೆಯುತ್ತಿಲ್ಲವೆಂಬುದು ಹಲವು ತಜ್ಞರ ಅಭಿಪ್ರಾಯ. ಒಂದು ಅಂದಾಜಿನ ಪ್ರಕಾರ, ಗ್ರಾಹಕರು ಕೊಡುವ ಬೆಲೆಯ ಕಾಲು ಭಾಗ ಅಥವ ಅದಕ್ಕಿಂತ ಕಡಿಮೆ ಮೊತ್ತ ಮಾತ್ರ ರೈತರಿಗೆ ದಕ್ಕುತ್ತಿದೆ.

ಇಂತಹ ದುರದೃಷ್ಟಕರ ಪರಿಸ್ಥಿತಿಯಿರುವಾಗ, ಈ ವಿದೇಶಿ ಕಂಪನಿಗಳು ತಮ್ಮ ಅನುಭವ ಮತ್ತು ಅಗಾಧ ಬಂಡವಾಳ ಹೂಡಿಕೆಯಿಂದ ನಮ್ಮ ಬೆಳೆಗಾರರಿಗೆ ಮತ್ತು ಉತ್ಪಾದಕರಿಗೆ ಬೇಕಾಗುವ ಅನುಕೂಲಗಳನ್ನು, ನಮ್ಮ ದೇಶದಲ್ಲಿ ಮಾಡಿಕೊಟ್ಟು, ಮಧ್ಯವರ್ತಿಗಳ ಕದಂಬಬಾಹುಗಳಿಂದ ರೈತರನ್ನು ಬಿಡುಗಡೆ ಮಾಡಿ, ಅವರಿಗೆ ಉತ್ತಮ ಬೆಲೆ ಸಿಗುವಂತೆ ಮಾಡಿ ಹಾಗು ಗ್ರಾಹಕರಿಗೂ ಅನುಕೂಲವಾಗುವ ವಾತಾವರಣವನ್ನು ತರುತ್ತಾರೆಂದು ಹಲವರ ಅಭಿಪ್ರಾಯ.

ನಮ್ಮ ದೇಶದ ಗ್ರಾಹಕರಿಗೂ, ಸಣ್ಣ ರೈತರಿಗೂ, ಅನುಕೂಲವಾಗುವಂತಹ ವ್ಯಾಪಾರ ವಹಿವಾಟುಗಳ ನಿಯಮಗಳು ಬದಲಾಗಿ, ಅನುಕೂಲಗಳು ಹೆಚ್ಚಿ, ಇಂತಹ ದೊಡ್ಡ ಮಾಲ್‌ಗಳು, ಅಹಮ್ಮದ್ ಸ್ಟೋರ್ಸ್‌ಗಳಂತೆ Game changer ಗಳಾಗಲಿ ಎಂದು ಆಶಿಸೋಣ. ■

(7ನೇ ಪುಟದಿಂದ)

...ಖಾಸಗಿ ವಿ.ವಿಗಳು ಬೇಡ

ತಯಾರಿಯಲ್ಲಿವೆ.

ಖಾಸಗಿ ವಿ.ವಿ.ಆಡಳಿತ ಮಂಡಳಿಯು ವಿ.ವಿ.ಕಟ್ಟಡವನ್ನು 40 ಎಕರೆ ವಿಸ್ತಾರದಲ್ಲಿ ನಿರ್ಮಿಸುವುದು, ತನಗೆ ಸೂಕ್ತ ಸ್ಥಳದಲ್ಲಿ ಪ್ರಾದೇಶಿಕ ಕೇಂದ್ರಗಳನ್ನು, ಅಧ್ಯಯನ ಕೇಂದ್ರಗಳನ್ನು ತೆರೆಯುವ ಅವಕಾಶ ಲಭಿಸುವುದರಿಂದ ಇದು ಒಟ್ಟಾರೆ ವಿಶ್ವ ವಿದ್ಯಾಲಯವೊಂದಕ್ಕೆ ಇರಬೇಕಾದ ಶೈಕ್ಷಣಿಕ ವಾತಾವರಣದ ಬದಲಿಗೆ ವಾಣಿಜ್ಯ ಸಂಕೀರ್ಣ ಮಳಿಗೆಯಾಗಿ ಮಾರ್ಪಡಲಿದೆ.

ನಿರಂಕುಶ ವರ್ತನೆಗಳಿಂದ ಶೈಕ್ಷಣಿಕ ವಾತಾವರಣವನ್ನು ಹಾಳುಗೆಡುವಿದ, ಇಬ್ಬರು ಕಳಂಕಿತ ಆರೋಪ ಹೊತ್ತ ಬೆಂ.ವಿ..ವಿಯ ಮಾಜಿ ಉಪಕುಲಪತಿ ಎನ್.ಪ್ರಭುದೇವ್, ರಿಜಿಸ್ಟ್ರಾರ್ ಬಿ.ಸಿ.ಮೈಲಾರಪ್ಪ ಮುಂತಾದವರು ಹಾಲಿ ಸರಕಾರದ ಅಧಿಕಾರವಧಿಯಲ್ಲೇ ನೇಮಕಗೊಂಡವರು ಸರಕಾರದ ಆದೇಶಗಳಿಗೆ ಕಿಂಚಿತ್ತು ಬೆಲೆ ನೀಡದಿದ್ದಾಗ, ಸರಕಾರ ಮೂಕ ಪ್ರೇಕ್ಷಕವಾಯಿತು. ಇನ್ನೂ ವಿ.ವಿ.ಕಾಯ್ದೆ, ರೋಸ್ಟರ್ ನಿಯಮ ಗಾಳಿಗೆ ತೂರಿ ನೇಮಕಾತಿಗಳಲ್ಲಿ ಅಕ್ರಮ ಎಸಗಿದ ಮೈಸೂರು ವಿ.ವಿ.ಮಾಜಿ ಕುಲಪತಿ ಪ್ರೊ॥ ಜೆ.ಶಶಿಧರ್ ಪ್ರಸಾದ್, ಬಿಜಾಪುರ ವಿ.ವಿ.ಯ ಸಯೀದಾ ಅಖ್ತರ್, ರಾಜೀವ್‌ಗಾಂಧಿ ವಿ.ವಿ.ಯ ಡಾ.ಪಿ.ಎಸ್.ಪ್ರಭಾಕರನ್ ಸೇರಿದಂತೆ ಹಲವಾರು ವಿ.ವಿ.ಗಳ ನೈತಿಕತೆಯನ್ನು ಬೀದಿಗೆ ತಂದಾಗ ಯಾವುದೇ ಶಿಸ್ತುಕ್ರಮ ಜರುಗಿಸಲು ವಿಫಲವಾದ ಸರಕಾರ, ಖಾಸಗಿ ವಿ.ವಿ.ಗಳ ಮೇಲೆ ನಿಗಾ ವಹಿಸುವ ಗೋಸುಂಬೆ ಮಾತುಗಳಲ್ಲಿ ಎಷ್ಟು ಹುರುಳಿದೆ? ಈಗ ಖಾಸಗಿ ವಿ.ವಿ.ಸ್ಥಾಪನೆಗೆ ಮುಂದೆ ಬಂದಿರುವ 7 ಸಂಸ್ಥೆಗಳು ಯಾವ ವರ್ಗದ ಜನರಿಗೆ ಸೀಟುಗಳನ್ನು ಕಾದಿರಿಸಿವೆ ಎಂಬುದು ಸೇರಿದಂತೆ ಶುಲ್ಕ ನಿಗಧಿ ಇತ್ಯಾದಿಗಳು ಸಾರ್ವಜನಿಕವಾಗಿ ಚರ್ಚಿತವಾಗಬೇಕಿದೆ.

ಈಗ ಇರುವ ಸರಕಾರಿ ವಿ.ವಿ.ಗಳ ಶುಲ್ಕ ಭರಿಸಲಾಗದೇ ಉನ್ನತ ಶಿಕ್ಷಣವನ್ನು ಪಡೆಯಲಾಗದಂತಹ ಸ್ಥಿತಿ ರಾಜ್ಯದ ವಿದ್ಯಾರ್ಥಿಗಳಿಗೆ ಇರುವಾಗ, ತಮಗೆ ಇಚ್ಛಿಸಿದಷ್ಟು ವಂತಿಗೆ ವಸೂಲಿಮಾಡುವ, ತಮಗೆ ಅರ್ಹ ಎನಿಸಿದವರನ್ನು ನೇಮಿಸಿಕೊಳ್ಳುವ ಸಂವಿಧಾನದ ಆಶಯವಾದ ಮೀಸಲಾತಿ ಮಾನದಂಡವನ್ನು ಕೈಬಿಡುವ ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರನ್ನು ಉನ್ನತ ಶಿಕ್ಷಣದಿಂದ ದೂರಗೊಳಿಸುವ ಅಂಶ ಬಿಟ್ಟರೆ ಈ ಖಾಸಗಿ ವಿ.ವಿ.ಗಳಿಂದ ಮತ್ತೇನು ಸಾಧನೆಯಾಗದು.

ಕಲಾವಿಭಾಗದ ಸ್ನಾತಕೋತ್ತರ ಪದವೀಧರರು ಜಾಗತೀಕರಣದ ಹೊಡೆತಕ್ಕೆ ನೆಲೆ–ಬೆಲೆ ಕಳೆದುಕೊಂಡು ಉದ್ಯೋಗವಿಲ್ಲದೆ ಪರಿತಪಿಸುತ್ತಿದ್ದಾರೆ. ಅಂಕವೇ ಮಾನದಂಡವಾಗಿರುವ ಈ ದಿನಗಳಲ್ಲಿ ಸೆಮಿಸ್ಟರ್, ನಾನ್ ಸೆಮಿಸ್ಟರ್ ಪದವೀಧರರ ನಡುವೆ ಬಹುದೊಡ್ಡ ಕಂದರ ಸೃಷ್ಟಿಯಾಗಿರುವ ಹಿನ್ನಲೆಯಲ್ಲಿ ಆ ಬಗ್ಗೆ ಏನೂ ಸುಧಾರಣೆಯಾಗಿಲ್ಲ.

ಈಗ ಸರಕಾರಿ ವಿ.ವಿ.ಗಳಲ್ಲಿನ ಅಧ್ಯಾಪಕರಿಗೆ ಯು.ಜಿ.ಸಿ.ವೇತನ ಲಕ್ಷ ರೂಗಳವರೆಗೆ ದೊರಕುತ್ತಿದ್ದು, ಇದೇ ಪ್ರಮಾಣದ ವೇತನವನ್ನು ಖಾಸಗಿ ವಿ.ವಿ.ಗಳು ನೀಡುತ್ತವೆಯೇ? ಒಂದುವೇಳೆ ಹಾಗೆ ನೀಡಬೇಕಾದಲ್ಲಿ ಯಾವ ಪ್ರಮಾಣದ ಶುಲ್ಕ ವಿದ್ಯಾರ್ಥಿಗಳಿಂದ ವಸೂಲಿಮಾಡಬೇಕಾಗಬಹುದು?

ಇಂದಿಗೂ ಪರಿಶಿಷ್ಟಜಾತಿ ವಿದ್ಯಾರ್ಥಿಗಳು ಶೇ.11ಕ್ಕಿಂತ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶೇ.5ಕ್ಕಿಂತಲೂ ಕಡಿಮೆ ಉನ್ನತ ಶಿಕ್ಷಣಕ್ಕೆ ದಾಖಲಾಗುತ್ತಿರುವುದು ಆ ವರ್ಗದವರು ಹೆಚ್ಚು ಉನ್ನತ ಶಿಕ್ಷಣ ಪಡೆಯುವಂತಾಗಬೇಕು. ಎಲ್ಲಕಿಂತ ಮುಖ್ಯವಾಗಿ ವಿ.ವಿ.ಗಳು ಜಾತಿ ರಾಜಕೀಯದಿಂದ ಮೊದಲು ಮುಕ್ತಗೊಂಡು ನೈತಿಕತೆ ಪಾರದರ್ಶಕತೆಗೆ ಮಾದರಿ ಮಾಡುವುದು, ಬಜೆಟ್‌ನಲ್ಲಿ ಸರಕಾರಿ ವಿ.ವಿ.ಗಳಿಗೆ ಸಂಶೋಧನೆ ಮೂಲ ಸೌಕರ್ಯಗಳಿಗೆ ಹೆಚ್ಚಿನ ಅನುದಾನದ ಸುಧಾರಣಾ ಕಾರ್ಯ ಆಗದಿದ್ದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಂಠಿತವಾಗಲಿದೆ. ಹೀಗಾಗಲೇ ಸರಕಾರಿ ಶಾಲೆಗಳನ್ನು ಮುಚ್ಚುತ್ತಿದ್ದು, ಅದರ ಬೆನ್ನಲ್ಲೆ ಉನ್ನತ ಶಿಕ್ಷಣವನ್ನು ಖಾಸಗೀಕರಣ ಮಾಡಹೊರಟಿರುವುದು ಈ ಸರಕಾರ ಅದರ ಭಾಗವಾದ ಶಿಕ್ಷಣ ಸಚಿವರುಗಳು ಯಾವ ವರ್ಗದ ಹಿತಾಸಕ್ತಿ ಪೋಷಕರು ಎಂದು ಅರ್ಥವಾಗಬೇಕಿದೆ.

ವಿದ್ಯಾರ್ಥಿಗಳ ಸಂಖ್ಯೆ ಕುಂಠಿತ ನೆಪನೀಡಿ ಸರಕಾರಿ ವಿ.ವಿ.ಗಳನ್ನು ಮುಚ್ಚುವ ಉದ್ದೇಶ ಬಹಳ ಸ್ಪಷ್ಟವಾಗಿದೆ.

ಸಂಪೂರ್ಣ ಅಸಹಾಯಕರಾಗುವ ಮೊದಲೇ ಎಚ್ಚೆತುಕೊಳ್ಳುವುದು ಸರಿ ಎಲ್ಲಾ ವಿ.ವಿ.ಗಳ ವ್ಯವಸ್ಥೆ ಕೂಡಲೇ ಸರಿಪಡಿಸಿ ಆ ಮೂಲಕವೇ ಎಲ್ಲಾ ವರ್ಗದವರಿಗೆ ತಾರತಮ್ಯರಹಿತ, ಏಕರೂಪಿ ಉನ್ನತ ಶಿಕ್ಷಣ ದೊರಕುವಂತಾಗಬೇಕು ಇದಕ್ಕಾಗಿ ಈ ನಾಡಿನ ಶಿಕ್ಷಕರು, ವಿ.ವಿ.ಪ್ರಾಧ್ಯಾಪಕರು, ಪೋಷಕರು, ಶಿಕ್ಷಣ ತಜ್ಞರು, ಪ್ರಗತಿಪರ ಚಿಂತಕರು ಒಕ್ಕೊರಲಿನಿಂದ ಖಾಸಗಿ ವಿ.ವಿ.ಗಳ ಸ್ಥಾಪನೆಯನ್ನು ಖಂಡಿಸಬೇಕಾಗಿದೆ. ■

ಸಂಪಾದಕರೊಡನೆ ಸಂವಾದ

ಆಳುತ್ತಿರುವವರ ಕಿತ್ತಾಟದಲ್ಲಿ ನಲುಗುತ್ತಿರುವ ರೈತರು

ಹರಿಶಂಕರ್ ಆರ್

ಪ್ರಿಯ ಸಂಪಾದಕರೇ,

ಅತ್ತ ಭೀಕರ ಕ್ಷಾಮ, ಇತ್ತ ಕಾವೇರಿ ನದಿ ನೀರಿನ ಹಂಚಿಕೆ ವಿವಾದಗಳಿಂದ ಕಂಗೆಟ್ಟು ಹೋಗಿರುವ ಕರ್ನಾಟಕದಲ್ಲಿ, ಜನರಿಂದ ಆಯ್ಕೆಯಾದಂಥ ಜವಾಬ್ದಾರಿಯುತ ಸರ್ಕಾರ ಮತ್ತು ಅದರ ನೇತೃತ್ವ ವಹಿಸಿರುವ ಆಡಳಿತ ಪಕ್ಷ ಹೇಗೆ ವರ್ತಿಸಬೇಕು? ಇಂತಹ ಸಂದರ್ಭದಲ್ಲಿ ಪಕ್ಷದ ಆಂತರಿಕ ಸಮಸ್ಯೆಗಳನ್ನು ಬದಿಗೊತ್ತಿ ರಾಜ್ಯದ ಹಿತಕಾಯಲು ಶ್ರಮಿಸಬೇಕು. ಆದರೆ ಕೇವಲ ಅಧಿಕಾರಕ್ಕಾಗಿ ಈ ಪಕ್ಷದ ಜನ ಕಿತ್ತಾಡುತ್ತಿರುವುದು ನಿಜಕ್ಕೂ ದುಃಖಕರ. ರಾಜ್ಯದಲ್ಲಿ ಮೈಸೂರು ಭಾಗದ ಭಾಗಶಃ ತಾಲೂಕುಗಳು ಸೇರಿದಂತೆ 120ಕ್ಕೂ ಹೆಚ್ಚು ತಾಲೂಕುಗಳು ಬರ ಪರಿಸ್ಥಿತಿ ಅನುಭವಿಸುತ್ತಿವೆ. ಈ ಸಂಗತಿ ಆಳುವ ಪಕ್ಷಕ್ಕೆ ಸ್ಪಷ್ಟವಾಗಿ ತಿಳಿದಿರುವಂತದ್ದು. ಅಂತಹ ತಾಲೂಕುಗಳಲ್ಲಿ ಪರಿಹಾರ ಕಾರ್ಯಗಳು ಯುದ್ಧೋಪಾದಿಯಲ್ಲಿ ಆಗಬೇಕು. ಬರ ಎಂದರೆ ನೀರಿನ ಸಮಸ್ಯೆ ಒಂದೇ ಅಲ್ಲ ಬದಲಾಗಿ ಆಹಾರ ಬೆಳೆಗಳ ಉತ್ಪಾದನೆ ಕುಂಠಿತವಾಗುತ್ತದೆ. ಹೀಗಾಗಿ ರೈತರಿಗೆ ಸಾಕಷ್ಟು ನೆರವಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹೆಸರಿಗೆ ರೈತರ ಸಾಲವನ್ನು 25,000ಗಳ ವರೆಗೂ ಮನ್ನಾ ಮಾಡುವುದಾಗಿ ಸರ್ಕಾರ ಘೋಷಿಸಿದೆ. ಅದರ ಖ್ಯಾತಿಯನ್ನು ತನ್ನದಾಗಿಸಿಕೊಳ್ಳಲು ಯಡಿಯೂರಪ್ಪ ಮತ್ತು ಶೆಟ್ಟರ್ ಕಿತ್ತಾಡುತ್ತಿದ್ದಾರೆ. ಈ ನಡುವೆ ಸಾಲಮನ್ನಾ ಯೋಜನೆ ಜಾರಿಯಾಗದೆ ಉಳಿದಿದೆ. ಅದರ ನಿರೀಕ್ಷೆಯಲ್ಲಿರುವ ರೈತನಿಗೆ ಭ್ರಮನಿರಸನವಾಗಿರುವುದಂತು ಸುಳ್ಳಲ್ಲ.

ಗಾಯದ ಮೇಲೆ ಬರೆ ಎಳೆದರೆಂಬಂತೆ ಭೀಕರ ಕ್ಷಾಮ ಎದುರಿಸುತ್ತಿರುವ ಮೈಸೂರು ಪ್ರಾಂತ್ಯದಲ್ಲಿ ಜಲಾಶಯಗಳ ನೀರಿನ ಮಟ್ಟ ನಿಕೃಷ್ಟವಾಗಿದ್ದರೂ ಪಕ್ಕದ ತಮಿಳುನಾಡು ನೀರು ಬಿಡಲು ಆಗ್ರಹಿಸಿ ಕೇಂದ್ರ ಹಾಗೂ ಸುಪ್ರೀಂಕೋರ್ಟ್ ಮುಂದೆ ನಿಂತಿತು. ರಾಜಕೀಯ ಕಾರಣಗಳಿಗಾಗಿ ತಮಿಳುನಾಡು ಕೈಮೇಲಾಗಿ ನೀರು ಪಡೆಯಲು ಸಫಲವೂ ಆಯಿತು. ಕರ್ನಾಟಕದ ರಾಜಕೀಯ ಅರಾಜಕತೆಯನ್ನು ಮನಗಂಡ ಕೇಂದ್ರ ಸರ್ಕಾರ ತಮಿಳುನಾಡಿನ ಪರವಾಗಿ ನಿಂತಿದೆ. ಕಾವೇರಿ ನೀರು ನೀಡುವ ವಿಚಾರದಲ್ಲಿ ಕರ್ನಾಟಕಕ್ಕಿರುವ ಮಿತಿಗಳನ್ನು ನ್ಯಾಯಾಲಯ ಹಾಗೂ ಕೇಂದ್ರಕ್ಕೆ ತಿಳಿಸಲು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಎರಡು ಪ್ರಸಂಗಗಳಲ್ಲಿ ಕರ್ನಾಟಕ ಸರ್ಕಾರ ಸೂಕ್ತ ರೀತಿಯಲ್ಲಿ ವರ್ತಿಸಿಲ್ಲ ಎಂಬುದಂತು ನಿಜ. ರಾಜ್ಯದ ಹಿತಕಾಯುವ ಬದಲು ಆಡಳಿತ ಪಕ್ಷ ಮತ್ತು ಸದಸ್ಯರು ಮಾಡುತ್ತಿರುವ ಕೆಲಸ ಬಣ ರಾಜಕೀಯ ಮಾಡುವುದು, ಬೆದರಿಸುವುದು, ತಮ್ಮವರಿಗೆ ಅಧಿಕಾರ ನೀಡುವುದು ಇದಕ್ಕಾಗಿ ಪ್ರಮಾಣಿಕರನ್ನು ಬಲಿಕೊಡುವುದು, ರಾಜ್ಯಾಧ್ಯಕ್ಷ ಸ್ಥಾನಕ್ಕಾಗಿ ಕಿತ್ತಾಡುವುದು. ಕಳೆದ ನಾಲ್ಕು ವರ್ಷಗಳಿಂದ ಬಿಜೆಪಿಯ ಈ ಕಿತ್ತಾಟ ಹೇಸಿಗೆ ಹುಟ್ಟಿಸಿದೆ.

ರಾಜ್ಯದಲ್ಲಿ ಬಗೆಹರಿಯಬೇಕಾದ ಸಮಸ್ಯೆಗಳು ಸಾಕಷ್ಟಿವೆ. ಪ್ರಸ್ತುತ ಸಂದರ್ಭದಲ್ಲಿ ಬರಗಾಲ ಅತಿದೊಡ್ಡ ಸಮಸ್ಯೆ. ಇದರ ನಡುವೆ ಕಾವೇರಿ ವಿವಾದ. ಇದನ್ನೆಲ್ಲ ಪರಿಹರಿಸದಿದ್ದರೆ ರಾಜ್ಯದ ರೈತನ ಗತಿ ಏನು ಎಂದು ಸರ್ಕಾರವಾಗಲಿ, ಆಡಳಿತ ಪಕ್ಷವಾಗಲಿ ಚಿಂತಿಸಿದೆಯೇ? ಮುಖ್ಯಮಂತ್ರಿ, ರಾಜ್ಯಾಧ್ಯಕ್ಷ ಸ್ಥಾನಗಳೇ ಮುಖ್ಯವಾದರೆ ಹೇಗೆ? ಇನ್ನೈದು ವರ್ಷಗಳಲ್ಲಿ ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರಗಳ ಪರಿಸ್ಥಿತಿ ಏನು ಗೊತ್ತೇ? ರಾಜಸ್ಥಾನದ ಮರುಭೂಮಿ! ಈ ಭಾಗದಲ್ಲಿ ಅಂತರ್ಜಲ 1500 ಅಡಿಗಳಿಗಿಳಿದಿದೆ. ಕೆರೆಗಳು ನೀರನ್ನು ಕಂಡು ವರ್ಷಗಳೇ ಉರುಳಿವೆ. ಈ ಪ್ರದೇಶಗಳಿಗೆ ನೀರಾವರಿ ಒದಗಿಸುವ ಬಹುನಿರೀಕ್ಷಿತ ನೇತ್ರಾವತಿ, ಎತ್ತಿನ ಹೊಳೆ ತಿರುವು ಯೋಜನೆ ಏನಾಯಿತು, ಎಲ್ಲಿಗೆ ಬಂತು? ನೇತ್ರಾವತಿ ನದಿ ತಿರುವು ಮಾಡಿ ದಕ್ಷಿಣ ಪ್ರಾಂತ್ಯಗಳಿಗೆ ನೀರು ಹರಿಸಿದ್ದೇ ಆದರೆ ರಾಜ್ಯದಲ್ಲಿ ಕ್ಷಾಮದ ಹೆಸರೇ ಇರುವುದಿಲ್ಲ. ಈ ಬಗ್ಗೆ ಎಂದಾದರು ಚಿಂತಿಸಿದ್ದೀರೇ ಆಳುವ ಪ್ರಭುಗಳೇ? ಸಾಕು ಮಾಡಿ ನಿಮ್ಮ ವಿದ್ಯೆ ಪ್ರತಿವಿದ್ಯೆಗಳನ್ನು. ನಾ ಮುಂದು ನೀ ಮುಂದೆಂದು ಸರಣಿ ಸರಣಿ ಬರ ಪ್ರವಾಸಗಳನ್ನು ಪಕ್ಷದ ಎಲ್ಲ ನಾಯಕರು ಕೈಗೊಂಡಿರಲ್ಲ ಏನು ಕಂಡಿತು ನಿಮಗೆ? ಹೋಗಲಿ ಅದಕ್ಕೆ ಪರಿಹಾರವೇನು? ಕಡೆಗೆ ಬರ ಪ್ರವಾಸದ ಫಲವಾದರೂ ಏನು? ಇದಕ್ಕೆಲ್ಲ ಉತ್ತರ ನೀಡಿ, ಪರಿಹಾರ ನೀಡಿ. ನಂತರ ಕಿತ್ತಾಡಿ. ರಾಜ್ಯದ ಜನತೆ ಏತಕ್ಕೆ ಅಧಿಕಾರ ನೀಡಿದ್ದಾರೆ ಎಂದು ಒಂದೊತ್ತು ಉಣ್ಣುವಾಗ ಯೋಚಿಸಿ ನೋಡಿ. ಇದು ನನ್ನೊಬ್ಬನ ಆಕ್ರೋಷದ ಮಾತಲ್ಲ, ಭೀಕರ ಬರಗಾಲ, ದುರಾಡಳಿತದ ದವಡೆಗೆ ಸಿಕ್ಕು ನಲುಗಿರುವ ರೈತನ ನೋವಿನ ಕೂಗು. ಶಮನಗೊಳಿಸಿ ಅದನ್ನು. ■



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-560 091
ದೂರವಾಣಿ : 080-23480278, 9448048306

(ಗಾಂಧೀಜಿಯವರನ್ನು ಕೇಂದ್ರಿತವಾಗಿಟ್ಟುಕೊಂಡು ರೂಪಿಸಲಾದ ಅಕ್ಟೋಬರ್ 2012ರ 'ಸಂವಾದ' ವಿಶೇಷಾಂಕಕ್ಕೆ ನಾಡಿನಾದ್ಯಂತ ಮೆಚ್ಚುಗೆಯ ಮಹಾಪೂರವೇ ಹರಿದುಬಂದಿದೆ. ಹಾಗೆಯೇ ಸಮಾಜವಾದಿ ಚಿಂತಕರಾದ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ದರ್ಶನದ ಸರಳೀಕರಣದ ಅಪಾಯಗಳು' ಲೇಖನಕ್ಕೆ ಅನೇಕರು ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಚರ್ಚೆಯಾಗಬೇಕೆಂದು ಒತ್ತಾಯಿಸುತ್ತಿದ್ದಾರೆ. ಶ್ರೀ ಎಸ್. ಮರಿಸ್ವಾಮಿಯವರ ಪ್ರತಿಕ್ರಿಯೆಯ ಮೂಲಕ ಈ ಚರ್ಚೆಯನ್ನು ಆರಂಭಿಸುತ್ತಿದ್ದೇವೆ. ಚರ್ಚೆ ಯಾವುದೇ ಭಾವಾವೇಶ ಹಾಗೂ ಪೂರ್ವಾಗ್ರಹವಿಲ್ಲದೆ, ವಸ್ತುನಿಷ್ಠವಾಗಿ ಅತ್ಯಂತ ಗಂಭೀರವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಯಬೇಕೆಂಬುದು 'ಸಂವಾದ'ದ ಆಸೆ. ಓದುಗರು ಚರ್ಚೆಯಲ್ಲಿ ಮುಕ್ತವಾಗಿ ಭಾಗವಹಿಸಬೇಕೆಂದು ಕೋರುತ್ತೇವೆ.)



ಗಾಂಧಿ ದರ್ಶನ; ಖಡ್ಗ ಹಿಡಿದ ಲೇಖಕ

ಎಸ್. ಮರಿಸ್ವಾಮಿ

ಇತ್ತೀಚಿನ ಅಂದರೆ ಅಕ್ಟೋಬರ್ 2012ರ 'ಸಂವಾದ' ಸಂಚಿಕೆಯಲ್ಲಿ ಪ್ರಕಟವಾದ ಡಿ.ಎಸ್.ನಾಗಭೂಷಣ ಅವರ "ಗಾಂಧಿ ದರ್ಶನದ ಸರಳೀಕರಣದ ಅಪಾಯಗಳು" ಎಂಬ ಶೀರ್ಷಿಕೆಯ ಬರಹಕ್ಕೆ ಇದೊಂದು ಪ್ರತಿಕ್ರಿಯೆ.

ಒಂದು ರೀತಿಯಲ್ಲಿ ಈ ಬರಹ ಓದಲು ನಾನು ಅನರ್ಹ. ಏಕೆಂದರೆ ದೇವರ ಕಲ್ಪನೆಯನ್ನೇ ಅಲ್ಲಗೆಳೆಯುವವರು ಮತ್ತು ಮನುಷ್ಯ ದೇವರಾಗುವ ಸಾಧ್ಯತೆಯನ್ನು ನಿರಾಕರಿಸುವವರು ಈ ಲೇಖನವನ್ನು ಓದುವ ಅಗತ್ಯವಿಲ್ಲ ಎಂದು ಪ್ರಾರಂಭದಲ್ಲಿಯೆ ಹೇಳುತ್ತಾರೆ ಲೇಖಕರು. ಇದು ವಿಚಿತ್ರ ಎನಿಸುತ್ತದೆ. ಈವರೆಗೆ ನಾವು ಬರಹಗಳ ಮೇಲೆ ಅಧಿಕಾರಶಾಹಿ ಹೇರಿದ ನಿಷೇಧಾಜ್ಞೆಗಳ ಬಗ್ಗೆ ಕೇಳುತ್ತಿದ್ದೆವು. ಆದರೆ ಈಗ ಲೇಖಕರೂ ಹೇರಬಹುದಾದ ನಿಷೇಧಾಜ್ಞೆಯೂ ಒಂದಿದೆ ಎಂದು ತಿಳಿಯಿತು. ಸಾರ್ವಜನಿಕ ರಂಗದಲ್ಲಿ ತನ್ನ ಬರಹವನ್ನು ಇಟ್ಟ ಒಬ್ಬ ಲೇಖಕ ಅದು ಹೇಗೆ ಅದನ್ನು ಒಬ್ಬರು ಓದಬಹುದು, ಮತ್ತೊಬ್ಬರು ಓದಬಾರದು ಎಂದು ವಿಧಿಸುತ್ತಾನೆ ಎಂಬುದು ಅರ್ಥವಾಗದು. ಅದೂ ಒಂದು ವಿಚಿತ್ರ ಮನಸ್ಥಿತಿ ಎಂದು ಕಾಣುತ್ತದೆ.

ವಿಷಯಕ್ಕೆ ಬರುವುದಾದರೆ, ಇತ್ತೀಚೆಗೆ ಮಾಧ್ಯಮ ಒಂದು ಸಮೀಕ್ಷೆ ನಡೆಸಿತು. ಗಾಂಧಿಯನ್ನು ಹೊರಗಿಟ್ಟು "ಅತಿಶ್ರೇಷ್ಠ ಭಾರತೀಯ ಯಾರು" ಎಂದು ಮಾಡಿದ ಈ ಸಮೀಕ್ಷೆಯಲ್ಲಿ ಅಂಬೇಡ್ಕರ್ ಅತಿ ಶ್ರೇಷ್ಠ ಭಾರತೀಯನೆಂದು ಮೂಡಿಬಂದುದು ಲೇಖಕರ ನಿದ್ದೆಗೆಡಿಸಿದೆ. ಜತೆಗೆ ಅತಿ ಸಹಜವಾಗಿ ಕೆಲವರು ಗಾಂಧಿಯನ್ನು ಹೊರಗಿಟ್ಟುದೇಕೆ? ಅವರನ್ನೂ ಸೇರಿಸಿ ಪ್ರಶ್ನೆ ಹಾಕಬಹುದಿತ್ತು ಎಂದು ಕೇಳಿದ ಪ್ರಶ್ನೆಗಳು ಇದನ್ನು ಮತ್ತೂ ಉಲ್ಬಣಗೊಳಿಸಿವೆ. ಇದರ ಸಹಜ ಮುಂದುವರಿಕೆ ಎಂಬಂತೆ ಮಾಧ್ಯಮ ಗಾಂಧಿ ವಾರಸುದಾರಿಕೆ ಮುಗಿದಿದೆಯೇ? ಅಂಬೇಡ್ಕರ್ ವಾರಸುದಾರಿಕೆ ಪ್ರಾರಂಭವಾಗಿದೆಯೇ? ಎಂಬ ಪ್ರಶ್ನೆ ಹಾಕಿ ಚರ್ಚಿಸಹೊರಟದ್ದೂ ಸೇರಿಕೊಂಡಿದೆ.

ಇಂತಹ ಪ್ರಶ್ನೆಗಳಿಗೆ, ಚರ್ಚೆಗಳಿಗೆ ಸರಿಯಾದ ಪ್ರತಿಕ್ರಿಯೆ ಎಂದರೆ ಗಾಂಧಿ ಅಥವಾ ಇನ್ನಾವುದೇ ವ್ಯಕ್ತಿಯ ವ್ಯಕ್ತಿತ್ವ, ಚಿಂತನೆ, ಕೊಡುಗೆ ಅದರ ಶಾಶ್ವತ ನೆಲೆ, ಅದರ ಮಹತ್ವ ಮುಂತಾದುವನ್ನು ವಿಮರ್ಶಿಸಿ ತೋರಿಸುವುದು. ಬಹುಶಃ ಈಗ ಶ್ರೇಷ್ಠರು ಎಂದು ಆರಿಸಲ್ಪಟ್ಟಿರುವವರ ನ್ಯೂನ್ಯತೆಗಳನ್ನು ಸೂಚ್ಯವಾಗಿ ನೀಡುವುದರಲ್ಲೂ ತಪ್ಪಿರಲಿಲ್ಲ. ಹೀಗೆ ಮಾಡುವಲ್ಲಿ ಐತಿಹಾಸಿಕ ಸತ್ಯಕ್ಕೆ ಖಡಾಖಂಡಿತವಾಗಿ ಅಂಟಿಕೊಳ್ಳಬೇಕಾದುದು ಅತ್ಯಾವಶ್ಯಕ. ಆದರೆ ಲೇಖಕರು ಹಾಗೆ ಮಾಡಿಲ್ಲ. ಯಾರನ್ನು ಜನಸಾಮಾನ್ಯರು 'ಶ್ರೇಷ್ಠ ವ್ಯಕ್ತಿ' ಎಂದು ಆರಿಸಿದ್ದಾರೊ ಅವರನ್ನು ನಾಶಮಾಡಲು ಖಡ್ಗ ಹಿಡಿದು ಹೊರಟಿದ್ದಾರೆ. ಅವರ ಹಿಂಬಾಲಕರನ್ನೂ ಹೀಗೆಳೆದು, ಧೃತಿಗೆಡಿಸುತ್ತಿದ್ದಾರೆ. ಇದೊಂದು ಯುದ್ಧದ ಕಾರ್ಯತಂತ್ರವಿರಬಹುದು. ಆದರೆ ಇಲ್ಲಿ ಇದು ಯಶಸ್ವಿಯಾಗಬಹುದೆ?

ಲೇಖಕರು ಅಂಬೇಡ್ಕರ್ ಮತ್ತು ಅಂಬೇಡ್ಕರ್‌ವಾದಿಗಳ ಮೇಲೆ ಮಾಡಿರುವ ಆರೋಪಗಳನ್ನು ನಿರಾಧಾರ ಎಂದು ಕೈಬಿಡುವುದು ಸಾಧ್ಯವಿದ್ದರೂ ಸಾರ್ವಜನಿಕರಿಗೆ ಕೆಲ ಅಂಶಗಳನ್ನು ಸ್ಪಷ್ಟಪಡಿಸುವ ದೃಷ್ಟಿಯಿಂದ ಅವುಗಳಿಗೆ ಉತ್ತರಿಸಿ ಸತ್ಯವನ್ನು ವಿಷದಪಡಿಸುವುದೂ ಅವಶ್ಯಕ ಎಂದುಕೊಳ್ಳುತ್ತೇನೆ.

ಲೇಖಕರ ಒಂದು ಆರೋಪ '1991ರ ಅವರ ಜನ್ಮಶತಮಾನಾಚರಣೆಯ ಮೊದಲು ಅಂಬೇಡ್ಕರ್ ಬಗ್ಗೆ ಜನ ಸಾಮಾನ್ಯರಿಗೆ ಏನೂ ತಿಳಿದಿರಲೇ ಇಲ್ಲ. ಸರ್ಕಾರ ಶತಮಾನೋತ್ಸವಾಚರಣೆಯನ್ನು ಬಾರಿ ವಿಜೃಂಭಣೆಯಿಂದ ಆಚರಿಸಿದ ಮೇಲೆ ಅವರ ಬಗ್ಗೆ ತಿಳಿಯಿತು. ಅವರು ಸರ್ಕಾರ ಸೃಷ್ಟಿಸಿದ ಫ್ಯಾಂಟಮ್' ಎನ್ನುವ ರೀತಿಯಲ್ಲಿ ಲೇಖಕರು ಅಂಬೇಡ್ಕರ್ ಅವರನ್ನು ಪ್ರತಿಬಿಂಬಿಸಿದ್ದಾರೆ. ಇದು ತಪ್ಪು. ಸರ್ಕಾರ ಎಚ್ಚೆತ್ತುಕೊಳ್ಳುವ ಮೊದಲೆ ಅವರ ಅಸಂಖ್ಯ ಅನುಯಾಯಿಗಳು, ಅಭಿಮಾನಿಗಳು ಅವರ ಸಾಹಿತ್ಯ ಹೊರತರುವ, ಅವರ ಹೋರಾಟದ ಬಗ್ಗೆ ತಿಳಿಸುವ, ಅವರ ಚಿಂತನೆಯನ್ನು ಹರಡುವ ಕಾಯಕವನ್ನು ಮಾಡುತ್ತಾ ಬಂದಿದ್ದರು. ಆಗಾಗಲೆ ಎಲ್ಲೆಲ್ಲೂ ಅಂಬೇಡ್ಕರ್ ಜನ್ಮದಿನ ಆಚರಿಸುವುದು ರೂಢಿಯಾಗಿತ್ತು. ಮತ್ತು ಎಲ್ಲೆಲ್ಲಿ ಶೋಷಣೆ, ಭಯ, ಬಡತನ,

ಚರ್ಚೆ

ಮುಂತಾದವಿದ್ದುವೂ ಅಲ್ಲೆಲ್ಲಾ ಅಂಬೇಡ್ಕರ್ ಚಿತ್ರ ಅಥವಾ ಮತ್ಥಳಿ ಸ್ಥಾಪಿಸಿ ರಕ್ಷಣೆ ಪಡೆದುಕೊಳ್ಳುವ ಪರಿಪಾಠವೂ ಬೆಳೆದಿತ್ತು. ಗಾಂಧಿಯ ಚಿತ್ರವನ್ನೇಕೆ ಅಂತಹ ಸಂದರ್ಭಗಳಲ್ಲಿ ಹಾಕಿಕೊಳ್ಳುವ ಕೆಲಸವನ್ನು ಈ ನಿರ್ಗತಿಕ ಜನ ಮಾಡಲಿಲ್ಲ ಎಂದು ಕೇಳಿದರೆ ಅಸಭ್ಯ ಎನಿಸಬಹುದೇನೊ. ಕರ್ನಾಟಕದಲ್ಲಿ ಸರ್ಕಾರ ಈ ಬಗ್ಗೆ ಯಾವುದೇ ಚಿಂತನೆ ಮಾಡುವ ಬಹಳ ಮೊದಲೆ ಅವರ ಅನುಯಾಯಿಗಳು ಒಂದು ವರ್ಷದ ಕಾರ್ಯಕ್ರಮ ರೂಪಿಸಿ, ಅಂಬೇಡ್ಕರ್ ಜ್ಯೋತಿ ಮತ್ತು ಜಾಥಾಗಳನ್ನು ಕರ್ನಾಟಕದ ಮೂಲೆ ಮೂಲೆಗೆ ಕಳುಹಿಸಿ ಅವರ ಚಿಂತನೆಗಳನ್ನು ರಾಜ್ಯದ ಎಲ್ಲಾ ಕಡೆ ಹರಡಿದ್ದು ಅದಕ್ಕೆ ಎಲ್ಲ ಜಾತಿಜನಾಂಗಗಳ ಜನ ಸ್ಪಂದಿಸಿದ್ದು ಸ್ಮರಣೀಯ. ಇದೆಲ್ಲವನ್ನೂ ಸರ್ಕಾರದ ಯಾವುದೇ ಸಹಾಯವಿಲ್ಲದೆ ಮಾಡಿದರು ಎನ್ನುವುದು ಕೇವಲ ತಳ್ಳಿಹಾಕುವ ವಿಷಯವಲ್ಲ. ಜತೆಗೆ ಎಷ್ಟೋ ಜನ ರಾಜಕಾರಣಿಗಳ, ಸಾಧುಸಂತರ ಶತಮಾನೋತ್ಸವಗಳನ್ನು ಸರ್ಕಾರ ನಡೆಸುತ್ತದೆ. ಆದರೆ ಅವರ್‍ಯಾರೂ ಜನರ ಮನಸ್ಸಿನಲ್ಲಿ ಸ್ಥಾಪನೆಯಾಗುವುದಿಲ್ಲ ಏಕೆ? ಅಂಬೇಡ್ಕರ್ ಸರ್ಕಾರದ ಸೃಷ್ಟಿ ಎನ್ನುವ ಲೇಖಕರ ಹೇಳಿಕೆ ಸರಿಯಲ್ಲ.

'ಅಂಬೇಡ್ಕರ್‌ವಾದಿಗಳು ಬೆಂಕಿಯುಗುಳುತ್ತಿದ್ದಾರೆ. ಅಂಬೇಡ್ಕರ್ ಹಿಂಬಾಲಕರು ಗಾಂಧಿ ಮರಣದ ಸುದ್ದಿ ಕೇಳಿ ಅಂಬೇಡ್ಕರ್ ಹಾಲು ತರಿಸಿ ಕುಡಿದು ಆನಂದಿಸಿದರು ಎಂದು ಹೇಳುತ್ತಾರೆ. ಹಾಗಲ್ಲ ಎಂದು ಹೇಳಬೇಕೆಂದರೆ ಅಂಬೇಡ್ಕರ್ ಆ ಸಂದರ್ಭದಲ್ಲಿ ನೀಡಿದ ಹೇಳಿಕೆ ನಮ್ಮ ಬಾಯಿಕಟ್ಟಿಸುತ್ತದೆ' ಎಂದಿದ್ದಾರೆ ಲೇಖಕರು. ಗಾಂಧಿ ಮರಣದ ಸಂದರ್ಭದಲ್ಲಿ ಅಂಬೇಡ್ಕರ್ ಯಾವ ಹೇಳಿಕೆಯನ್ನೂ ನೀಡಲಿಲ್ಲ. ಆದರೆ ದಿನಾಂಕ 06-02-1948ರಲ್ಲಿ ಅವರು ಅವರ ಭಾವಿಪತ್ನಿಗೆ ಬರೆದ ಪತ್ರದಿಂದ ಇಷ್ಟು ಸ್ಪಷ್ಟವಾಗುತ್ತದೆ. "ನಾನು ಗಾಂಧಿಯಿಂದ ಏನನ್ನೂ ಪಡೆಯಲಿಲ್ಲ. ನನ್ನ ಅವರ ವೈರವೇನೇ ಇರಲಿ, ಶನಿವಾರ ಬಿರ್ಲಾ ಹೌಸಿನಲ್ಲಿ ಅವರ ಮೃತದೇಹವನ್ನು ನೋಡಿ ಬಂದೆ. ಆ ಗಾಯಗಳನ್ನು ನೋಡಿದೆ. ಹೃದಯದ ಮೇಲೇ ಗಾಯವಾಗಿತ್ತು. ಅವರ ಮೃತದೇಹ ನೋಡಿ ಒಮ್ಮೆ ವಿಚಲಿತನಾದೆ. ಅವರ ಶವಯಾತ್ರೆಯಲ್ಲಿ ಸ್ವಲ್ಪ ದೂರ ಹೋಗಿ ನಡೆಯಲಾರದೆ ಹಿಂದೆ ಬಂದೆ. ರಾಜ್‌ಘಾಟ್‌ಗೆ ಹೋದೆನಾದರೂ ಶವಸಂಸ್ಕಾರ ನಡೆಯುತ್ತಿದ್ದ ಜಾಗಕ್ಕೆ ಹೋಗಲಾಗಲಿಲ್ಲ. ಮಹತ್ವದ ವ್ಯಕ್ತಿಗಳು ಅವರ ದೇಶಕ್ಕೆ ಮಹತ್ವದ ಸೇವೆಯನ್ನೆ ಮಾಡುತ್ತಾರೆ. ಆದರೆ ಅದೇ ವೇಳೆ ಅವರು ದೇಶದ ಮುನ್ನಡೆಗೆ ಅಡ್ಡಗಾಲೂ ಆಗುತ್ತಾರೆ. ಗಾಂಧಿ ಈ ದೇಶಕ್ಕೆ ನಿಶ್ಚಿತವಾದ ಅಪಾಯವಾಗಿ ಪರಿಣಮಿಸಿದ್ದರು. ಎಲ್ಲ ಮುಕ್ತ ಚಿಂತನೆಗಳ ಗಂಟಲು ಕಟ್ಟಿಸಿದ್ದರು." ಒಬ್ಬ ಮುಕ್ತ ವಿಚಾರದ ಧೀಮಂತ ನಾಯಕ ಮತ್ತೇನನ್ನು ಹೇಳಬಹುದಿತ್ತು? ಅಂಬೇಡ್ಕರ್ ಗಾಂಧಿಯೊಡನೆ ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರು. ಗಾಂಧಿ ಮಾರ್ಗ ತಳಸಮುದಾಯದ ಜನರನ್ನು ಅಂತಹುದೇ ಭಾವನೆ ವ್ಯಕ್ತಪಡಿಸಿದ್ದರು ಎಂದು ಅವರೇ ಹೇಳುತ್ತಾರೆ. ಹೀಗಿರುವಾಗ ಅಂಬೇಡ್ಕರ್ ಹೇಳಿಕೆ ಬಾಯಿಕಟ್ಟಿಸುತ್ತದೆ ಎಂಬ ಲೇಖಕರ ಮಾತು ಅನಪೇಕ್ಷಿತ.

ಅವರ ಮತ್ತೊಂದು ವಾದ 'ದಲಿತರೂ ಅಂಬೇಡ್ಕರ್ ಜತೆಯಿರಲಿಲ್ಲ. ಗಾಂಧಿ ಜತೆಯಲ್ಲಿಯೆ ಹೆಚ್ಚು ದಲಿತರಿದ್ದರು' ಎಂಬುದು. ಗಾಂಧಿ ಎರಡನೆ ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ ಭಾರತದ ಎಲ್ಲ ಸಮುದಾಯಗಳಿಗೂ ತಾನೇ ನಾಯಕ. ಬೇರೆಯವರನ್ನು ಕೇಳಬೇಕಾದ್ದು ಏನೂ ಇಲ್ಲ ಎಂದು ಮೋಸುಕೊಡ ಹೊರಟರು. ಅವರ ಈ ವಾದವನ್ನು ಬ್ರಿಟಿಷ್ ನಾಯಕರೂ ಮನ್ನಿಸಲಿಲ್ಲ. ಹೀಗಾಗಿ ಅಂಬೇಡ್ಕರ್ ಮಾತ್ರವಲ್ಲ, ಇತರ ಆಸಕ್ತಿಗಳ ಅನೇಕ ನಾಯಕರು ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದರು. ಅಂಬೇಡ್ಕರ್ ಜತೆ ಜನರಿಲ್ಲದಿದ್ದಲ್ಲಿ ಅವರು ತಮ್ಮೆಲ್ಲಾ ಸಾಧನೆಯನ್ನು ಮಾಡಿದ್ದು ಹೇಗೆ? ಜನರನ್ನು ತಮ್ಮ ಹೋರಾಟದ ಸುತ್ತ ಸಂಘಟಿಸುವ, ತಮ್ಮ ಹೋರಾಟ, ಉದ್ದೇಶಗಳನ್ನು ವಿವರಿಸಿ ಅವರನ್ನು ತಯಾರು ಮಾಡುವ ಕೆಲಸವನ್ನು ಸತತವಾಗಿ ಅಂಬೇಡ್ಕರ್ ಮಾಡುತ್ತಾ ಬಂದರು. ಅವರು ನಡೆಸಿದ ಪತ್ರಿಕೆಗಳು, ಸತತ ಪ್ರವಾಸ, ಸಭೆಗಳು, ಭಾಷಣಗಳು ಇವೆಲ್ಲವೂ ಅದನ್ನೇ ಹೇಳುತ್ತವೆ. ಅವರ ಜತೆಯಲ್ಲಿ ಜನರಿಲ್ಲದಿದ್ದಲ್ಲಿ ಅವರು ತಮ್ಮ ಹೋರಾಟಗಳನ್ನು ನಡೆಸಿದ್ದು ಹೇಗೆ? ಅವರ ಜತೆಯಲ್ಲಿ ಜನರಿಲ್ಲದಿದ್ದಲ್ಲಿ ಗಾಂಧಿ ಎಂದೊ ಅವರನ್ನು ಹೊಸಕಿಹಾಕಿ ಬಿಡುತ್ತಿದ್ದರು. ಅಂಬೇಡ್ಕರ್ ಅವರಿಗೆ ತಳಸಮುದಾಯದ ಅಸಂಖ್ಯ ಜನರ ಬೆಂಬಲ ಯಾವಾಗಲೂ ಇತ್ತು. ಗಾಂಧಿ ತಮ್ಮ ಸಾಂಕೇತಿಕ ಕಾರ್ಯಕ್ರಮಗಳ ಮೂಲಕ ಜನರನ್ನು ತಮ್ಮೆಡೆಗೆ ಸೆಳೆದುಕೊಳ್ಳುವ ಹತ್ತೆಂಟು ಪ್ರಯತ್ನ ಮಾಡಿದ್ದಾಗ್ಯೂ ಯಶಸ್ವಿಯಾಗಲಿಲ್ಲ.

'ದೇಶ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಅಂಬೇಡ್ಕರ್ ಬ್ರಿಟಿಷರ ಜತೆ ಸಹಕರಿಸಿದರು' ಎಂದಿದ್ದಾರೆ ಲೇಖಕರು. ಇದೊಂದು ಅಚ್ಚರಿಯ ವಾದ. ಸ್ವಾತಂತ್ರ್ಯ ಎಂದರೆ ಯಾರ ಸ್ವಾತಂತ್ರ್ಯ ಎಂಬುದು ಅಂಬೇಡ್ಕರ್‌ಗೆ ಮುಖ್ಯವಾಗಿತ್ತು. ಭಾರತದ ಎಲ್ಲ ಜನರ ಸ್ವಾತಂತ್ರ್ಯಕ್ಕಾಗಿ ಅವರು ಹಂಬಲಿಸಿದರು. ಆದುದರಿಂದ ಮೊದಲು ಸಮಾಜ ಸುಧಾರಣೆಯಾಗಬೇಕು. ನಂತರ ಸ್ವಾತಂತ್ರ್ಯ ಬರಲಿ. ಆಗ ಸ್ವಾತಂತ್ರ್ಯ ಎಲ್ಲರಿಗೂ ಸಿಗುತ್ತದೆ ಎಂಬ ನಿಲುವು ಅವರದು. ಇದರಲ್ಲಿ ಅವರೊಬ್ಬರೆ ಇರಲಿಲ್ಲ. ರಾನಡೆ, ಗೋಖಲೆಯವರನ್ನೊಳಗೊಂಡು ಅನೇಕ ಮುಂಚೂಣಿ ನಾಯಕರು ಸಹ ಹಾಗೆಯೇ ನಂಬಿದ್ದರು. ಮತ್ತು ರಾಜಕಾರಣಿಯಾಗಿ ಅಂಬೇಡ್ಕರ್ ದೂರದೃಷ್ಟಿಯವರಾಗಿದ್ದರು. ಎರಡನೆ ಮಹಾಯುದ್ಧದ ಸಂದರ್ಭದಲ್ಲಿ ಗಾಂಧಿ 'ಭಾರತ ಬಿಟ್ಟು ತೊಲಗಿ' ಚಳವಳಿ ಪ್ರಾರಂಭಿಸಿದಾಗ ಅಂಬೇಡ್ಕರ್ ಪ್ರಜಾಪ್ರಭುತ್ವವಾದಿ ಬ್ರಿಟಿಷ್ ಸಾಮ್ರಾಜ್ಯ ಸೋಲಲು



ಅಂಬೇಡ್ಕರ್ ಬಗ್ಗೆ ಲೇಖಕರು ತೀವ್ರತರದ ಹೀಗಳಿಕೆಯನ್ನು ಮಾಡಿದ್ದಾರೆ. ಅಂಬೇಡ್ಕರರು ನಾಟಕೀಯವಾಗಿ ಬೌದ್ಧಧರ್ಮ ಸ್ವೀಕರಿಸಿದರು ಎಂದಿದ್ದಾರೆ. ಅಂಬೇಡ್ಕರ್ ತಲೆ ಬೋಳಿಸಿ, ನಿಲುವಂಗಿ ತೊಟ್ಟು, ಕೋಲಿನ ಆಸರೆ ಪಡೆದು ನಿಂತಿರುವ ಚಿತ್ರವನ್ನು ನೋಡಿ ಅವರು ಹಾಗೆಂದಿದ್ದಾರೆ. ಇನ್ನೂ ಸ್ವಲ್ಪ ಮುಂದೆ ಹೋಗಿ ಇದನ್ನು ನೋಡಲು ಗಾಂಧಿ ಇರಬೇಕಿತ್ತು ಮುಂದಿನ ಪರಿಣಾಮಗಳು ಕುತೂಹಲಕಾರಿಯಾಗಿರುತ್ತಿತ್ತು ಎನ್ನುತ್ತಾರೆ. ಅಂಬೇಡ್ಕರ್ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ ಘಟನೆ ಅತಿ ಗಂಭೀರವಾದದ್ದು. ಗೌರವಪೂರ್ಣವಾದದ್ದು.

ಬಿಡುಗಡೆಗೊಳಿಸುವ ಬದಲು ಮುಂದೆಯೂ ಅವರ ದುಸ್ಥಿತಿಗೇ ಕಟ್ಟಿಹಾಕಬಹುದು ಎಂಬ ಭಯ ಅವರಿಗಿತ್ತು. ಅವರು ಅದನ್ನು ಸಂದರ್ಭ ಬಂದಾಗಲೆಲ್ಲಾ ಕಟುವಾಗೆ ಹೇಳಿದ್ದಾರೆ. ಯಾರೊಡನೆಯೂ ಎಂದೂ ರಾಜಿಮಾಡಿಕೊಳ್ಳದೆ ಬದುಕಿದ ಮಹಾಚೇತನ, ಗಾಂಧಿ ಮರಣದಿಂದ ದಿಕ್ಕುಗೆಟ್ಟು ತನ್ನಾತ್ಮ ಸರಿಯೆನ್ನದ್ದನ್ನು ಆ ಕೆಲನಿಮಿಷಗಳಾದರೂ ಹೊರಗೆಡಹುತ್ತಾರೆ, ಸಂತೈಸುತ್ತಾರೆ ಎಂದು ಬಯಸುವುದು ತಪ್ಪು. ಅಂಬೇಡ್ಕರ್ ಸಹಜ ಭಾವನೆಗಳನ್ನು ಅಭಿವ್ಯಕ್ತಿಸಿದ್ದಾರೆ. ಅವು ಜೀವ ವಿರೋಧಿಯೂ ಅಲ್ಲ. ಜೀವನ ವಿರೋಧಿಯೂ ಅಲ್ಲ. ಸಮಾಜ ಪರ. ಸಿಸೆರೊ ಕೂಡ ಜೂಲಿಯಸ್ ಸೀಸರ್ ಸತ್ತಾಗ ದಾರಿಮಾಡಿಕೊಟ್ಟು ಹಿಟ್ಲರನ ಸರ್ವಾಧಿಕಾರವನ್ನು ಆಹ್ವಾನಿಸುವುದು ಶುದ್ಧ ಮೂರ್ಖತನವೆಂದು ಬಗೆದರು.

ಬ್ರಿಟಿಷ್ ಸರ್ಕಾರವನ್ನು ಸೇರಿ ದುಡಿಯುವ ವರ್ಗಗಳ ಏಳಿಗೆಗಾಗಿ ಶ್ರಮಿಸಿದರು. ಅವರು ಯಾವುದೇ ಸಮಯದಲ್ಲಿ ತೆಗೆದುಕೊಂಡ ನಿರ್ಧಾರಗಳು ಪ್ರಬುದ್ಧ ರಾಜಕಾರಣಿಯ, ಚಿಂತಕನ ಮುಂದಾಲೋಚನೆಯ ಕ್ರಮವಾಗಿತ್ತೆ ವಿನಃ ದೇಶ ವಿರೋಧಿ ನಿಲುವು ಅವರಲ್ಲಿ ಕಿಂಚಿತ್ತೂ ಇರಲಿಲ್ಲ. ಇಷ್ಟು ದಿನಗಳ ಸ್ವಾತಂತ್ರ್ಯದ ನಂತರ ತಳಸಮುದಾಯಗಳ ಪರಿಸ್ಥಿತಿ ಇಷ್ಟು ಶೋಚನೀಯವಾಗಿದೆ ಎಂಬುದನ್ನು ನೋಡಿದರೆ





ಅಂಬೇಡ್ಕರ್ ಮುನ್ನೋಟ ಎಷ್ಟು ಸರಿ ಎನ್ನುವುದು ಅರ್ಥವಾಗುತ್ತದೆ.

ಅಹಿಂಸಾವಾದವನ್ನು ಎತ್ತಿ ಹಿಡಿದವರು ಗಾಂಧಿ ಹೌದು. ಆದರೆ ಅಹಿಂಸೆ ಪ್ರಾಕೃತಿಕ ಗುಣ ಎನ್ನುವ ಲೇಖಕರ ಮಾತು ಸರಿಯೇ? ಅದು ಎಲ್ಲ ಸಂದರ್ಭದಲ್ಲಿಯೂ ಸಮಾಜವನ್ನು, ವ್ಯಕ್ತಿಯನ್ನು ನಡೆಸಬಲ್ಲುದೇ? ಅಸ್ಪೃಶ್ಯ-ಸ್ಪೃಶ್ಯ, ಮಹಿಳೆ-ಪಿತೃ ಪ್ರಧಾನ ಸಮಾಜ, ಮಾಲೀಕ-ಸೇವಕ ಇವರೆಲ್ಲರ ಸಂದರ್ಭದಲ್ಲಿ ಅಹಿಂಸೆ ಶೋಷಣೆಯನ್ನು ತಪ್ಪಿಸುತ್ತದೆಯೇ? ಸಾವಿರಾರು ವರ್ಷ ಅಹಿಂಸಾತ್ಮಕವಾಗಿಯೆ ನಡೆದುಕೊಂಡ ಅವರಿಗೆ ಸಮಾನತೆಯಲ್ಲದಿದ್ದರೂ ನೆಮ್ಮದಿಯ ಬದುಕನ್ನು ತಂದುಕೊಟ್ಟಿದೆಯೇ? ಗಾಂಧಿ ಸೂಚನೆ ಅತಿಯಾಗಿ ತಿಂದು ಅಜೀರ್ಣದಿಂದ ನರಳುತ್ತಿರುವವನಿಗೂ ಅನ್ನವಿಲ್ಲದೆ ಕೊರಗುತ್ತಿರುವವನಿಗೂ ಒಂದೇ ಔಷಧಿ ನೀಡಿದಂತೆ. ಮಾಲೀಕರು ಧರ್ಮದರ್ಶಿಗಳಿದ್ದಂತೆ ಕಾರ್ಮಿಕರ ಹಿತಕಾಪಾಡಬೇಕು ಎಂಬ ಅವರ ಉವಾಚ ಯಾವ ಮಾಲೀಕನನ್ನೂ ಪರಿವರ್ತಿಸಲಿಲ್ಲ. ಅಂಬೇಡ್ಕರ್ ಕೂಡ ತಮ್ಮೆಲ್ಲಾ ಹೋರಾಟಗಳನ್ನೂ ಅಹಿಂಸಾತ್ಮಕವಾಗಿಯೆ ನಡೆಸಿದರು. ಆದರೆ ಅವರು ಅದನ್ನು ಒಂದು ಸಿದ್ಧಾಂತವಾಗಿ ಮಾಡಿಕೊಳ್ಳಲಿಲ್ಲ. ಅಹಿಂಸೆಯ ಇತಿಮಿತಿ ಅವರಿಗೆ ಗೊತ್ತಿತ್ತು. ಅದು ಪ್ರಕೃತಿಯ ಗುಣ ಎಂಬುದು ಕೂಡ ಪೂರ್ಣ ಸತ್ಯವಲ್ಲ.

'ಅಂಬೇಡ್ಕರ್ ಸ್ವಂತ ಶಕ್ತಿಯಿಂದ ಎಂದೂ ಗೆಲ್ಲಲಾಗಲಿಲ್ಲ. ಉದಾರವಾದಿ ಹಿಂದೂ ನಾಯಕರ ಜತೆ ಹೊಂದಾಣಿಕೆ ಮಾಡಿಕೊಂಡು ಗೆದ್ದರು. ಕಾಂಗ್ರೆಸ್ ಪ್ರಾಯೋಜಿತರಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರು' ಎಂದಿದ್ದಾರೆ ಲೇಖಕರು. ಅಂಬೇಡ್ಕರ್ ಎಲ್ಲ ನಿಯಮಗಳನ್ನೂ ಗಾಳಿಗೆ ತೂರಿ ಹೇಗಾದರೂ ಗೆಲ್ಲಬೇಕು ಎಂದುಕೊಂಡವರಲ್ಲ. ಅವರು ಹೊಂದಾಣಿಕೆ ಮಾಡಿಕೊಂಡಿದ್ದಾರೆ-ಕಮ್ಯುನಿಷ್ಟರ ಜತೆ, ಕಾರ್ಮಿಕ ಸಂಘಟನೆಗಳ ಜತೆ, ಹಿಂದೂ ಉದಾರವಾದಿಗಳೂ ಅವರಿಗೆ ಬೆಂಬಲ ನೀಡಿದ್ದಾರೆ. ಇವೆಲ್ಲವೂ ನೈತಿಕತೆಯ, ಸಂಹಿತೆಯ ಆಧಾರದ ಮೇಲೆಯೆ ನಡೆದದ್ದು. ಅಂಬೇಡ್ಕರ್ ಸೋತರು ಎಂದರೆ ಅದರಿಂದ ಆಶ್ಚರ್ಯಪಡಬೇಕಾಗಿಲ್ಲ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಅವರು ಅಥವಾ ಯಾರಾದರೂ ಬಹುಸಂಖ್ಯಾತ ಹಿಂದೂಗಳಿರುವ ಕಡೆ ಗೆಲ್ಲಲಾರರು ಎಂಬುದು ಅವರಿಗೂ ಗೊತ್ತಿತ್ತು. ಇತರರಿಗೂ ತಿಳಿದಿತ್ತು. ಹಾಗಾಗಿಯೇ ಅವರು ಪರಿಶಿಷ್ಟರಿಗೆ ಪ್ರತ್ಯೇಕ ಮತಗಟ್ಟೆ ಕೇಳಿದ್ದು. ಇದೊಂದು ಗಂಭೀರ ಪರಿಸ್ಥಿತಿಯೆ ಹೊರತು ಲೇವಡಿಯ ವಿಚಾರವಲ್ಲ.

ಗಾಂಧಿ ಆಧುನಿಕ ನಾಗರೀಕತೆಯನ್ನು ತಿರಸ್ಕರಿಸಿದರೆ ಅಂಬೇಡ್ಕರ್ ಅದನ್ನು ಅವಿಮರ್ಶಾತ್ಮಕವಾಗಿ ಒಪ್ಪಿಕೊಂಡರು. ಅದರ ಪರಿಣಾಮವಾಗಿಯೇ ಇಂದು ಜಾಗತೀಕರಣ ಬಂದಿದೆ. ಜನರು ನಿರ್ಗತಿಕರಾಗುತ್ತಿದ್ದಾರೆ ಎಂದು ಮುಂತಾಗಿ ಆರೋಪಿಸಿದ್ದಾರೆ ಲೇಖಕರು. ಅಂಬೇಡ್ಕರ್‌ರಲ್ಲಿ ಅವಿಮರ್ಶಾತ್ಮಕತೆ ಎನ್ನುವುದರ ಲವಶೇಷವೂ ಇರಲಿಲ್ಲ. ಅವರು ಪ್ರತಿ ವಿಷಯದಲ್ಲೂ ಗಂಭೀರವಾಗಿ ಚಿಂತಿಸುತ್ತಿದ್ದರು. ಅವರ ಆಳವಾದ ಅಧ್ಯಯನ, ಇತಿಹಾಸ ಪ್ರಜ್ಞೆ ಯಾವಾಗಲೂ ಅವರ ಜತೆಗಿತ್ತು. ಯಾರ ಮುಲಾಜೂ ಅವರಿಗಿರಲಿಲ್ಲ. ಯಾರ ಭಯವೂ. ಸಾವಿರ ಚಿಂತಕರ ಮುಂದೆ ತಮಗನಿಸಿದುದನ್ನು ಹೇಳಬಲ್ಲವರಾಗಿದ್ದರು. ಅದನ್ನು ವಾದ ಮಾಡಿ ಸಾಬೀತು ಪಡಿಸಬಲ್ಲವರಾಗಿದ್ದರು. ಇದನ್ನು ಅವಿಮರ್ಶಾತ್ಮಕ ಎನ್ನುವುದು ತಿಳಿಗೇಡಿತನ. ನಿಜವಾಗಿ ಹೇಳಬೇಕಾದರೆ ಈ ಅವಿಮರ್ಶಾತ್ಮಕತೆ ಗಾಂಧಿಯವರಲ್ಲಿ ಹೇರಳವಾಗಿತ್ತು. ಅದಕ್ಕೆ ಅವರು ಅವರ 'ಒಳದನಿ'ಯ ನೆಪ ನೀಡುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಚಾರ. ಈ 'ಒಳದನಿ' ಕೇವಲ ಒಬ್ಬರಿಗೆ ಇರುವುದೇನೂ ಇಲ್ಲ. ಜತೆಗೆ ಗಾಂಧಿ ಎಂದೂ ವಾದವಾಡಿ ತಮ್ಮ ಎದುರಾಳಿಗಳನ್ನು ಒಪ್ಪಿಸಿದವರಲ್ಲ. ಅವರು 'ನಾನು ಅರ್ಥಮಾಡಿಕೊಂಡಿರುವುದು ಹೀಗೆ' ಎಂದು ತಪ್ಪಿಸಿಕೊಳ್ಳುತ್ತಿದ್ದರು. ಗಾಂಧಿಯವರ ಗ್ರಾಮ ಸ್ವರಾಜ್ಯದ ಕಲ್ಪನೆ, ಆಧುನಿಕತೆ ವಿರೋಧಿ ನಿಲುವುಗಳು ಎಂದೂ ಕಾರ್ಯರೂಪಕ್ಕೆ ಬರಲಾಗದ ಚಿಂತನೆಗಳು. ಗ್ರಾಮಗಳಲ್ಲಿ ತಾರತಮ್ಯಗಳು ವಿಪರೀತವಾಗಿದ್ದಾಗ ವಿವಿಧ ಜಾತಿಗಳ ಜನ ತಮ್ಮ ದುಸ್ಥಿತಿ ದೈವ ವಿಧಿತ ಎಂದು ನಂಬಿ ತಮ್ಮ ಹಸಿವು, ನೀರಡಿಕೆ, ಅಸಂಖ್ಯ ಅವಮಾನಗಳನ್ನು ನುಂಗಿ ಹಳ್ಳಿಯ ಬಲಾಢ್ಯರಿಗೆ ಪುಕ್ಕಟೆ ಸೇವೆ ಸಲ್ಲಿಸುತ್ತಿದ್ದಾಗ ಹೊರ ನೋಟಕ್ಕೆ ಅಲ್ಲಿನ ಹಿಂಸೆ, ಕ್ರೌರ್ಯ ಯಾವುದೂ ಕಾಣದೆ ಸುಂದರವಾದ ಚಿತ್ರ ಒಂದನ್ನು ಯಾರು ಬೇಕಾದರೂ ಕಲ್ಪಿಸಿಕೊಳ್ಳಬಹುದಿತ್ತು. ಅದನ್ನು ಆದರ್ಶ ಎಂದು ತಿಳಿದುಕೊಳ್ಳುವುದು ದಾರಿತಪ್ಪಿಸುವ ಕೆಲಸವಲ್ಲದೆ ಮತ್ತೇನೂ ಅಲ್ಲ. ಹಳ್ಳಿಗಳನ್ನು ಪಾಪದ ಕೂಪಗಳು ಎಂದು ಕರೆದ ಅಂಬೇಡ್ಕರ್ ಹೇಳಿಕೆಯಲ್ಲಿ ಹೆಚ್ಚು ಸತ್ಯವಿದೆ. ಈಗಲೂ ಹಳ್ಳಿಯ ಬದುಕನ್ನು ಅದರ ಸರಳತೆ ಸೌಂದರ್ಯವನ್ನು ವರ್ಣಿಸುವ ಹಂಬಲ ಹಳ್ಳಿಯಲ್ಲಿ ಬೆಳೆದ ನಮಗೂ ಇದೆ. ಆದರೆ ಅಲ್ಲಿ ಹೋಗಿ ನಾಲ್ಕು ದಿನ ಇರಲಿಕ್ಕಾಗದು. ಇದಕ್ಕೆ ಕಾರಣ ಪಟ್ಟಣದ ಸೆಳೆತವಲ್ಲ, ಹಳ್ಳಿಗಳ ದುರ್ಭರ ಜೀವನ.

ಗಾಂಧಿ ಯಂತ್ರಗಳನ್ನು ಬಹಿಷ್ಕರಿಸಿ ಭಾರತೀಯ ಜೀವನವನ್ನು ಹಿಂದಿನಂತೆಯೆ ನಡೆಸುವ ಹುನ್ನಾರದಲ್ಲಿದ್ದರು. ಆದರೆ ಅಂಬೇಡ್ಕರ್ ಆಧುನಿಕತೆಯನ್ನು ಸ್ವಾಗತಿಸಿದರು. ಅದು ನೀಡುವ ಅವಕಾಶಗಳು, ಸಾಮಾನ್ಯ ಜನರ ಜೀವನವನ್ನು ಉತ್ತಮ ಪಡಿಸುತ್ತವೆ. ಜನರ ಸಾಮಾಜಿಕ, ಮಾನಸಿಕ ಬೆಳವಣಿಗೆಗೆ ಅದು ಮದ್ದು ಎಂಬುದನ್ನು ಅವರು ಕಂಡುಕೊಂಡಿದ್ದರು. ಅವರು ಕಂಡದ್ದು ಇಂದು ನಿಜವಾಗಿದೆ. ಜಾಗತೀಕರಣ ಮುಕ್ತ ಅವಕಾಶಗಳನ್ನು ಒದಗಿಸಿಕೊಟ್ಟಿದೆ. ಜನರ ಆರ್ಥಿಕ, ಸಾಮಾಜಿಕ ಬೆಳವಣಿಗೆ ಭರದಿಂದ ಆಗುತ್ತಿದೆ. ಕೆಲಕೆಡುಕುಗಳೂ ಉಂಟಾಗಿರಬಹುದು. ಆದರೆ ಅವು ನಮ್ಮನ್ನು ಆಳುವವರು ಸರಿಯಾದ ಕಾನೂನು ಕಟ್ಟಳೆಗಳನ್ನು ಮಾಡಿ ಪಾಲಿಸದ ಫಲ. ಕೆಲ ಕೆಡಕುಗಳಿವೆ ಎಂದಾಕ್ಷಣ ಬದಲಾವಣೆಯೆ ಬೇಡ ಎಂಬ ಮನಸ್ಥಿತಿ ಹೊಂದುವುದು ಅಪ್ರಾಕೃತಿಕವಾದದ್ದು. ಗಾಂಧಿಯ ಆರ್ಥಿಕ ಮತ್ತು ಸಾಮಾಜಿಕ ಚಿಂತನೆ ನೆಲಕಚ್ಚಿರುವುದಕ್ಕೆ ಕಾರಣವನ್ನು ನಾವು ಇಲ್ಲಿ ಕಾಣಬೇಕೆ ವಿನ: ಅಂಬೇಡ್ಕರ್ ಅವರನ್ನು ದೂರುವುದರಲ್ಲಲ್ಲ.

ಲೇಖಕರ ಮತ್ತೊಂದು ಹೇಳಿಕೆ 'ಅಂಬೇಡ್ಕರ್ ತಮ್ಮನ್ನು ಭಾರತದ ಮೊದಲ ಮಂತ್ರಿ ಮಂಡಳಕ್ಕೆ ತೆಗೆದುಕೊಳ್ಳಲು ನೆಹರೂ ಅವರಿಗೆ ಶಿಫಾರಸ್ಸು ಮಾಡುವಂತೆ ಜಗಜೀವನ ರಾಂ ಅವರನ್ನು ಕೇಳಿಕೊಂಡಿದ್ದರು' ಎನ್ನುವುದು. ಇದು ಅಂಬೇಡ್ಕರ್ ಬಗ್ಗೆ ಸ್ವಲ್ಪವೂ ತಿಳುವಳಿಕೆಯಿಲ್ಲದ ಜನ ಹೇಳುವ ಮಾತು. ತಮ್ಮ ಇಡೀ ಸಾರ್ವಜನಿಕ ಜೀವನದಲ್ಲಿ ಅಂಬೇಡ್ಕರ್ ಯಾರೊಡನೆಯೂ ಎಂದೂ ಹೊಂದಾಣಿಕೆ ಮಾಡಿಕೊಂಡಿದ್ದಿಲ್ಲಾ. ಅಂಬೇಡ್ಕರ್ ಬಯಸಿದ್ದರೆ ಅವರಿಗೆ ಬೇಕಾದುದೆಲ್ಲಾ ಸಿಗುತ್ತಿತ್ತು. ಈ ದೇಶದ ಅತ್ಯುನ್ನತ ಹುದ್ದೆಯನ್ನು ಅವರು ಅಲಂಕರಿಸಬಹುದಿತ್ತು. ಗಾಂಧಿಯನ್ನನುಸರಿಸಿದ್ದರೆ ಸ್ವಂತವಾಗಿ ಅವರ ಜೀವನವೆ ಬದಲಾಗುತ್ತಿತ್ತು. ಅವರು ಹಾಗೆ ಮಾಡಲಿಲ್ಲ. ತಳಸಮುದಾಯಗಳನ್ನು ಮೇಲೆತ್ತುವ ತಮ್ಮ ಗುರಿಗಾಗಿ ಎಲ್ಲವನ್ನೂ ಬಲಿಕೊಟ್ಟರು. ತಾವೂ ಅತೀವ ಕಷ್ಟ ಅನುಭವಿಸಿದರು. ತಮ್ಮ ಕುಟುಂಬವನ್ನು ನಿರ್ಲಕ್ಷಿಸಿದರು. ಅವರಿಗೆ ರಾಷ್ಟ್ರ ನಾಯಕರೇನೂ ಅಪರಿಚಿತರಿರಲಿಲ್ಲ. ಗಾಂಧಿಯನ್ನೆ ಕೇಳಬಹುದಿತ್ತು. ನೆಹರೂರವರನ್ನೂ ಕೇಳಬಹುದಿತ್ತು. ಜಗಜೀವನ ರಾಂ ಅವರಲ್ಲಿ ಕೋರಿದರು ಎನ್ನುವುದು ಅವರಿಗೆ ಮಾಡಿದ ಅಪಚಾರ. ಭಾರತದ ಮೊದಲ ಸಚಿವ ಸಂಪುಟದಲ್ಲಿ ಅವರು ಸೇರಲು ಕಾರಣ ಅಂದಿನ ಆ ಸಂದರ್ಭದಲ್ಲಿ ಇತರ ನಾಯಕರ ಮನಸ್ಸಿನಲ್ಲಿಯೂ ಎಲ್ಲ ಆಶಯಗಳನ್ನೂ ಒಳಗೊಂಡ ವಿಶಿಷ್ಟ ಸಂಪುಟ ನೀಡುವ ಬಯಕೆಯಿತ್ತು. ಹಾಗಾಗಿ ಅಂಬೇಡ್ಕರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಂಡರು ಮಾತ್ರವಲ್ಲ, ಹಿಂದೂ ಮಹಾಸಭಾ ನಾಯಕ ಎಸ್.ಪಿ. ಮುಖರ್ಜಿಯವರನ್ನೂ ಸೇರಿಸಿಕೊಂಡರು. ಇದರಿಂದ ದೇಶಕ್ಕೆ ಕೆಡುಕೇನಾಗಲಿಲ್ಲ.

ಮತ್ತೊಂದು ತೀವ್ರತರದ ಹೀಗಳಿಕೆಯನ್ನು ಲೇಖಕರು ಮಾಡಿದ್ದಾರೆ. 'ಅಂಬೇಡ್ಕರರು ನಾಟಕೀಯವಾಗಿ ಬೌದ್ಧ ಧರ್ಮ ಸ್ವೀಕರಿಸಿದರು' ಎಂದಿದ್ದಾರೆ. ಅಂಬೇಡ್ಕರ್ ತಲೆ ಬೋಳಿಸಿ, ನಿಲುವಂಗಿ ತೊಟ್ಟು, ಕೋಲಿನ ಆಸರೆ ಪಡೆದು ನಿಂತಿರುವ ಚಿತ್ರವನ್ನು ನೋಡಿ ಅವರು ಹಾಗೆಂದಿದ್ದಾರೆ. ಇನ್ನೂ ಸ್ವಲ್ಪ ಮುಂದೆ ಹೋಗಿ 'ಇದನ್ನು ನೋಡಲು ಗಾಂಧಿ ಇರಬೇಕಿತ್ತು ಮುಂದಿನ ಪರಿಣಾಮಗಳು ಕುತೂಹಲಕಾರಿಯಾಗಿರುತ್ತಿತ್ತು' ಎನ್ನುತ್ತಾರೆ. ಅಂಬೇಡ್ಕರ್ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ ಘಟನೆ ಅತಿ ಗಂಭೀರವಾದದ್ದು. ಗೌರವಪೂರ್ಣವಾದದ್ದು. ಇದರಲ್ಲಿ ನಾಟಕೀಯವೇನೂ ಇಲ್ಲ. ಇದನ್ನು ನಾಟಕೀಯವೆಂದು ಕರೆಯುವುದು ಅರ್ಥವಿಲ್ಲದ್ದು. 1935ರಲ್ಲಿ ತಮ್ಮ ಹಿಂದೂ ಧರ್ಮ ತೊರೆಯುವ ನಿರ್ಧಾರವನ್ನು ಪ್ರಕಟಿಸಿದ ಅಂಬೇಡ್ಕರ್ ಒಂದು ಕಡೆ ಎಲ್ಲಾ ಧರ್ಮಗಳ ಆಳವಾದ ಅಧ್ಯಯನದಲ್ಲಿ ತೊಡಗಿದರೆ, ಮತ್ತೊಂದೆಡೆ ತನ್ನ ಜನರನ್ನು ಆ ಕಡೆ ಕೊಂಡೊಯ್ಯುವ ತಯಾರಿಯಲ್ಲಿ ತೊಡಗಿದರು. ಅಂಬೇಡ್ಕರ್ ಅಧ್ಯಯನದ ಒಂದು ಭಾಗ ಆ ಧರ್ಮಗಳ ಚಿಂತನೆಗಳ ಬಗೆಗಾದರೆ ಮತ್ತೊಂದು ಅವುಗಳ ಆಚರಣೆಯಲ್ಲಿ ಇರಬಹುದಾದ ಸತ್ಯ, ನಿಷ್ಠೆ, ಸಮಾನತೆಗಳ ವಿಚಾರವಾಗಿತ್ತು. ಆಚರಣೆಗಳನ್ನು ನೋಡಿಬರಲು ಅವರು ಅವರ ಕೆಲವು ಅನುಯಾಯಿಗಳನ್ನು ಒಂದು

ಚರ್ಚೆ

ಗುರುದ್ವಾರಕ್ಕೆ ಕಳುಹಿಸಿದುದೂ ಉಂಟು. ಆ ಅನುಯಾಯಿಗಳು ಆ ಧರ್ಮಕ್ಕೆ ಮತಾಂತರ ಹೊಂದಿ ಹಿಂತಿರುಗಿದುದು ಅವರಿಗೆ ನಿರಾಶೆಯನ್ನುಂಟುಮಾಡಿತ್ತು. ಬ್ರಾತೃತ್ವ, ಸಮಾನತೆ, ಸ್ವಾತಂತ್ರ್ಯ ಮತ್ತು ಮನುಷ್ಯನ ಏಳಿಗೆ ಈ ಮೂಲ ತತ್ವಗಳ ಬೆಳಕಿನಲ್ಲಿ ಎಲ್ಲ ಧರ್ಮಗಳನ್ನು ಪರೀಕ್ಷಿಸಿ ಬೌದ್ಧಧರ್ಮ ಎಲ್ಲ ವಿಷಯಗಳಲ್ಲಿಯೂ ಶ್ರೇಷ್ಠವಾದುದೆಂದು ದೃಢಪಡಿಸಿಕೊಂಡು ಅವರು ತಮ್ಮ ಕೊನೆಯ ದಿನಗಳಲ್ಲಿ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದರು. ಮತಾಂತರದ ನಂತರ ಅವರು ಒಂದೆರಡು ವರ್ಷವಾದರೂ ಬದುಕದಿದ್ದುದು ನಮ್ಮ ದುರದೃಷ್ಟ. ಅವರು ಬದುಕಿದ್ದರೆ ಭಾರತದ ಇಂದಿನ ಚಿತ್ರವೇ ಬದಲಾಗುತ್ತಿತ್ತು. ಅವರು ಉಪಾಸಕರಾದರೆ ವಿನಃ ಎಂದೂ ಬೌದ್ಧ ಸನ್ಯಾಸಿಯಾಗಿರಲಿಲ್ಲ. ಅವರು ನಿಲುವಂಗಿ ತೊಟ್ಟು, ತಲೆಬೋಳಿಸಿಕೊಂಡು, ಆಸರೆಗಾಗಿ ಕೋಲು ಹಿಡಿದಿರುವ ಚಿತ್ರ ಅವರ ಮಡದಿ ರಮಾಬಾಯಿಯವರ ಮರಣದ ನಂತರ ಬಹಳ ಝರ್ಜರಿತರಾಗಿದ್ದ ಅಂಬೇಡ್ಕರ್ ವಿಶ್ರಾಂತಿಧಾಮವೊಂದರಲ್ಲಿ ವಿಶ್ರಾಂತಿ ಪಡೆಯುತ್ತಿರುವಾಗ ತೆಗೆದುಕೊಂಡದ್ದು. ಇಂತಹ ಗಂಭೀರ ಘಟನೆಗಳನ್ನು ನಾಟಕೀಯ ಎನ್ನುವ ಲೇಖಕರ ಮನಸ್ಸಿಗೆ ಏನೆನ್ನಬೇಕು?

'ಗಾಂಧಿ ಬದುಕು ಸರಳ, ನೇರ. ಅವರು ಪ್ರಪಂಚದ ಅತಿಕ್ಷುದ್ರವನ್ನೂ ಪ್ರೀತಿಸುತ್ತಿದ್ದರು. ಅಂಬೇಡ್ಕರ್ ಆ ಕ್ಷುದ್ರಗಳಲ್ಲಿ ಒಂದು ರೂಪವನ್ನಷ್ಟೇ ಕಂಡರು. ಆಧುನಿಕತೆ ಒಂದು ರೋಗ. ಆಧುನಿಕ ರಾಜಕಾರಣದಲ್ಲಿ ವ್ಯಸ್ತವಾಗುವ ಸ್ಥಿತಿಗೆ ಅಂಬೇಡ್ಕರ್ ತಲುಪಿದ್ದರು' ಎನ್ನುತ್ತಾರೆ ಲೇಖಕರು. ಗಾಂಧಿ ಅತಿ ಕ್ಷುದ್ರಗಳನ್ನೂ ಪ್ರೀತಿಸುತ್ತಿದ್ದರು ಎಂದರೆ ಏನರ್ಥ? ತಳಸಮುದಾಯಗಳು, ಮಹಿಳೆಯರು, ಕಾರ್ಮಿಕರು ಇವರ ಬಗ್ಗೆ ಅವರ ನಿಲುವು ಏನಾಗಿತ್ತು? ಇವರ ಅಭ್ಯುದಯಕ್ಕೆ ಅವರು ತೋರಿಸಿದ

ಅಮರಣಾಂತರ ಉಪವಾಸ ಕುಳಿತು ಪ್ರತ್ಯೇಕ ಮತಗಟ್ಟೆಗಳನ್ನು ತಡೆಗಟ್ಟಿದರು. ತನ್ನ ಸಮುದಾಯದ ಹಿತಕ್ಕೆ ಕಟಿಬದ್ಧರಾಗಿರುವ ಅಪ್ಪಟ ರಾಜಕಾರಣಿಯಂತೆ ವರ್ತಿಸಿದರು. ಎಂದಾದರೂ ಅವರು ಅಸ್ಪೃಶ್ಯರ ವಿಮೋಚನೆಗೆ ಉಪವಾಸ ಕುಂತರೇ? ಆದರೆ ತಮ್ಮ ಮಾತುಗಳಲ್ಲಿ ರಾಜಕಾರಣಕ್ಕೆ ಧರ್ಮದ ಲೇಪಕೊಟ್ಟು ಎಲ್ಲರನ್ನೂ ದಿಕ್ಕುತಪ್ಪಿಸಿದರು, ಅದೂ ಆ ಧರ್ಮದಲ್ಲಿ ನೀತಿಯಿಲ್ಲದಿರುವಾಗ. ರಾಜಕಾರಣ ನೀತಿಯ ಮೇಲೆ ನಿಲ್ಲಬೇಕೇ ವಿನಃ ಧರ್ಮದ ಮೇಲಲ್ಲ. ಅದರ ಪರಿಣಾಮವನ್ನು ನಾವಿಂದು ಉಣ್ಣುತ್ತಿದ್ದೇವೆ.

'ಇನ್ನು ಅಂಬೇಡ್ಕರ್ ಸದ್ಯದ ಇತಿಹಾಸದ ವಸ್ತುವಾಗಿದ್ದಾರೆ, ಗಾಂಧಿ ನಾಗರೀಕತೆಗೆ ಸೇರಿದವರು' ಎಂಬ ಮಾತು. ಅಂಬೇಡ್ಕರ್ ಅವರ ಕಾಲದ ಇತಿಹಾಸಕ್ಕೆ ಮಾತ್ರ ಸೇರಿದವರಾಗಿದ್ದರೆ ಅವರ ನಿಧನದ 60 ವರ್ಷಗಳ ನಂತರವೂ ಅವರ ಹೆಸರು ಉಳಿಯುತ್ತಿರಲಿಲ್ಲ. ಅವರ ಹೆಸರು ಇಷ್ಟು ಕಾಲ ಸಂದರೂ ಉಳಿದಿದೆ ಮಾತ್ರವಲ್ಲ, ಬೆಳೆಯುತ್ತಿದೆ. ಅಂಬೇಡ್ಕರ್ ಲೇಖಕರು ಸೀಮಿತಗೊಳಿಸಲು ಬಯಸಿರುವಂತೆ ಅಂದಿನ ರಾಜಕಾರಣದಲ್ಲಿ ವ್ಯಸ್ತವಾಗಿದ್ದ ಸಾಮಾನ್ಯ ರಾಜಕಾರಣಿಯಲ್ಲ. ಅವರೊಬ್ಬ ದೊಡ್ಡ ಚಿಂತಕ, ತತ್ವಜ್ಞಾನಿ. ಎಲ್ಲ ಕಾಲಕ್ಕೂ ಸಲ್ಲುವವರು. ಇಲ್ಲದಿದ್ದಲ್ಲಿ ಅವರು ಭ್ರಾತೃತ್ವದ ತಳಹದಿಯ ಮೇಲೆ ಸ್ವಾತಂತ್ರ್ಯ ಮತ್ತು ಸಮಾನತೆ ಉದಯವಾಗಬೇಕು ಎಂದು ಹೇಳುತ್ತಿರಲಿಲ್ಲ. ಭ್ರಾತೃತ್ವ ಸಮಾಜ ಜೀವನದಲ್ಲಿ ಹಾಸುಹೊಕ್ಕಾಗಿರಬೇಕು ಎಂದು ಬಯಸುತ್ತಿರಲಿಲ್ಲ. ಕೇವಲ ರಾಜ್ಯಾಡಳಿತ ಕ್ರಮದ ಭಾಗವಾಗಿ ಅವರು ಸ್ವಾತಂತ್ರ್ಯ, ಸಮಾತನೆ, ಮತ್ತು ಭ್ರಾತೃತ್ವಗಳನ್ನು ನೋಡಲಿಲ್ಲ ಎಂಬುದು ಇದರಿಂದ ಸ್ಪಷ್ಟ. ಅವರ ಚಿಂತನೆ ರಾಜಕಾರಣ ಮಾತ್ರವಲ್ಲ, ಅದು ಇಡೀ ಮಾನವ ಜೀವನ ಮತ್ತು ಸೃಷ್ಟಿಯ ಎಲ್ಲ ಮುಖಗಳಲ್ಲಿ ಹರಡಿಕೊಂಡಿತ್ತು. ಇವೆಲ್ಲವುಗಳನ್ನೂ ಬೆಳಸಿ ರಕ್ಷಿಸುವ ಕಾಳಜಿ

'ಗಾಂಧಿ ಆಧುನಿಕ ನಾಗರೀಕತೆಯನ್ನು ತಿರಸ್ಕರಿಸಿದರೆ ಅಂಬೇಡ್ಕರ್ ಅದನ್ನು ಅವಿಮರ್ಶಾತ್ಮಕವಾಗಿ ಒಪ್ಪಿಕೊಂಡರು. ಅದರ ಪರಿಣಾಮವಾಗಿಯೆ ಇಂದು ಜಾಗತೀಕರಣ ಬಂದಿದೆ. ಜನರು ನಿರ್ಗತಿಕರಾಗುತ್ತಿದ್ದಾರೆ' ಎಂದು ಮುಂತಾಗಿ ಆರೋಪಿಸಿದ್ದಾರೆ ಲೇಖಕರು. ಅಂಬೇಡ್ಕರ್‌ರಲ್ಲಿ ಅವಿಮರ್ಶಾತ್ಮಕತೆ ಎನ್ನುವುದರ ಲವಶೇಷವೂ ಇರಲಿಲ್ಲ. ಅವರು ಪ್ರತಿ ವಿಷಯದಲ್ಲೂ ಗಂಭೀರವಾಗಿ ಚಿಂತಿಸುತ್ತಿದ್ದರು. ಅವರ ಆಳವಾದ ಅಧ್ಯಯನ, ಇತಿಹಾಸ ಪ್ರಜ್ಞೆ ಯಾವಾಗಲೂ ಅವರ ಜತೆಗಿತ್ತು. ಯಾರ ಮುಲಾಜೂ ಅವರಿಗಿರಲಿಲ್ಲ. ಯಾರ ಭಯವೂ. ಸಾವಿರ ಚಿಂತಕರ ಮುಂದೆ ತಮಗನಿಸಿದುದನ್ನು ಹೇಳಬಲ್ಲವರಾಗಿದ್ದರು. ಅದನ್ನು ವಾದ ಮಾಡಿ ಸಾಬೀತು ಪಡಿಸಬಲ್ಲವರಾಗಿದ್ದರು. ಇದನ್ನು ಅವಿಮರ್ಶಾತ್ಮಕ ಎನ್ನುವುದು ತಿಳಿಗೇಡಿತನ.

ದಾರಿ ಯಾವುದು? ತಳಸಮುದಾಯಗಳನ್ನೇ ಮೊದಲು ತೆಗೆದು ಕೊಳ್ಳೋಣ. ಗಾಂಧಿ ಜಾತಿ ವಿರೋಧಿಯಾಗಿರಲಿಲ್ಲ. ಅವರು ಅದರ ಉಪಯುಕ್ತತೆಯನ್ನು ಕೊಂಡಾಡುತ್ತಾ ಬಂದರು. ಅವರು ಸಮಾನತೆಯನ್ನೂ ಅಷ್ಟು ಶ್ರೇಷ್ಠಮೌಲ್ಯವೆಂದು ಪರಿಗಣಿಸಿದ್ದಿಲ್ಲ. ಮೊದಲಿನಿಂದಲೂ ಈ ಅರೆಸಂತನ ನಿಲುವು ಹಿಂದಿನ ಅನೇಕ ಸಂತರಂತೆ ತುಳಿತಕ್ಕೊಳಗಾದ ಜನರ ಗಮನ ಬೇರೆಡೆಗೆ ತಿರುಗಿಸುವುದೇ ಆಗಿತ್ತು. ಈ ಜನ ತಮ್ಮ ಹಕ್ಕುಗಳಾಗಿ ಹೋರಾಡುವುದು ಅವರಿಗೆ ಅಷ್ಟೇನೂ ಮುಖ್ಯವಾಗಿ ಕಾಣಲಿಲ್ಲ. ಅಸ್ಪೃಶ್ಯರ ಪರವಾಗಿ ಅವರು ಕೈಗೊಂಡ ಅನೇಕ ಕ್ರಮಗಳು ಸಾಂಕೇತಿಕವಾಗಿದ್ದುವೆ ವಿನಃ ಬದಲಾವಣೆಗೆ ಸಹಕಾರಿಯಾಗುವಂತಹವಾಗಿರಲಿಲ್ಲ. ಭಂಗಿ ಕಾಲೋನಿಯಲ್ಲಿ ವಾಸಮಾಡುವುದಾಗಲಿ, ತನ್ನ ಆಶ್ರಮದಲ್ಲಿ ದಲಿತ ಕುಟುಂಬವನ್ನು ಇರಿಸಿಕೊಂಡುದಾಗಲಿ, ಹರಿಜನ ಎಂದು ಕರೆದುದಾಗಲಿ ಸಾಂಕೇತಿಕ ಕ್ರಮಗಳು ಮಾತ್ರ. ಈ ಕ್ರಮಗಳು ಅಸ್ಪೃಶ್ಯರ ಹೋರಾಟದ ತೀವ್ರತೆಯನ್ನು ಕಡಿಮೆ ಮಾಡಿ ಅವರು ಮತ್ತೆ ದೇವರು ಧರ್ಮಗಳ ಹಿಡಿತದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆಯನ್ನು ಹೆಚ್ಚಿಸಿದುವೆ ವಿನಃ ಅವರ ಬಿಡುಗಡೆಯತ್ತ ನಡೆಸಲಿಲ್ಲ.

ಗಾಂಧಿ ಎಂದೂ ಹಿಂದೂ ಆಚಾರ ವಿಚಾರಗಳನ್ನು ತೆಗಳಲಿಲ್ಲ. ಅವರಿಗೆ ಸಾಮಾಜಿಕ ನ್ಯಾಯದ ಬಗ್ಗೆ ನಂಬಿಕೆಯಿತ್ತು ಎಂಬುದೇ ಅನುಮಾನಾಸ್ಪದ. ನಂಬಿಕೆ ಇದ್ದಲ್ಲಿ ಅಸ್ಪೃಶ್ಯರ ಪ್ರಶ್ನೆ ಎದುರಾದಾಗ ಅವರು ಅಸ್ಪೃಶ್ಯರನ್ನು ಹತ್ತಿಕ್ಕುವ ಮತ್ತು ಬಲಿಷ್ಠರಾದ ಮುಸ್ಲಿಮರು ಮತ್ತು ಸಿಖ್ಖರ ಪರವಾದ ನಿಲುವು ತೆಗೆದುಕೊಳ್ಳುವ ಕೆಲಸ ಮಾಡುತ್ತಿರಲಿಲ್ಲ. ಮುಸ್ಲಿಮರಿಗೆ ಪ್ರತ್ಯೇಕ ಮತಗಟ್ಟೆಗೆ ಒಪ್ಪಿದರು. ನಾಯಕತ್ವದಲ್ಲಿ ಹೆಚ್ಚಿನ ಪಾಲು ನೀಡಿದರು. ಆದರೆ ಅತ್ಯಂತ ದುಃಸ್ಥಿತಿಯಲ್ಲಿದ್ದ ಅಸ್ಪೃಶ್ಯರ ವಿಷಯ ಬಂದಾಗ

ಅವರದಾಗಿತ್ತು. "ಎಂತಹ ಕ್ಷುಲ್ಲಕ ಜೀವಿಗೂ ಜೀವಿಸುವ ಹಕ್ಕಿದೆ. ನಮ್ಮಂದಿಯಿಂದ ಬದುಕುವ ಹಕ್ಕಿದೆ. ಎಲ್ಲ ಜೀವಿಗಳ ಒಂದರೊಡನೊಂದರ ಅವಲಂಬನೆಯೆ ಜೀವನದ ರಹಸ್ಯ. ಆದುದರಿಂದಲೆ ಎಲ್ಲ ಜೀವಿಗಳಿಗೆ ಅನುಕಂಪ, ಕರುಣೆ ತೋರಬೇಕು. ಇದು ಎಲ್ಲಾ ಜೀವಿಗಳ ಸುಖ ಸಂತೋಷಕ್ಕೆ ನಾಂದಿ" ಎಂದು ಸಾರಿದ ಬುದ್ಧನನ್ನು ತನ್ನ ಗುರು ಎಂದು ಸ್ವೀಕರಿಸಿ ಬೌದ್ಧಧರ್ಮ ಸ್ವೀಕರಿಸಿ ಇಡೀ ಭಾರತ ಒಂದು ಬೌದ್ಧನಾಡಾಗಬೇಕು ಎಂದು ಘೋಷಿಸಿದ ಅಂಬೇಡ್ಕರ್ ಸದ್ಯದ ರಾಜಕಾರಣಿಯಾಗಿ ಬಿಡುತ್ತಾರೆ ಲೇಖಕರ ಕಣ್ಣಲ್ಲಿ. ಧರ್ಮದ ಜತೆ ರಾಜಕಾರಣವನ್ನು ಬೆರಿಸಿ ಯಥಾಸ್ಥಿತಿ ಕಾಪಾಡಲು ಸತತ ಶ್ರಮಿಸಿದ ಗಾಂಧಿ ನಾಗರೀಕತೆಗೆ ಸೇರಿದವರಾಗಿದ್ದಾರೆ!

ಲೇಖಕರು ಇನ್ನೂ ಅನೇಕ ಸಣ್ಣ ಪುಟ್ಟ ಗದ್ದಲಗಳನ್ನು ಎಬ್ಬಿಸಿದ್ದಾರೆ. ಅವೆಲ್ಲದಕ್ಕೂ ಉತ್ತರ ನೀಡಬೇಕಾದ ಅವಶ್ಯಕತೆಯಿಲ್ಲ. ಎಲ್ಲರೂ ಮುಕ್ತವಾಗಿ ವಿಚಾರ ಮಾಡಿ ತಮ್ಮ ತಮ್ಮ ಆಯ್ಕೆಗಳನ್ನು ಮಾಡಿಕೊಳ್ಳಬಹುದಾದ ಈ ಕಾಲದಲ್ಲಿ ಜನರೂ ತಮ್ಮ ಆಯ್ಕೆಯನ್ನು ಮಾಡಿಕೊಂಡಿದ್ದಾರೆ.

ಅಂಬೇಡ್ಕರರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಚಿಂತನೆ, ಅವರು ಸಂವಿಧಾನ ಸಭೆಯಲ್ಲಿ ದೇಶ ಮುಂದೆದೂ, ಸ್ವಾತಂತ್ರ್ಯ ಕಳೆದುಕೊಳ್ಳದಂತೆ ಮಾಡಲು ಏನು ಮಾಡಬೇಕು ಎಂದು ವ್ಯಕ್ತಪಡಿಸಿದ ಕಾಳಜಿಗಳು, ಮಹಿಳೆಯರು, ಕಾರ್ಮಿಕರು, ದುಡಿಯುವ ವರ್ಗಗಳ ಎಲ್ಲರ ದೀರ್ಘಕಾಲಿಕ ಒಳಿತಿಗಾಗಿ ಮಾಡಿದ ಚಿಂತನೆ ಮತ್ತು ಹೋರಾಟ, ದೇಶದ ಮತ್ತು ಎಲ್ಲ ಜನರ ಅಭ್ಯುದಯಕ್ಕಾಗಿ ಮಾಡಿದ ಅವರ ಚಿಂತನೆಗಳು ಅವರನ್ನು ಶ್ರೇಷ್ಠನಾಯಕನನ್ನಾಗಿ ನಿಲ್ಲಿಸಿವೆ. ಅದರ ಪರಿಣಾಮವೇ ಈ ಆಯ್ಕೆ. ಇದಕ್ಕೆ ಹೊಟ್ಟೆಕಿಚ್ಚು ಪಟ್ಟುಕೊಳ್ಳುವುದು ಸರಿಯಲ್ಲ. ■

ಶಾಶ್ವತ ಪರಿಹಾರದೆಡೆಗೆ ಕಾವೇರಿ ಚಳವಳಿ

ಡಾ॥ ವಾಸು ಎಚ್.ವಿ

ಮಳೆ ಕಡಿಮೆಯಾದ ಸಂದರ್ಭಗಳಲ್ಲೆಲ್ಲಾ ಭುಗಿಲೇಳುವ, ಮಳೆ ನೀರಿಗೆ ಮುದುರಿಕೊಂಡು ತಣ್ಣಗಾಗಿಬಿಡುವ ಕಾವೇರಿ ಚಳವಳಿಯಲ್ಲಿ ಈ ಬಾರಿ ಸಣ್ಣದಾದ ಆದರೆ ಮಹತ್ವಪೂರ್ಣವಾದ ಒಂದು ದನಿ ಕೇಳಿ ಬರುತ್ತಿದೆ. ಅದು ಈ ವಿವಾದಕ್ಕೊಂದು ಶಾಶ್ವತ ಪರಿಹಾರ ಬೇಕು ಎಂಬ ದನಿ. ರೈತರ ಬದುಕು ಹಾಗೂ ನಗರಿಗರ ಕುಡಿಯುವ ನೀರಿನ ವಿಚಾರದಲ್ಲಿ ಅಪಾರ ಆತಂಕ ಸೃಷ್ಟಿ ಮಾಡುವ ವಿವಾದಕ್ಕೆ ಒಂದು ಕೊನೆ ಹಾಡಬೇಕು; ಅದಕ್ಕಾಗಿ ಏನಾದರೂ ಮಾಡಬೇಕು ಎಂಬ ಮಾತುಗಳು ಅಲ್ಲಲ್ಲಿ ಕೇಳಿ ಬಂದವು. 'ಕಾವೇರಿ ಚಳವಳಿಯ ರಾಜಧಾನಿ'ಯಾದ ಮಂಡ್ಯದಲ್ಲೂ, ರೈತರ ಆಕ್ರೋಶದ, ತಕ್ಷಣದ ಘೋಷಣೆಗಳ ಮಧ್ಯೆಯೂ ತೂರಿಬಂದ ಶಾಶ್ವತ ಪರಿಹಾರದ ಬಯಕೆ ಈ ವರ್ಷದ ಪ್ರಮುಖ ಬೆಳವಣಿಗೆಗಳಲ್ಲಿ ಒಂದು.

ಬ್ರಿಟಿಷ್ ವಸಾಹತುಶಾಹಿಗಳ ಕಾಲದಿಂದ ಆರಂಭವಾದ ತಾರತಮ್ಯ ನೀತಿಯು ಕರ್ನಾಟಕದ ಜನತೆಯಲ್ಲಿ ವಂಚನೆಗೊಳಗಾದ ಭಾವನೆಯನ್ನು ಬಲವಾಗಿ ಮೂಡಿಸಿದೆ. ಕೃಷ್ಣರಾಜಸಾಗರ ಜಲಾಶಯ ಕಟ್ಟಬೇಕಾದ ಸಂದರ್ಭದಲ್ಲಿ ಮಾಡಿಕೊಳ್ಳಲೇಬೇಕಾಗಿ ಬಂದ 1924ರ ಒಪ್ಪಂದಕ್ಕೂ ಮುಂಚೆಯೇ ಈ ತಾರತಮ್ಯ ಆರಂಭವಾಗಿತ್ತು. ಅದು 1892ರಲ್ಲಿ ಆದ ಒಪ್ಪಂದ. ಆ ಒಪ್ಪಂದದ ಹೆಸರೇ ಅದರ ತಿರುಳನ್ನೂ, ತಾರತಮ್ಯವನ್ನೂ ಸೂಚಿಸುತ್ತಿತ್ತು. 'ಮದ್ರಾಸು ಸರ್ಕಾರದ ಪೂರ್ವಾನುಮತಿಯಿಲ್ಲದೇ ಮೈಸೂರು ರಾಜ್ಯ ಯಾವುದೇ ಹೊಸ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಬಾರದೆಂಬ ಮಿತಿಯನ್ನು ವಿಧಿಸುವ ನಿಯಮ' (Rules defining the limits within which no new irrigation works are to be constructed by Mysore state with our previous reference to Madras government). 1924ರ ಒಪ್ಪಂದವು ಕೃಷ್ಣರಾಜಸಾಗರವನ್ನು ನಿರ್ಮಿಸಲು ಅವಕಾಶ ಮಾಡಿಕೊಟ್ಟಿತ್ತಾದರೂ, ತಮಿಳುನಾಡಿನ ಕೆಳ ಅಣೆಕಟ್ಟೆಯಲ್ಲಿ ಸದಾ ಕಾಲ 3ರಿಂದ 7 ಅಡಿಗಳಷ್ಟು ನೀರನ್ನು ಖಾತ್ರಿ ಮಾಡಿದ ನಂತರವಷ್ಟೇ, ಇಲ್ಲಿ ನೀರಿನ ಬಳಕೆ ಮಾಡಿಕೊಳ್ಳಲು ಸಾಧ್ಯವಿತ್ತು.



ಇಂತಹ ಹತ್ತು ಹಲವು ನೀತಿಗಳು ಕರ್ನಾಟಕದಲ್ಲಿ ಮೂಡಿಸಿದ ಆಕ್ರೋಶವು, ಕೆಲವು ಸಂದರ್ಭಗಳಲ್ಲಿ ಭಾವಾವೇಶಕ್ಕೂ ಅವಕಾಶ ಮಾಡಿಕೊಡುತ್ತಿತ್ತು. ಕನ್ನಡ ಚಿತ್ರರಂಗದ ಹಲವು ವಿದ್ಯಮಾನಗಳು, ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳು, ರೈಲ್ವೇ ಹಾಗೂ ರಕ್ಷಣಾ ಇಲಾಖೆಯ ಉದ್ಯೋಗಗಳಲ್ಲಿ ತಮಿಳು ಜನರು ಹೆಚ್ಚಿದ್ದದ್ದು ಸೇರಿದಂತೆ ಇನ್ನೂ ಹಲವು ಕಾರಣಗಳಿಗೆ ಕರ್ನಾಟಕ ಮತ್ತು ತಮಿಳುನಾಡುಗಳ ನಡುವೆ ಒಂದು ಮಟ್ಟದ ದ್ವೇಷದ ಭಾವನೆ ಉಂಟಾಗಿತ್ತು. ತಮ್ಮದೇ ಹಿತಾಸಕ್ತಿಗಳಿಗಾಗಿ ಇದನ್ನು ಮತ್ತಷ್ಟು ಪೋಷಿಸಿ, ಬೆಳೆಸಿದ ಶಕ್ತಿಗಳು ಎರಡೂ ರಾಜ್ಯಗಳಲ್ಲಿದ್ದವು. ಎಲ್ಲವೂ ಸೇರಿ ಸಮಸ್ಯೆಯನ್ನು ಅಷ್ಟು ಸುಲಭವಾಗಿ ಬಗೆಹರಿಸಲಾಗದ ಭಾವೋನ್ಮಾದದ ವಾತಾವರಣ ನೆಲೆಗೊಳ್ಳಲು ಕಾರಣವಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಎರಡೂ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ವಸಾಹತುಶಾಹಿಗಳಿಂದ ಬಿಡುಗಡೆಯಾದ ನಂತರವೂ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಿರಂತರವಾದ ಮತ್ತು ಪ್ರಾಮಾಣಿಕವಾದ ಪ್ರಯತ್ನವನ್ನು ನಡೆಸಲಿಲ್ಲ. ಕೆಲವು ಸುಳ್ಳು ವದಂತಿಗಳೂ ಸಹಾ ಎರಡೂ ಕಡೆ ಚಾಲ್ತಿಯಲ್ಲಿವೆ. ಉದಾಹರಣೆಗೆ ತಮಿಳುನಾಡಿನಲ್ಲಿ ವರ್ಷದಲ್ಲಿ 3 ಬೆಳೆ ಬೆಳೆಯುತ್ತಾರೆ, ಕರ್ನಾಟಕದಲ್ಲಿ ಎರಡೇ ಬೆಳೆ ಎಂಬುದು ಅಂತಹ ಒಂದು ವದಂತಿ. ವಾಸ್ತವದಲ್ಲಿ.ಸಾಂಬಾ, ಕುರುವೇ ಮತ್ತು ತಾಲಡಿ ಎಂಬ ಮೂರು ಬೆಳೆಗಳನ್ನು ಕಾವೇರಿ ಅಚ್ಚುಕಟ್ಟಿನ ಎಲ್ಲಾ ಭಾಗಗಳಲ್ಲೂ ಪ್ರತಿ ವರ್ಷ ಬೆಳೆಯುವುದಿಲ್ಲ. ಸಾಂಬಾ ಬೆಳೆಯುವ ಕಾವೇರಿ ಡೆಲ್ಟಾ ಪ್ರದೇಶವೇ ಹೆಚ್ಚಿನ ಭಾಗವಾಗಿದೆ. ತಾಲಡಿ ಎಂಬುದು ಕೇವಲ ಕೂಳೆ ಬೆಳೆಯಾಗಿದೆ. ಅದೇ ರೀತಿಯಲ್ಲಿ ಕರ್ನಾಟಕದವರು ನೀರಿಟ್ಟುಕೊಂಡೂ ಬಿಡದ ಜಗಳಗಂಟರು ಎಂಬ ಭಾವನೆಯನ್ನು ತಮಿಳುನಾಡಿನಲ್ಲಿ ಪ್ರಬಲವಾಗಿ ಮೂಡಿಸಲಾಗಿದೆ.

ಎಲ್ಲದರ ಫಲವಾಗಿ ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರವೆಂಬುದು ಮರೀಚಿಕೆಯಾಯಿತು. ಕೃಷ್ಣಾ ನದಿ ವಿವಾದಕ್ಕೂ, ಕಾವೇರಿ ವಿವಾದಕ್ಕೂ ಇರುವ ಮುಖ್ಯ ವ್ಯತ್ಯಾಸವನ್ನು ಇಲ್ಲಿ ಗಮನಿಸಬೇಕು. ಕೃಷ್ಣಾ ನದಿ ವಿವಾದದಲ್ಲಿ, ಇನ್ನೂ ಬಳಕೆಯಾಗದೇ ಉಳಿದಿರುವ (ಅಂದರೆ ಲಭ್ಯವಿರುವ ನೀರಿಗೇ ಯೋಜನೆಗಳಿಲ್ಲದಿರುವ) ನೀರನ್ನು ಹೇಗೆ ಹಂಚಿಕೊಳ್ಳುವುದೆಂಬುದು ಸಮಸ್ಯೆ. ಕಾವೇರಿ ವಿವಾದದಲ್ಲಿ ಈಗಾಗಲೇ ಸಂಪೂರ್ಣ ಬಳಕೆಯಾಗಿರುವ ನೀರನ್ನು ಮರುಹಂಚಿಕೆ ಮಾಡಿಕೊಳ್ಳುವುದು ಸಮಸ್ಯೆ.

ಕೇವಲ ನೀರಿನ ಸಮಸ್ಯೆಗಿಂತ ಹೆಚ್ಚಾಗಿ

ಕೃಷಿ ಕ್ಷೇತ್ರದ ಇನ್ನಿತರ ಸಮಸ್ಯೆಗಳದ್ದೂ ಈ ವಿವಾದದಲ್ಲಿ ಮುಖ್ಯ ಪಾಲಿದೆ. ಹಸಿರು ಕ್ರಾಂತಿಯ ನಂತರದಲ್ಲಿ ಈ ದೇಶದ ಎಲ್ಲ ಪಕ್ಷಗಳು ನಡೆಸಿದ ಸರ್ಕಾರಗಳು ರೈತರನ್ನು ಬಿಕ್ಕಟ್ಟಿಗೆ ದೂಡುವ ನೀತಿಗಳನ್ನೇ ಅನುಸರಿಸಿದವು. ನೀರಾವರಿ ಪ್ರದೇಶದ ರೈತರು ನೈಸರ್ಗಿಕ ಏರುಪೇರುಗಳಿಗಿಂತ ಹೆಚ್ಚಾಗಿ ಮಾರುಕಟ್ಟೆಯ ಏರುಪೇರುಗಳಿಂದ ನಷ್ಟಕ್ಕೊಳಗಾಗುತ್ತಾ ಬಂದರು. ಹೀಗಾಗಿ ಮೊದಲೇ ಅಭದ್ರತೆಯಲ್ಲಿರುವ ಕೃಷಿಕ ಸಮುದಾಯ, ಬರ ಬಂದಾಗ ತಮ್ಮ ಪಾಲಿನ ನೀರಿಗೂ ಖೋತಾ ಆಗುತ್ತದೆಂಬ ಆತಂಕದಿಂದ ಇನ್ನೂ ಪ್ರಬಲವಾಗಿ ಸಂಘರ್ಷಕ್ಕಿಳಿಯುತ್ತಿದ್ದರು. ಈ ವಿಚಾರದಲ್ಲಿ ಕರ್ನಾಟಕದ ರೈತರೂ, ತಮಿಳುನಾಡಿನ ರೈತರೂ ಸಮಾನ ದುಃಖಿಗಳು. ಗೊಬ್ಬರ, ಬೀಜ, ಕೃಷಿ ಉಪಕರಣಗಳು, ಕೀಟನಾಶಕಗಳು, ಮಾರುಕಟ್ಟೆಯ ಬೆಲೆ ಏರುಪೇರು ಎಲ್ಲಾ ರೈತರನ್ನೂ ಸಮಾನವಾಗಿಯೇ ಹಿಂಡುತ್ತವೆ. ಸದ್ಯದಲ್ಲೇ ಈ ದೇಶವನ್ನು ಆವರಿಸಲಿರುವ ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳ (ಎಫ್‌ಡಿಐ)ವು ಕೃಷಿ ಕ್ಷೇತ್ರದ ಚಿತ್ರಣವನ್ನೇ ಸಂಪೂರ್ಣ ಬದಲಾಯಿಸಲಿದೆ. ಸಣ್ಣ ಹಾಗೂ ಮಧ್ಯಮ ಪ್ರಮಾಣದ ರೈತರೆಲ್ಲರೂ ಕೂಲಿಗಳಾಗಿ ಪರಿವರ್ತನೆಯಾಗುವ ವಿದ್ಯಮಾನ ಪ್ರತೀ ವರ್ಷ ಹೆಚ್ಚಾಗಲಿದೆ.

ಈ ಎಲ್ಲಾ ಆತಂಕಗಳೇ ವಾಸ್ತವದಲ್ಲಿ ಎರಡೂ ರಾಜ್ಯಗಳ ರೈತರನ್ನು ಒಂದೆಡೆಗೆ ತರಬೇಕಾಗಿತ್ತು. ಈ ಆತಂಕದ ಪರೋಕ್ಷ ಪರಿಣಾಮ ಎಷ್ಟಿದೆ ಎಂಬ ಅಂದಾಜನ್ನು ಈಗ ಲಭ್ಯವಿರುವ ಅಧ್ಯಯನ ಹಾಗೂ ವಿಶ್ಲೇಷಣೆಯಲ್ಲಿ ಮಾಡಲಾಗದು. ಆದರೆ 'ಎಷ್ಟು ವರ್ಷ ಈ ಸಮಸ್ಯೆಯ ವಿರುದ್ಧ ಗುದ್ದಾಡುವುದು, ಇದಕ್ಕೇನಾದರೂ ಪರಿಹಾರ ಬೇಕೇ ಬೇಕು' ಎಂಬ ಭಾವನೆಯು ಶಾಶ್ವತ ಪರಿಹಾರದೆಡೆಗೆ ನಿಧಾನಕ್ಕೆ ಯೋಚಿಸುವಂತೆ ಮಾಡುತ್ತಿದೆ ಎಂಬುದಂತೂ ನಿಜ.

ತನ್ನೆಲ್ಲಾ ಕೊರತೆಗಳ ನಡುವೆ ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪು ಶಾಶ್ವತ ಪರಿಹಾರಕ್ಕೆ ತಳಹದಿಯನ್ನು ಹಾಕಿಕೊಟ್ಟಿದೆ. ಒಂದು, ತಾನು ಮುಂಚಿನಿಂದಲೂ–ಶತಮಾನಗಳಿಂದಲೂ–ನೀರಿನ ಬಳಕೆ ಮಾಡಿಕೊಳ್ಳುತ್ತಿರುವುದರಿಂದ ತನಗೆ ಹೆಚ್ಚಿನ ಪಾಲು (prescriptive right and the right of prior use) ದಕ್ಕಬೇಕೆನ್ನುವ ತಮಿಳುನಾಡಿನ ವಾದವನ್ನು ನ್ಯಾಯಾಧಿಕರಣ ಮಾನ್ಯ ಮಾಡಿಲ್ಲ. 1924ರ ಒಪ್ಪಂದವನ್ನು ನ್ಯಾಯಾಧಿಕರಣವು ಮಾನ್ಯ ಮಾಡಿದ್ದರೂ, 50 ವರ್ಷಗಳ ನಂತರ (1974) ಅದನ್ನು ಪುನರ್‌ಪರಿಶೀಲನೆಗೊಳಪಡಿಸಬಹುದು ಎಂದು ಹೇಳಿದೆ. ಎರಡು, ಸಾಮಾನ್ಯ ವರ್ಷಗಳಲ್ಲಿ 192 ಟಿಎಂಸಿಯಷ್ಟು ನೀರನ್ನು ತಮಿಳುನಾಡಿಗೆ ಬಿಟ್ಟ ನಂತರ ಕರ್ನಾಟಕವು ತನ್ನ ಪಾಲಿಗೆ ಬರುವ ಉಳಿದೆಲ್ಲಾ ನೀರನ್ನು ಹೇಗೆ ಬೇಕಾದರೂ ಬಳಸಿಕೊಳ್ಳುವ ಹಕ್ಕನ್ನು ಹೊಂದಿದೆ ಎಂದು ಅಂತಿಮ ತೀರ್ಪಿನಲ್ಲಿ ಹೇಳಲಾಗಿದೆ. ಅದೇ ರೀತಿ ತಮಿಳುನಾಡು ಕರ್ನಾಟಕದಿಂದ ಪಡೆದುಕೊಳ್ಳುವ 192 ಟಿಎಂಸಿ (ಅಥವಾ ಮಳೆ ಬಹಳ ಹೆಚ್ಚಾದ ಕಾಲದಲ್ಲಿ ಬರಬಹುದಾದ ಇನ್ನೂ ಹೆಚ್ಚಿನ ನೀರು) ಮತ್ತು ತನ್ನದೇ ಜಲಾನಯದ ಪ್ರದೇಶಗಳಿಂದ ಸಿಗಬಹುದಾದ ಹೆಚ್ಚಿನ ನೀರನ್ನು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು. ಮೂರು, ಈ ಅಂತಿಮ ತೀರ್ಪಿನ ಆಚೆ ಕರ್ನಾಟಕ ಮತ್ತು ತಮಿಳುನಾಡು (ಹಾಗೂ ಕೇರಳ ಮತ್ತು ಪಾಂಡಿಚೇರಿ) ರಾಜ್ಯಗಳು ಪರಸ್ಪರ ಒಪ್ಪಿಗೆಯ ಮೇರೆಗೆ ಮಾಡಿಕೊಳ್ಳಬಹುದಾದ ಇನ್ನಾವುದೇ ಬದಲಾವಣೆಗಳಿಗೆ ಅಡ್ಡಿಯಿಲ್ಲ.

ಆದರೆ ಅಂತಿಮ ತೀರ್ಪಿನಲ್ಲಿರುವ 2 ಮುಖ್ಯ ಸಮಸ್ಯೆಗಳು ಶಾಶ್ವತ ಪರಿಹಾರಕ್ಕೆ ಅಡ್ಡಿಯಾಗಿವೆ. ಒಂದು, ಕರ್ನಾಟಕವು ಕನಿಷ್ಠ 192 ಟಿಎಂಸಿಗಳನ್ನು ಬಿಡಲೇಬೇಕೆಂದು ಹೇಳಿರುವುದು. ಈ ವಿಚಾರದಲ್ಲಿ ಕಾವೇರಿ ನ್ಯಾಯಾಧಿಕರಣವು ಯಾವುದೇ ಆಧಾರವಿಲ್ಲದೆ ಸುಖಾಸುಮ್ಮನೆ ಒಂದು ಅಂಕಿಯನ್ನು ಹೇಳಿಲ್ಲ ಎಂಬುದನ್ನು ನಾವು ಗಮನಿಸಬೇಕು. ಮೊದಲು ಯಾವ ಮಾನದಂಡಗಳ ಆಧಾರದ ಮೇಲೆ ನೀರಿನ ಹಂಚಿಕೆಯಾಗಬೇಕು ಎಂಬುದನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ನಂತರ ಎರಡೂ ರಾಜ್ಯಗಳ ಬಳಕೆ ಮತ್ತು ಅಗತ್ಯಗಳ ಆಧಾರದ ಮೇಲೆ ಸರಾಸರಿ 50 ವರ್ಷಗಳಲ್ಲಿ ಲಭ್ಯವಾಗುವ ನೀರಿನ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡಲಾಗಿದೆ. ಕರ್ನಾಟಕದ ತಕರಾರು ಮಾನದಂಡಗಳ ಕುರಿತಾಗಿಯೂ ಮತ್ತು ಅಂತಿಮ ಹಂಚಿಕೆಯ ಕುರಿತಾಗಿಯೂ ಇದೆ. ವಿವರಗಳು ಈ ಲೇಖನದ ಗಾತ್ರವನ್ನು ಹಿಗ್ಗಿಸುತ್ತವೆಯಾದ್ದರಿಂದ ಅವನ್ನು ಇಲ್ಲಿ ಚರ್ಚಿಸಲು ಹೋಗಿಲ್ಲ. ಆದರೆ ಹಲವು ರೀತಿಯಲ್ಲಿ ಕರ್ನಾಟಕಕ್ಕೆ ಒಂದು ಮಟ್ಟದ ಅನ್ಯಾಯವಂತೂ ಆಗಿದೆ. ವಿವಿಧ ಮಾನದಂಡಗಳ ಆಧಾರದ ಮೇಲೆ (ಕೇರಳದ ಪಾಲಿನಲ್ಲಿ ಬಳಕೆಯಾಗದೇ ಉಳಿದುಕೊಂಡಿರುವ ನೀರು, ಪರಿಸರ ಸಮತೋಲನಕ್ಕೆ ಬಿಡಬೇಕಾದ ನೀರು, ತಮಿಳುನಾಡಿನ ಅಂತರ್ಜಲದ ಪ್ರಮಾಣ ಇತ್ಯಾದಿ) ಲೆಕ್ಕಾಚಾರ ಹಾಕಿದರೆ ಇನ್ನೂ 25ರಿಂದ 50 ಟಿಎಂಸಿ ಕರ್ನಾಟಕದ ಪಾಲಿಗೆ ದಕ್ಕಬಹುದು. ಆದರೆ ಒಮ್ಮೆ ನ್ಯಾಯಾಧಿಕರಣವು ಇಂತಿಷ್ಟು ನೀರು ಎಂದು ನಿಗದಿಪಡಿಸಿದ ಮೇಲೆ, ಅದಕ್ಕೂ ಹಿಂದಕ್ಕೆ ಹೋಗಬೇಕೆಂದರೆ ಉಭಯ ಪಕ್ಷಗಳ ನಡುವೆ ಒಂದೋ ಅಗಾಧವಾದ ಮೈತ್ರಿ ಇರಬೇಕು ಇಲ್ಲವೇ, ಶಾಶ್ವತ ಪರಿಹಾರವನ್ನು ಕಂಡುಕೊಳ್ಳಲೇಬೇಕಾದ ಅನಿವಾರ್ಯತೆ ಉಂಟಾಗಬೇಕು.

ಕೇವಲ ನೀರಿನ ಸಮಸ್ಯೆಗಿಂತ ಹೆಚ್ಚಾಗಿ ಕೃಷಿ ಕ್ಷೇತ್ರದ ಇನ್ನಿತರ ಸಮಸ್ಯೆಗಳದ್ದೂ ಈ ವಿವಾದದಲ್ಲಿ ಮುಖ್ಯ ಪಾಲಿದೆ. ನೀರಾವರಿ ಪ್ರದೇಶದ ರೈತರು ನೈಸರ್ಗಿಕ ಏರುಪೇರುಗಳಿಗಿಂತ ಹೆಚ್ಚಾಗಿ ಮಾರುಕಟ್ಟೆಯ ಏರುಪೇರುಗಳಿಂದ ನಷ್ಟಕ್ಕೊಳಗಾಗುತ್ತಾ ಬಂದರು. ಮೊದಲೇ ಅಭದ್ರತೆಯಲ್ಲಿರುವ ಕೃಷಿಕ ಸಮುದಾಯ, ಬರ ಬಂದಾಗ ತಮ್ಮ ಪಾಲಿನ ನೀರಿಗೂ ಖೋತಾ ಆಗುತ್ತದೆಂಬ ಆತಂಕದಿಂದ ಇನ್ನೂ ಪ್ರಬಲವಾಗಿ ಸಂಘರ್ಷಕ್ಕಿಳಿಯುತ್ತಿದ್ದರು. ಈ ವಿಚಾರದಲ್ಲಿ ಕರ್ನಾಟಕದ ರೈತರೂ, ತಮಿಳುನಾಡಿನ ರೈತರೂ ಸಮಾನ ದುಃಖಿಗಳು.

ಅಂತಿಮ ತೀರ್ಪಿನಲ್ಲಿರುವ ಎರಡನೆಯ ಸಮಸ್ಯೆಯೆಂದರೆ, ಸರಿಯಾದ ಸಂಕಷ್ಟ ಸೂತ್ರವನ್ನು ನ್ಯಾಯಾಧಿಕರಣ ರೂಪಿಸದೇ ಇರುವುದು. ನ್ಯಾಯಾಧಿಕರಣವು ರಚನೆಯಾದ ಮೇಲೆ ತಾನು ಬಗೆಹರಿಸಬೇಕಾದ 50 ಅಂಶಗಳ ಪಟ್ಟಿ ಮಾಡಿದೆ. ಅದರಲ್ಲಿ ಸಂಕಷ್ಟ ಸೂತ್ರದ ಸ್ಥಾನ 50ನೆಯದ್ದು. ವಾಸ್ತವದಲ್ಲಿ ಈ ವಿವಾದದ ಇಂದಿನ ಪ್ರಮುಖ ಸಮಸ್ಯೆಯೇ ಸಂಕಷ್ಟದ (ಮಳೆ ಕಡಿಮೆ ಬಿದ್ದ) ಸಂದರ್ಭದಲ್ಲಿ ನೀರಿನ ಹಂಚಿಕೆಯದ್ದಾಗಿದೆ. ಸಂಕಷ್ಟ ಬಂದಾಗ ಶೇಕಡಾವಾರು ಪ್ರಮಾಣದಲ್ಲಿ ನೀರಿನ ಹಂಚಿಕೆಯನ್ನು ಕಡಿಮೆ ಮಾಡಿಕೊಳ್ಳಬೇಕು ಎಂದಷ್ಟೇ ಹೇಳಲಾಗಿದೆ. ಇದು ಮೇಲ್ನೋಟಕ್ಕೆ ಸರಿಯಿದೆ ಅನ್ನಿಸಿದರೂ, ಕೆಲವು ವಾಸ್ತವದ ತೊಡಕುಗಳು ಇವೆ. ಇಡೀ

ವರ್ಷ ಬೀಳುವ ನೀರನ್ನು ಒಂದು ಕಡೆ ಸಂಗ್ರಹಿಸಿ, ಅದರಲ್ಲಿ ನಮ್ಮ ನಮ್ಮ ಶೇಕಡಾವಾರು ಪಾಲು ಇಷ್ಟು ಎಂದು ಹಂಚಿಕೊಳ್ಳುವುದಾಗಿದ್ದರೆ ಈ ಸೂತ್ರವನ್ನು ಸುಲಭದಲ್ಲಿ ಅನ್ವಯಿಸಬಹುದಾಗಿತ್ತು. ಆದರೆ, ಮಳೆ ಒಂದೇ ಸಾರಿಗೆ ಬರುವುದಿಲ್ಲವಲ್ಲ!.

ಕಾವೇರಿಯ ವಿಚಾರದಲ್ಲಿ ಇನ್ನೂ ವಿಶೇಷವಾದ ಸಮಸ್ಯೆಯೂ ಒಂದಿದೆ. ಅದೇನೆಂದರೆ, ಕರ್ನಾಟಕಕ್ಕೆ ಹೆಚ್ಚು ಮಳೆ ತರುವ ನೈರುತ್ಯ ಮಾರುತಗಳು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಬರುತ್ತವೆ. ತಮಿಳುನಾಡಿಗೆ ಹೆಚ್ಚು ಮಳೆ ತರುವ ಈಶಾನ್ಯ ಮಾರುತಗಳು ಅಕ್ಟೋಬರ್‌ನಿಂದ ಜನವರಿವರೆಗೆ



ಸುರಿಯುತ್ತವೆ. ಹೀಗಾಗಿ ಮಳೆಗಾಲದ ಆರಂಭದಲ್ಲೇ ಸಂಕಷ್ಟ ಎದುರಾದಾಗ ಕರ್ನಾಟಕವು ಬೆಳೆ ನಷ್ಟವನ್ನೂ ಮಾಡಿಕೊಂಡಿರುತ್ತದೆ; ಅಣೆಕಟ್ಟೆಯಲ್ಲೂ ನೀರಿನ ಸಂಗ್ರಹ ಕಡಿಮೆ ಇರುತ್ತದೆ. ಹೀಗಾದಾಗ, ಅಕ್ಟೋಬರ್‌ನಿಂದ ಹೆಚ್ಚು ನೀರು ಬೇಡುವ ಸಾಂಬಾ ಬೆಳೆಗೆ ನೀರು ದಕ್ಕದೇ ಹೋಗಿಬಿಡಬಹುದೆಂಬ ಆತಂಕದಲ್ಲಿ ತಮಿಳುನಾಡು ಈಗಲೇ ನೀರು ಬಿಟ್ಟುಬಿಡಿ ಎಂದು ಕೇಳಲಾರಂಭಿಸುತ್ತದೆ. ಆದರೆ ನಾವೇ ಕಷ್ಟದಲ್ಲಿದ್ದೇವೆ; ನಿಮ್ಮ ಅಣೆಕಟ್ಟುಗಳಲ್ಲೂ ಒಂದಷ್ಟು ನೀರು ಇದೆ; ನಿಮಗೆ ಹೇಗೂ ಈಶಾನ್ಯ ಮಾರುತಗಳಿಂದ ಅಕ್ಟೋಬರ್‌ನ ನಂತರ ಮಳೆ ಬರುತ್ತದೆ ಎಂದು ಕರ್ನಾಟಕ ಹೇಳುತ್ತದೆ. ಕರ್ನಾಟಕಕ್ಕೆ ಈ ಸಾರಿ ಬಾರದ ಮಳೆಯು ತಮಿಳುನಾಡಿಗೆ ಬರುತ್ತದೆ ಎಂದು ಹೇಗೆ ಹೇಳುವುದು? ಈ ವರ್ಷ ಎದುರಾಗಿರುವ ಸಮಸ್ಯೆ ಇದೇ ಆಗಿದೆ.

ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಳ್ಳುವ ಸಂಕಷ್ಟ ಸೂತ್ರ ಇನ್ನೂ ರೂಪಿತವಾಗಿಲ್ಲ. ಹಾಗಾಗಿ ಆಯಾ ಕಾಲಕ್ಕೆ ತಕ್ಕಂತೆ ನಿರ್ಧರಿಸಲು ಕಾವೇರಿ ಮ್ಯಾನೇಜ್‌ಮೆಂಟ್ ಬೋರ್ಡ್‌ಅನ್ನು ರಚಿಸಲು ನ್ಯಾಯಾಧಿಕರಣ ಸೂಚಿಸಿದೆ. (ಹಾಲಿ ಈ ಕೆಲಸವನ್ನು ಕೇಂದ್ರ ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ನೇತೃತ್ವದ ಕಾವೇರಿ ಉಸ್ತುವಾರಿ ಸಮಿತಿಯ –ಸಿಎಂಸಿ– ನೆರವಿನೊಂದಿಗೆ, ಪ್ರಧಾನಿ ನೇತೃತ್ವದ ಕಾವೇರಿ ನದಿ ಪ್ರಾಧಿಕಾರ –ಸಿಆರ್‌ಎ– ಮಾಡುತ್ತಿದೆ). ಈ ಸಮಿತಿಗಳ ತೀರ್ಮಗಳು ನಿಷ್ಪಕ್ಷಪಾತವಾಗಿರುತ್ತವೆಂಬ ಯಾವ ಗ್ಯಾರಂಟಿಯೂ ಇಲ್ಲ; ಇದ್ದರೂ ಅವನ್ನು ಕೇಳುವ ಸ್ಥಿತಿಯಲ್ಲಿ ಆಯಾ ಭಾಗಗಳ ಆತಂಕಿತ ರೈತರು ಇರುವುದಿಲ್ಲ. ಆಗ ಭಾವೋದ್ರೇಕ ಶುರುವಾಗುತ್ತದೆ. ಅದಕ್ಕೆ ಎಣ್ಣೆ ಸುರಿಯುವವರೂ ಇರುತ್ತಾರೆ. ಹಾಗಾಗದೇ ಎಲ್ಲಾ ಆಯಾಮಗಳನ್ನೂ ಗಮನದಲ್ಲಿಟ್ಟುಕೊಳ್ಳುವ ಒಂದು ಶಾಶ್ವತ ಸಂಕಷ್ಟ ಸೂತ್ರ ರೂಪಿತವಾಗಬೇಕು.

ಈ ಎರಡು ವಿಚಾರ ಬಗೆಹರಿದರೆ ಶಾಶ್ವತ ಪರಿಹಾರ ಆಗಿಬಿಡುತ್ತದೆಯೇ, ಇನ್ನೂ ಸ್ವಲ್ಪ ಹೆಚ್ಚಿನ ನೀರು ಪಡೆದುಕೊಳ್ಳುವ ಕರ್ನಾಟಕ ನಂದನವನವಾಗಿಬಿಡುತ್ತದೆಯೇ? ತಮಿಳುನಾಡು ಸಮೃದ್ಧಿಯಲ್ಲಿ ತೇಲಾಡುತ್ತದೆಯೇ? ಖಂಡಿತಾ ಇಲ್ಲ. ಒಟ್ಟು ಕೃಷಿ ಬಿಕ್ಕಟ್ಟು, ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಸೇರಿದಂತೆ ರೈತರನ್ನು, ಜನರನ್ನು ಇನ್ನಿಲ್ಲದ ಸಂಕಷ್ಟಗಳಿಗೆ ದೂಡುತ್ತಿರುವ ನಮ್ಮ ಸರ್ಕಾರಗಳ ಜುಟ್ಟು ಎಲ್ಲಿಯವರೆಗೆ ದೇಶಿ ಮತ್ತು ವಿದೇಶೀ ದೊಡ್ಡ ಬಂಡವಾಳಶಾಹಿಗಳ ಕೈಯ್ಯಲ್ಲಿ ಇರುತ್ತದೋ ಅಲ್ಲಿಯವರೆಗೆ ಅಂತಹ ಯಾವ ಬದಲಾವಣೆಯನ್ನೂ ನಿರೀಕ್ಷಿಸಲಾಗದು. ಆ ವಿಚಾರಗಳನ್ನು ಸದ್ಯಕ್ಕೆ ಪಕ್ಕಕ್ಕಿಡೋಣ. ಈಗ ನೀರಿನ ವಿಚಾರವನ್ನಷ್ಟೇ ಗಮನಕ್ಕೆ ತಂದುಕೊಂಡು ಕೆಲವು ಸಾಧ್ಯತೆಗಳನ್ನು ಚರ್ಚಿಸೋಣ.

ಎರಡೂ ರಾಜ್ಯಗಳಿಗೆ ಅಂತಿಮವಾಗಿ ನೀರು ಹಂಚಿಕೆಯಾಗಿ, ಸಂಕಷ್ಟ ಸೂತ್ರವೂ ಸಿದ್ಧ ಮಾಡಿಕೊಂಡು ಅಂತಿಮ ನಿರ್ಧಾರವನ್ನು ಕೇಂದ್ರ ಸರ್ಕಾರವು ಗೆಜೆಟ್‌ನಲ್ಲಿ ಪ್ರಕಟಿಸಬೇಕು. ಆ ನಂತರ ಇರುವ ನೀರಾವರಿ ಪ್ರದೇಶಗಳಿಗೇ ಇನ್ನೂ ಸಮರ್ಪಕವಾಗಿ ಹೆಚ್ಚಿನ ನೀರನ್ನು ಕೊಡುವುದೂ ಸಾಧ್ಯ; ಇದುವರೆಗೆ ನೀರಾವರಿಯ ಮುಖವನ್ನೂ ಕಾಣದಿರುವ ಒಣ ಪ್ರದೇಶಗಳಿಗೂ ನೀರು ಕೊಡಲು ಸಾಧ್ಯ.

ನೀರು ನಿರ್ವಹಣೆಯಲ್ಲಿ ದಕ್ಷತೆಯನ್ನು ಸಾಧಿಸುವುದಾದರೆ ಅಂದರೆ ದೊಡ್ಡ ಮತ್ತು ಸಣ್ಣ ಕಾಲುವೆಗಳಲ್ಲಿ ನೀರು ಇಂಗಿ ಆಗುತ್ತಿರುವ ನಷ್ಟವನ್ನು ತಪ್ಪಿಸಿದರೆ, ಈ ರೀತಿ ಒದಗಿಸಲಾಗುತ್ತಿರುವ ನೀರಿನ ಶೇ.40ರಷ್ಟನ್ನು ಪಡೆಯಬಹುದು. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ)ದ ವರದಿಯ ಪ್ರಕಾರ ಇಂತಹ ದಕ್ಷತೆಯಿಂದ ತಮಿಳುನಾಡಿನಲ್ಲಿ 88 ಟಿಎಂಸಿ ಮತ್ತು ಕರ್ನಾಟಕದಲ್ಲಿ 30 ಟಿಎಂಸಿ ನೀರನ್ನು ಉಳಿಸಬಹುದು.

ಸಾಮಾನ್ಯ ವರ್ಷಗಳಲ್ಲಿ ಸಮುದ್ರಕ್ಕೆ ಹರಿದು ಪೋಲಾಗುತ್ತಿರುವ ನೀರು 1972ರಲ್ಲಿ 102 ಟಿಎಂಸಿ ಎಂದು ಕೇಂದ್ರ ಸರ್ಕಾರ ನೇಮಿಸಿದ್ದ ಕಾವೇರಿ ಸತ್ಯಶೋಧನಾ ಸಮಿತಿ ಹೇಳಿತ್ತು. ಈಗ ಈ ಪ್ರಮಾಣ ಎಷ್ಟಿದೆ ಎಂದು ನೋಡಿ, ಅದರ ಸದ್ಬಳಕೆಗೆ ವ್ಯವಸ್ಥೆ ಮಾಡಿಕೊಳ್ಳಬೇಕು. ಕಾವೇರಿ ಪ್ರದೇಶದಲ್ಲಿ ಒಟ್ಟು 200 ಟಿಎಂಸಿ (ತಮಿಳುನಾಡು 150, ಕರ್ನಾಟಕ 50)ಯಷ್ಟು ಅಂತರ್ಜಲ ಲಭ್ಯವಿದೆಯೆಂಬುದು ಅಂದಾಜು. ಇದರ ಸರಿಯಾದ ಬಳಕೆ ಹಾಗೂ ಅಂತರ್ಜಲ ಮರುಪೂರಣ ವ್ಯವಸ್ಥೆಯಿಂದ ಮತ್ತಷ್ಟು ನೀರು ಲಭ್ಯವಾಗುತ್ತದೆ.

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಈ ಹಿಂದೆಯೇ ತಿಳಿಸಿದ್ದರೂ ಕೆಲ ಲೇಖಕರು ಝೆರಾಕ್ಸ್ ಪ್ರತಿಗಳನ್ನು ಈಗಲೂ ಕಳುಹಿಸುತ್ತಿದ್ದಾರೆ. ಅವುಗಳನ್ನು ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. 'ಸಂಪಾದಕರೊಂದಿಗೆ ಸಂವಾದ'ಕ್ಕೆ ಬರೆಯುವ ಬರಹಗಳು ಕನಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿರಬೇಕು. ಉಳಿದ ಲೇಖನಗಳು ಎರಡು ಸಾವಿರ ಪದಗಳ ಆಸುಪಾಸಿನಲ್ಲಿರಬೇಕು. ದೀರ್ಘವಾದ ಲೇಖನಗಳನ್ನು ಯಾವ ಕಾರಣಕ್ಕೂ ಪ್ರಕಟಿಸುವುದಿಲ್ಲ. ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ Page Maker ಅಥವಾ Word File ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.–ಸಂ.

ಕೃಷಿಗೆ ಬಳಸುವ ನೀರಿನಲ್ಲಿ ಅಪವ್ಯಯ ತಡೆಯುವುದರಿಂದ ಹಲವು ರೀತಿಯ ಅನುಕೂಲಗಳಿವೆ. ಇಂದು ಎಲ್ಲಾ ರೈತರಿಗೆ ಅಭ್ಯಾಸವಾಗಿರುವ ವಿಧಾನವು ಅವೈಜ್ಞಾನಿಕವೂ, ಸ್ವಲ್ಪ ಮಟ್ಟಿಗೆ ಬೇಜವಾಬ್ದಾರಿಯುತವೂ ಆಗಿದೆ. ಈ ನಿಟ್ಟಿನಲ್ಲಿ ದೊಡ್ಡ ಮಟ್ಟದ ಸುಧಾರಣಾ ಕ್ರಮಗಳಿಗೆ ಮುಂದಾಗಬೇಕಾದ ಅಗತ್ಯವಿದೆ.

ಮೇಲೆ ಹೇಳಲಾದ ಎಲ್ಲಾ ಅಂಶಗಳಿಗಿಂತ ಮುಖ್ಯವಾದ ಕೆಲವು ಸಂಗತಿಗಳಿವೆ. ಕೃಷಿಯೆಂಬ ಸಾರ್ವಕಾಲಿಕ ಚಟುವಟಿಕೆಗೆ ಇಂದಿನ ರೀತಿಯಲ್ಲೇ ನೀರು ಪೂರೈಸುತ್ತಾ ಹೋಗಲು ಸಾಧ್ಯವೇ? ದೊಡ್ಡ ದೊಡ್ಡ ಅಣೆಕಟ್ಟುಗಳು ಮಾಡಿದ, ಮಾಡುತ್ತಿರುವ ಅನಾಹುತಗಳು 100 ವರ್ಷಗಳ ಅನುಭವದಲ್ಲಿ ಹೊಸ ಪಾಠಗಳನ್ನು ಕಲಿಸುತ್ತಿವೆ. ಈಗಾಗಲೇ ಕರ್ನಾಟಕದ ಕನಿಷ್ಠ 3 ದೊಡ್ಡ ಅಣೆಕಟ್ಟುಗಳಲ್ಲಿ ಶೇ.20ರಷ್ಟು ಹೂಳು ತುಂಬಿದ್ದು ಅದರಿಂದ ಆಗುತ್ತಿರುವ ನಷ್ಟವನ್ನು ಕೇವಲ ಟಿಎಂಸಿಗಳಲ್ಲಿ ಮಾತ್ರ ಅಳೆಯಲಾಗದು.

ನಿರಂತರ ನೀರಾವರಿಯಿಂದ ಉಂಟಾಗುವ ಜೌಗು ಮತ್ತು ಕ್ಷಾರದಿಂದಲೂ ಮುಕ್ತಗೊಳ್ಳಲು ಬಳಸಬೇಕಾದ ನೀರಾವರಿ ಮತ್ತು ಕೃಷಿ ವಿಧಾನಗಳ ಕುರಿತು ಮುಕ್ತ ಮನಸ್ಸಿನ ಚಿಂತನೆ ಹಾಗೂ ಪ್ರಯೋಗಗಳು ಅನಿವಾರ್ಯವಾಗಿದೆ. ಹನಿ ನೀರಾವರಿಯಿಂದ, ಇನ್ನಿತರ ಕೃಷಿ ವಿಧಾನಗಳಿಂದ, ಕೆರೆ-ಕುಂಟೆಗಳ ಅಭಿವೃದ್ಧಿಯಿಂದ ಪಡೆಯಬಹುದಾದ ಹೆಚ್ಚುವರಿ ನೀರು ಮತ್ತು ಬೇಸಾಯದ ಅಭಿವೃದ್ಧಿಗಳು ಮಾತ್ರ ಶಾಶ್ವತ ಪರಿಹಾರಕ್ಕೆ ನಮ್ಮನ್ನು ಕೊಂಡೊಯ್ಯಬಲ್ಲವು.

ಈ ರೀತಿಯ ಶಾಶ್ವತ ಕ್ರಮಗಳಿಗೆ ಮುಂದಾಗುವುದಕ್ಕೆ ಕಾವೇರಿ ವಿವಾದದ ಶಾಶ್ವತ ಪರಿಹಾರ ಪೂರ್ವ ಶರತ್ತೇನೂ ಅಲ್ಲ. ಆದರೆ ಕಾವೇರಿ ವಿವಾದಕ್ಕೆ ಅಂತಿಮ ಪರಿಹಾರ ಕಂಡುಕೊಳ್ಳುವುದು, ಇನ್ನಿತರ ಕ್ರಮಗಳಿಗೆ ಮುಂದಾಗಲು ಸರಾಗವಾದ ದಾರಿಯನ್ನು ನಿರ್ಮಿಸಿಕೊಡುತ್ತದೆ. ಈ ಭಾಗವು ನಿಜವಾದ ಅರ್ಥದಲ್ಲಿ ನಂದನವನವಾಗಬೇಕೆಂದರೆ ಅದು ಅನಿವಾರ್ಯ. ಅತ್ಯಂತ ಸಮೃದ್ಧವೆಂದು ಭಾವಿಸಲಾದ ಮಂಡ್ಯ ಜಿಲ್ಲೆಯೊಂದರಲ್ಲೇ ಶೇ.40ರಷ್ಟು ಒಣಭೂಮಿ ಬೇಸಾಯವಿದೆ ಎಂಬ ಸತ್ಯ ಇದನ್ನು ಮತ್ತಷ್ಟು ಅನಿವಾರ್ಯಗೊಳಿಸುತ್ತದೆ.

ಹೀಗಾಗಿ ಶಾಶ್ವತ ಪರಿಹಾರಕ್ಕೆ ಬೇಕಾದ ಮೂರ್‍ನಾಲ್ಕು ಸೂತ್ರಗಳು ನಮ್ಮ ಚಳವಳಿಯ ಕೇಂದ್ರ ಘೋಷಣೆಗಳಾಗಬೇಕಿದೆ. ಅವನ್ನು ಇಡೀ ಕಾವೇರಿ ಪ್ರದೇಶದ ರೈತರು ಹಾಗೂ ಇನ್ನಿತರ ಜನಸಮುದಾಯಗಳು ಗಡಿ, ಭಾಷೆ, ಜಾತಿಗಳ ಬೇಲಿ ದಾಟಿ ಒಂದಾಗಿ ಧ್ವನಿಸಬೇಕಿದೆ. ಅಂತಹ ಪರಿಹಾರಕ್ಕೆ ಅಡ್ಡಿಯಾಗಿರುವವರು ಜನರ ಶತ್ರುಗಳು ಎಂಬ ಭಾವನೆ ಸಾರ್ವತ್ರಿಕವಾದಾಗ ಮಾತ್ರ ನಾವು ಶಾಶ್ವತ ಪರಿಹಾರದ ದಿಕ್ಕಿನೆಡೆ ದಾಪುಗಾಲಿಕ್ಕಬಹುದು.

1. ಕೆಲವು ತಾಂತ್ರಿಕ ಅಂಶಗಳು

1 ಟಿಎಂಸಿ ಎಂದರೆ (Thousand million cubic feet) ಸಾವಿರ ದಶಲಕ್ಷ ಘನ ಅಡಿಗಳು. ಇನ್ನೂ ಸರಳವಾಗಿ ಹೇಳಬೇಕೆಂದರೆ, ಒಂದು ಸಾವಿರ ಅಡಿ ಅಗಲ, ಒಂದು ಸಾವಿರ ಅಡಿ ಉದ್ದ ಹಾಗೂ ಒಂದು ಸಾವಿರ ಅಡಿ ಆಳ ಇರುವ ನೀರು ಅಥವಾ 3 ಕಿ.ಮೀ ಉದ್ದ, 3 ಕಿ.ಮೀ ಅಗಲ ಇರುವ ಚಚ್ಚೌಕದ ವಿಸ್ತೀರ್ಣದಲ್ಲಿ ನಿಲ್ಲಬಹುದಾದ 10 ಅಡಿ ಎತ್ತರದ ನೀರು.

1 ಕ್ಯೂಸೆಕ್ಸ್ ಎಂದರೆ ಅದು ನೀರಿನ ಹರಿವಿನ ಪ್ರಮಾಣದ ಸೂಚಕ. ಸೆಕೆಂಡಿಗೆ 1 ಘನ ಅಡಿ ಎಂದು ಅದರ ಅರ್ಥ.





ಕೃಷಿಯೆಂಬ ಸಾರ್ವಕಾಲಿಕ ಚಟುವಟಿಕೆಗೆ ಇಂದಿನ ರೀತಿಯಲ್ಲೇ ನೀರು ಪೂರೈಸುತ್ತಾ ಹೋಗಲು ಸಾಧ್ಯವೇ? ದೊಡ್ಡ ದೊಡ್ಡ ಅಣೆಕಟ್ಟುಗಳು ಮಾಡಿದ, ಮಾಡುತ್ತಿರುವ ಅನಾಹುತಗಳು 100 ವರ್ಷಗಳ ಅನುಭವದಲ್ಲಿ ಹೊಸ ಪಾಠಗಳನ್ನು ಕಲಿಸುತ್ತಿವೆ. ಈಗಾಗಲೇ ಕರ್ನಾಟಕದ ಕನಿಷ್ಠ 3 ದೊಡ್ಡ ಅಣೆಕಟ್ಟುಗಳಲ್ಲಿ ಶೇ.20ರಷ್ಟು ಹೂಳು ತುಂಬಿದ್ದು ಅದರಿಂದ ಆಗುತ್ತಿರುವ ನಷ್ಟವನ್ನು ಕೇವಲ ಟಿಎಂಸಿಗಳಲ್ಲಿ ಮಾತ್ರ ಅಳೆಯಲಾಗದು.

1 ಟಿಎಂಸಿ ನೀರಿನಿಂದ ಹಾಲಿ ಇರುವ ಕೃಷಿ ಪದ್ಧತಿಗಳಲ್ಲಿ 2600ರಿಂದ 3,000 ಎಕರೆ ಕಬ್ಬು ಬೆಳೆಯಬಹುದು; 2,000ದಿಂದ 2,200 ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಬಹುದು. ರಾಗಿ, ಜೋಳ, ಕಡಲೆಕಾಯಿಗಳಾದರೆ 9,500ರಿಂದ 10,000 ಎಕರೆ ಪ್ರದೇಶದಲ್ಲಿ ಬೆಳೆಯಬಹುದು.

2. ಕಾವೇರಿ ಕುಟುಂಬ: ಶಾಶ್ವತ ಪರಿಹಾರ ಕಂಡುಕೊಳ್ಳಲು ಎರಡೂ ರಾಜ್ಯದ ರೈತರನ್ನು ಒಂದೆಡೆ ಸೇರಿಸಿ, ವೈಜ್ಞಾನಿಕವಾದ ವಿಧಾನದಲ್ಲಿ ಪ್ರಯತ್ನ ನಡೆಸುತ್ತಿರುವುದು 'ಕಾವೇರಿ ಕುಟುಂಬ'ವಾಗಿದೆ. ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಮುಂತೊಡಗಿನಿಂದ ಆರಂಭವಾದ ಈ ಪ್ರಯತ್ನ ಈಗಾಗಲೇ ಕೆಲವು ವರ್ಷಗಳಿಂದ ನಡೆಯುತ್ತಿದೆ. ಎರಡೂ ರಾಜ್ಯಗಳ ರೈತ ಪ್ರತಿನಿಧಿಗಳು ಕುಟುಂಬದಲ್ಲಿದ್ದಾರೆ. ಕರ್ನಾಟಕದಿಂದ ಕೊಡಗಿನ ಸುಬ್ಬಯ್ಯ, ರೈತಸಂಘದ ಪುಟ್ಟಣ್ಣಯ್ಯ, ಕೋಡಿಹಳ್ಳಿ ಚಂದ್ರಶೇಖರ್, ಬಡಗಲಪುರ ನಾಗೇಂದ್ರ, ಕಬ್ಬು ಬೆಳೆಗಾರರ ಸಂಘದ ಕುರುಬೂರು ಶಾಂತಕುಮಾರ್, ರೈತನಾಯಕಿ ಸುನಂದಾ ಜಯರಾಂ, ಕೆ.ಬೋರಯ್ಯ, ಹಿರಿಯ ಲೇಖಕ ಪ್ರೊ.ಎಚ್.ಎಲ್.ಕೇಶವಮೂರ್ತಿ ಮತ್ತಿತರರಿದ್ದಾರೆ. ಕೆಲವು ಸಮಸ್ಯೆಗಳ ಹೊರತಾಗಿಯೂ ಕರ್ನಾಟಕ ರಾಜ್ಯ ರೈತಸಂಘವು ಎರಡೂ ರಾಜ್ಯದ ರೈತರಿಗೂ ಒಳಿತಾಗಬೇಕು ಎಂಬ ನಿಲುವನ್ನೇ ಪ್ರತಿಪಾದಿಸಿದೆ. ಎಲ್ಲಾ ಭಾವಾವೇಶದ ನಡುವೆಯೂ ಕೆ.ಎಸ್.ಪುಟ್ಟಣ್ಣಯ್ಯನವರು ಕರ್ನಾಟಕದ ಹಿತವನ್ನು ಪ್ರತಿಪಾದಿಸುತ್ತಲೇ, ಈ ಚಿಂತನೆಯನ್ನೂ ಹೊಂದಿರುವುದು ಅಭಿನಂದನಾರ್ಹ ಸಂಗತಿಯಾಗಿದೆ. ಮಂಡ್ಯ ಜಿಲ್ಲಾ ರೈತಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ಜಿ.ಮಾದೇಗೌಡರೂ ಮಂಡ್ಯ ಜಿಲ್ಲೆಯ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಎಷ್ಟೇ ಗಟ್ಟಿಯಾಗಿ ಹೇಳಿದರೂ, ತಮಿಳುನಾಡಿನ ರೈತರು ನಷ್ಟಕ್ಕೊಳಗಾಗಲಿ ಎಂದು, ಎಂದೂ ಹೇಳಿಲ್ಲ. ಇವೆಲ್ಲವೂ ವಿವಾದದ ಪರಿಹಾರಕ್ಕೆ ಪೂರಕವಾಗಿರುವ ಅಂಶಗಳೇ ಆಗಿವೆ.

3. ಪರಂಪರೆಯನ್ನು ಮುಂದುವರೆಸಿದ ಗೆಜ್ಜಲಗೆರೆ: ಬೆಂಗಳೂರು ಮತ್ತು ಮೈಸೂರು ನಡುವೆ ಪ್ರಯಾಣಿಸುವವರಿಗೆ ಕಾವೇರಿ ಚಳವಳಿ ಆರಂಭವಾದ ಕೂಡಲೇ ಸಮಸ್ಯೆ ಎದುರಾಗುತ್ತದೆ. ಏಕೆಂದರೆ ರಸ್ತೆ ತಡೆ ಹಾಗೂ ರೈಲು ತಡೆ ಇಲ್ಲಿನ ಖಾಯಂ ಹೋರಾಟದ ರೂಪಗಳು. ಕಾವೇರಿಗಾಗಿ ಈ ರೀತಿಯ ಚಳವಳಿ ಏಕೆ ಮಾಡಬೇಕು, ನಮ್ಮದೇ ಜನರಿಗೆ ತೊಂದರೆ ಕೊಡುವುದು ಸರಿಯೇ ಎಂಬುದು ಹಲವರ ಪ್ರಶ್ನೆ. ಆದರೆ ವಾಸ್ತವವೇನೆಂದರೆ ಇಷ್ಟೆಲ್ಲಾ ಚಳವಳಿ ನಡೆದರೂ, ಕರ್ನಾಟಕ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದನ್ನು ಈ ವರ್ಷವೂ ನೋಡಿದೆವು. ಹಾಗಾಗಿ ಜನ ಹೋರಾಟದ ಒತ್ತಡವಿಲ್ಲದೇ ಇದ್ದರೆ ಸರ್ಕಾರಗಳು ಕೆಲಸವೇ ಮಾಡುವುದಿಲ್ಲ ಎಂಬಂತಾಗಿದೆ. ಈ ಸಾರಿ ಕಾವೇರಿ ಚಳವಳಿಯ ಬಿರುಸನ್ನು ಕಾಪಾಡಿಕೊಳ್ಳುವಲ್ಲಿ ಇನ್ನಿತರ ಹಳ್ಳಿಗಳಂತೆ ಹೆದ್ದಾರಿಯಲ್ಲಿ ಬರುವ ಗೆಜ್ಜಲಗೆರೆಯದ್ದೂ ಮುಖ್ಯ ಪಾತ್ರವಾಗಿತ್ತು. ರೈತ ನಾಯಕಿ ಸುನಂದಾ ಜಯರಾಂ ಅವರ ನೇತೃತ್ವದಲ್ಲಿ ಅಷ್ಟೂ ದಿನ, ಶಾಂತಿಯುತವಾಗಿ ಆದರೆ ಗಟ್ಟಿಯಾಗಿ ಹೋರಾಟದ ಕಾವನ್ನು ಗೆಜ್ಜಲಗೆರೆ ಕಾಪಾಡಿಕೊಂಡಿತ್ತು. ರೈತ ಚಳವಳಿಯ ಆರಂಭದಲ್ಲಿ, ಗುಂಡೂರಾವ್ ಸರ್ಕಾರದಲ್ಲಿ ಗೋಲೀಬಾರ್‌ನಿಂದ ಮೂವರು ರೈತರು ಹುತಾತ್ಮರಾದರೂ ಬಿಡದೇ ಚಳವಳಿ ನಡೆಸಿಕೊಂಡು ಬಂದ ಊರು ಇದು. ■

ಚಿಲ್ಲರೆ ವ್ಯಾಪಾರ ವಿದೇಶಿ ಬಂಡವಾಳ

■ ಮ.ಶ್ರೀ. ಮುರಳಿಕೃಷ್ಣ

ನಮ್ಮ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಚಿಲ್ಲರೆ ವ್ಯಾಪಾರ ಒಂದು ಪ್ರಧಾನ ಅಂಗವೆನ್ನಬಹುದು. ನಮ್ಮ GDPಯ ಶೇ. 14–15ರಷ್ಟು ಮೊತ್ತ ಈ ಕ್ಷೇತ್ರದಿಂದ ಸಂದಾಯವಾಗುತ್ತಿದೆ ಎಂದರೆ ಇದರ ಪ್ರಾಮುಖ್ಯತೆ ಅರಿವಾಗುತ್ತದೆ. ಭಾರತದ ಚಿಲ್ಲರೆ ವ್ಯಾಪಾರದ ಮೌಲ್ಯ ಸುಮಾರು 450 ಬಿಲಿಯನ್ ಯುಎಸ್ ಡಾಲರುಗಳು. ವಿಶ್ವದಲ್ಲಿ, ಈ ಕ್ಷೇತ್ರದ ಆಗುಹೋಗುಗಳಲ್ಲಿ ನಮ್ಮ ರಾಷ್ಟ್ರದ್ದು ಐದನೆಯ ಸ್ಥಾನ. ಸುಮಾರು 120 ಕೋಟಿ ಜನಸಂಖ್ಯೆಯಿರುವ ನಮ್ಮ ಭಾರತ ಪ್ರಪಂಚದಲ್ಲೇ ಅತ್ಯಂತ ತ್ವರಿತವಾಗಿ ಬೆಳೆಯುತ್ತಿರುವ ಚಿಲ್ಲರೆ ಮಾರುಕಟ್ಟೆಯನ್ನು ಹೊಂದಿದೆ.

ಭಾರತದ ಚಿಲ್ಲರೆ ವ್ಯಾಪಾರದ ವಿಶೇಷತೆಯೆಂದರೆ ಅತ್ಯಧಿಕ ಸಂಖ್ಯೆಯಲ್ಲಿರುವ ಸಣ್ಣ ಅಂಗಡಿಗಳು. 2010ರಲ್ಲಿ ದೊಡ್ಡ ಅಂಗಡಿಗಳು ಮತ್ತು ಸೂಪರ್ ಮಾರುಕಟ್ಟೆಗಳ ಸಂಖ್ಯೆ ಈ ಉದ್ಯಮದ ಶೇ. 4ರಷ್ಟಿತ್ತು. ಇವುಗಳು ನಗರ ಪ್ರದೇಶಗಳಿಗೆ ಸೀಮಿತವಾಗಿದ್ದವು. ಈ ಕ್ಷೇತ್ರ, ನಮ್ಮ ರಾಷ್ಟ್ರದ ಜನಸಂಖ್ಯೆಯ ಶೇ. 3.30ರಷ್ಟು ಮಂದಿಗೆ (ಅಂದರೆ ಸುಮಾರು 4 ಕೋಟಿ) ಉದ್ಯೋಗಗಳನ್ನು ನೀಡಿದೆ. ಕೇಂದ್ರ ಸರ್ಕಾರ 2011ರ ವರೆಗೆ ಬಹು-ಬ್ರಾಂಡ್‌ಗಳ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ನಿರ್ಬಂಧಿಸಿತ್ತು. ಅಂದರೆ ಸೂಪರ್ ಮಾರುಕಟ್ಟೆಗಳು, ಚಿಲ್ಲರೆ ವ್ಯಾಪಾರ ಮಳಿಗೆಗಳ ಮಾಲೀಕತ್ವವನ್ನು ಯಾವುದೇ ವಿದೇಶಿ ಸಂಸ್ಥೆ/ಗುಂಪು ಹೊಂದಲು ಸಾಧ್ಯವಿರಲಿಲ್ಲ. ಆದರೆ ಅವುಗಳು ಏಕಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಶೇ. 51 ರಷ್ಟು ಮಾಲೀಕತ್ವದ ಪಾಲನ್ನು ಹೊಂದುವ ಅವಕಾಶಗಳನ್ನು ಕಲ್ಪಿಸಲಾಗಿತ್ತು. ಆದರೆ ಅವುಗಳು ಅನೇಕ ಬಗೆಯ ಅಧಿಕಾರದ ಷರತ್ತುಗಳಿಗೆ ಬದ್ಧವಾಗಿರಬೇಕಿತ್ತು.



● ಅಮೆರಿಕಾದ ಪೆನ್ನಿಲ್ವೇನಿಯಾ ವಿಶ್ವವಿದ್ಯಾಲಯ ಬಹಿರಂಗಗೊಳಿಸಿರುವ 'ವಾಲ್‌ಮಾರ್ಟ್ ಮತ್ತು ದಾರಿದ್ರ್ಯ' ಎಂಬ ಕಣ್ತೆರೆಸುವ ಅಧ್ಯಯನ. 1987ರ ಆಸುಪಾಸು ಕಾಲಾವಧಿಯಲ್ಲಿ ಯಾವ ಅಮೆರಿಕಾದ ರಾಜ್ಯಗಳಲ್ಲಿ ವಾಲ್‌ಮಾರ್ಟ್ ಭಂಡಾರಗಳು ಹೆಚ್ಚಿದ್ದವೋ, ಅಲ್ಲಿ ಅವು 1999ರ ವೇಳೆಗೆ ದಾರಿದ್ರ್ಯದ ಪ್ರಮಾಣ ವೃದ್ಧಿಸಿದ್ದವು ಎಂಬ ಗಹನವಾದ ವಿಚಾರವನ್ನು ಈ ಅಧ್ಯಯನ ಮಂಡಿಸಿತು. ಆದರೆ ನಮ್ಮ ಕೇಂದ್ರ ಸರ್ಕಾರ ಈ ವಿಚಾರದ ಬಗೆಗೆ ಏನನ್ನೂ ಮಾತನಾಡುತ್ತಿಲ್ಲ! ಹಸಿವು, ಬಡತನ, ಅಸಮಾನತೆಗಳಿಂದ ತತ್ತರಿಸುತ್ತಿರುವ ನಮ್ಮ ರಾಷ್ಟ್ರಕ್ಕೆ ಈ ಅಧ್ಯಯನ ಒಂದು ಎಚ್ಚರಿಕೆಯ ಗಂಟೆಯಾಗಬೇಕು. ●

ಆದರೆ ನಮ್ಮ ಕೇಂದ್ರ ಸರ್ಕಾರ ನವೆಂಬರ್ 2011ರಲ್ಲಿ ಬಹು ಮತ್ತು ಏಕ ಬ್ರಾಂಡ್‌ಗಳ ಚಿಲ್ಲರೆ ವ್ಯಾಪಾರದಲ್ಲಿ ಸುಧಾರಣೆಗಳನ್ನು ಜಾರಿಮಾಡುವುದಾಗಿ ಘೋಷಿಸಿತು. ಇದರಿಂದ ದೇಶಿಯ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ್ದ ಅನೇಕ ರೀತಿಯ ಘಟಕಗಳು ಬಹುಬ್ರಾಂಡ್‌ಗಳ ಅಂತರರಾಷ್ಟ್ರೀಯ ಚಿಲ್ಲರೆ ವ್ಯಾಪಾರದ ಬೃಹತ್ ಸಂಸ್ಥೆಗಳಾದ ವಾಲ್‌ಮಾರ್ಟ್, ಕರ್ರೇಫೋರ್(Carrefour) ಮತ್ತು ಟೆಸ್ಕೊ (Tesco) ಹಾಗೂ ಏಕಬ್ರಾಂಡ್‌ನ ಸಂಸ್ಥೆಗಳಾದ ಐ.ಕೆ.ಇ.ಎ, ನೈಕ್ ಮತ್ತು ಆ್ಯಪಲ್‌ನೊಡನೆ ಸ್ಪರ್ಧೆ ಮಾಡುವ ಸನ್ನಿವೇಶವನ್ನು ಎದುರಿಸಿದವು. ಈ ಘೋಷಣೆಗೆ ಪರ ಮತ್ತು ವಿರೋಧ ದನಿಗಳು ಎದ್ದವು. ಡಿಸೆಂಬರ್ 2011ರಲ್ಲಿ ಹೆಚ್ಚಿದ ಪ್ರತಿಭಟನೆಯನ್ನು ಮನಗಂಡು ಕೇಂದ್ರ ಸರ್ಕಾರ ಸುಧಾರಣೆಗಳನ್ನು ಜಾರಿ ಮಾಡುವ ತನ್ನ ಇಂಗಿತಕ್ಕೆ ತಡೆಹಾಕಿತು(ಸರ್ವಸಮ್ಮತಿ ದೊರಕುವವರೆಗೆ).

ಆದರೆ ಕೇಂದ್ರ ಸರ್ಕಾರ ಈ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಜಾರಿಮಾಡುವ ತನ್ನ ಇರಾದೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಿಲ್ಲ. ಅವುಗಳಿಗೆ ತಡೆ ಒಡ್ಡಿದಂತೆ ನಾಟಕವಾಡಿತು ಅಷ್ಟೇ. ಏಕೆಂದರೆ ಕೇವಲ ಒಂದು ತಿಂಗಳಲ್ಲೇ ಅಂದರೆ ಜನವರಿ 2012ರಲ್ಲಿ ಅದು ಭಾರತದ ಚಿಲ್ಲರೆ ಮಾರುಕಟ್ಟೆಯಲ್ಲಿ ಏಕಬ್ರಾಂಡ್ ಅಂಗಡಿಗಳನ್ನು ಶೇ. 100ರಷ್ಟು ಮಾಲೀಕತ್ವದೊಡನೆ ವಿಶ್ವದ ಮಟ್ಟದಲ್ಲಿ ಯಾರು ಬೇಕಾದರೂ ತೆಗೆಯಬಹುದೆಂದು ನಿರ್ಧಾರ ತಳೆಯಿತು. ಆದರೆ ಈ ನಿಟ್ಟಿನಲ್ಲಿ ಒಂದು ನಿಬಂಧನೆಯನ್ನು ಹಾಕಿತು. ಅದೆಂದರೆ ಭಾರತದ ಚಿಲ್ಲರೆ ವ್ಯಾಪಾರವನ್ನು (ಏಕಬ್ರಾಂಡ್) ಪ್ರವೇಶಿಸುವ ಯಾವುದೇ ಸಂಸ್ಥೆ/ಗುಂಪು ದೇಶೀಯ ಮೂಲದಿಂದಲೇ ತನ್ನ ಸರಕಿನ ಶೇ. 30ರಷ್ಟನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿತು.



ಭಾರತದ ಚಿಲ್ಲರೆ ವ್ಯಾಪಾರದಲ್ಲಿ ಎರಡು ಬಗೆಗಳಿವೆ ಒಂದು ಸಂಘಟಿತ ಚಿಲ್ಲರೆ ವ್ಯಾಪಾರ ಮತ್ತೊಂದು ಅಸಂಘಟಿತದ್ದು. ಲೈಸೆನ್ಸ್ ಹೊಂದಿರುವ ಮಾರಾಟ ತೆರಿಗೆ, ವರಮಾನ ತೆರಿಗೆ ಪಾವತಿಸುವ ಸೂಪರ್ ಮಾರುಕಟ್ಟೆಗಳು ಖಾಸಗಿ ಒಡೆತನದ ದೊಡ್ಡ ಚಿಲ್ಲರೆ ವ್ಯಾಪಾರ ಮಳಿಗೆಗಳು ಇತ್ಯಾದಿ ಸಂಘಟಿತ ಕ್ಷೇತ್ರದಲ್ಲಿವೆ. ಕಡಿಮೆ ವೆಚ್ಚದ ಚಿಲ್ಲರೆ ವ್ಯಾಪಾರಗಳಲ್ಲಿ ತೊಡಗುವ ಸಣ್ಣ ಅಂಗಡಿಗಳು, ಕಿರಾಣಿ ಅಂಗಡಿಗಳು, ಮಾಲೀಕರೇ ಎಲ್ಲಾ ಕಾರ್ಯ ನಿರ್ವಹಿಸುವ ಅಂಗಡಿಗಳು, ಪಾನ್‌ಬೀಡಾ ಅಂಗಡಿಗಳು, ಬೀದಿ ಬದಿಯ ವ್ಯಾಪಾರ ಇತ್ಯಾದಿ, ಅಸಂಘಟಿತ ಕ್ಷೇತ್ರಕ್ಕೆ ಸೇರುತ್ತವೆ.

ಭಾರತದ ಚಿಲ್ಲರೆ ವ್ಯಾಪಾರದ ಹೆಚ್ಚಿನ ಅಂಗಡಿಗಳು ಗಾತ್ರದಲ್ಲಿ ಸಣ್ಣವು. ಅಂತಹ ಸುಮಾರು 14 ಮಿಲಿಯ ಅಂಗಡಿಗಳು ನಮ್ಮಲ್ಲಿವೆ. ಅವುಗಳಲ್ಲಿ ಕೇವಲ ಶೇ. 4ರಷ್ಟು ಮಾತ್ರ 500 ಚದರಡಿ ಜಾಗದಲ್ಲಿ ವ್ಯಾಪಾರ ನಡೆಸುತ್ತಿವೆ. ನಮ್ಮ ರಾಷ್ಟ್ರದಲ್ಲಿ ಪ್ರತಿ 1000 ಜನರಿಗೆ ಇಂತಹ 11 ಅಂಗಡಿಗಳಿವೆ ಎಂದು ಒಂದು ಸರ್ವೇಕ್ಷಣ ತಿಳಿಸುತ್ತದೆ. ಬಹುತೇಕ ಅಸಂಘಟಿತ ಚಿಲ್ಲರೆ ಅಂಗಡಿಗಳಲ್ಲಿ ಕುಟುಂಬದ ಸದಸ್ಯರೇ ಕೆಲಸ ಮಾಡುತ್ತಿರುತ್ತಾರೆ. ಹೆಚ್ಚಿನ ವಹಿವಾಟುಗಳು ನಗದಿನ ಮೂಲಕ ಜರುಗುತ್ತವೆ.

ಭಾರತದಲ್ಲಿ ಹಣ ನೀಡಿ ಸಗಟು ವ್ಯಾಪಾರ ಮಾಡುವ ವಿಷಯದಲ್ಲಿ ವಿದೇಶಿ ನೇರ ಹೂಡಿಕೆಗೆ 1997ರಲ್ಲಿ ಅವಕಾಶ ಮಾಡಿಕೊಲಾಯಿತು. ಆದರೆ ಇದಕ್ಕೆ ಸರ್ಕಾರದ ಅನುಮೋದನೆ ಬೇಕಾಗಿತ್ತು. 2006ರಲ್ಲಿ ಈ ನಿಬಂಧನೆಯನ್ನು ಸಡಿಲಗೊಳಿಸಲಾಯಿತು. 2000-2010ರ ನಡುವೆ ಭಾರತದ ಚಿಲ್ಲರೆ ವ್ಯಾಪಾರ ಸುಮಾರು 1.8 ಬಿಲಿಯನ್ ಡಾಲರ್‌ಗಳಷ್ಟು ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸಿತು. ಆದರೆ ಇದು ಭಾರತಕ್ಕೆ ಹರಿದು ಬಂದ ಒಟ್ಟು ಬಂಡವಾಳದ ಶೇ 1.5ರಷ್ಟು ಮಾತ್ರ ಇತ್ತು.

ಭಾರತದ ಚಿಲ್ಲರೆ ವ್ಯಾಪಾರ ಸೀಮಿತ ಬೆಳವಣಿಗೆಯನ್ನು ಕಂಡಿದೆ. ವಿಶ್ವದಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಪದಾರ್ಥಗಳು ಕೆಡುವುದು ನಮ್ಮ ರಾಷ್ಟ್ರದಲ್ಲಿ. ಕಾರಣ ನಮ್ಮಲ್ಲಿರುವ ಶೈತ್ಯಾಗಾರಗಳು ಮತ್ತು ಇತರ ಮೂಲಭೂತ ಸೌಕರ್ಯಗಳ ಕೊರತೆ. ಭಾರತದಲ್ಲಿ ಸಮಾರು 5400 ಶೈತ್ಯಾಗಾರಗಳಿವೆ. ಇವುಗಳು ಸುಮಾರು 23.6 ಮಿಲಿಯನ್ ಮೆಟ್ರಿಕ್ ಟನ್‌ಗಳ ಪದಾರ್ಥಗಳನ್ನು ಭರಿಸುವ ಸಾಮರ್ಥ್ಯ ಹೊಂದಿವೆ. ಆದರೆ ಸುಮಾರು ಶೇ. 80ರಷ್ಟು ದಾಸ್ತಾನು ಜಾಗವನ್ನು ಆಲೂಗಡ್ಡೆ ಆಕ್ರಮಿಸುತ್ತದೆ! ಉಳಿದ ಜಾಗ, ಉತ್ತುಂಗ ಕಟಾವು ಕಾಲದ ಪದಾರ್ಥಗಳಿಗೆ ಸಾಕಾಗುವುದಿಲ್ಲ. ಇದರಿಂದ ಕೃಷಿ ಉತ್ಪನ್ನಗಳಲ್ಲಿ ಶೇ. 30ರಷ್ಟು ನಶಿಸಿಹೋಗುತ್ತವೆ. ಅಚ್ಚರಿಯ ವಿಷಯವೆಂದರೆ, ನಮ್ಮ ರಾಷ್ಟ್ರದ ಕಾನೂನುಗಳು ಶೈತ್ಯಾಗಾರಗಳ ವಿಷಯದಲ್ಲಿ ಶೇ. 100ರಷ್ಟು ವಿದೇಶಿ ನೇರ ಬಂಡವಾಳ ಹೂಡಲು ಅನುವು ಮಾಡಿಕೊಟ್ಟಿವೆ. ಆದರೆ ಈ ಕ್ಷೇತ್ರಕ್ಕೆ ಹರಿದು ಬರುತ್ತಿರುವ ವಿದೇಶಿ ನೇರ ಬಂಡವಾಳ ನಗಣ್ಯ. ಏಕೆ ಹೀಗಾಗುತ್ತಿದೆ ಎಂಬುದು ವಿಶ್ಲೇಷಣೆಗೆ ಯೋಗ್ಯವಾದ ವಿಷಯ. ಈ ಕ್ಷೇತ್ರದಲ್ಲಿರುವ ಅನೇಕ ತೊಡಕುಗಳು, ಏರುಪೇರುಗಳು ಇತ್ಯಾದಿ ಅತಿ ಹೆಚ್ಚಿನ ಲಾಭಗಳಿಸಲು ಕಂಟಕಪ್ರಾಯವಾಗಿವೆ. ಇದು ಬಂಡವಾಳ ಹೂಡಲು ಅಷ್ಟೊಂದು ಸುರಕ್ಷಿತ ಕ್ಷೇತ್ರವಲ್ಲ ಎಂಬ ಗ್ರಹಿಕೆಯ ಹಿನ್ನೆಲೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡುವವರು ಉಪೇಕ್ಷಿಸುತ್ತಿರುವ ಸಾಧ್ಯತೆಗಳೇ ಹೆಚ್ಚು. ಏಕೆಂದರೆ ಅವರು ನಿರೀಕ್ಷಿಸುವುದು ತ್ವರಿತಗತಿಯ ಲಾಭಗಳಿಕೆ ಅಲ್ಲವೇ? ಲಾಭದಾಯಕ ಪರಿಸ್ಥಿತಿ ಇದ್ದರೆ ಅವರು 'ನಾ ಮುಂದು, ತಾ ಮುಂದು' ಎಂದು ಮುಗಿಬೀಳುತ್ತಾರೆ. ಸ್ವಲ್ಪ ಏರುಪೇರಾದರೂ, ಅವರು ಬಂಡವಾಳ ಹಿಂದೆಗೆದುಕೊಂಡು ಪೇರಿ ಕಿಳುತ್ತಾರೆ.

ಕಳೆದ ಕೆಲವು ದಶಕಗಳಿಂದ ಭಾರತದಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ಸ್ಪರ್ಧೆ ಮತ್ತು ಹೊಸ ನೀತಿ, ಪ್ರಕ್ರಿಯೆಗಳ ಅನುಷ್ಠಾನ ಕುರಿತು ವಿಚಾರ ವಿನಿಮಯ, ಸಂವಾದಗಳು ಜರಗುತ್ತಲೇ ಬಂದಿವೆ. ಅನೇಕ ಅರ್ಥಶಾಸ್ತ್ರಜ್ಞರು ಈ ಕ್ಷೇತ್ರದ ಸಂಘಟಿತ ವ್ಯಾಪಾರದಲ್ಲಿರುವ ಕಾನೂನು ಪರಿಮಿತಿಗಳನ್ನು ನಿವಾರಿಸಬೇಕು ಮತ್ತು ಮುಕ್ತದ್ವಾರ ನೀತಿಯನ್ನು ಅನುಸರಿಸುವ ಮೂಲಕ ಸ್ಪರ್ಧೆಗೆ ಅವಕಾಶ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ನೀಡುತ್ತಲೇ ಇದ್ದಾರೆ. ಜಾಗತೀಕರಣದ ಪರವಾದ ಅರ್ಥಶಾಸ್ತ್ರಜ್ಞ ಪ್ರೊ. ಜಗದೀಶ್ ಭಗವತಿ (ಇವರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಆರ್ಥಿಕ ಶಾಸ್ತ್ರ ಮತ್ತು ಕಾನೂನು ಪ್ರಾಧ್ಯಾಪಕರು) ಡಿಸೆಂಬರ್ 2010ರಲ್ಲಿ ನಮ್ಮ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದರು. ಅವರು ಬೆಳವಣಿಗೆಗೂ ಮತ್ತು ದಾರಿದ್ರ್ಯ ಇಳಿಮುಖಕ್ಕೂ ಇರುವ ಸಂಬಂಧವನ್ನು ವಿಶ್ಲೇಷಿಸುತ್ತ ನಮ್ಮ ಸಂಸತ್ ಚಿಲ್ಲರೆ ವ್ಯಾಪಾರವನ್ನು ಮುಕ್ತಗೊಳಿಸುವ, ವ್ಯಾಪಾರದ ಎಲ್ಲ ಕ್ಷೇತ್ರಗಳಲ್ಲೂ ಮತ್ತಷ್ಟು ಉದಾರತೆಯನ್ನು ಅನುಷ್ಠಾನಗೊಳಿಸುವ, ಶ್ರಮ ಮಾರುಕಟ್ಟೆಯಲ್ಲಿ ಸುಧಾರಣೆಗಳನ್ನು ಜಾರಿಗೊಳಿಸುವ ಕ್ರಮಗಳನ್ನು ಜರುಗಿಸಬೇಕೆಂದು ಕರೆ ನೀಡಿದರು. ಈ ರೀತಿಯ ಸುಧಾರಣೆಗಳಿಂದ ಆರ್ಥಿಕ ಬೆಳವಣಿಗೆ ವೇಗಗೊಂಡು, ಭಾರತದ ಅತಿ ಬಡವರ ಜೀವನದಲ್ಲಿ ಗುರುತರವಾದ ವ್ಯತ್ಯಾಸ ತಲೆದೋರುವುದೆಂದು ವಾದಿಸಿದರು.

ಭಾರತದ ಚಿಲ್ಲರೆ ವ್ಯಾಪಾರದಲ್ಲಿ ಸುಧಾರಣೆಗಳನ್ನು ಜಾರಿ ಮಾಡುವ ನಿಟ್ಟಿನಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಆಸ್ಪದ ಮಾಡಿಕೊಡಬೇಕೆಂದು ಸಾರುವವರ ವಾದಗಳು ಹೀಗಿವೆ.

1) ಸಂಘಟಿತ ಚಿಲ್ಲರೆ ವ್ಯಾಪಾರಕ್ಕೆ ಹೆಚ್ಚಿನ ನೌಕರರು ಬೇಕಾಗುತ್ತಾರೆ. ಅಮೇರಿಕಾದಲ್ಲೇ ವಾಲ್‌ಮಾರ್ಟ್‌ನಲ್ಲಿ ಸುಮಾರು 1.4 ಮಿಲಿಯನ್ ಮಂದಿ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ನಮ್ಮ ರಾಷ್ಟ್ರದಲ್ಲಿ ವಿದೇಶಿ ನೇರ ಬಂಡವಾಳ ಚಿಲ್ಲರೆ ವ್ಯಾಪಾರದಲ್ಲಿ ಪ್ರವೇಶಿಸಿದರೆ, ಹೆಚ್ಚುವರಿ ಕೆಲಸಗಳು ಸೃಷ್ಟಿಯಾಗಿ ನಿರುದ್ಯೋಗ ಸಮಸ್ಯೆ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ.

2) ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹರಿದು ಬಂದರೆ, ನಮ್ಮ ರಾಷ್ಟ್ರದ ಕೃಷಿಕರಿಗೆ ಸುಮಾರು ಶೇ. 30ರಷ್ಟು ಹೆಚ್ಚಿನ ವರಮಾನಗಳನ್ನು ತರುತ್ತದೆ.

3) ದೊಡ್ಡ ಚಿಲ್ಲರೆ ವ್ಯಾಪಾರದಿಂದ ಮಧ್ಯವರ್ತಿಗಳು ನಿವಾರಣೆಯಾಗಿ, ಕೃಷಿಕರಿಗೆ ತಮ್ಮ ಬೆಳೆಗಳಿಗೆ ಇನ್ನೂ ಉತ್ತಮ ದರಗಳು ಸಿಗುತ್ತವೆ.

4) ಚಿಲ್ಲರೆ ವಿದೇಶಿ ನೇರ ಬಂಡವಾಳ ನಮ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಂದ ತನಗೆ ಬೇಕಾದ ಉತ್ಪನ್ನಗಳ ಶೇ.30ರಷ್ಟು ಪಡೆಯುವುದರಿಂದ ಭಾರತದ ಉತ್ಪಾದನಾ ಕ್ಷೇತ್ರಕ್ಕೆ (Manufacturing Sector) ಹೆಚ್ಚಿನ ಒತ್ತು ದೊರೆತು, ಉತ್ಪಾದನೆ ವೃದ್ಧಿಯಾಗುತ್ತದೆ.

ಈ ವಾದಗಳನ್ನು ಅರ್ಥಶಾಸ್ತ್ರಜ್ಞರು ಮಾತ್ರ ಮಂಡಿಸಿಲ್ಲ. ಇವುಗಳ ಜೊತೆ, ನಮ್ಮ ರಾಷ್ಟ್ರದ ಪ್ರಧಾನಿ ಮನಮೋಹನ್‌ಸಿಂಗ್ ಮತ್ತು ವಾಣಿಜ್ಯ ವ್ಯವಹಾರಗಳ ಸಚಿವರಾದ ಆನಂದ್ ಶರ್ಮ ಸಹ ತಮ್ಮ ದನಿಗೂಡಿಸಿದ್ದಾರೆ.

ಈ ವಾದಗಳ ಸತ್ಯಾಸತ್ಯತೆಗಳನ್ನು ವಿಶ್ಲೇಷಣಾ ಒರೆಗಲ್ಲಿಗೆ ಹಚ್ಚಿ, ತಮ್ಮ ಭಿನ್ನಾಭಿಪ್ರಾಯಗಳನ್ನು ದೇವಿಂದರ್ ಶರ್ಮರಂತಹ ಆಹಾರ ಮತ್ತು ಕೃಷಿ ನೀತಿಗಳ ತಜ್ಞರು ಮುಂದಿಟ್ಟಿದ್ದಾರೆ. ಅವರ ನಿಲುವುಗಳು:



1) ವಿದೇಶಿ ನೇರ ಬಂಡವಾಳದಿಂದ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ 10 ಮಿಲಿಯನ್ ಕೆಲಸಗಳು ಸೃಷ್ಟಿಯಾಗುವುದೆಂಬ ವಾದದಲ್ಲಿ ಹುರುಳಿಲ್ಲ. ಅಮೆರಿಕಾದಲ್ಲಿ, ಸಘಟಿತ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಾಲ್‌ಮಾರ್ಟ್ ದೊಡ್ಡ ಶಕ್ತಿಯಾಗಿ ಬೆಳೆದಿದೆ. ಅದರ ವಿಕ್ರಯ(Turnover) ಸುಮಾರು 400 ಬಿಲಿಯನ್ ಯುಎಸ್ ಡಾಲರ್‌ಗಳು. ಅದು ಸುಮಾರು 2.1 ಮಿಲಿಯನ್ ಮಂದಿಗೆ ಉದ್ಯೋಗ ನೀಡಿದೆ. ಅಚ್ಚರಿಯ ವಿಷಯವೆಂದರೆ ಭಾರತ ಚಿಲ್ಲರೆ ವ್ಯಾಪಾರ ಕ್ಷೇತ್ರದ ವಿಕ್ರಯವೂ ಸಹ 400 ಮಿಲಿಯನ್ ಯುಎಸ್ ಡಾಲರ್‌ಗಳು. ಆದರೆ ಇಲ್ಲಿ 12 ಮಿಲಿಯನ್ ಅಂಗಡಿ ಮುಂಗಟ್ಟುಗಳಿವೆ ಮತ್ತು ಅವುಗಳಲ್ಲಿ ಸುಮಾರು 44 ಮಿಲಿಯನ್‌ಮಂದಿ ಕೆಲಸ ಮಾಡುತ್ತಿದ್ದಾರೆ. ವಿಷಯ ಹೀಗಿರಬೇಕಾದರೆ, ಭಾರತದ ಚಿಲ್ಲರೆ ವ್ಯಾಪಾರ ಕ್ಷೇತ್ರವೇ ಹೆಚ್ಚಿನ ಉದ್ಯೋಗಗಳನ್ನು ಹೊಂದಿದೆ. ಆದುದರಿಂದ ಈ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ನುಸುಳಿದರೆ, ಅಧಿಕ ಸಂಖ್ಯೆಯ ಜನರ ಬದುಕುಗಳು ನಾಶವಾಗುತ್ತವೆ.

ಇಂಗ್ಲೆಂಡ್‌ನ ಒಂದು ಉದಾಹರಣೆಯನ್ನು ಗಮನಿಸೋಣ. ಅಲ್ಲಿಯ ಎರಡು ಬೃಹತ್ ಚಿಲ್ಲರೆ ವ್ಯಾಪಾರ ಕಂಪನಿಗಳು–ಟೆಸ್ಕೊ(Tesco) ಮತ್ತು ಸೈನ್ಸಬರಿ(Sainsbvry). ಇವೆರಡೂ ಕಂಪನಿಗಳು ಎರಡು ವರ್ಷಗಳಲ್ಲಿ ಸುಮಾರು 24,000 ಉದ್ಯೋಗಗಳನ್ನು ಉಂಟುಮಾಡುತ್ತೇವೆ ಎಂದು ಘೋಷಿಸಿದ್ದವು. ಆದರೆ ಬ್ರಿಟೀಷ್ ಸರ್ಕಾರದ ಒಂದು ತನಿಖಾ ವರದಿಯ ಪ್ರಕಾರ, ಯಾವ ಹೊಸ ಉದ್ಯೋಗಗಳೂ ಸೃಷ್ಟಿಯಾಗಲಿಲ್ಲ, ಬದಲಿಗೆ ಮೇಲಿನ ಎರಡು ಕಂಪನಿಗಳು ಸುಮಾರು 850 ಕೆಲಸಗಾರರನ್ನು ತಮ್ಮ ಕೆಲಸದಿಂದ ಹೊರಹಾಕಿದ್ದವು! ಹೀಗೆ, ತಮ್ಮ ದೇಶಗಳಲ್ಲೇ ಕೆಲಸಗಳನ್ನು ಸೃಷ್ಟಿಸಲಾಗದ ಘಟಕಗಳು ಭಾರತದಲ್ಲಿ ಹೆಚ್ಚುವರಿ ಕೆಲಸಗಳನ್ನು ಸೃಷ್ಟಿಸುತ್ತವೆ ಎಂಬುದು ಹುಸಿ ನಿರೀಕ್ಷೆಯೇ ಸರಿ.

2) ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿನ ವಿದೇಶಿ ನೇರ ಬಂಡವಾಳ ರೈತರಿಗೆ ಸುಮಾರು ಶೇ. 30ರಷ್ಟು ಹೆಚ್ಚುವರಿ ವರಮಾನ ನೀಡುತ್ತದೆ ಎಂಬುದು ಸತ್ಯಕ್ಕೆ ದೂರವಾದ ವಿಚಾರ. ಅಮೆರಿಕಾದಲ್ಲಿ ವಾಲ್‌ಮಾರ್ಟ್ ದೊಡ್ಡ ಚಿಲ್ಲರೆ ವ್ಯಾಪಾರ ಜಾಲಗಳುಳ್ಳ ಒಂದು ಬೃಹತ್ ಕಂಪನಿ. ಇದರಂತೆ ಇನ್ನೂ ಅನೇಕ ಕಂಪನಿಗಳೂ ಅಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವುಗಳು ಅಲ್ಲಿನ ಕೃಷಿ ವರಮಾನವನ್ನು ವೃದ್ಧಿಗೊಳಿಸಿದ್ದರೆ, ಅಮೆರಿಕಾ ಸರ್ಕಾರ ಕೃಷಿಕರಿಗೆ 'ಏಕೆ ಅಪಾರ ಪ್ರಮಾಣದ ಸಹಾಯಧನ(Subsidy)ವನ್ನು ನೀಡುತ್ತಲೇ ಬಂದಿದೆ? 2008ರ ಅಮೆರಿಕಾದ ಆಹಾರ ವಿಧೇಯಕದಲ್ಲಿ ಸರ್ಕಾರ ಕೃಷಿಗೆ ಒದಗಿಸಿದ ಸಹಾಯಧನದ ಮೊತ್ತ 307 ಬಿಲಿಯನ್ ಯುಎಸ್ ಡಾಲರ್‌ಗಳು! ಇದಕ್ಕಾಗಿ ಮುಂದಿನ ಐದು ವರ್ಷಗಳಿಗೆ ಆಯವ್ಯಯದಲ್ಲಿ ಸಹಾಯಧನದ ಪ್ರಾವಧಾನ(Provision) ಮಾಡಲಾಗಿತ್ತು. ವಿಶ್ವ ವ್ಯಾಪಾರ ಸಂಸ್ಥೆಯ ನಿಬಂಧನೆಗಳ ಅನ್ವಯ ಈ ಸಹಾಯಧನ GREEN Box ವಿಭಾಗದಲ್ಲಿ ಸೇರ್ಪಡೆಯಾಗುತ್ತದೆ. ಈ GREEN Box ಸಹಾಯಧನ ಹಿಂತೆಗೆದುಕೊಂಡರೆ, ಅಮೆರಿಕಾದ ಕೃಷಿ ಕ್ಷೇತ್ರ ಕುಸಿಯುತ್ತದೆ! OECD ದೇಶಗಳಲ್ಲಿ (30) ಸಹ ಇದೇ ಪರಿಸ್ಥಿತಿ ಇರುವುದು ಕಂಡುಬರುತ್ತದೆ. 2010ರ ಒಂದು ವರದಿಯ ಪ್ರಕಾರ ಕೃಷಿ ಸಹಾಯಧನದ ಪ್ರಮಾಣ 2009ರಲ್ಲಿ ಸುಮಾರು ಶೇ. 22ರಷ್ಟು ಏರಿತು. 2009ರಲ್ಲಿ ಈ ಕೈಗಾರೀಕೃತ ದೇಶಗಳು (Industrialist Nations) ಸುಮಾರು ರೂ. 12.60 ಲಕ್ಷ ಕೋಟಿ ಸಹಾಯಧನವನ್ನು ಕೃಷಿ ವಲಯಕ್ಕೆ ನೀಡಿದವು. ಇಷ್ಟಾದರೂ, ಯುರೋಪ್‌ನಲ್ಲಿ ಅಧಿಕ ಸಂಖ್ಯೆಯಲ್ಲಿ ಕೃಷಿಕರು ತಮ್ಮ ಕ್ಷೇತ್ರಕ್ಕೆ ವಿದಾಯ ಹೇಳುತ್ತಿದ್ದಾರೆ. ಈ ದೇಶಗಳ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆ ಇಲ್ಲವೇ? ಅದರಿಂದ ಅಲ್ಲಿನ ರೈತರಿಗೆ ಸಹಾಯ ಸಿಗುತ್ತಿಲ್ಲವೇ? ಸಿಗುತ್ತಿದ್ದರೇ, ಈ ಮಟ್ಟದ ಸಹಾಯಧನ ಅವಶ್ಯಕವೇ ಎಂಬಿತ್ಯಾದಿ ಪ್ರಶ್ನೆಗಳು ತಲೆಯೆತ್ತುವುದು ಸಹಜ!

3) ದೊಡ್ಡ ಚಿಲ್ಲರೆ ವ್ಯಾಪಾರದ ಕಂಪನಿಗಳ ಬರುವಿಕೆಯಿಂದ ಮಧ್ಯವರ್ತಿಗಳ ಕಾರುಬಾರು ಕೊನೆಗೊಂಡು, ರೈತಾಪಿ ವರ್ಗಕ್ಕೆ ಒಳ್ಳೆಯ ಬೆಲೆ ಸಿಗುತ್ತದೆ ಎಂಬ ಅಂಶಕ್ಕೆ ಒತ್ತು ನೀಡಲಾಗುತ್ತಿದೆ. ಆದರೆ ನಮ್ಮ ಮುಂದಿರುವ ಸಾಕ್ಷ್ಯಗಳು ಬೇರೆಯೇ ಕಥೆಯನ್ನು ಹೇಳುತ್ತವೆ!! 20ನೇ ಶತಮಾನದ ಮೊದಲರ್ಧದಲ್ಲಿ ಅಮೆರಿಕಾದ ರೈತನೊಬ್ಬ ಒಂದು ಡಾಲರ್‌ನಷ್ಟು ಫಸಲನ್ನು ಮಾರಿದರೆ, ಅವನಿಗೆ ವರಮಾನದ ರೂಪದಲ್ಲಿ ಸಿಕ್ಕುತ್ತಿದ್ದದ್ದು 70 ಸೆಂಟುಗಳು ಎಂಬುದನ್ನು ಅನೇಕ ಅಧ್ಯಯನಗಳಿಂದ ಬಹಿರಂಗಗೊಂಡಿರುವ ವಿಚಾರ. 2005ರಲ್ಲಿ ಕೃಷಿಕರ ವರಮಾನ ಸುಮಾರು ಶೇ. 4ರಷ್ಟು ಇಳಿಯಿತು. ವಾಲ್‌ಮಾರ್ಟ್‌ನಂತಹ ದೊಡ್ಡ ಚಿಲ್ಲರೆ ವ್ಯಾಪಾರದ ಕಂಪನಿಗಳಿದ್ದರೂ ಹೀಗಾದದ್ದು ಏಕೆ?

ಚಿಲ್ಲರೆ ವ್ಯಾಪಾರದ ಜಾಲದಲ್ಲಿ ಮಧ್ಯವರ್ತಿಗಳಿಗೆ ಪ್ರಾಶಸ್ತ್ಯ ದೊರಕದೆ ಅವರು ಅಪ್ರಸ್ತುತರಾಗುತ್ತಾರೆ ಎಂಬುದು ಸಹ ಸರಿಯಾದ ನಿಲುವಲ್ಲ. ವಾಸ್ತವವಾಗಿ, ಮಧ್ಯವರ್ತಿಗಳ ಸಂಖ್ಯೆ ಇನ್ನೂ ಅಧಿಕವಾಗುತ್ತದೆ. ಹೊಸ ಬಗೆಯ ಮಧ್ಯವರ್ತಿಗಳು ತಲೆಎತ್ತುತ್ತಾರೆ–ಗುಣಮಟ್ಟ ನಿಯಂತ್ರಕರು (Quality Controllers) ಗುಣಮಟ್ಟ ನಿರ್ಣಾಯಕರು (Standardisers), ಪ್ರಮಾಣೀಕರಣ ಏಜೆನ್ಸಿಗಳು (Certification Agencies)(ಏಜೆಂಟರು), ಸಂಸ್ಕರಣಕಾರರು (Processors), ಪ್ಯಾಕೆಜಿಂಗ್ ಸಮಾಲೋಚಕರು (Packaging Consultants) ಮುಂತಾದವರು ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸಿ ರೈತರ ವರಮಾನಕ್ಕೇ ಕೈ ಹಾಕುತ್ತಾರೆ! ಅಲ್ಲದೆ, ದೊಡ್ಡ ಚಿಲ್ಲರೆ ವ್ಯಾಪಾರ ಸಂಸ್ಥೆಗಳ ಗಾತ್ರ ಮತ್ತು ಖರೀದಿಯ ಶಕ್ತಿ ಬೆಳೆಗಾರರ ಬೆಲೆಗಳನ್ನು ಕುಗ್ಗಿಸುತ್ತವೆ. ಇಂಗ್ಲೆಂಡ್‌ನಲ್ಲಿ Tesco ಕಂಪನಿ ಬೆಳೆಗಾರರಿಗೆ ಶೇ. 4ರಷ್ಟು ಕಡಿಮೆ ಮೊತ್ತವನ್ನು ನೀಡಿತು. ಸ್ಕಾಟ್‌ಲ್ಯಾಂಡ್‌ನಲ್ಲಿನ ಸೂಪರ್ ಮಾರುಕಟ್ಟೆಗಳು ನೀಡಿದ ಕಡಿಮೆ ಬೆಲೆಗಳಿಂದ ಕ್ರುದ್ಧರಾದ ರೈತರು ತಮ್ಮ ಬೆಳೆಗಳಿಗೆ ಉತ್ತಮ ಧಾರಣೆ ದೊರಕಲು 'FAIR DEAL FOOD' ಎಂಬ ಸಮ್ಮಿಶ್ರ ಹೋರಾಟವನ್ನು ಹೂಡಿದ್ದಾರೆ.

4) ಚಿಲ್ಲರೆ ವಿದೇಶಿ ನೇರ ಬಂಡವಾಳ ವ್ಯಾಪಾರ ತನಗೆ ಬೇಕಾದ ಉತ್ಪನ್ನಗಳನ್ನು ಸಣ್ಣ ಮತ್ತು ಮಧ್ಯಮ ಉದ್ಯಮಗಳಿಂದ ಪಡೆಯುವುದರಿಂದ ನಮ್ಮ ದೇಶೀಯ ಉತ್ಪಾದಕನಿಗೆ ಲಾಭವಾಗುತ್ತದೆ ಎಂಬ ಸಚಿವ ಆನಂದ ಶರ್ಮರ ನಿಲುವು ಗಟ್ಟಿಮಣ್ಣಿನ ಆಧಾರ ಪಡೆದಿಲ್ಲ ಎಂದೇ ಹೇಳಬೇಕು. ಚಾಲ್ತಿಯಲ್ಲಿರುವ ವಿಶ್ವ ವ್ಯಾಪಾರ ಸಂಸ್ಥೆಯ ಒಡಂಬಡಿಕೆಗಳ ಅನ್ವಯ ದೊಡ್ಡ ಚಿಲ್ಲರೆ ವ್ಯಾಪಾರ ಸಂಸ್ಥೆಗಳು ಬೇರೆ ದೇಶಗಳಿಂದ ಉತ್ಪನ್ನಗಳನ್ನು ಪಡೆಯದಂತೆ ಭಾರತ ನಿರ್ಬಂಧಿಸಲು ಸಾಧ್ಯವಿಲ್ಲ. ವಿಶ್ವ ವ್ಯಾಪಾರ ಸಂಸ್ಥೆಯ ಸೂತ್ರಗಳ(Norms) ಪ್ರಕಾರ ಯಾವುದೇ ಸದಸ್ಯ ದೇಶ 1994ರ ಒಪ್ಪಂದದ ಅನುಚ್ಛೇದ 3 ಅಥವಾ 11ರ ಪ್ರಾವಧಾನಗಳಿಗೆ (Provisions)(ಪರಸ್ಪರ) ವಿರೋಧಿ ನಿಲುವಾದ ಹೂಡಿಕೆಯ ನಿರ್ಬಂಧವನ್ನು ಹೇರುವುದಕ್ಕೆ ಸಾಧ್ಯವಾಗುವುದಿಲ್ಲ.

ಈ ನಾಲ್ಕು ಅಂಶಗಳ ಜೊತೆಗೆ ಗಮನಿಸಲೇಬೇಕಾದ ಐದನೇ ಅಂಶವಿದೆ. ಅದು ಅಮೆರಿಕಾದ ಪೆನ್ನ ಸಿಲ್ವೇನಿಯಾ ವಿಶ್ವವಿದ್ಯಾಲಯ ಬಹಿರಂಗಗೊಳಿಸಿರುವ 'ವಾಲ್‌ಮಾರ್ಟ್ ಮತ್ತು ದಾರಿದ್ರ್ಯ' ಎಂಬ ಕಣ್ತೆರೆಸುವ ಅಧ್ಯಯನ. 1987ರ ಆಸುಪಾಸು ಕಾಲಾವಧಿಯಲ್ಲಿ ಯಾವ ಅಮೆರಿಕಾದ ರಾಜ್ಯಗಳಲ್ಲಿ ವಾಲ್‌ಮಾರ್ಟ್ ಭಂಡಾರಗಳು ಹೆಚ್ಚಿದ್ದವೋ, ಅಲ್ಲಿ ಅವು 1999ರ ವೇಳೆಗೆ ದಾರಿದ್ರ್ಯದ ಪ್ರಮಾಣ ವೃದ್ಧಿಸಿದ್ದವು ಎಂಬ ಗಹನವಾದ ವಿಚಾರವನ್ನು ಈ ಅಧ್ಯಯನ ಮಂಡಿಸಿತು. ಆದರೆ ನಮ್ಮ ಕೇಂದ್ರ ಸರ್ಕಾರ ಈ ವಿಚಾರದ ಬಗೆಗೆ ಏನನ್ನೂ ಮಾತನಾಡುತ್ತಿಲ್ಲ! ಹಸಿವು, ಬಡತನ, ಅಸಮಾನತೆಗಳಿಂದ ತತ್ತರಿಸುತ್ತಿರುವ ನಮ್ಮ ರಾಷ್ಟ್ರಕ್ಕೆ ಈ ಅಧ್ಯಯನ ಒಂದು ಎಚ್ಚರಿಕೆಯ ಗಂಟೆಯಾಗಬೇಕು. ಈ ಸಂದರ್ಭದಲ್ಲಿ, ಇನ್ನೂ ಅನೇಕ ಅಂಶಗಳನ್ನು ಪ್ರಸ್ತಾಪಿಸಬಹುದು. ಆದರೆ ಸ್ಥಳದ ಅಭಾವದಿಂದ ಮಾಡಲಾಗುತ್ತಿಲ್ಲ.

ಎಡಪಕ್ಷಗಳು ವಿದೇಶಿ ನೇರ ಬಂಡವಾಳ ಭಾರತದ ಬಹುಬ್ರಾಂಡ್‌ಗಳ ಚಿಲ್ಲರೆ ವ್ಯಾಪಾರಕ್ಕೆ ಲಗ್ಗೆ ಹಾಕುವುದನ್ನು ವಿರೋಧಿಸಿವೆ. ನಮ್ಮ ಆರ್ಥಿಕತೆಯ ಎಲ್ಲ ಎಂಟು ಮೂಲಭೂತ ಕ್ಷೇತ್ರಗಳು ಹಿನ್ನಡೆ ಅನುಭವಿಸುತ್ತಿವೆ. ಆರ್ಥಿಕ ಖೋತಾ (Fiscal Deficit)

ಇತ್ತೀಚೆಗೆ ಅಮೆರಿಕಾದ ಅಧ್ಯಕ್ಷ ಬಾರಕ್ ಒಬಾಮ ಭಾರತದ ಆರ್ಥಿಕ ಕ್ಷೇತ್ರದ ಬಗೆಗೆ ಮಾತನಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಮ್ಮ ರಾಷ್ಟ್ರದಲ್ಲಿ ಬಂಡವಾಳ ಹೂಡಿಕಾ ವಾತಾವರಣ ಸಮರ್ಪಕವಾಗಿಲ್ಲ ಎಂಬುದು ಅವರ ಅಂಬೋಣ. ಆದುದರಿಂದ ನಮ್ಮ ಆರ್ಥಿಕ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸುಧಾರಣೆಗಳು ಜಾರಿಯಾಗಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ಇದು ಒಂದು ಸಾರ್ವಭೌಮ ರಾಷ್ಟ್ರದ ಆಂತರಿಕ ವಿಷಯಗಳಲ್ಲಿ ನೇರ ಹಸ್ತಕ್ಷೇಪ. ಈ ರೀತಿ ಅಮೆರಿಕಾ ತಾಕೀತು ಮಾಡುತ್ತಿರುವುದು ಇದು ಮೊದಲನೇ ಬಾರಿಯೇನು ಅಲ್ಲ. ಅದರ ಧಾರ್ಷ್ಟ್ಯ ತಿಳಿದಿದ್ದೇ. ಆದರೆ ನಮ್ಮ ಘನ ಸರ್ಕಾರಗಳು ಮಾನ, ಮರ್ಯಾದೆ ಎಲ್ಲ ಬಿಟ್ಟು ವಿಶ್ವದ ದೊಡ್ಡಣ್ಣನಿಗೆ ಡೊಗ್ಗು ಸಲಾಮ್ ಹಾಕುತ್ತ ಬಂದಿವೆ.

ಹಿಗ್ಗುತ್ತಲೆ ಇದೆ. ಹಣದುಬ್ಬರ ಜಾಸ್ತಿಯಾಗುತ್ತಿದೆ. ಇವೆಲ್ಲ ನಕಾರಾತ್ಮಕ ಅಂಶಗಳು ಸಾಮಾನ್ಯ ಜನರನ್ನು ಕಂಗೆಡಿಸಿವೆ. ಪರಿಸ್ಥಿತಿ ಹೀಗಿರಬೇಕಾದರೆ, ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳದ ಪ್ರವೇಶ ಆಘಾತಕಾರಿ ಪರಿಣಾಮಗಳನ್ನು ಬೀರುತ್ತವೆ ಎಂಬುದು ಅವುಗಳ ಸ್ಪಷ್ಟ ನಿಲುವು. ಅಲ್ಲದೆ ಚಿಲ್ಲರೆ ವ್ಯಾಪಾರದ ದೊಡ್ಡ ಕಂಪನಿಗಳು ಕೊಳ್ಳುವ ಧಾರಣೆ (Purchasing Price)ಯ ಮೇಲೂ ದೊಡ್ಡ ಪ್ರಭಾವ ಬೀರುವುದರಿಂದ ನಮ್ಮ ಬೆಳೆಗಳ ಮಾದರಿ(Cropping Pattern)ಯ ಮೇಲೂ ವ್ಯತಿರಿಕ್ತ ಪರಿಣಾಮಗಳು ಬೀರುವ ಸಾಧ್ಯತೆ ಹೆಚ್ಚು. ಇದು ನಮ್ಮ ರಾಷ್ಟ್ರದ ಆಹಾರ ಸುಭದ್ರತೆಗೆ ಗಂಡಾಂತರಕಾರಿ ವಿಷಯವಾಗಿ ಪರಿಣಮಿಸುತ್ತದೆ. ಎಂಬುದನ್ನು ಕೂಡ ಎಡಪಕ್ಷಗಳು ಪ್ರತಿಪಾದಿಸಿವೆ.

ಎರಡು ದಶಕಗಳ ಹಿಂದೆ, ಈ ಕಾಲಘಟ್ಟದ ಜಾಗತೀಕರಣದ ದುಷ್ಪರಿಣಾಮಗಳ ಕುರಿತು ಎಡಪಕ್ಷಗಳು, ಪ್ರಜಾತಾಂತ್ರಿಕ ಪಕ್ಷಗಳು, ಗುಂಪುಗಳು, ಪುರೋಗಾಮಿ ಸಂಘಟನೆಗಳು ಕರಾರುವಕ್ಕಾಗಿ ಪ್ರತಿಕ್ರಿಯಿಸಿದ್ದವು. ಆಗ ಅನೇಕರು ಅವುಗಳನ್ನು ಮೂದಲಿಸಿದ್ದರು. ಆದರೆ ಕ್ರಮೇಣ, ಅವುಗಳು ಮುಂದಿಟ್ಟ ಎಚ್ಚರಿಕೆಯ ಪ್ರತಿಕ್ರಿಯೆಗಳು ನಿಜವಾಗತೊಡಗಿದವು. ಮೊದಲು, ತುಂಬ ಹರ್ಷ, ಕೇಕೆಗಳಿಂದ ಜಾಗತೀಕರಣವನ್ನು ಸ್ವಾಗತಿಸಿದ ನಮ್ಮ ರಾಷ್ಟ್ರದ ಬಂಡವಾಳಿಗರು, ಕೈಗಾರಿಕೋದ್ಯಮಿಗಳು ಮುಂತಾದವರು ನಂತರ LEVEL PLAYING FIELD ಇರಬೇಕು. ಇಲ್ಲದಿದ್ದರೆ ನಮ್ಮ ವ್ಯಾಪಾರ ಸಂಚಕಾರಕ್ಕೆ ಒಳಗಾಗುತ್ತದೆ ಎಂದು ವಾದಿಸತೊಡಗಿದರು!

ಇಂತಹ ಪ್ರಮುಖ ವಿಷಯದ ಬಗೆಗೆ ನಮ್ಮ ರಾಷ್ಟ್ರದ ಪ್ರಧಾನ ವಿರೋಧ ಪಕ್ಷ ಬಿಜೆಪಿಗೂ ಇಬ್ಬಂದಿ ನೀತಿ. 2002ರಲ್ಲಿ ಕೇಂದ್ರ ಸರ್ಕಾರದಲ್ಲಿ (ಎನ್‌ಡಿಎ) ಮಂತ್ರಿಯಾಗಿದ್ದ ಮುರಸೋಳಿ ಮಾರನ್ ಚಿಲ್ಲರೆ ವ್ಯಾಪಾರದಲ್ಲಿ ಶೇ. 100ರಷ್ಟು ವಿದೇಶಿ ಬಂಡವಾಳ ಪ್ರವೇಶಕ್ಕೆ ಅವಕಾಶವಿರಬೇಕೆಂಬ ಶಿಫಾರಸ್ಸನ್ನು ನೀಡಿದ್ದರು. ಎನ್‌ಡಿಎ 2004ರಲ್ಲಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಪ್ರವೇಶದ ಬಗೆಗೆ ಸಹಮತ ವ್ಯಕ್ತಪಡಿಸಿತ್ತು. ಈಗ, ಬಿಜೆಪಿ ಉಲ್ಟಾ ಹೊಡೆಯುತ್ತಿದೆ! ನೋಡಿ... ಹೇಗಿದೆ ಇದರ ದ್ವಂದ್ವ ನಿಲುವು! ಇದು ಅನುಕೂಲ ಸಿದ್ಧಾಂತದ ರಾಜಕೀಯವಲ್ಲದೆ ಮತ್ತೇನು?

ಇತ್ತೀಚೆಗೆ ಅಮೆರಿಕಾದ ಅಧ್ಯಕ್ಷ ಬಾರಕ್ ಒಬಾಮ ಭಾರತದ ಆರ್ಥಿಕ ಕ್ಷೇತ್ರದ ಬಗೆಗೆ ಮಾತನಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಮ್ಮ ರಾಷ್ಟ್ರದಲ್ಲಿ ಬಂಡವಾಳ ಹೂಡಿಕಾ ವಾತಾವರಣ ಸಮರ್ಪಕವಾಗಿಲ್ಲ ಎಂಬುದು ಅವರ ಅಂಬೋಣ. ಆದುದರಿಂದ ನಮ್ಮ ಆರ್ಥಿಕ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸುಧಾರಣೆಗಳು ಜಾರಿಯಾಗಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ಇದು ಒಂದು ಸಾರ್ವಭೌಮ ರಾಷ್ಟ್ರದ ಆಂತರಿಕ ವಿಷಯಗಳಲ್ಲಿ ನೇರ ಹಸ್ತಕ್ಷೇಪ. ಈ ರೀತಿ ಅಮೆರಿಕಾ ತಾಕೀತು ಮಾಡುತ್ತಿರುವುದು ಇದು ಮೊದಲನೇ ಬಾರಿಯೇನು ಅಲ್ಲ. ಅದರ ಧಾರ್ಷ್ಟ್ಯ ತಿಳಿದಿದ್ದೇ. ಆದರೆ ನಮ್ಮ ಘನ ಸರ್ಕಾರಗಳು ಮಾನ, ಮರ್ಯಾದೆ ಎಲ್ಲ ಬಿಟ್ಟು ವಿಶ್ವದ ದೊಡ್ಡಣ್ಣನಿಗೆ ಡೊಗ್ಗು ಸಲಾಮ್ ಹಾಕುತ್ತ ಬಂದಿವೆ.

ಒಂದು ದೇಶ ತನ್ನ ವಸ್ತುಸ್ಥಿತಿಗಳಿಗನುಗುಣವಾಗಿ ನೀತಿಗಳನ್ನು ಜಾರಿ ಮಾಡುತ್ತದೆ. ಅವುಗಳ ಬಗೆಗೆ ಆ ದೇಶದ ಜನರು ಯಾವ ರೀತಿಯ ಅಭಿಪ್ರಾಯವನ್ನಾದರೂ ವ್ಯಕ್ತಪಡಿಸಬಹುದು. ಅದು ಅವರ ಹಕ್ಕು. ಆದರೆ ಅಮೆರಿಕಾ ಲಗಾಯ್ತಿನಿಂದಲೂ ತನ್ನ ಹಿತದಲ್ಲಿ ಇತರ ದೇಶಗಳ ವಿಚಾರದಲ್ಲಿ ಮೂಗು ತೂರಿಸುತ್ತ, ಚುನಾಯಿತ ಸರ್ಕಾರಗಳನ್ನು ಉರುಳಿಸಿದೆ; ಬಂಡುಕೋರರಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿ ಅರಾಜಕ ಪರಿಸ್ಥಿತಿಯನ್ನು ಸೃಷ್ಟಿಸಿದೆ; ಭಯೋತ್ಪಾದಕ ರಾಷ್ಟ್ರವೆಂದು ಹಣೆಪಟ್ಟಿ ಕಟ್ಟಿ, ಯುದ್ಧವನ್ನು ಸಾರಿ, ಜನರ ಬದುಕನ್ನು ಬರ್ಬಾದು ಮಾಡಿದೆ. ಇದು ಅದರ ಚರಿತ್ರೆ. ಪ್ರಸ್ತುತ ಅಮೆರಿಕಾದಲ್ಲಿ ಅಧ್ಯಕ್ಷೀಯ ಚುನಾವಣೆಯ ಬಿಸಿ ನಿಧಾನವಾಗಿ ಏರುತ್ತಿದೆ. ಕಳೆದ ಕೆಲವು ವರ್ಷಗಳಿಂದ ಆರ್ಥಿಕ ಹಿಂಜರಿತದ ಹಿನ್ನಲೆಯಲ್ಲಿ ಅಮೆರಿಕಾ ತತ್ತರಿಸುತ್ತಿದೆ. ಭಾರತ ತನ್ನ ಸಗಟು ವ್ಯಾಪಾರದ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಬಾಗಿಲು ತೆರೆದಿಲ್ಲ(ಬಹುಬ್ರಾಂಡ್‌ಗಳ ವಿಷಯದಲ್ಲಿ). ಆದುದರಿಂದ ವಾಲ್‌ಮಾರ್ಟ್‌ನಂತಹ ಬೃಹತ್ ಅಂತರರಾಷ್ಟ್ರೀಯ ಮಟ್ಟದ ಬೃಹತ್ ಸಂಸ್ಥೆಗಳು (ಅಮೆರಿಕಾ ಮೂಲದ) ತಳವೂರಲು ಸಾಧ್ಯವಾಗಿಲ್ಲ. ಇದು ಅಮೆರಿಕಾದ ಕೆಂಗಣ್ಣಿಗೆ ಗುರಿಯಾಗಿದೆ. ಹೀಗಾಗಿ ಒಬಾಮ ಮೇಲಿನ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ! ಆದರೆ ಅಮೆರಿಕಾದ ಈ ಮಧ್ಯಪ್ರವೇಶಕ್ಕೆ ಹಲವು ರಾಜಕೀಯ ಪಕ್ಷಗಳು ತಮ್ಮ ಆಕ್ಷೇಪವನ್ನೂ ವ್ಯಕ್ತಪಡಿಸಿವೆ ಇದು ಸ್ವಾಗತಾರ್ಹ ಬೆಳವಣಿಗೆ.

ಆಧಾರ: ಅನೇಕ ಮೂಲಗಳು ■

ಇತ್ತೀಚೆಗೆ ನಮ್ಮ ದೇಶದ ಚಿಲ್ಲರೆ ವ್ಯಾಪಾರದಲ್ಲಿ ಬಹುಪಾಲು ನೇರ ವಿದೇಶಿ ಹೂಡಿಕೆಗೆ ಮತ್ತು ವಿದೇಶಿ ಹೂಡಿಕೆಗಳಲ್ಲಿ ಹೆಚ್ಚಳಕ್ಕೆ ಒಪ್ಪಿಗೆ ಸೂಚಿಸುವ ನೀತಿಯನ್ನು ಸರ್ಕಾರ ಘೋಷಿಸಿತಷ್ಟೇ. ಸರ್ಕಾರದ ಈ ಘೋಷಣೆ ಹೊರಬಿದ್ದಕ್ಷಣ ಅಷ್ಟರ ತನಕ ದಿಕ್ಕಾಪಾಲಾಗಿದ್ದ ನಮ್ಮ ಪ್ರತಿಪಕ್ಷಗಳೆಲ್ಲವೂ ಒಂದುಗೂಡಿದವು. ಅವುಗಳು ನಡೆಸಿದ ಭಾರಿ ಪ್ರತಿಭಟನೆಯ ಪರಿಣಾಮವಾಗಿ ಇಡೀ ದೇಶದ ಕಾರ್ಯಕಲಾಪಗಳು ಒಂದು ದಿನದ ಮಟ್ಟಿಗೆ ಸ್ಥಗಿತಗೊಂಡವು. ಆ ಸಂದರ್ಭದಲ್ಲಿ ನನಗೆ ನೆನಪಾದ ಸೂಕ್ತಿಯೊಂದು ಹೀಗಿದೆ: 'ದೇವತೆಗಳಿಗೆ ಯಾರನ್ನಾದರೂ ನಾಶಪಡಿಸಬೇಕೆಂಬ ಇಚ್ಛೆಯಾದಾಗ ಮೊದಲು ಅವರು ಅಂತಹವರಲ್ಲಿ ಅಧಿಕಾರದ ಹುಚ್ಚನ್ನು ಹುಟ್ಟಿಸಿಬಿಡುತ್ತಾರೆ'.

ವಾಲ್‌ಮಾರ್ಟ್ ಎಂಬ ಅಮೆರಿಕನ್ ವ್ಯಾಪಾರಿ ಸಂಸ್ಥೆಯನ್ನು ಭಾರತದೊಳಕ್ಕೆ ತೂರಿಸುವ ಈ ಯತ್ನ ಕಳೆದ ಕೆಲವು ವರ್ಷಗಳಿಂದ ಜಾರಿಯಲ್ಲಿದೆ. ವಾಲ್‌ಮಾರ್ಟ್ ಸಂಸ್ಥೆಯ ಅಂತಾರಾಷ್ಟ್ರೀಯ ವಿಭಾಗದ ಮುಖ್ಯಸ್ಥ ಜಾನ್ ಮೆಂಜರ್ ಎಂಬಾತ ಜೂನ್ 2005ರಷ್ಟು ಹಿಂದೆ ಕೊಟ್ಟಿದ್ದ ಹೇಳಿಕೆಯೊಂದು ಗಮನಾರ್ಹ: "ನಾವು ನೇರ ವಿದೇಶಿ ಹೂಡಿಕೆಯ ಪರವಾಗಿರುವ ಲಾಬಿಯಲ್ಲಿ ಶಕ್ತಿ ತುಂಬಿದ್ದೇವೆ; ವಿರೋಧಿ ಬಣವನ್ನು ಈಗಾಗಲೆ ಕೊಂಡುಕೊಂಡಿದ್ದೇವೆ."

ವಾಲ್‌ಮಾರ್ಟ್ ಸಂಸ್ಥೆ ಭಾರತ ಸರ್ಕಾರದ ಮೇಲೆ ಎಷ್ಟೊಂದು ಪ್ರಭಾವ ಬೀರಬಲ್ಲುದು ಎನ್ನುವುದನ್ನು ತೋರಿಸಲು ಒಂದು ನಿದರ್ಶನ ಸಾಕು: 2009ರ ಸೆಪ್ಟಂಬರ್ ತಿಂಗಳಲ್ಲಿ ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಭಾರತದಲ್ಲಿನ ಅಮೆರಿಕಾ ದೂತಾವಾಸ ಕಚೇರಿಗೊಂದು ಟೆಲಿಗ್ರಾಂ ಕಳುಹಿಸಿದ್ದರು. ಅದರಲ್ಲೇನಿತ್ತು? "ನೇರ ವಿದೇಶಿ ಹೂಡಿಕೆಯ ಮಾರ್ಗದರ್ಶಿ ಸೂತ್ರಗಳ ಬಗ್ಗೆ ವಾಣಿಜ್ಯ ಸಚಿವ ಶರ್ಮಾರ ನಿಲುವೇನು? ಅವರು ಯಾವ ವಲಯಗಳನ್ನು ಇನ್ನಷ್ಟು ಮುಕ್ತಗೊಳಿಸಲು ಯೋಚಿಸುತ್ತಿದ್ದಾರೆ? ಚಿಲ್ಲರೆ ವ್ಯಾಪಾರ ವಲಯವನ್ನು ಮುಕ್ತಗೊಳಿಸಲು ಯಾಕೆ ಹಿಂಜರಿಯುತ್ತಿದ್ದಾರೆ?" (ದ ಹಿಂದೂ – ವಿಕಿಲೀಕ್ಸ್ ಕೇಬಲ್ಸ್ ಲೇಖನಮಾಲೆ, 18.3.2011).

ವಿದೇಶಿ ಹೂಡಿಕೆದಾರರೆಲ್ಲರೂ ಶೇಕಡಾ 30ರಷ್ಟು ಮೌಲ್ಯದ ಸರಕುಗಳನ್ನು ಸ್ಥಳೀಯ ಮಾರುಕಟ್ಟೆಯಿಂದಲೇ ಖರೀದಿಸಬೇಕಾಗುತ್ತದೆ ಎಂಬ ಆಮಿಷವೊಂದನ್ನು ವಾಣಿಜ್ಯ ಸಚಿವರೀಗ ಜನತೆಗೆ ಒಡ್ಡಿದ್ದಾರೆ. ಆದರೆ ಮೇಲುನೋಟಕ್ಕೆ ಆಕರ್ಷಕವೆಂದು ತೋರುವ ಈ ಆಮಿಷಕ್ಕೆ ನಯಾಪೈಸೆಯ ಬೆಲೆಯಿಲ್ಲ. ಯಾಕೆಂದರೆ ವಾಲ್‌ಮಾರ್ಟ್‌ನ ಶೇಕಡಾ 90ರಷ್ಟು ಸರಕುಗಳು ಬರುವುದೇ ಚೀನಾದಿಂದ ಎನ್ನುವುದು ಜನಜನಿತ ವಿಚಾರ. ಅಗ್ಗದ ಚೈನಾ ಮಾಲುಗಳಿಂದಾಗಿ ಈಗಾಗಲೆ ಸಂಕಷ್ಟಕ್ಕೊಳಗಾಗಿರುವ ಭಾರತದ ಉದ್ಯಮಗಳು ವಾಲ್‌ಮಾರ್ಟ್ ಆಗಮನದಿಂದ ಸಂಪೂರ್ಣ ನೆಲಕಚ್ಚಲಿವೆ. ಮತ್ತೊಂದು ಮುಖ್ಯ ವಿಷಯವೇನೆಂದರೆ ಗ್ಯಾಟ್ ಒಪ್ಪಂದದ ಮೂರನೆ ವಿಧಿಯ ಪ್ರಕಾರ ವಿದೇಶಿ ಸಂಸ್ಥೆಗಳು ಇಂತಿಷ್ಟೇ ಮೊತ್ತದ ಸರಕುಗಳನ್ನು ಸ್ಥಳೀಯ ಉದ್ಯಮಗಳಿಂದ ಖರೀದಿಸಲೇಬೇಕು ಎಂಬ ನಿಯಮವನ್ನು ಹೇರುವಂತಿಲ್ಲ.

ವಾಲ್‌ಮಾರ್ಟ್‌ನ ಆಗಮನದಿಂದ ಭಾರತದ ಮೇಲೆ ಧನಾತ್ಮಕ ಪರಿಣಾಮವಾಗಲಿದೆ ಎಂದು ನಂಬಲಾಗಿದೆ. ವ್ಯಂಗ್ಯದ ವಿಷಯವೇನೆಂದರೆ ಇಂತಹ ಒಂದು ಅಚಲ ನಂಬಿಕೆ ವಾಲ್‌ಮಾರ್ಟ್‌ನ ಹುಟ್ಟೂರಾದ ಅಮೆರಿಕಾದಲ್ಲೆ ಇಲ್ಲ. ಮೊನ್ನೆ ಮೊನ್ನೆ ಸೆಪ್ಟಂಬರ್ 14ರಂದು ನ್ಯೂಯಾರ್ಕ್‌ನ ಜನರು ವಾಲ್‌ಮಾರ್ಟ್ ಮಳಿಗೆಗಳನ್ನೆಲ್ಲ ಬಹಿಷ್ಕರಿಸಿದರು. ಅತ್ತ ಲಾಸ್ ಏಂಜಲಿಸ್ ನಗರದ ಪ್ರಜೆಗಳು ವಾಲ್‌ಮಾರ್ಟ್ ವಿರುದ್ಧ ಪ್ರತಿಭಟನಾ ರ್‍ಯಾಲಿ ನಡೆಸಿ "ಲಾಸ್ ಏಂಜಲಿಸ್‌ನಲ್ಲಿ ನಮಗೆ ವಾಲ್‌ಮಾರ್ಟ್ ಬೇಡ" ಎಂದು ಘೋಷಣೆ ಕೂಗಿದರು. 'ಇಕನಾಮಿಕ್ ಡೆವಲಪ್‌ಮೆಂಟ್ ಕ್ವಾರ್ಟರ್ಲಿ' ಎಂಬ ನಿಯತಕಾಲಿಕ ನಡೆಸಿದ ಅಧ್ಯಯನವೊಂದರ ಪ್ರಕಾರ ವಾಲ್‌ಮಾರ್ಟ್ ಮಳಿಗೆಗಳು ಶುರುವಾದ ತಕ್ಷಣ ಶೇಕಡಾ 35ರಿಂದ 60ರಷ್ಟು ಸಣ್ಣ ಅಂಗಡಿಗಳು ನೆಲಕಚ್ಚುತ್ತವೆ.

ವಾಲ್‌ಮಾರ್ಟ್‌ನ ಆಗಮನದಿಂದ ಭಾರತದ ಮೇಲೆ ಧನಾತ್ಮಕ ಪರಿಣಾಮವಾಗಲಿದೆ ಎಂದು ನಂಬಲಾಗಿದೆ. ವ್ಯಂಗ್ಯದ ವಿಷಯವೇನೆಂದರೆ ಇಂತಹ ಒಂದು ಅಚಲ ನಂಬಿಕೆ ವಾಲ್‌ಮಾರ್ಟ್‌ನ ಹುಟ್ಟೂರಾದ ಅಮೆರಿಕಾದಲ್ಲೆ ಇಲ್ಲ. ಮೊನ್ನೆ ಮೊನ್ನೆ ಸೆಪ್ಟಂಬರ್ 14ರಂದು ನ್ಯೂಯಾರ್ಕ್‌ನ ಜನರು ವಾಲ್‌ಮಾರ್ಟ್ ಮಳಿಗೆಗಳನ್ನೆಲ್ಲ ಬಹಿಷ್ಕರಿಸಿದರು. ಅತ್ತ ಲಾಸ್ ಏಂಜಲಿಸ್ ನಗರದ ಪ್ರಜೆಗಳು ವಾಲ್‌ಮಾರ್ಟ್ ವಿರುದ್ಧ ಪ್ರತಿಭಟನಾ ರ್‍ಯಾಲಿ ನಡೆಸಿ "ಲಾಸ್ ಏಂಜಲಿಸ್‌ನಲ್ಲಿ ನಮಗೆ ವಾಲ್‌ಮಾರ್ಟ್ ಬೇಡ" ಎಂದು ಘೋಷಣೆ ಕೂಗಿದರು. 'ಇಕನಾಮಿಕ್ ಡೆವಲಪ್‌ಮೆಂಟ್ ಕ್ವಾರ್ಟರ್ಲಿ' ಎಂಬ ನಿಯತಕಾಲಿಕ ನಡೆಸಿದ ಅಧ್ಯಯನವೊಂದರ ಪ್ರಕಾರ ವಾಲ್‌ಮಾರ್ಟ್ ಮಳಿಗೆಗಳು ಶುರುವಾದ ತಕ್ಷಣ ಶೇಕಡಾ 35ರಿಂದ 60ರಷ್ಟು ಸಣ್ಣ ಅಂಗಡಿಗಳು ನೆಲಕಚ್ಚುತ್ತವೆ.

ವಾಲ್‌ಮಾರ್ಟ್ ನಿರ್ಮಿಸಲಿರುವ ಹವಾನಿಯಂತ್ರಿತ ಗೋದಾಮುಗಳಿಂದ ಭಾರತೀಯ ರೈತರಿಗೆ ಪ್ರಯೋಜನವಾಗಲಿದೆ ಎನ್ನಲಾಗುತ್ತಿದೆ. ಆದರೆ ಇದೊಂದು ಸುಳ್ಳು. ಅಂಕಿಸಂಖ್ಯೆಗಳನ್ನು ಸ್ವಲ್ಪ ಅವಲೋಕಿಸಿದರೆ ಸಾಕು, ಇದು ವಿಷದವಾಗುತ್ತದೆ. ಅಮೆರಿಕಾದಲ್ಲಿ ಒಟ್ಟು 1578 ಹವಾನಿಯಂತ್ರಿತ ಗೋದಾಮುಗಳಿವೆ. ಅವುಗಳ ಪೈಕಿ 839 ಸಾರ್ವಜನಿಕ ಕ್ಷೇತ್ರದಲ್ಲಿದ್ದರೆ ಉಳಿದ 739 ಗೋದಾಮುಗಳು ಖಾಸಗಿ ಅಥವಾ ಅರೆ ಖಾಸಗಿ ಒಡೆತನದಲ್ಲಿವೆ. ಸಾರ್ವಜನಿಕ ಕ್ಷೇತ್ರದ ಗೋದಾಮುಗಳ ಸಾಮರ್ಥ್ಯ

ನೇರ ವಿದೇಶಿ ಹೂಡಿಕೆಯಿಂದ ಯಾರ ಅಭಿವೃದ್ಧಿ ಆಗಲಿದೆ?

ರಾಜೇಂದ್ರ ಸಾಚಾರ್

ಕನ್ನಡಕ್ಕೆ: **ಸುರೇಶ ಭಟ್ ಬಾಕ್ರಬೈಲು**

ಎಷ್ಟಿದೆಯೆಂದರೆ ಪ್ರತಿ 100ರಲ್ಲಿ 76ರಷ್ಟು ಸರಕುಗಳನ್ನು ಅವುಗಳಲ್ಲಿ ಶೇಖರಿಸಬಹುದಾಗಿದೆ. ಅದೇ ವೇಳೆ ಖಾಸಗಿ ಮತ್ತು ಅರೆ ಖಾಸಗಿ ಗೋದಾಮುಗಳ ಒಟ್ಟು ಶೇಖರಣಾ ಸಾಮರ್ಥ್ಯ ಕೇವಲ 24%. ಈಗ ನಮ್ಮ ದೇಶದಲ್ಲಿ ಯಾವ ಪರಿಸ್ಥಿತಿ ಇದೆಯೆಂದು ನೋಡೋಣ. ಭಾರತದಲ್ಲಿರುವ ಒಟ್ಟು ಗೋದಾಮುಗಳ ಪೈಕಿ ಶೇಕಡಾ 95ಕ್ಕೂ ಅಧಿಕ ಗೋದಾಮುಗಳು ಖಾಸಗಿ ಒಡೆತನದಲ್ಲಿವೆ. ಸಾರ್ವಜನಿಕ ಕ್ಷೇತ್ರದಲ್ಲಿರುವುದು ಬರೀ 0.44% ಗೋದಾಮುಗಳು. ಈ ಸಂಖ್ಯೆಯನ್ನು ಹೆಚ್ಚಿಸಲು ವಾಲ್‌ಮಾರ್ಟ್‌ನ ಅನುಮತಿ ಬೇಕೇ?

ಜಾಗತೀಕರಣ ಸರ್ವರೋಗ ಪರಿಹಾರಿ ಎಂದು ಸರ್ಕಾರಗಳು ನಂಬುವುದನ್ನು ಕಂಡಾಗ ಮರುಕ ಮೂಡುತ್ತದೆ. ನೊಬೆಲ್ ಪ್ರಶಸ್ತಿ ವಿಜೇತ ಆರ್ಥಿಕ ತಜ್ಞ ಜೋಸೆಫ್ ಸ್ಟೀಗ್‌ಲಿಟ್ಜ್ ಸರ್ಕಾರಗಳ ಈ ನಂಬಿಕೆಯನ್ನು ತಿರಸ್ಕರಿಸುತ್ತಾರೆ. ಆತ, "ಜಾಗತೀಕರಣದಿಂದ ಸಮಾಜಕ್ಕೆ ಒಳ್ಳೆಯದಾಗುವುದಿಲ್ಲ. ಅದರಿಂದ ಬಡತನವನ್ನು ಕಮ್ಮಿ ಮಾಡುವ ಕೆಲಸವೂ ಆಗಿಲ್ಲ. ಅದು ಬಡವರಿಗೆ ಮತ್ತು ಸಮಾಜದ ಇನ್ನಿತರ ದುರ್ಬಲ ವರ್ಗಗಳಿಗೆ ಹಾನಿಕಾರಕವಾಗಿ ಪರಿಣಮಿಸಿದೆ. ವಾಸ್ತವದಲ್ಲಿ ಜಾಗತೀಕರಣದಿಂದಾಗಿ ಶ್ರೀಮಂತ ಮತ್ತು ಬಡ ರಾಷ್ಟ್ರಗಳ ನಡುವಿನ ಅಂತರ ಹೆಚ್ಚುತ್ತಿದೆ ಮತ್ತು ವಿಶ್ವದ ಬಹುತೇಕ ರಾಷ್ಟ್ರಗಳೊಳಗೆ ಅಸಮಾನತೆಗಳು ಬೆಳೆಯುತ್ತಿವೆ" ಎನ್ನುತ್ತಾರೆ.

ವಾಣಿಜ್ಯೋದ್ಯಮಿಗಳು ಹೂಡಿಕೆ ಮಾಡುವಂತೆ ಪ್ರೋತ್ಸಾಹಿಸಲು ಅವರಿಗೆ ಸಹಾಯಧನ ನೀಡುವ ಅಗತ್ಯವಿದೆ ಎಂದು ಹೇಳುವ ಕಾರ್ಪೊರೇಟ್ ವಲಯ ಬಂಡವಾಳಶಾಹಿಯ ಅತಿ ದೊಡ್ಡ ಬೆಂಬಲಿಗನಾದ ವಾರನ್ ಬಫೆಟ್ ಎಂಬ ಅಮೆರಿಕನ್ನನ ಮಾತುಗಳನ್ನು ಆಲಿಸಬೇಕು. ತಾನು ಈ ಒಂದು ಸಾರ್ವಜನಿಕ ಹೇಳಿಕೆಯನ್ನು ನೀಡಲೇಬೇಕೆಂದು ಆತ ಪರಿಗಣಿಸಿದ. "ಬಿಲಿಯಾಧಿಪತಿಗಳ ಬಗ್ಗೆ ಒಲವು ಹೊಂದಿರುವ ಕಾಂಗ್ರೆಸ್ ನನ್ನನ್ನು ಹಾಗೂ ನನ್ನ ಸ್ನೇಹಿತರನ್ನು ಸಾಕಷ್ಟು ಕಾಲ ವಿಪರೀತ ಮುದ್ದುಮಾಡಿದೆ. ಇದೀಗ ತ್ಯಾಗ ಮಾಡುವುದನ್ನು ಹಂಚಿಕೊಳ್ಳುವ ಕುರಿತು ನಮ್ಮ ಸರ್ಕಾರ ಗಂಭೀರವಾಗಿ ಚಿಂತಿಸುವ ಸಮಯ ಬಂದಿದೆ." ಕೇಂದ್ರ ಸರ್ಕಾರ ಈ ಮಾತುಗಳನ್ನು ಕಿವಿ ತೆರೆದು ಕೇಳಿಸಿಕೊಳ್ಳುತ್ತಿದೆಯೇ?

ಆರ್ಥಿಕ ಸುಧಾರಣೆಗಳು ಅಭಿವೃದ್ಧಿಯ ದರವನ್ನು ಹೆಚ್ಚಿಸುತ್ತವೆಯೆಂದು ಹೇಳುವ ಸುಧಾರಣೆಗಳ ಕಟ್ಟಾ ಅನುಯಾಯಿಗಳು ಸ್ವಲ್ಪ ಕಣ್ತೆರೆದು ನೋಡಬೇಕು. ದೇಶದಲ್ಲೇ ಅತ್ಯಂತ ಹೆಚ್ಚು ತಲಾ ಆದಾಯ ಹೊಂದಿರುವ ಪ್ರದೇಶವೆಂದರೆ ದೆಹಲಿ ಎಂದು ಹೇಳಲಾಗುತ್ತದೆ. ಆದರೆ 'ರಾಷ್ಟ್ರೀಯ ಸಂಖ್ಯಾಶಾಸ್ತ್ರೀಯ ಸಮೀಕ್ಷಾ ವರದಿ' ಪ್ರಸ್ತುತಪಡಿಸುವ ವಾಸ್ತವ ಸಂಪೂರ್ಣ ಭಿನ್ನವಾಗಿದೆ. ಆ ವರದಿಯಂತೆ ಧೆಹಲಿಯ ಶೇಕಡಾ 70ರಷ್ಟು ಕುಟುಂಬಗಳ ಮಾಸಿಕ ವೆಚ್ಚ ರೂ 1500ಕ್ಕೂ ಕಡಿಮೆ. ತನ್ನ ಅಭಿಪ್ರಾಯಗಳೇ ಸರಿಯೆಂಬ ದುರಹಂಕಾರಿ ನಿಲುವನ್ನು ಹೊಂದಿರುವ ಯೋಜನಾ ಅಯೋಗ ಕೂಡ, ಮನಸ್ಸಿಲ್ಲದಿದ್ದರೂ, ಇದನ್ನು ಬಡತನದ ಮಟ್ಟವೆಂದು ಒಪ್ಪಲೇಬೇಕಾಗಿದೆ.

ನಮ್ಮಲ್ಲಿ ಆಂತರಿಕ ಸಂಪನ್ಮೂಲಗಳ ಕೊರತೆ ಇರುವುದರಿಂದಲೆ ವಿದೇಶಿ ಹೂಡಿಕೆಯನ್ನು ಆಹ್ವಾನಿಸಬೇಕಾಗಿದೆ ಎನ್ನುತ್ತ ರಾಶಿಗಟ್ಟಲೆ ಅಂಕಿಸಂಖ್ಯೆಗಳನ್ನು ನಮ್ಮತ್ತ ಎಸೆಯುತ್ತದೆ ಕೇಂದ್ರ ಸರ್ಕಾರ. ಸರ್ಕಾರದ ಈ ಅಂಕಿಸಂಖ್ಯೆಗಳು ಬೇಕಂತಲೇ ನಮ್ಮನ್ನು ತಪ್ಪುದಾರಿಗೆಳೆಯುತ್ತವೆ. ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನ ದಾಖಲಿತ 500 ಕಂಪೆನಿಗಳ ಬಳಿ ಎಷ್ಟೊಂದು ನಗದು ಹಣವಿದೆ ಗೊತ್ತೇ? ಆ ಹಣದಿಂದ ದೇಶದ ಪ್ರಸಕ್ತ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು (2,00,000 ಮೆವಾ) ಎರಡು ಪಟ್ಟು ಹೆಚ್ಚಿಸಬಹುದು ಅಥವಾ ವರ್ಷಂಪ್ರತಿ 40,000ಕ್ಕೂ ಅಧಿಕ ಕಿಮೀ ಉದ್ದದ, 6 ಓಣಿಗಳ ಹೆದ್ದಾರಿಯನ್ನು ನಿರ್ಮಿಸಬಹುದು (ಸದ್ಯದ ಸಾಮರ್ಥ್ಯ 800 ಕಿಮೀ) (ಇಕನಾಮಿಕ್ ಟೈಮ್ಸ್, 20.8.2012). ಲಭ್ಯ ಅಂಕಿಸಂಖ್ಯೆಗಳ ಪ್ರಕಾರ ಮಾರ್ಚ್ 31, 2012ರಂದು ಮುಕ್ತಾಯಗೊಂಡ ಆರ್ಥಿಕ ವರ್ಷದ ಕೊನೆಯಲ್ಲಿ ಈ ಕಂಪೆನಿಗಳ ಬಳಿ 9.3 ಲಕ್ಷ ಕೋಟಿ ರೂಪಾಯಿಗೂ (160 ಬಿಲಿಯ ಡಾಲರು) ಅಧಿಕ ಮೊತ್ತ ಲಭ್ಯವಿತ್ತು. ಇದೆಲ್ಲವೂ ನಗದು ಹಾಗೂ ಸುಲಭದಲ್ಲಿ ನಗದು ರೂಪಕ್ಕೆ ಪರಿವರ್ತಿಸಬಹುದಾದ ಹೂಡಿಕೆಗಳ ರೂಪದಲ್ಲಿತ್ತು.

ಭಾರತದಲ್ಲಿ ಹೂಡಿಕೆಗೆ ಡಾಲರುಗಳ ಕೊರತೆಯಿದೆ ಎನ್ನುತ್ತಿರುವ ಸರ್ಕಾರ ವಾಸ್ತವದಲ್ಲಿ ನಟನೆ ಮಾಡುತ್ತಿದೆ. ಹೂಡಿಕೆಗೆ ದುಡ್ಡಿನ ಅಭಾವವಿದೆ ಎನ್ನುವುದು ಸುಳ್ಳು. ಯಾಕೆಂದರೆ 2011ರ ಆರ್ಥಿಕ ವರ್ಷಾಂತ್ಯದಲ್ಲಿ 9.8 ಲಕ್ಷ ಕೋಟಿ ರೂಪಾಯಿಗಳಷ್ಟು ಹಣ ಲಭ್ಯವಿತ್ತು ಮತ್ತು ಇದೊಂದು ದಾಖಲೆ ಮೊತ್ತ ಆಗಿತ್ತು. ಈ ಸಂಪತ್ತು ದಾಖಲಿತ 500 ಕಂಪೆನಿಗಳ ಪೈಕಿ ಅತ್ಯುಚ್ಚ ಸ್ಥಾನದಲ್ಲಿರುವಂತಹ 5 ಕಂಪೆನಿಗಳಲ್ಲಿ ಕೇಂದ್ರೀಕೃತವಾಗಿತ್ತು. ಆ 5 ಕಂಪೆನಿಗಳ ಬಳಿ ಸುಮಾರು 2.07 ಲಕ್ಷ ಕೋಟಿ ರೂಪಾಯಿಗಳಷ್ಟು ಹಣವಿತ್ತು. ಇದು ಅವುಗಳ ಬಳಿ ಇದ್ದ ಒಟ್ಟು ನಗದಿನ ಶೇಕಡಾ 22.3ರಷ್ಟು. ಹೀಗಿದ್ದರೂ ಈ ಕಂಪೆನಿಗಳಿಗೆ ಇಂಗ್ಲೆಂಡ್, ಆಸ್ಟ್ರೇಲಿಯ, ಬೆಲ್ಜಿಯಂನಂತಹ ದೇಶಗಳಲ್ಲಿ ಹಣ ಹೂಡಿಕೆಗೆ ಅನುಮತಿ ನೀಡಲಾಗಿದೆ. ಹೀಗೆ ಭಾರತದಿಂದ ಹಣವನ್ನು ವಿದೇಶಗಳಿಗೆ ಸಾಗಿಸುವ ಈ ವಂಚನೆಯಲ್ಲಿ ಕೇಂದ್ರ ಸರ್ಕಾರ ಷಾಮೀಲಾಗಿದೆ. ಪರಿಣಾಮ? ನಮ್ಮ ದೇಶವನ್ನು ಆರ್ಥಿಕ ಅಭಿವೃದ್ಧಿಯ ದಿಕ್ಕಿನಲ್ಲಿ ಕೊಂಡೊಯ್ಯಬಲ್ಲ ಕಲ್ಲಿದ್ದಲನ್ನು ಭಾರತದಲ್ಲಿ ಉತ್ಪಾದಿಸುವ ಬದಲು ಆಸ್ಟ್ರೇಲಿಯ ಮತ್ತಿತರ ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರ ಕೆಲಸ ಮಾಡುತ್ತಿರುವುದು ಭಾರತೀಯರ ಪರವಾಗಿಯೇ ಅಥವಾ ಹಳೆ ವಸಾಹತುಶಾಹಿ ಧಣಿಗಳ ಪರವಾಗಿಯೇ?

ವಿದೇಶಿ ಹೂಡಿಕೆಯ ಪರಿಣಾಮವಾಗಿ ಉತ್ಪತ್ತಿಯಾಗಲಿರುವ ಸಂಪತ್ತು ಕೆಳಮಟ್ಟದಲ್ಲಿರುವ ಜನರವರೆಗೆ ತೊಟ್ಟಿಕ್ಕಿ ಅವರ ಜೀವನವನ್ನು ಸುಧಾರಿಸಲಿದೆ ಎಂದು ಸರ್ಕಾರ ಹೇಳುತ್ತಿದೆ. ಜೋಸೆಫ್ ಸ್ಟೀಗ್‌ಲಿಟ್ಜ್ ಪ್ರಕಾರ ಈ ತೊಟ್ಟಿಕ್ಕುವ ಥಿಯರಿ ಒಂದು ಹುಸಿ ಥಿಯರಿ. ದೇಶದಲ್ಲಿ ಅತೀವ ಬಡತನದಿಂದ ಹುಟ್ಟಿರುವ ಅಸಮಾಧಾನ, ಅತೃಪ್ತಿಗಳನ್ನು ಸರ್ಕಾರದ ಈ ತೆರನಾದ ಸುಳ್ಳುಗಳು ಹತ್ತಿಕ್ಕಲಾರವು.

ನಮ್ಮ ದೇಶದಲ್ಲಿಂದು ಕಂಡುಬರುತ್ತಿರುವ ಇಷ್ಟೊಂದು ವಿಕಾರ ರೂಪದ ಬಡತನ ಮತ್ತು ಅಸಮಾನತೆಗಳು ಸಂವಿಧಾನದ ಕಲಮು 39(ಸಿ) ಅಡಿಯಲ್ಲಿ ನೀಡಲಾಗಿರುವ ನಿರ್ದೇಶನಗಳಿಗೆ ವಿರುದ್ಧವಾಗಿವೆ. ನಮ್ಮ ಸರ್ಕಾರಗಳು ಇದನ್ನು ಮನಗಾಣಬೇಕಾಗಿದೆ.... ದೇಶದ ಆರ್ಥಿಕ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವ ವೇಳೆ ಸಂಪತ್ತು ಮತ್ತು ಉತ್ಪಾದನಾ ಸಾಧನಗಳ ಕೇಂದ್ರೀಕರಣ ಆಗದಂತೆ ನೋಡಿಕೊಳ್ಳಬೇಕಾಗಿದೆ.... ಈ ನಿಟ್ಟಿನಲ್ಲಿ ಅಮೆರಿಕಾದ ಸುಪ್ರೀಂ ಕೋರ್ಟಿನ ನ್ಯಾಯಾಧೀಶ ಬ್ರೆನ್ನನ್ ಎಂಬುವವರ ಮಾತುಗಳು ಬಹಳ ಪ್ರಸ್ತುತವಾಗಿವೆ: "ಮಾನವನಲ್ಲಿ ಅತ್ಯಧಿಕ ಮಟ್ಟದ ಅಸಮಾಧಾನ ಉಂಟಾಗುವುದೇ ಆತ ತನಗಾದ ಅನ್ಯಾಯದ ಕುರಿತು ಕೊರಗುವಾಗ. ಅನಾರೋಗ್ಯವನ್ನಾದರೋ ತಾಳಿಕೊಳ್ಳಬಹುದು. ಆದರೆ ಅನ್ಯಾಯ ನಮ್ಮಲ್ಲಿ ವಸ್ತುಗಳನ್ನು ಕೆಡವಿಹಾಕುವ ಬಯಕೆಯನ್ನು ಹುಟ್ಟಿಸುತ್ತದೆ." ಬ್ರೆನ್ನನ್ ಕೊಟ್ಟ ಈ ಎಚ್ಚರಿಕೆಯನ್ನು ನೆನಪಿಸಿಕೊಡುವುದರಿಂದ ನಮ್ಮ ಕೇಂದ್ರ ಸರ್ಕಾರಕ್ಕೆ ತಿಳಿವಳಿಕೆ ಮೂಡಲೂಬಹುದು. ■

ನಮ್ಮಲ್ಲಿ ಒಂದು ಗೀಳು ಹಿಡಿದುಕೊಂಡಿದೆ. ವ್ಯವಸ್ಥೆ ಕೆಟ್ಟುಹೋಗಿದೆ ಎಂದು ಅಲವತ್ತುಕೊಳ್ಳುವುದು. ದೀರ್ಗದಂಡ ಭಾಷಣ ಚಚ್ಚುವುದು. ಉದ್ದುದ್ದ ಪ್ರಬಂಧ ಕೊರೆಯುವುದು. ಆದರೆ ಕುಸಿಯುತ್ತಿರುವ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ವೈಯಕ್ತಿಕವಾಗಿ ನಾವು ಯಾವ ಕಾಣಿಕೆಯನ್ನು ನೀಡಿದ್ದೇವೆ. ಮತಗಟ್ಟೆಗೆ ಹೋಗಿ ಎಷ್ಟು ಸಾರಿ ಮತ ಚಲಾಯಿಸಿದ್ದೇವೆ. ಆಮಿಷಕ್ಕೆ ಬಲಿಯಾಗುವ ಅಶಿಕ್ಷಿತ ಮತದಾರನಲ್ಲಿ ಯಾವ ಸಾಕ್ಷಿಪ್ರಜ್ಞೆಯನ್ನು ನಾವು ಮೂಡಿಸಿದ್ದೇವೆ? ಎಂಬ ಬಗ್ಗೆ ಯೋಚಿಸಬೇಕಾಗಿದೆ.

ಕರ್ನಾಟಕದಲ್ಲಿ ಪ್ರಜಾಸತ್ತಾತ್ಮಕ ರಾಜಕಾರಣದ ಕುಸಿತ

❑ ಮಲ್ಲಿಕಾರ್ಜುನ ಗುಮ್ಮಗೋಳ

ಪೀಠಿಕೆ: ಪ್ರಜಾಪ್ರಭುತ್ವದ ಮೌಲ್ಯಗಳು ಕುಸಿಯುತ್ತಿವೆಯೇ? ಹಾಗೊಂದು ಚರ್ಚೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಮಾದರಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಾಗಿನಿಂದ ನಡೆಯುತ್ತಲೇ ಇದೆ. ಅದು ಪ್ರಜಾಪ್ರಭುತ್ವದ ಬಗ್ಗೆ ಸಿನಿಕತೆಯನ್ನು ಹೊಂದಿದ ಮನಸ್ಸುಗಳ ಅಥವಾ ಎಡಪಂಥೀಯ ಯೋಚನೆಯನ್ನು ತಲೆಗೆ ಹಚ್ಚಿಕೊಂಡ ಮನಸ್ಸುಗಳ ಅಭಿಪ್ರಾಯವೇ? ಅಥವಾ ಪ್ರಜಾಪ್ರಭುತ್ವದ ಸಂಸ್ಥೆಗಳು ಅವುಗಳನ್ನು ನಡೆಸುವವರ ಸ್ವಾರ್ಥಕ್ಕೆ ಬಲಿಯಾಗಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಕಳೆದುಕೊಂಡು ಜನಸಾಮಾನ್ಯನ ಪಾಲಿಗೆ ಹೊರೆಯಾಗುತ್ತಿರುವ ಕಾರಣಕ್ಕಾಗಿ ಅದು ಚರ್ಚೆಗೆ ಒಳಗಾಗುತ್ತಿದೆಯೇ? ಇಂತಹ ಪ್ರಶ್ನೆಗಳನ್ನು ಮುಂದೆ ಇಟ್ಟುಕೊಂಡು ಪ್ರಚಲಿತ ರಾಜಕೀಯ ವಿದ್ಯಮಾನವನ್ನು ಅವಲೋಕಿಸಿದಾಗ, ಮೇಲಿನ ಎಲ್ಲ ಪ್ರಶ್ನೆಗಳು ನಿಜ ಎನ್ನಿಸುತ್ತವೆ. ಅದು ಭಾರತ ಮತ್ತು ಅದರ ಪ್ರಾಂತೀಯ ಸರಕಾರಗಳ ಮಟ್ಟದಲ್ಲೂ ಹೆಚ್ಚು ಕಡಿಮೆ ಒಂದೇ ತೆರನಾಗಿದೆ. ಅದಕ್ಕೆ ಕರ್ನಾಟಕವೇನು ಹೊರತಲ್ಲ.

ಪ್ರಜಾಪ್ರಭುತ್ವದ ಕುಸಿತ ಎಂದರೆ; ಜನರಿಗೆ ಸಿಗಬೇಕಾದ ಅನ್ನ, ನೀರು, ವಸತಿ, ರಸ್ತೆ, ವಿದ್ಯುತ್, ಶಿಕ್ಷಣ, ಉದ್ಯೋಗ, ಆರೋಗ್ಯ ಮತ್ತು ಭದ್ರತೆ ಮುಂತಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವಲ್ಲಿ ಸರಕಾರಗಳು ವಿಫಲವಾಗುವುದೇ ಪ್ರಜಾಪ್ರಭುತ್ವದ ಕುಸಿತವೆ? ಅಥವಾ ಪ್ರಜಾಪ್ರಭುತ್ವ ಸಂಸ್ಥೆಗಳ ಚುಕ್ಕಾಣಿಯನ್ನು ಹಿಡಿಯುವವರು ಅವುಗಳನ್ನು ಅಪಮೌಲ್ಯಗೊಳಿಸುವುದು ಮತ್ತು ಅಂತಹ ಅಪಮೌಲ್ಯಕ್ಕೆ ಕಾರಣವಾಗುವ ಚುನಾವಣೆಗಳಲ್ಲಿ ನಮ್ಮ ಮತಗಳನ್ನು ಯಾವುದೇ ಆಮಿಷಕ್ಕೆ ಬಲಿಯಾಗಿ ಮಾರಿಕೊಳ್ಳುವದು ಪ್ರಜಾಪ್ರಭುತ್ವ ಮೌಲ್ಯಗಳ ಕುಸಿತಕ್ಕೆ ಕಾರಣವಾಗುವದಿಲ್ಲವೇ?

ನಮ್ಮಲ್ಲಿ ಒಂದು ಗೀಳು ಹಿಡಿದುಕೊಂಡಿದೆ. ವ್ಯವಸ್ಥೆ ಕೆಟ್ಟುಹೋಗಿದೆ ಎಂದು ಅಲವತ್ತುಕೊಳ್ಳುವುದು. ದೀರ್ಗದಂಡ ಭಾಷಣ ಚಚ್ಚುವುದು. ಉದ್ದುದ್ದ ಪ್ರಬಂಧ ಕೊರೆಯುವುದು. ಆದರೆ ಕುಸಿಯುತ್ತಿರುವ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ವೈಯಕ್ತಿಕವಾಗಿ ನಾವು ಯಾವ ಕಾಣಿಕೆಯನ್ನು ನೀಡಿದ್ದೇವೆ. ಮತಗಟ್ಟೆಗೆ ಹೋಗಿ ಎಷ್ಟು ಸಾರಿ ಮತ ಚಲಾಯಿಸಿದ್ದೇವೆ. ಆಮಿಷಕ್ಕೆ ಬಲಿಯಾಗುವ ಅಶಿಕ್ಷಿತ ಮತದಾರನಲ್ಲಿ ಯಾವ ಸಾಕ್ಷಿಪ್ರಜ್ಞೆಯನ್ನು ನಾವು ಮೂಡಿಸಿದ್ದೇವೆ? ಎಂಬ ಬಗ್ಗೆ ಯೋಚಿಸಬೇಕಾಗಿದೆ.

ಬದಲಾಗುತ್ತಿರುವ ಜೀವನ ಶೈಲಿ ಮತ್ತು ಸಾಮಾಜಿಕ ಮೌಲ್ಯಗಳು ರಾಜಕೀಯ ರಂಗದಲ್ಲಿ ಇರುವವರಲ್ಲಿ ರಾಜಕಾರಣ ಎಂದರೆ ಸಾಮಾಜಿಕ ಸೇವೆ ಎಂಬ ಪ್ರಜ್ಞೆಯನ್ನು ಅಳಿಸಿಹಾಕಿವೆ. ರಾಜಕೀಯ ಎಂದರೆ ಅದು ಲಾಭದಾಯಕ ದಂಧೆಯಾಗಿ ಪರಿಣಮಿಸಿದೆ. ರಾಜಕೀಯ ಪಕ್ಷಗಳು ಬೇರೆ ಬೇರೆ ಆದರೆ ರಾಜಕಾರಣಿಗಳು ಒಂದೇ ಎಂಬ ನಂಬಿಕೆ ಎಲ್ಲೆಡೆ ಸಾರ್ವತ್ರಿಕವಾಗುತ್ತಿದೆ. ಅಧಿಕಾರಕ್ಕಾಗಿ ಏನು ಬೇಕಾದರು ಮಾಡಲು ಸಿದ್ಧವಾಗುವಂತಹ ಸನ್ನಿವೇಶವನ್ನು ಇಂದಿನ ರಾಜಕಾರಣ ಸೃಷ್ಟಿಮಾಡುತ್ತಿದೆ. ದುಬಾರಿಯಾಗುತ್ತಿರುವ ಚುನಾವಣೆಗಳು ರಾಜಕಾರಣಿಗಳನ್ನು ವಾಮ ಮಾರ್ಗವನ್ನು ಹಿಡಿಯುವಂತೆ ಮಾಡುತ್ತಿವೆ. ರಾಜಕೀಯ ಸಿದ್ಧಾಂತಗಳು ಗೌಣವಾಗಿ ಅಧಿಕಾರ ಲಾಲಸೆ ಹೆಚ್ಚಾಗುತ್ತಿದೆ. ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ರಾಜಕೀಯ ಸಿದ್ಧಾಂತ ಮತ್ತು ಪ್ರಜಾಪ್ರಭುತ್ವ ತತ್ವಗಳನ್ನು ಪುನಃಸ್ಥಾಪಿಸಬೇಕಾಗಿದೆ.

ಸಮ್ಮಿಶ್ರ ಸರಕಾರ: ಏಕ ಪಕ್ಷ ಪ್ರಾಬಲ್ಯ ಕೊನೆಗೊಂಡು ದಶಕಗಳೆ ಕಳೆದು ಹೋಗಿವೆ. ವಿಭಿನ್ನ ಹಿತಾಸಕ್ತಿಯ ಪ್ರಾದೇಶಿಕ ಪಕ್ಷಗಳು; ಅವು ಜಾತಿವಾರು, ಭಾಷಾವಾರು, ಅಥವಾ ವ್ಯಕ್ತಿ ಆಧಾರಿತವಾಗಿರಬಹುದು. ಅವುಗಳು ಇಂದು ಅಧಿಕಾರವನ್ನು ಹಿಡಿಯುತ್ತಿವೆ ಅಥವಾ ಸರಕಾರದಲ್ಲಿ ಪಾಲುದಾರವಾಗುತ್ತಿವೆ ಅಥವಾ ಸರಕಾರವನ್ನು ಹೊರಗಿನಿಂದಲೇ ನಿಯಂತ್ರಿಸುತ್ತಿವೆ. ಇಂತಹ ಪಕ್ಷಗಳಿಗೆ ರಾಷ್ಟ್ರೀಯ ಹಿತಾಸಕ್ತಿಗಿಂತ ಸ್ವಂತ ಹಿತಾಸಕ್ತಿಯೇ ಮೇಲಾಗಿರುತ್ತದೆ. ಇವು ರಾಜಕೀಯ ಮೌಲ್ಯಗಳನ್ನು ಗಾಳಿಗೆ ತೂರುತ್ತವೆ. ಅಂತಹ ರಾಜಕಾರಣ ಕರ್ನಾಟಕದಲ್ಲಿಯೂ ಸಹ ಬಹು ಹಿಂದೆಯೇ ಆರಂಭವಾಗಿದೆ.

ಆಪ್ರೇಶನ್ ಕಮಲ: ಕರ್ನಾಟಕದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಸಮ್ಮಿಶ್ರ ಸರಕಾರ ಪತನವಾದ ನಂತರ ಅತ್ಯಂತ ದೊಡ್ಡ ಪಕ್ಷವಾಗಿ ಬಿಜೆಪಿ ಚುನಾವಣೆಯಲ್ಲಿ ಗೆದ್ದು ಬಂದಿತು ಆದರೆ ಸರಕಾರ ರಚಿಸುವಷ್ಟು ಬಹುಮತ ಅದಕ್ಕೆ ಇರಲಿಲ್ಲ. ಈ ಕಾರಣಕ್ಕಾಗಿ ಅದು ಪಕ್ಷೇತರ ಮತ್ತು ಬೇರೆ ಪಕ್ಷದ ಶಾಸಕರನ್ನು ತನ್ನತ್ತ ಸೆಳೆದುಕೊಂಡು ಸರಕಾರ ರಚಿಸಿತು. ಶಾಸಕರಿಗೆ ಹಣ ಮತ್ತು ಅಧಿಕಾರದ ಆಮಿಷ ಒಡ್ಡಿ ಪ್ರಜಾಪ್ರಭುತ್ವದ ತತ್ವಗಳನ್ನು ಗಾಳಿಗೆ ತೂರಲಾಯಿತೆಂದು ಆರೋಪಿಸಲಾಯಿತು. ವಾಸ್ತವವಾಗಿ ಬಹುಪಾಲು ರಾಜಕಾರಣಿಗಳಿಗೆ ಸೈದ್ಧಾಂತಿಕ ಮೌಲ್ಯಗಳಿಗಿಂತ ಅಧಿಕಾರ ಹಿಡಿಯುವದೇ ಮೂಲ ಉದ್ದೇಶವಾಗಿರುತ್ತದೆ.

ಜಾತಿವಾದ ಮತ್ತು ಕೋಮುವಾದ: ಬಿಜೆಪಿಯೊಂದಿಗೆ ಸಮ್ಮಿಶ್ರ ಸರಕಾರ ರಚಿಸಿದ ದೇವೇಗೌಡರ ಜೆಡಿಎಸ್ ಪಕ್ಷ ಸಮ್ಮಿಶ್ರ ಸರಕಾರದಿಂದ ಹೊರಬಂದ ಮೇಲೆ, ಮತ್ತೆ ಮುಸ್ಲಿಂರನ್ನು ಒಲೈಸುವ ಸಲುವಾಗಿ ಅಲ್ಪಸಂಖ್ಯಾತರ ಸಮಾವೇಶ ಮಾಡುತ್ತದೆ. ನಾವು ಪಾಪವನ್ನು ತೊಳೆದುಕೊಂಡಿದ್ದೇವೆ ಎಂದು ಮುಖವಾಡ ತೋರಿಸುತ್ತದೆ. ಪ್ರತಿಯೊಂದು ಪಕ್ಷವು ತಮ್ಮ ಪಕ್ಷದ ಅಧ್ಯಕ್ಷ ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡುವಾಗ,

ಚುನಾವಣೆಯಲ್ಲಿ ಟಿಕೇಟ್ ನೀಡುವಾಗ ಜಾತಿ ಲೆಕ್ಕಾಚಾರ ಹಾಕುತ್ತವೆ.

ವೋಟ್ ಬ್ಯಾಂಕ್ ರಾಜಕಾರಣ: ಪ್ರಾದೇಶಿಕ ಭಾವನೆಗಳನ್ನು ವೋಟ್ ಬ್ಯಾಂಕ್ ಮಾಡಿಕೊಂಡು ಸರಕಾರದ ಗದ್ದುಗೆಗೆ ಏರುವ ಈ ಪಕ್ಷಗಳು ತಮ್ಮ ಸ್ವಹಿತಾಸಕ್ತಿಗೋಸ್ಕರ ಒಂದು ಸರಕಾರದ ಭದ್ರತೆಯ ಭವಿಷ್ಯವನ್ನು ನಿರ್ಧರಿಸುತ್ತವೆ ಎಂದ ಮೇಲೆ, ಸ್ಪಷ್ಟವಾದ ರಾಷ್ಟ್ರೀಯ ನೀತಿಯನ್ನು ಹಾಗೂ ನಿಗದಿತವಾದ ಗುರಿಯನ್ನು ಸಾಧಿಸಲು ಸಾಧ್ಯವೇ? ಖಂಡಿತ ಸಾಧ್ಯವಿಲ್ಲ. ಏಕೆಂದರೆ, ಸಮ್ಮಿಶ್ರ ಸರಕಾರ ವೆಂದರೆ "Give and Take" ಸಿದ್ಧಾಂತದ ಮೇಲೆ ಕೆಲಸಮಾಡುತ್ತದೆ. ಯಾವ ಪಕ್ಷ ಅಧಿಕಾರದಲ್ಲಿ ಭಾಗಿಯಾಗುವದಿಲ್ಲವೋ ಆ ಪಕ್ಷ ಪ್ರತಿನಿಧಿಸುವ ರಾಜ್ಯದ ಕಥೆ ಚಿಂತಾಜನಕ. ಆ ರಾಜ್ಯಕ್ಕೆ ಒಂದು ಬಿಡಿಗಾಸಿನ ನೆರವು ಸಿಗುವದಿಲ್ಲ. ಇಲ್ಲಿ ರಾಷ್ಟ್ರೀಯ ಕಲ್ಪನೆಯೆನ್ನುವದೇ ಇರುವದಿಲ್ಲ. ದೇಶ ಬೇಕಾದರೆ ಒಡೆದು ಹೋಗಲಿ ತಮ್ಮ ರಾಜ್ಯ ಒಂದು ಸುಭಿಕ್ಷವಾಗಿದ್ದರೆ ಸಾಕು ಎಂಬ ಮನೋಭಾವದ ಪಕ್ಷಗಳು ಕೇಂದ್ರಾಪಗಾಮಿ (Centrifugal) ವರ್ತನೆಯನ್ನು ಪ್ರತಿನಿಧಿಸುತ್ತವೆ.

ಸದನದಲ್ಲಿ ನಿರಾಸಕ್ತಿ: ಯಾವುದೇ ಗೊತ್ತುವಳಿ ಮಸೂದೆಯಾಗುವಲ್ಲಿ ಮತ್ತು ರಾಜ್ಯದ ಗಂಭೀರ ಸಮಸ್ಯೆಗಳ ಬಗ್ಗೆ ಗಮನ ಸೆಳೆಯುವ ವಿಷಯದ ಕುರಿತು ಚರ್ಚೆ ನಡೆಯುವುದೇ ಇಲ್ಲ. ಅದಕ್ಕೆ ಶಾಸಕರು ಸದನದಲ್ಲಿ ಹಾಜರಿದ್ದು ತಮ್ಮ ಕರ್ತವ್ಯವನ್ನು ನಿಬಾಯಿಸುವುದೇ ಇಲ್ಲ. ಆದರೆ ತಮಗೆ ಬೇಕಾದ ಸಂಬಳ, ಸಹಾಯ ಮತ್ತು ಸವಲತ್ತುಗಳನ್ನು ಏರಿಸಿಕೊಳ್ಳುವುದರಲ್ಲಿ ಅವರು ಯಾವತ್ತೂ ಹಿಂದೆ ಬೀಳುವುದಿಲ್ಲ.

ಸುಮಾರು 200 ವರ್ಷಗಳ ಬ್ರಿಟಿಷ್ ಆಳ್ವಿಕೆಯ ಫಲವಾಗಿ, ನಮ್ಮ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯ ಮೇಲೆ ಬ್ರಿಟನ್ ಮಾದರಿಯು ನೇರವಾದ ಪರಿಣಾಮವನ್ನು ಬೀರಿದೆ. ಬ್ರಿಟನ್‌ನಲ್ಲಿ ಇರುವಂತೆ ನಮ್ಮಲ್ಲಿಯೂ ಕೂಡಾ ಸಂಸದೀಯ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದಿದೆ. ಆದರೆ ಬ್ರಿಟನ್‌ನಲ್ಲಿ ಯಶಸ್ವಿಯಾದಂತೆ ನಮ್ಮ ದೇಶದಲ್ಲಿ ಸಂಸದೀಯ ವ್ಯವಸ್ಥೆ ಪರಿಣಾಮಕಾರಿಯೆನ್ನಿಸುತ್ತಿಲ್ಲ. ಅದಕ್ಕೆ ಹಲವಾರು ಕಾರಣಗಳು ಇರಬಹುದು. ಒಂದು, ಮತದಾರನಲ್ಲಿ ರಾಜಕೀಯ ಪ್ರಜ್ಞೆ ಜಾಗೃತವಾಗದಿರುವುದು. ಎರಡು, ರಾಜಕೀಯಕ್ಕೆ ಬರುವವರು ಪ್ರಾಮಾಣಿಕರಲ್ಲದಿರುವುದು.



ಇದರೊಟ್ಟಿಗೆ ನಾಗರಿಕ ಪ್ರಜ್ಞೆ, ದೇಶಾಭಿಮಾನ, ಸ್ವಹಿತ ಮತ್ತು ಕ್ಷಣಿಕ ಹಿತಕ್ಕಿಂತ ಸಾಮುದಾಯಿಕ ಮತ್ತು ಸಾರ್ವತ್ರಿಕ ಕಲ್ಯಾಣದ ಉದ್ದೇಶವಿಲ್ಲದಿರುವುದು. ಹೀಗೆ ಹಲವಾರು ನ್ಯೂನ್ಯತೆಗಳನ್ನು ನಾವು ಈ ವ್ಯವಸ್ಥೆಯಲ್ಲಿ ಹುಡುಕಬಹುದು. ಹೀಗಾಗಿ ಈ ದೇಶಕ್ಕೆ ಅಧ್ಯಕ್ಷೀಯ ಮಾದರಿಯ ಪ್ರಜಾಪ್ರಭುತ್ವ ಸೂಕ್ತ ಎಂದು ಅಲ್ಲಲ್ಲಿ ಚರ್ಚೆಗಳು ನಡೆದಿದ್ದವು. ಒಂದು ವೇಳೆ ಅಧ್ಯಕ್ಷೀಯ ಮಾದರಿಯನ್ನು ಜಾರಿಗೆ ತಂದರೆ ಆ ವ್ಯವಸ್ಥೆಯೂ ಸಹ ಅಡ್ಡ ಮಾರ್ಗ ಹಿಡಿದರೆ? ಇನ್ಯಾವ ವ್ಯವಸ್ಥೆಯನ್ನು ಹುಡುಕುವದು. ಆದ್ದರಿಂದ ಇರುವ ವ್ಯವಸ್ಥೆಯನ್ನು ಸಶಕ್ತಗೊಳಿಸುವ ಕೆಲಸವಾಗಬೇಕು.

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸದೆ ಇರುವದಕ್ಕೆ ರಾಜಕೀಯ ಪಕ್ಷಗಳು ಪ್ರಜಾಸತ್ತಾತ್ಮಕ ತತ್ವಗಳನ್ನು ಪಾಲಿಸದೆ ಇರುವದು ಹಾಗೂ ಸ್ಪಷ್ಟ ರಾಜಕೀಯ ಸಿದ್ಧಾಂತವನ್ನು ಹೊಂದದೆ ಇರುವದು ಕಾರಣವಾಗಿದೆ. ಇಂದಿನ ರಾಜಕೀಯ ವಿಘಟನ ಮತ್ತು ಸಮ್ಮಿಳನ (pregmentation and polarization)ದ ಕಾಲಘಟ್ಟದಲ್ಲಿ ಪಕ್ಷಗಳ ರಾಜಕೀಯ ಧ್ರುವೀಕರಣವಾಗಿ ಯಾವ ಸಿದ್ಧಾಂತ ಯಾವ ಪಕ್ಷದ್ದು ಎಂಬುದೆ ತಿಳಿಯದಂತಾಗಿದೆ. ಅಧಿಕಾರ ಮಾತ್ರ ಪಕ್ಷದಿಂದ ಪಕ್ಷಕ್ಕೆ ಬದಲಾಗಿದೆ. ಆದರೆ ಆಡಳಿತ ವೈಖರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಹೀಗಾಗಿ ಪಕ್ಷಗಳು ಬೇರೆ ಬೇರೆಯಾಗಿರಬಹುದು. ಆದರೆ ರಾಜಕಾರಣಿಗಳು ಒಂದೇ. ಅವರೆಲ್ಲರ ಒಂದೇ ಒಂದು ಸಿದ್ಧಾಂತವೆಂದರೆ ಅಧಿಕಾರವನ್ನು ಹಿಡಿಯುವದು.

ಭಾರತವು ಬಹು ಸಂಸ್ಕೃತಿಯ ನಾಡಾಗಿದೆ. ಭಾಷೆ-ವೇಷ, ಜಾತಿ-ಧರ್ಮ, ಆಹಾರ-ವಿಹಾರ ಹಾಗೂ ಆಚಾರ-ವಿಚಾರಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಹೀಗಾಗಿ ಬಹು ಸಂಸ್ಕೃತಿಯ ಐಕ್ಯತೆಯನ್ನು ಸಾಕಾರಗೊಳಿಸುವ ಸಲುವಾಗಿ ಸಂಯುಕ್ತ ಪದ್ಧತಿಯ ಸರಕಾರದ ಮಾದರಿಯನ್ನು ಅಸ್ತಿತ್ವಕ್ಕೆ ತರಲಾಯಿತು. ಭಾರತವು ರಾಜ್ಯಗಳ ಒಕ್ಕೂಟವಾಗಿದೆ ಎಂದು ಸಂವಿಧಾನ ಹೇಳುತ್ತದೆ. ಪ್ರತಿಯೊಂದು ರಾಜ್ಯಕ್ಕೂ ಪ್ರಮಾಣಾನುಸಾರ ಪ್ರಾತಿನಿಧ್ಯ ಹಾಗೂ ಅಗತ್ಯಾನುಸಾರ ಸೌಲಭ್ಯಗಳು ಲಭಿಸಬೇಕು. ಏಕ್ಯಾತೆಯಾಗಿ ದೇಶ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕು ಎಂಬುದು ಸಂವಿಧಾನ ಪಿತೃರ ಆಶೆಯಾಗಿತ್ತು.

ಬ್ರಿಟಿಷ್ ವಸಾಹತುಶಾಹಿಯಿಂದ ಮುಕ್ತಗೊಂಡು ಸಮಾರು 60 ದೇಶಗಳು ಬ್ರಿಟಿಷ್ ಮಾದರಿಯ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡವು. ಅದರಲ್ಲಿ ಭಾರತವೂ ಒಂದು. ಕಾಲಾಂತರದಲ್ಲಿ ಭಾರತವನ್ನು ಹೊರತುಪಡಿಸಿ ಮಿಕ್ಕೆಲ್ಲ ದೇಶಗಳು ಸಂಸದೀಯ ಪ್ರಜಾಪ್ರಭುತ್ವವನ್ನು ಕೊನೆಗೊಳಿಸಿಕೊಂಡು ಅಧ್ಯಕ್ಷೀಯ ಮಾದರಿಯ ಹಾಗೂ ಸಂವಿಧಾನಾತ್ಮಕ ಅರಸೊತ್ತಿಗೆ (Constitutional monarchy)ಯನ್ನು ಅಳವಡಿಸಿಕೊಂಡವು. ಇನ್ನೂ ಕೆಲ ರಾಷ್ಟ್ರಗಳು ಕಮ್ಯುನಿಷ್ಟ್ ಮಾದರಿಯನ್ನು ಅಪ್ಪಿಕೊಂಡವು. ರಾಜಕೀಯ ವಿಶ್ಲೇಷಕರ ಪ್ರಕಾರ ಪ್ರಜಾಪ್ರಭುತ್ವವಾದಿ ಅಮೆರಿಕ ಹಾಗೂ ಕಮುನಿಷ್ಟ್‌ವಾದಿ ರಷ್ಯಾದ ಪ್ರಭಾವಕ್ಕೆ ಸಿಕ್ಕು ಈ ವಸಾಹತುಶಾಹಿ ರಾಷ್ಟ್ರಗಳು ತಮ್ಮ ರಾಜಕೀಯ ಸಿದ್ಧಾಂತವನ್ನು ಬದಲಾಯಿಸಿಕೊಂಡವು. ಆದರೆ, ವಾಸ್ತವಿಕತೆ ಇದಕ್ಕಿಂತ ಭಿನ್ನವಾಗಿದೆ. ಅಲ್ಲಿನ ಸಂಸದೀಯ ಪ್ರಜಾಪ್ರಭುತ್ವ ಅಂತ್ಯಗೊಳ್ಳಲು ಅಲ್ಲಿಯ ರಾಜಕೀಯ ಪಕ್ಷಗಳು ಬಹು ಮುಖ್ಯ ಕಾರಣವಾದರೆ, ದುರಾಡಳಿತ ಮತ್ತು ಭ್ರಷ್ಟಾಚಾರ ಇತರ ಕಾರಣಗಳಾಗಿವೆ. ಈ ಮೇಲಿನ ದೋಷಗಳು ನಮ್ಮಲ್ಲೂ ಇವೆ. ಆದಾಗ್ಯೂ ನಮ್ಮ ಸಂಸದೀಯ ವ್ಯವಸ್ಥೆ ಮುಂದುವರೆದುಕೊಂಡು ನಡೆದಿದೆ. ಯಾವನೋ ಒಬ್ಬ ಸರ್ವಾಧಿಕಾರಿ ಹುಟ್ಟಿಕೊಂಡು ಇಡೀ ವ್ಯವಸ್ಥೆಯನ್ನೇ ಕೊನೆಗಾಣಿಸುವ ಮೊದಲು ಜನರಲ್ಲಿ ರಾಜಕೀಯ ಪ್ರಜ್ಞೆ ಜಾಗೃತವಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಭಾರತದ ರಾಜಕೀಯ ಪಕ್ಷ ಪದ್ಧತಿ (Indian Stasiology)ಯಲ್ಲಿ ನವ ಮನ್ವಂತರದ ಗಾಳಿ ಬೀಸಬೇಕಾಗಿದೆ.

ರಾಜಕೀಯ ಪಕ್ಷವೆಂದರೆ ಹಲವಾರು ವ್ಯಕ್ತಿಗಳು ಸೇರಿ, ತಮ್ಮದೇ ಆದ ರಾಜಕೀಯ ತತ್ವಗಳನ್ನು ಅಳವಡಿಸಿಕೊಂಡು, ಚುನಾವಣೆಯಲ್ಲಿ ಸ್ಪರ್ಧಿಸಿ ಅಧಿಕಾರವನ್ನು ಪಡೆಯಲು ಪ್ರಯತ್ನಿಸುವ ಗುಂಪು ಎಂದು ಕರೆಯಬಹುದು. ಇದನ್ನೆ ರಾಜನೀತಿಜ್ಞ ಎಡ್ಮಂಡ್ ಬರ್ಕ್‌ರು "ಕೆಲವು ತತ್ವಗಳ ಆಧಾರದ ಮೇಲೆ ರಾಷ್ಟ್ರೀಯ ಹಿತಾಸಕ್ತಿಯನ್ನು ಸಂಯುಕ್ತ ಪ್ರಯತ್ನಗಳಿಂದ ವೃದ್ಧಿಗೊಳಿಸಲು ಅನೇಕ ವ್ಯಕ್ತಿಗಳ ಸಂಘಟನೆಯೇ ರಾಜಕೀಯ ಪಕ್ಷ" ಎಂದು ಕರೆದಿದ್ದಾರೆ. ಪಕ್ಷ ಪದ್ಧತಿಯು ಪ್ರಜಾಪ್ರಭುತ್ವದ ಪ್ರತೀಕ. ಒಂದು ದೇಶದಲ್ಲಿ ಒಂದೇ ಪಕ್ಷವಿದ್ದರೆ ಅಲ್ಲಿ ಪ್ರಜಾಪ್ರಭುತ್ವ ನೆಲಸಲಾರದು. ಹೀಗಾಗಿ ದ್ವಿಪಕ್ಷ, ತ್ರೀಪಕ್ಷ ಅಥವಾ ಬಹು ಪಕ್ಷ ಪದ್ಧತಿ ಇರಬೇಕಾಗುತ್ತದೆ. ಬಹು ಪಕ್ಷ ಇರುವಲ್ಲಿ ರಾಜಕೀಯ ಅಸ್ಥಿರತೆಯುಂಟಾಗಿ ಆರ್ಥಿಕ, ಶೈಕ್ಷಣಿಕ, ತಾಂತ್ರಿಕ ಹಾಗೂ ಸಾಮಾಜಿಕ ಪ್ರಗತಿ ಗೌಣವಾಗಿ ಕೇವಲ ಅಧಿಕಾರದ ಕಿತ್ತಾಟವೇ ಪ್ರಧಾನವಾಗುತ್ತದೆ.

ಸಂಸದೀಯ ಪದ್ಧತಿಯ ಅನುಷ್ಠಾನದ ಸಂದರ್ಭದಲ್ಲಿ ಬಹು ಪಕ್ಷ ಪದ್ಧತಿಯನ್ನು ಅಳವಡಿಸಲಾಯಿತು. 1990ರ ದಶಕದವರೆಗೂ ರಾಷ್ಟ್ರೀಯ ಚಳವಳಿ, ಗಾಂಧಿವಾದ ಹಾಗೂ ನೆಹರೂ ಪ್ರಭಾವಗಳನ್ನು ಮತವಾಗಿ (vote) ಪರಿವರ್ತಿಸಿಕೊಂಡು ಕಾಂಗ್ರೆಸ್ ಏಕಪಕ್ಷ ಪ್ರಭುತ್ವವನ್ನು ಮೆರೆಯಿತು. ಸ್ವಾತಂತ್ರ್ಯಾ ನಂತರ ಕೇವಲ ಹತ್ತು ವರ್ಷಗಳಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸುತ್ತೇವೆ ಮತ್ತು ಕೇವಲ ಹತ್ತು ವರ್ಷಗಳವರೆಗೆ ಮೀಸಲಾತಿಯನ್ನು ನೀಡುತ್ತೇವೆ ಅಷ್ಟರೊಳಗೆ ಸಾಮಾಜಿಕ ಸಮಾನತೆಯನ್ನು ಸಾಧಿಸುತ್ತೇವೆ ಎಂದು ಕಾಂಗ್ರೆಸ್ ಹೇಳಿತ್ತು ಆದರೆ, ಇಂದು ಏನಾಗಿದೆ? ಸ್ವಾತಂತ್ರ್ಯ ಸಿಕ್ಕು 60 ವರ್ಷಗಳಾದರೂ ಶೇ30 ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ.

ಸಮಾರೋಪ: ದೇಶದ ಅಖಂಡತೆ, ಸಾರ್ವಭೌಮತ್ವ, ಜಾತ್ಯಾತೀತತೆ ಹಾಗೂ ಪ್ರಜಾಪ್ರಭುತ್ವವನ್ನು ಕಾಪಾಡುವ ಸಲುವಾಗಿ ರಾಜಕೀಯ ಪಕ್ಷಗಳು ಸಾಂಸ್ಥಿಕ ನೆಲೆಗಟ್ಟಿನ ಮೇಲೆ ರಚನೆಯಾಗಬೇಕಾಗಿದೆ ಹಾಗೂ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ರಾಜಕೀಯ ಮಾಡಬೇಕಾಗಿದೆ. ವ್ಯಕ್ತಿ ಅಥವಾ ಕುಟುಂಬ ಆಧಾರಿತ, ಜಾತಿ ಅಥವಾ ಕೋಮು ಆಧಾರಿತ ಹಾಗೂ ಭಾಷೆ ಅಥವಾ ಪ್ರದೇಶ ಆಧಾರಿತ ಹಿನ್ನೆಲೆಯನ್ನು ಇಟ್ಟುಕೊಂಡು ರಾಜಕೀಯಕ್ಕೆ ಬರುವ ವ್ಯಕ್ತಿಗಳು ಮತ್ತು ಪಕ್ಷಗಳು ಪ್ರಜಾಪ್ರಭುತ್ವವನ್ನು ಎಂದೂ ಉಳಿಸಲಾರವು. ಇಂತಹ ಕುಟಿಲತೆಯನ್ನು ಮತದಾರ ಅಥವಾ ಪ್ರಜ್ಞಾವಂತ ನಾಗರಿಕರು ಅರ್ಥ ಮಾಡಿಕೊಳ್ಳಬೇಕು. ದೇಶದ ಅಖಂಡತೆ ಮತ್ತು ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವ, ರಾಷ್ಟ್ರೀಯ ಹಿತ ಚಿಂತನೆಯನ್ನು ಧ್ಯೇಯವಾಗಿಟ್ಟುಕೊಂಡ ಪಕ್ಷಗಳನ್ನು, ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳಿಸುವಂತ ಜಾಗೃತಿಯನ್ನು ನಮ್ಮಲ್ಲಿ ಮಾಡಬೇಕು. ಅಂದಾಗ ಮಾತ್ರ ಸಂಸದೀಯ ಪ್ರಜಾಪ್ರಭುತ್ವ ಬಲಗೊಳ್ಳಲು ಸಾಧ್ಯ. ∎

ಮನುಷ್ಯತ್ವದ ಒಡಲಿಗೆ ಜಾತಿ-ಧರ್ಮದ ಗೆದ್ದಲು

ಯಾವುದೇ ಒಬ್ಬ ಜಾತಿ ನಾಯಕ–ರಾಜಕಾರಣಿ–ಸಂಘಟನೆ–ಜಗತ್‌ಗುರು ಆ ಜನಾಂಗದ ಶ್ರೀಸಾಮಾನ್ಯನ, ಕೂಲಿ ಕಾರ್ಮಿಕನ, ಬಡವನ; ರೈತನ, ಶೋಷಿತನ ಬದುಕಿಗಾಗಿ ಮತ್ತು ಭವಿಷ್ಯಕ್ಕಾಗಿ ಎಂದುಕೂಡ ಸರ್ವತೋಮುಖಿ ಮತ್ತು ತ್ರಿಕರಣಪೂರ್ವಕ ಪ್ರಯತ್ನ, ಕಾರ್ಯಯೋಜನೆಮಾಡಿದ ಒಂದೇ ಒಂದು ಉದಾಹರಣೆ ನಮ್ಮ ಮುಂದೆ ಇಲ್ಲ. ಯಾವುದೇ ಜಾತಿ–ಜನಾಂಗದ ಎಲ್ಲಾ ರೀತಿಯ ಅನುಕೂಲಗಳಿಸಿದ ಫಲಾನುಭವಿಗಳು ಆ ಜನಾಂಗದ ಮುಂದುವರೆದ ಬಲಿಷ್ಠರುಗಳಷ್ಟೆ ಆಗಿದ್ದಾರೆ. ಈ ಸತ್ಯವನ್ನು ಅರಿತು ಎಲ್ಲಾ ಜನಾಂಗದ, ಧರ್ಮದ ಜನ ಮನುಷ್ಯತ್ವದ ಕಡೆಗೆ ಚಿಂತಿಸಿ ಸರ್ವರ ಸಮೃದ್ಧಿ ಮತ್ತು ಸಮಾನತೆಯಲ್ಲಿ ನಮ್ಮ ಪ್ರಗತಿ ಅಡಗಿದೆ ಎಂಬುದನ್ನು ಮನಗಾಣಬೇಕಾಗಿದೆ.

❑ ನಾರಾಯಣ್ ತಿರುಮಲಾಪುರ



ಈ ಜಗತ್ತಿನ ಸೃಷ್ಟಿಯ ಕಥಾನಕದ ಇತಿಹಾಸವೆ ಒಂದು ಅದ್ಭುತ ಅಧ್ಯಯನ. ಅದರಲ್ಲೂ ಈ ಭೂಮಿಯ ಸೃಷ್ಟಿ, ಜೀವವಿಕಾಸ, ಮನುಷ್ಯನ ಬದುಕು ಬವಣೆ; ನಾಗರೀಕತೆ, ಸಂಸ್ಕೃತಿ, ಸಮಾಜ ಮತ್ತು ಆಚಾರ–ವಿಚಾರ ಈ ಎಲ್ಲವೂ ಕೂಡ ವೈಶಿಷ್ಟ್ಯಪೂರ್ಣವಾದ ವಸ್ತು ವಿಷಯಗಳೆ. ಮಂಗನಿಂದ ಆಧುನಿಕ ಮಾನವನವರೆಗಿನ ಇತಿಹಾಸದ ಮಜಲುಗಳು ಹತ್ತು ಹಲವು. ಪ್ರಾಣಿಯಂತೆ ಗುಡ್ಡ–ಗುಹೆಗಳಲ್ಲಿ, ಕಾಡು–ಮೇಡುಗಳಲ್ಲಿ, ಅಲೆಮಾರಿಯಾಗಿ, ಅನಾಗರೀಕನಾಗಿ ಮತ್ತು ಅಸಂಸ್ಕೃತನಾಗಿ ಬದುಕುತ್ತಿದ್ದ ಮಾನವ ಕಾಲಕ್ರಮೇಣ ನಿರಂತರವಾದ ಬದಲಾವಣೆಗಳನ್ನು ಕಂಡುಕೊಂಡ. ಒಂದೆಡೆ ನೆಲೆನಿಂತು ಬದುಕನ್ನು ಕಟ್ಟಿಕೊಂಡ. ಬೇಟೆಯಾಡಿಕೊಂಡು ಹಸಿಮಾಂಸವನ್ನು ತಿಂದು, ಬೆತ್ತಲಾಗಿ ಬದುಕಿ, ಮುಕ್ತ ಲೈಂಗಿಕತೆಯನ್ನು ಅನುಸರಿಸಿಕೊಂಡು ಯಾವುದೇ ಭೇದ ಕಾಣದೆ ಜೀವನ ನಡೆಸುತ್ತಿದ್ದ ಈ ಮಾನವ ಬೆಂಕಿಯನ್ನು ಶೋಧಿಸಿದ್ದು, ಬೇಟೆಯಾಡಲು ಆಯುಧಗಳನ್ನು ಬಳಕೆ ಮಾಡಿದ್ದು, ಪ್ರಾಣಿಗಳನ್ನು ಪಳಗಿಸಿದ್ದು ಮತ್ತು ಲೋಹಗಳನ್ನು ಪತ್ತೆಹಚ್ಚಿದ್ದು ಅವನ ಬದುಕಲ್ಲಿ ಹೊಸದಾದ ತೀವ್ರತರವಾದ ಬದಲಾವಣೆಗಳಿಗೆ ಕಾರಣವಾದದ್ದು ಇತಿಹಾಸ ಸತ್ಯ.

ಕಾಡಿನಲ್ಲಿ ಪ್ರಾಣಿಯಂತೆ ಬದುಕುತ್ತಿದ್ದ ಮನುಷ್ಯರು ಸಂಘ ಜೀವಿಗಳಾದರು, ಸಂಸಾರಿಗಳಾದರು. ನಾನು, ನನ್ನದು, ನನ್ನವರು ಎಂಬ ಖಾಸಗಿ ಪ್ರಜ್ಞೆಯ ಫಲಿತಾಂಶವಾಗಿ ಕುಟುಂಬಗಳು ಸೃಷ್ಟಿಯಾದವು. ಈ

ಕುಟುಂಬಗಳು ಸೇರಿ ಗ್ರಾಮಗಳಾದವು. ಗ್ರಾಮಗಳು ಮುಂದುವರಿದು ಪಟ್ಟಣ-ನಗರಗಳಾದವು. ಒಟ್ಟಾರೆ ಒಂದು ಸಮಾಜ ಸೃಷ್ಟಿಯಾಯಿತು. ಕಾಡಿನಿಂದ ಈ ನಾಡಿನ ಸಮಾಜಗಳ ಹಂತ ತಲುಪಲು ಅನೇಕ ಬದಲಾವಣೆ, ವೈಜ್ಞಾನಿಕ ಆವಿಷ್ಕಾರ, ಪ್ರಗತಿ, ಸಂಶೋಧನೆ; ತಾಂತ್ರಿಕತೆ-ಯಾಂತ್ರಿಕತೆ, ಆಚಾರ, ನಾಗರೀಕತೆ; ಶ್ರಮ ಮತ್ತು ಸಂಸ್ಕೃತಿಗಳು ಕಾರಣೀಭೂತವಾದವು. ಸಮಾಜ ಬೆಳೆದಂತೆ, ಸಂಬಂಧಗಳು ಸೃಷ್ಟಿಯಾದಂತೆ ಹಾಗೂ ವೈಯಕ್ತಿಕ ಖಾಸಗಿ ಪ್ರಜ್ಞೆ ಪ್ರಬಲಗೊಂಡಂತೆ ಮನುಷ್ಯರಲ್ಲಿ ಸ್ವಾರ್ಥ, ಶೋಷಣೆ, ಅಸಮಾನತೆ, ಅನ್ಯಾಯ ಮತ್ತು ದಬ್ಬಾಳಿಕೆಯ ಬೀಜಗಳು ಮೊಳಕೆಯೊಡೆದದ್ದು ಸಹಜವೆ. ಇದರ ಪರಿಣಾಮ ಸಮಾಜದಲ್ಲಿ ಅಸಮಾನತೆ, ಅವ್ಯವಸ್ಥೆ ಮತ್ತು ಅಸಮಾಧಾನ ನಿರ್ಮಾಣವಾಯಿತು. ಪ್ರಬಲರು ದುರ್ಬಲರ ನಡುವೆ ಪೈಪೋಟಿ, ಉಳ್ಳವರು ಇಲ್ಲದವರ ಮಧ್ಯೆ ಸಂಘರ್ಷ ಹಾಗೂ ಶೋಷಣೆ; ಮೇಲು-ಕೀಳುಗಳ ತಾರತಮ್ಯ ಇವುಗಳು ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡವು.

ಸಮುದಾಯದ ಬದುಕಲ್ಲಿ ಹಂಚಿ ತಿನ್ನುತ್ತಿದ್ದ ಪ್ರಾಚೀನ ಮಾನವ ಶಕ್ತಿಯಾನುಸಾರ ದೋಚಿ ಕಿತ್ತು ತಿನ್ನುವ ಶೋಷಕ ಮಾನವನಾದ. ಈ ಅಸಮಾನತೆ, ಅನ್ಯಾಯ, ದಬ್ಬಾಳಿಕೆ, ದೌರ್ಜನ್ಯ ಮತ್ತು ಶೋಷಣೆಗಳ ಸಮರ್ಥನೆಗೆ ಸಾಮಾಜಿಕ ಕಟ್ಟುಪಾಡುಗಳು, ಧರ್ಮ-ಜಾತಿಗಳು, ರೀತಿ-ನೀತಿಗಳು; ಆಚಾರ-ವಿಚಾರಗಳು, ಧರ್ಮಶಾಸ್ತ್ರಗಳು ಮತ್ತು ಪ್ರಭುತ್ವ ಶಕ್ತಿಗಳು ಸಹಕಾರಿಯಾಗಿ ಬೆನ್ನಿಗೆ ನಿಂತವು. ಅಗತ್ಯವಾದಲ್ಲಿ ಆಯುಧಗಳನ್ನು ಹಿಡಿದು ವಿರುದ್ಧವಾದವರ ನೆತ್ತರನ್ನು ಹರಿಸಿದವು ಮತ್ತು ದನಿಗಳನ್ನು ದಮನ ಮಾಡಿದವು. ಈ ಶೋಷಣೆ, ಅನ್ಯಾಯ, ದಬ್ಬಾಳಿಕೆ-ದೌರ್ಜನ್ಯ, ಅಸಮಾನತೆ; ಸ್ವಾರ್ಥ-ಪಕ್ಷಪಾತ ಮತ್ತು ರೀತಿ-ನೀತಿಗಳ ವಿರುದ್ಧ ಪ್ರತಿಯಾಗಿ ಹೋರಾಟ, ಪ್ರತಿಭಟನೆಯ ಕಿಚ್ಚು ಬೆಂಕಿಯಾಗಿ ಧಗಧಗಿಸಿದ್ದು; ಶೋಷಕ ವ್ಯವಸ್ಥೆಗಳ ಬುಡಮೇಲು ಮಾಡಿದ್ದು ಹಾಗೂ ಇದಕ್ಕಾಗಿ ಅನೇಕ ಮಹಾಪುರುಷರು, ಮಾನವತಾವಾದಿಗಳು, ಕ್ರಾಂತಿಕಾರಿಗಳು ತಮ್ಮ ವಿಚಾರ ಮತ್ತು ಕಾರ್ಯಸಾಧನೆಯಿಂದ ನಿರಂತರವಾಗಿ ಸುಧಾರಣೆಗಳನ್ನು ತಂದದ್ದು, ಕತ್ತಲಿಗೆ ಬೆಳಕಾಗಿ ಬಂದದ್ದು ಇದು ಈ ಜಗತ್ತಿನ ಇತಿಹಾಸ. ಈ ಇತಿಹಾಸ ಮತ್ತೆ ಇಂದಿಗೂ ಮುಂದುವರೆಯುತ್ತಲೇ ಇದೆ ಎಂಬುದು ಕೂಡ ಸತ್ಯ.

ಅಂತೆಯೆ ತೀವ್ರತರನಾದ ಶೋಷಕ ವ್ಯವಸ್ಥೆಯ ಇತಿಹಾಸ ಈ ಭಾರತ ದೇಶಕ್ಕೂ ಇರುವುದು ನಮಗೆಲ್ಲಾ ತಿಳಿದ ವಿಷಯವೆ. ಈ ದೇಶದ ಶೋಷಕ ಇತಿಹಾಸದ ಪ್ರಾಚೀನತೆ ಕ್ರಿಸ್ತಪೂರ್ವದ ಬುದ್ಧನಿಗೂ ಹಿಂದೆ ಎಂಬುದು ಈ ದೇಶದ ದುರ್ದೈವ. ಮನುಷ್ಯ ಹುಟ್ಟನಿಂದ ಸಮಾನ ಜನ್ಮಿ. ತಾಯಿಯ ಒಡಲಿನಿಂದಲೇ ಎಲ್ಲರೂ ಕೂಡ ಹುಟ್ಟಿ ಬರುವುದು. ಈ ಇಂಡಿಯಾ ದೇಶವನ್ನು ಬಿಟ್ಟು ಜಗತ್ತಿನ ಮಿಕ್ಕುಳಿದ ದೇಶಗಳಲ್ಲಿ ಮನುಷ್ಯರು ಧರ್ಮದಿಂದ, ಬಣ್ಣದಿಂದ, ಅಧಿಕಾರ-ಸಂಪತ್ತಿನಿಂದ ಭಿನ್ನರಾಗಿ ತಾರತಮ್ಯತೆಗೆ ಒಳಗಾಗಿದ್ದಾರೆ. ಆದರೆ ಈ ದೇಶದಲ್ಲಿ ಜನರು ಹುಟ್ಟುವ ಗರ್ಭಕ್ಕೆ ಭೇದವನ್ನು ಅಂಟಿಸಿಕೊಂಡು ತಾರತಮ್ಯತೆಗೆ ಮತ್ತು ಅಸಮಾನತೆಗೆ ಒಳಗಾಗುತ್ತಾರೆ. ಅದೂ ಹುಟ್ಟಿನಿಂದ ಸಾಯುವ ತನಕ!

ಧರ್ಮ-ಜಾತಿಯ ಹೆಸರಲ್ಲಿ ಈ ದೇಶದ ಮನುಷ್ಯ ಮನುಷ್ಯರ ನಡುವೆ ಅಂತರದ ಕಂದಕಗಳಿವೆ. ಆ ಕಂದಕಗಳನ್ನು ದಾಟುವುದು ಧರ್ಮಕ್ಕೆ-ಜಾತಿಗೆ ವಿರುದ್ಧವಾದದ್ದು ಮತ್ತು ನಿಷಿದ್ಧವಾದ್ದದು! ಈ ಅಸಮಾನ ವ್ಯವಸ್ಥೆಯಲ್ಲಿ ಒಬ್ಬನ ಎದೆಯ ಮೇಲೆ ಮತ್ತೊಬ್ಬನ ಪಾದಗಳು ನಿಂತಿವೆ. ಅದನ್ನು ವರ್ಣಾಶ್ರಮ ಧರ್ಮ ಎನ್ನುತ್ತದೆ ಈ ಹಿಂದೂ ಧರ್ಮಶಾಸ್ತ್ರ, ಮನುಧರ್ಮಶಾಸ್ತ್ರ. ಎಲ್ಲರನ್ನು ತುಳಿದು ಮೇಲೆ ನಿಂತವನು ಬ್ರಾಹ್ಮಣ, ಅವನ ಕೆಳಗೆ ಕ್ಷತ್ರಿಯ, ಅವನ ಕೆಳಗೆ ವೈಶ್ಯ; ಅವನ ಕೆಳಗೆ ಶೂದ್ರ. ಅವನಿಗಿಂತಲೂ ಕೆಳಗೆ ತಳಪಾಯದಲ್ಲಿ ಇವರೆಲ್ಲರ ಹೆಣಭಾರದ ಎದೆಯ ಮೇಲೆ ಹೊತ್ತು ನರಳಾಡಿ ಮಲಗಿದವನು ಅತಿ ಶೂದ್ರ ಅಥವಾ ಪಂಚಮ ಅಥವಾ ಅಸ್ಪೃಶ್ಯ. ಇದು ವರ್ಣಾಶ್ರಮ ಧರ್ಮದ ಅಥವಾ ಜಾತಿಯ ಪಿರಮಿಡ್ಡು. ಶೂದ್ರ ಮತ್ತು ಅಸ್ಪೃಶ್ಯರಿಗೆ ಜೀವವಿದೆ ಅಷ್ಟೆ; ಪ್ರಾಣಿಗಳಂತೆ! ಇವರಿಗೆ ಇತರರಂತೆ ಬದುಕುವ ಹಕ್ಕನ್ನು ಈ ಧರ್ಮಶಾಸ್ತ್ರಗಳು ನೀಡಲಿಲ್ಲ. ಶಿಕ್ಷಣ ಪಡೆಯಲು ಅವರು ಅರ್ಹರಲ್ಲ, ಅದು ನಿಷಿದ್ಧ. ಅಧಿಕಾರ-ಸಂಪತ್ತಿಗೆ ಒಡೆಯರಾಗಲು ಇವರು ಯೋಗ್ಯರಲ್ಲ. ಏಕೆಂದರೆ, ಈ ಮೇಲಿನ ಎಲ್ಲವು ಈ ಇಬ್ಬರನ್ನು ಮಿಕ್ಕುಳಿದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಾಗಿ ಹುಟ್ಟಿದವರಿಗೆ ಮಾತ್ರ.

ಈ ಅಸಮಾನತೆ ಮತ್ತು ತಾರತಮ್ಯಗಳ ಸಮರ್ಥನೆಗಾಗಿ ನಿಸರ್ಗದ ಸೃಷ್ಟಿ ಮೂಲವನ್ನೆ ಬದಲಿಸಿದ ಮಹಾಸೃಷ್ಟಿಕರ್ತರು ಈ ಬ್ರಾಹ್ಮಣಶಾಹಿಗಳು. ಅಂದರೆ ಇವರ ಪ್ರಕಾರ ವರ್ಣಾಶ್ರಮದ ಅಥವಾ ಜಾತಿ ಶ್ರೇಣಿಯ ಜನರು ಹುಟ್ಟಿದ್ದು ತಾಯಿ ಗರ್ಭದಿಂದಲ್ಲ! ಮತ್ತೆ? ಬ್ರಹ್ಮನೆಂಬ ಬ್ರಹ್ಮನ ಮುಖದಿಂದ-ಬ್ರಾಹ್ಮಣರು, ತೋಳುಗಳಿಂದ-ಕ್ಷತ್ರಿಯರು, ಸೊಂಟದಿಂದ-ವೈಶ್ಯರು ಮತ್ತು ಕಾಲಿನ ಪಾದದಿಂದ ಶೂದ್ರರು! ಆದರೆ ಅತಿಶೂದ್ರರು ಅಥವಾ ಅಸ್ಪೃಶ್ಯರು ಅಥವಾ ಪಂಚಮರು ಹಿಂದಿನ ಜನ್ಮದಲ್ಲಿ ಪಾಪಕೃತ್ಯಗಳನ್ನು ಮಾಡಿದ್ದಕ್ಕೆ ಈ ಜನ್ಮದಲ್ಲಿ ನಿಕೃಷ್ಟರಾಗಿ ಹುಟ್ಟಿರುವ ಪಾಪದ ಪಿಂಡಗಳು! ಈ ಪಂಚಮರು ಅಥವಾ ಅಸ್ಪೃಶ್ಯರು ಮೇಲು ಜಾತಿಯವರ ಅಥವಾ ವರ್ಣದವರ ನೋಟಕ್ಕೂ ಕೂಡ ಯೋಗ್ಯರಲ್ಲ. ಶೂದ್ರರು ತಮ್ಮ ಮೇಲಿನ ಮೂರು ಶ್ರೇಣಿ ಜನರ ಸೇವೆಗಾಗಷ್ಟೆ ಮೀಸಲಾದ ಗುಲಾಮರು! ಇದು ಸನಾತನ ಧರ್ಮಶಾಸ್ತ್ರ, ಹಿಂದೂ ಜಾತಿನೀತಿ. ಈ ಧರ್ಮಶಾಸ್ತ್ರದ ಧರ್ಮಕ್ಕೆ ಕಿಂಚಿತ್ತು ಚ್ಯುತಿ ಬಾರದಂತೆ ಆಡಳಿತ ಮಾಡಿ ಧರ್ಮರಕ್ಷಣೆ ಮಾಡುವುದು ಕ್ಷತ್ರಿಯನ ಪರಮ ಕರ್ತವ್ಯ. ಇಲ್ಲದಿದ್ದಲ್ಲಿ ಅವನು ಪ್ರಭುತ್ವ ಹಿಡಿಯಲು ಅನರ್ಹ, ಅವನು ಧರ್ಮವಿರೋಧಿ. ಅವನಿಗೆ ಅಧಿಕಾರದಲ್ಲಿರಲು ಅವಕಾಶವಿಲ್ಲ. ಈ ಧರ್ಮಶಾಸ್ತ್ರದ ನಿಯಮಕ್ಕೆ ಹೊರತಾದ ಆದರ್ಶದ ಪ್ರಭುಗಳಾಗಿ ಈ ದೇಶವನ್ನು ಆಳಿ ಇತಿಹಾಸದಲ್ಲಿ ಹಸಿರಾಗಿ ಉಳಿದ ಬುದ್ಧ, ಮಹಾವೀರ, ಅಶೋಕ ಮತ್ತು ಅಕ್ಬರ್ ಹಾಗೂ ಇತರೆ ಬೆರಳೆಣಿಕೆ ಮಂದಿ ಇದಕ್ಕೆ ಭಿನ್ನರಾಗಿ ಜನಪರರಾಗಿ, ಮಾನವೀಯ ಆಡಳಿತ ನಡೆಸಿದ್ದಾರೆ. ಈ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಕ್ಷತ್ರಿಯರು ಧರ್ಮಶಾಸ್ತ್ರಗಳನ್ನು ಬಹುಪಾಲು ಮಂದಿ ಚಾಚು ತಪ್ಪದೆ ಪಾಲನೆ ಮಾಡಿದ್ದಾರೆ. ಇದಕ್ಕೆ ಅತ್ಯುತ್ತಮ ಉದಾಹರಣೆ ನಮ್ಮ ಪ..ರ..ಮ..ಪೂ..ಜ್ಯ ಶ್ರೀ..ರಾಮ! ರಾಮಾಯಣದ ವೇದ ಮಂತ್ರಗಳನ್ನು ಕೇಳಿಸಿಕೊಂಡ ಶೂದ್ರ ಶಂಭೂಕನಿಂದಲೇ ರಾಮರಾಜ್ಯದಲ್ಲಿ ಬ್ರಾಹ್ಮಣನ ಮಗನೊಬ್ಬ ಸತ್ತನೆಂದು ಬ್ರಾಹ್ಮಣರು ರಾಮನಿಗೆ ದೂರಿಟ್ಟಾಗ, ಶಿಕ್ಷಣ-ವೇದ ಮಂತ್ರಗಳನ್ನು ಕೇಳಲು ಕೂಡ ಶೂದ್ರ ಅನರ್ಹನೆಂಬ ಧರ್ಮಶಾಸ್ತ್ರದ ಧರ್ಮರಕ್ಷಣೆ ಮತ್ತು ಪಾಲನೆಗಾಗಿ ಶಂಭೂಕನ ಕಿವಿಗೆ ಕಾದ ಸೀಸ ದ್ರಾವಣವನ್ನು ತುಂಬಿಸಿ, ಶಂಭೂಕನನ್ನು ವಧಿಸುತ್ತಾನೆ ನಮ್ಮ ಸಾಕ್ಷಾತ್ ಶ್ರೀರಾಮ ಕ್ಷತ್ರಿಯ! ಈ ಮಹಾನ್ ಮ..ರ್ಯಾ..ದ ಪುರುಷ ರಘುರಾಮ. ಇಡಿ ವ್ಯವಸ್ಥೆಯ ಧರ್ಮಶಾಸ್ತ್ರಗಳ ನಿರ್ಮಾಪಕರು ಹಿಂದಿನ ಬ್ರಾಹ್ಮಣರು. ಅವರು ರಾಜ ಪುರೋಹಿತರು. ಅವರ ಬ್ರಾಹ್ಮಣಶಾಹಿ ಧರ್ಮಶಾಸ್ತ್ರವೆ ಸಮಾಜದ, ರಾಜ್ಯದ ಸಂವಿಧಾನ. ಅದರ ಹೆಚ್ಚು ಫಲಾನುಭವಿಗಳು, ಶ್ರಮಿಸದೆ ಸುಖಿಸಿದ ಪುಣ್ಯಜೀವಿಗಳು ಅವರೆ!

ಇಷ್ಟೆಲ್ಲಾ ಹಿಂದಿನ ಇತಿಹಾಸವನ್ನು ನಾನು ಏಕೆ ಕೆದಕುತ್ತಿದ್ದೇನೆ ಎಂದರೆ, ಸಾವಿರಾರು ವರ್ಷಗಳ ಬ್ರಾಹ್ಮಣಶಾಹಿ ಧರ್ಮಶಾಸ್ತ್ರಗಳ ಮತ್ತು ಅವುಗಳ ಪಾಲನೆ ಮಾಡಿದ ಪ್ರಭುತ್ವಗಳ ಪರಿಣಾಮವನ್ನು ನಾವು ಈ ಇಪ್ಪತ್ತೊಂದನೆ ಶತಮಾನದಲ್ಲೂ ಪುಷ್ಕಳವಾಗಿ ಉಣ್ಣುತ್ತಿದ್ದೇವೆ, ಪರಿತಪಿಸುತ್ತಿದ್ದೇವೆ ಮತ್ತು ಅನುಸರಿಸುತ್ತಿದ್ದೇವೆ. ನಿಜ, ಈ ದಿನ ಆ ಕಾಲದ ಬ್ರಾಹ್ಮಣಶಾಹಿಯ ಕಪಿಮುಷ್ಟಿ ಇಲ್ಲ. ಆ ಯಾತನೆ, ನೋವು, ಅಮಾನವೀಯತೆ; ಅಸಮಾನತೆ, ಶೋಷಣೆ ಮತ್ತು ದಮನ ಖಂಡಿತಾ ಇಲ್ಲ. ಆದರೆ, ಆದ ವ್ಯವಸ್ಥೆಯ ಅನುಪಾಲನೆಯ ಪರಿಣಾಮ, ಆ ಧರ್ಮ-ಜಾತಿಶಾಸ್ತ್ರಗಳ ಮಾರ್ದನಿ, ಅಘೋಚರ ಘೋಷಣೆ ಮತ್ತು ಹಳೆ ಬೇರಿನಿಂದಲೆ ಹುಟ್ಟಿ ಸಮಾಜಪೂರ್ತಿ ಹಬ್ಬಿರುವ ಆ ಮನುಧರ್ಮಶಾಸ್ತ್ರದ ಬಳ್ಳಿಗಳು, ಬೀಳುಗಳು ಇಂದಿಗೂ ನಮ್ಮ ಕಾಲುಗಳನ್ನು ತಾಕುತ್ತಿವೆ. ನಮ್ಮ ಮನೆ ಮತ್ತು ಮನಸ್ಸುಗಳಲ್ಲಿ ಬೇರು ಬಿಟ್ಟಿವೆ. ಇವು ನೋವುಗಳಾಗಿ, ಶೋಷಣೆಗಳಾಗಿ, ಸಮಸ್ಯೆಗಳಾಗಿ, ಸಮತೆಗೆ ಮತ್ತು ಮಾನವೀಯತೆಗೆ ಮಾರಕವಾಗಿ; ಆಚಾರ-ಸಂಪ್ರದಾಯಗಳಾಗಿ, ಮೂಢನಂಬಿಕೆ-ಕಂದಾಚಾರಗಳಾಗಿ ಮತ್ತು ಸಾಮಾಜಿಕ-ಧಾರ್ಮಿಕ ಕಟ್ಟುಪಾಡುಗಳಾಗಿ ನಮ್ಮ ಇಡೀ ವ್ಯವಸ್ಥೆಯನ್ನು ತಮ್ಮ ಕಪಿಮುಷ್ಟಿಯಲ್ಲಿ ಹಿಡಿದುಕೊಂಡಿವೆ. ಈ ಮನುಷ್ಯ ವಿರೋಧಿ, ನಿರುಪಯುಕ್ತ ಮತ್ತು ಶೋಷಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಒಡೆದು ಉಡಾಯಿಸಿ ಪುಡಿ ಮಾಡಲು ಇಂದಿಗೂ ನಮಗೆ ಸಾಧ್ಯವಾಗಿಲ್ಲ, ಸಾಧ್ಯವಾಗುತ್ತಿಲ್ಲ. ಏಕೆಂದರೆ, ಯಾವ ಶೋಷಕ ವ್ಯವಸ್ಥೆ ಯಾರನ್ನು ದಮನ ಮಾಡುತ್ತಿದೆಯೋ, ಅದೇ ಜನರು ಈ ಶೋಷಕ ವ್ಯವಸ್ಥೆಯ ನಿಜರೂಪವನ್ನು ಅರಿಯುವಲ್ಲಿ, ವಿಶ್ಲೇಷಿಸುವಲ್ಲಿ ಮತ್ತು ಅರಿತು ಅನುಪಾಲನೆ ಮಾಡುವಲ್ಲಿ ಸೋಲುತ್ತಿದ್ದಾರೆ. ಜಾತಿಯಿಂದ-ಧರ್ಮದಿಂದ ಸಾವಿರಾರು ವರ್ಷಗಳಿಂದ ನೋವುಂಡವರು, ವಂಚಿತರಾದವರು ಮತ್ತು ಶೋಷಣೆಗೆ ತುತ್ತಾದ ಈ ಜನರು ಮತ್ತೆ ಮತ್ತೆ ಅದೇ ವ್ಯವಸ್ಥೆಯನ್ನ ಅಪ್ಪಿಕೊಳ್ಳುತ್ತಿದ್ದಾರೆ. ಒಪ್ಪಿಕೊಳ್ಳುತ್ತಿದ್ದಾರೆ. ಇದು ದುರಂತದ ಸಂಗತಿ. ಈ ಸಂಗತಿ ಈ ದೇಶಕ್ಕೆ ಸಮಾನತೆ ಮತ್ತು ಮಾನವತೆಯ ಉಜ್ವಲ ಭವಿಷ್ಯ ಇಲ್ಲ ಎಂಬುದನ್ನು ಮತ್ತೆ ಮತ್ತೆ ರುಜುವಾತುಪಡಿಸುತ್ತಿದೆ. ಈಗ ಬ್ರಾಹ್ಮಣ್ಯದ ಮಾರ್ಗದರ್ಶನದಲ್ಲಿ ಬ್ರಾಹ್ಮಣರಿಗಿಂತಲೂ ಹೆಚ್ಚಾಗಿ ಶ್ರದ್ಧೆಯಿಂದ ಜಾತಿ ವ್ಯವಸ್ಥೆಯನ್ನು..

> **ಧರ್ಮ–ಜಾತಿಯ ಹೆಸರಲ್ಲಿ ಈ ದೇಶದ ಮನುಷ್ಯ ಮನುಷ್ಯರ ನಡುವೆ ಅಂತರದ ಕಂದಕಗಳಿವೆ. ಆ ಕಂದಕಗಳನ್ನು ದಾಟುವುದು ಧರ್ಮಕ್ಕೆ–ಜಾತಿಗೆ ವಿರುದ್ಧವಾದದ್ದು ಮತ್ತು ನಿಷಿದ್ಧವಾದ್ದದು! ಈ ಅಸಮಾನ ವ್ಯವಸ್ಥೆಯಲ್ಲಿ ಒಬ್ಬನ ಎದೆಯ ಮೇಲೆ ಮತ್ತೊಬ್ಬನ ಪಾದಗಳು ನಿಂತಿವೆ. ಅದನ್ನು ವರ್ಣಾಶ್ರಮ ಧರ್ಮ ಎನ್ನುತ್ತದೆ ಈ ಹಿಂದೂ ಧರ್ಮಶಾಸ್ತ್ರ,**

ವರ್ಣಾಶ್ರಮವನ್ನು ಅಂದರೆ ಅಸಮಾನತೆ, ಅಮಾನವೀಯತೆ ಮತ್ತು ಶೋಷಣೆಯನ್ನು ಅನುಸರಿಸಿ ಅದನ್ನು ಸುಸಂಘಟಿತ ಶಕ್ತಿಯಾಗಿಸುತ್ತಿರುವವರು ಹೆಚ್ಚಾಗಿ ಬ್ರಾಹ್ಮಣೇತರರೆ ಆಗಿದ್ದಾರೆ. ಅದರಲ್ಲೂ ಹೆಚ್ಚಾಗಿ ಶೂದ್ರರು ಮತ್ತು ದಲಿತರು ಅಥವಾ ಪಂಚಮರು ಎಂಬುದು ವಿಷಾದನೀಯ ಬೆಳವಣಿಗೆ. ಬುದ್ಧ, ಬಸವ, ಕಬೀರ, ಕನಕ, ರಾಮಕೃಷ್ಣ–ವಿವೇಕ; ನಾರಾಯಣ ಗುರು, ಫೂಲೆ, ಪೆರಿಯಾರ್, ಗಾಂಧಿ; ಅಂಬೇಡ್ಕರ್, ಮಾರ್ಕ್ಸ್–ಲೆನಿನ್ ಮತ್ತು ಲೋಹಿಯಾ ಇವರುಗಳನ್ನು ಉದ್ಬುದ್ಧ ಉದ್ಧರಿಸುವ ಅವರ ಸಿದ್ಧಾಂತಿಗಳು, ಅನುಯಾಯಿಗಳು ಮತ್ತು ಅವರ ವಿಚಾರಗಳನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದ ಜನನಾಯಕರು ಹಾಗೂ ಸರ್ಕಾರಗಳು ಮಾಡುತ್ತಿರುವುದಾದರೂ ಏನು? ಈ ಮಹನಿಯರ ವಿಚಾರ, ಆದರ್ಶ ಮತ್ತು ಅನುಸರಣೆಗಳಿಗೆ ವಿರುದ್ಧವಾಗಿ ಬದುಕುತ್ತಿರುವವರೆ ಹೆಚ್ಚು. ಇದು ಆದರ್ಶಗಳ ವ್ಯಂಗ್ಯ!

ಈ ದೇಶಕ್ಕೆ ಸ್ವಾತಂತ್ರ್ಯ ಬಂದ ಈ ಅರವತ್ತರ ದಶಕದಲ್ಲಾದರು ನಾವು ಜಾತಿ–ಧರ್ಮಗಳ ಶೃಂಕಲೆಗಳು ಮತ್ತು ಇತಿಮಿತಿಗಳನ್ನು ಕಳಚಿ ಮನುಷ್ಯ ಸಮಾಜ, ಮಾನವೀಯ ಸಮಾಜ, ಸಾಮರಸ್ಯ ಸಮಾಜ ಮತ್ತು ಎಲ್ಲರು ನಮ್ಮವರು–ನಾನು ಎಲ್ಲರವನು ಎಂಬ ವಿಶಾಲ ಪ್ರಜ್ಞೆ ಬೆಳೆದು ಈ ದೇಶವನ್ನು ಅಭಿವೃದ್ಧಿ ಸ್ವಾಲಂಬನೆ, ಸಾಮರಸ್ಯ ಮತ್ತು ಸಮೃದ್ಧತೆ ಕಡೆಗೆ ಕೊಂಡೋಗಬೇಕಿತ್ತು. ದುರಾದೃಷ್ಟವಶಾತ್ ಪ್ರಸ್ತುತ ಪರಿಸ್ಥಿತಿ ಆ ರೀತಿ ಊಹಿಸಿಕೊಳ್ಳಲು ಕೂಡ ಆಗುತ್ತಿಲ್ಲ. ಜಾತಿ–ಜಾತಿಗಳ ನಡುವೆ, ಧರ್ಮ–ಧರ್ಮಗಳ ನಡುವೆ ಗಲಭೆ, ಘರ್ಷಣೆ, ಕೊಲೆ–ಸುಲಿಗೆ ಮತ್ತು ಸ್ವಾರ್ಥ ರಾಜಕೀಯ ಹೆಚ್ಚಾಗುತ್ತಿದೆ. ಕೆಲವು ಜಾತಿ, ಧರ್ಮದ ಜನರಿಗೆ ಈ ಜನ್ಮಭೂಮಿ ಯಾವುದೋ ಪರದೇಶಿ ನೆಲೆ ಎಂಬ ಅಭದ್ರತೆಯ ಭಾವ ಕಾಡುತ್ತಿದೆ. ಇಂತಹ ದುಸ್ಥಿತಿ ಅವರಿಗೆ ನಿರ್ಮಾಣವಾಗಿದೆ. ಕೆಲವು ಜಾತಿ ಧಾರ್ಮಿಕ ಮೂಲಭೂತವಾದಿಗಳು ಇಂತಹ ಸನ್ನಿವೇಶಗಳನ್ನು ಬಳಸಿಕೊಂಡು ತಮ್ಮ ಸ್ವಾರ್ಥಕ್ಕಾಗಿ, ವಿಧ್ವಂಸಕ ಕೃತ್ಯಗಳಿಗಾಗಿ ಮುಗ್ಧ ಜನರನ್ನು ಉಪಯೋಗಿಸಿಕೊಂಡು ಅವರನ್ನಲ್ಲದೆ ಈ ನಾಡಿನ ಅಮಾಯಕ ನಾಗರೀಕರನ್ನು ಕೂಡ ಬಲಿ ತೆಗೆದುಕೊಳ್ಳುತ್ತಿದ್ದಾರೆ. ಧರ್ಮ ಮತ್ತು ಧಾರ್ಮಿಕ ಕೇಂದ್ರಗಳು ದೇಶಬಾಂಧವರಲ್ಲಿ ಐಕ್ಯತೆ ಮತ್ತು ಸಾಮರಸ್ಯ ಮೂಡಿಸುವ ಬದಲು ಸಮಾಜವನ್ನು ಚೂರು ಚೂರು ಮಾಡುತ್ತಿವೆ. ಅಷ್ಟೆ ಅಲ್ಲದೆ ಅಜ್ಞಾನ, ಅವಿವೇಕ, ಅವೈಚಾರಿಕತೆ; ಮೂಢನಂಬಿಕೆ ಮತ್ತು ಜಾತಿ–ಧರ್ಮದ ಮೂಲಭೂತವಾದಗಳನ್ನು ಬಿತ್ತುತ್ತಿವೆ.

ಒಂದು ಧರ್ಮಕ್ಕೆ ಹಲವು ಪಂಥಗಳು, ಅನೇಕ ಧರ್ಮಪೀಠಗಳು ಹಾಗೂ ಧರ್ಮಗುರುಗಳು ಇದ್ದಾರೆ. ಅಂತೆಯೆ ಜಾತಿಗೊಂದು ಮಠ, ಜಾತಿಗೊಂದು ಮಹಾಸಭಾ–ಸಂಘಟನೆ, ಜಾತಿ ನಾಯಕರು; ನೌಕರರ ಜಾತಿ ಸಂಘಟನೆ, ವಿದ್ಯಾರ್ಥಿ–ಯುವಜನರ ಜಾತಿ ಸಂಘಟನೆ ಮತ್ತು ಜಾತಿ ಸಮಾವೇಶಗಳು, ಜಾತಿ... ಹೀಗೆ ಹತ್ತು ಹಲವು. ಇರುವುದು ಒಂದೇ ಜಗತ್ತು. ಅದೆಷ್ಟು ಜಗತ್‌ಗುರುಗಳು? ಜಾತಿಗೊಬ್ಬ ಜಗತ್‌ಗುರು! ಅವರ ಸ್ವಾರ್ಥದ ಬೇಳೆ ಬೇಯಿಸಿಕೊಳ್ಳಲು ಮುಗ್ಧ ಮತ್ತು ಅವಿವೇಕಿ ಜನರನ್ನು ಈ ಜಾತಿ ನಾಯಕರು, ಜಾತಿ ರಾಜಕಾರಣಿಗಳು ಮತ್ತು ಜಾತಿ ಜಗತ್‌ಗುರುಗಳು ನಿತ್ಯ ಬಳಸಿಕೊಂಡು ಬಲಿ ತೆಗೆದುಕೊಳ್ಳುತ್ತಿದ್ದಾರೆ. ಯಾವುದೇ ಒಬ್ಬ ಜಾತಿ ನಾಯಕ–ರಾಜಕಾರಣಿ–ಸಂಘಟನೆ–ಜಗತ್‌ಗುರು ಆ ಜನಾಂಗದ ಶ್ರೀಸಾಮಾನ್ಯನ, ಕೂಲಿ ಕಾರ್ಮಿಕನ, ಬಡವನ; ರೈತನ, ಶೋಷಿತನ ಬದುಕಿಗಾಗಿ ಮತ್ತು ಭವಿಷ್ಯಕ್ಕಾಗಿ ಎಂದೂಕೂಡ ಸರ್ವತೋಮುಖ ಮತ್ತು ತ್ರಿಕರಣಪೂರ್ವಕ ಪ್ರಯತ್ನ, ಕಾರ್ಯಯೋಜನೆ ಮಾಡಿದ ಒಂದೇ ಒಂದು ಉದಾಹರಣೆ ನಮ್ಮ ಮುಂದೆ ಇಲ್ಲ. ಯಾವುದೇ ಜಾತಿ–ಜನಾಂಗದ ಎಲ್ಲಾ ರೀತಿಯ ಅನುಕೂಲಗಳಿಸಿದ ಫಲಾನುಭವಿಗಳು ಆ ಜನಾಂಗದ ಮುಂದುವರೆದ ಬಲಿಷ್ಠರುಗಳಷ್ಟೆ ಆಗಿದ್ದಾರೆ. ಈ ಸತ್ಯವನ್ನು ಅರಿತು ಎಲ್ಲಾ ಜನಾಂಗದ, ಧರ್ಮದ ಜನ ಮನುಷ್ಯತ್ವದ ಕಡೆಗೆ ಚಿಂತಿಸಿ ಸರ್ವರ ಸಮೃದ್ಧಿ ಮತ್ತು ಸಮಾನತೆಯಲ್ಲಿ ನಮ್ಮ ಪ್ರಗತಿ ಅಡಗಿದೆ ಎಂಬುದನ್ನು ಮನಗಾಣಬೇಕಾಗಿದೆ. ಈ ಜಾತಿ–ಧರ್ಮದ ಪಿರಮಿಡ್ಡಿನ ಮೇಲಿನವರು ತಮ್ಮ ಮೇಲರಿಮೆಯನ್ನು, ಕೆಳಗಿನವರು ತಮ್ಮ ಕೀಳರಿಮೆಯನ್ನು ಬಿಟ್ಟು ಸಮತೆಯ ಹಣತೆಯನ್ನು ಇಬ್ಬರೂ ಕೂಡಿ ಹಚ್ಚಬೇಕಾಗಿದೆ. ಆ ನಿಟ್ಟಿನಲ್ಲಿ ಹೆಜ್ಜೆ ಹಾಕಿ ಈ ನಾಡಿನ ಜನ ತಮ್ಮ ಬದುಕು, ಭಾವನೆ, ಚಿಂತನೆ ಮತ್ತು ಅನುಸರಣೆಗಳನ್ನು ಬದಲಿಸಿಕೊಳ್ಳಬೇಕಾಗಿದೆ. ಈ ದೇಶದ ದುರ್ಬಲರಿಗೆ, ಬಡವರಿಗೆ, ನೋವುಂಡವರಿಗೆ ಅಂತಿಮವಾಗಿ ಪರಿಹಾರವಾಗಬೇಕಾಗಿರುವುದು ತುಟಿಗೆ ತುಪ್ಪ ಸವರುವ ನಿಮ್ಮ ಮೀಸಲಾತಿಗಳು, ವಿಶೇಷ ಸೌಲಭ್ಯ ಯೋಜನೆಗಳು ಮತ್ತು ಅನುಕಂಪ–ಕನಿಕರಗಳ ಬದಲಾಗಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ಸರ್ವೋದಯದ ಸಮಾನತೆ, ಸಮಾನ ಅವಕಾಶಗಳು ಬೇಕು. ಈ ದೇಶದ ಸಮಸ್ತ ಜನರಿಗೆ ಸ್ವಾಭಿಮಾನ, ಸ್ವಾವಲಂಬನೆ ಮತ್ತು ಸಾಮರಸ್ಯದಿಂದ ಬದುಕುವ ಜೀವನ ಬೇಕು.

ನಮ್ಮದೆ ನೆಲದ ವಿಶ್ವಕವಿ, ರಾಷ್ಟ್ರಕವಿ ಮತ್ತು ಸರ್ವೋದಯ ಕವಿ ಕುವೆಂಪುರವರು ಹೇಳಿದಂತೆ, ಕೊನೆಗೆ ನಾವು ಅನಿಕೇತನಗಳಾಗಬೇಕು, ಮನುಷ್ಯತ್ವದ ಮನುಜರಾಗಬೇಕು. ನಮ್ಮ ಮತ ಮನುಜ ಮತವಾಗಬೇಕು ಮತ್ತು ನಮ್ಮ ಪಥ ವಿಶ್ವಪಥವಾಗಬೇಕು. ಜಾತಿ ಧರ್ಮದ ಕೊಳಕುಗಳನ್ನು ಕಿತ್ತು ನಮ್ಮ ಬದುಕಿನಿಂದ ಸಮಾಜದಿಂದ ದೂರ ಎಸೆಯಬೇಕು, ನಮ್ಮ ಬದುಕಿನ ಭಾವನೆ ಮತ್ತು ಚಿಂತನೆ ಸಂಕೀರ್ಣತೆಗಳಿಂದ ಬಿಡುಗಡೆಗೊಂಡು ಸರಳವಾಗಬೇಕು. ನಮ್ಮ ಇತಿ ಮಿತಿಗಳನ್ನು ದಾಟಿ ವಿಶಾಲರಾಗಬೇಕು. ಮನುಷ್ಯ ಸಂಬಂಧಗಳ ನಡುವಿನ ಕಂದಕಗಳನ್ನು ಮುಚ್ಚಿ ಹೃದಯ ಸಂಬಂಧಗಳನ್ನು ಸಮೀಕರಿಸಬೇಕು. ಆಗ ಮಾತ್ರ ಯಾವುದೆ ಸಂವಿಧಾನ, ಕಾನೂನು ಮತ್ತು ಮೀಸಲಾತಿ, ಧರ್ಮ–ಜಾತಿಗಳ ಜಗತ್‌ಗುರುಗಳು ಸಾಧಿಸಲಾಗದ ಸುಭದ್ರ ಸಮತಾ ಮತ್ತು ಮಾನವೀಯ ಸಮಾಜ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ನಾವು ಚಿಂತಿಸಿ ಈ ಎಲ್ಲಾ ಸದ್ವಿಚಾರಗಳನ್ನು ಬದುಕಲ್ಲಿ ಅನುಸರಿಸಿಕೊಂಡಾಗ ಮಾತ್ರ ಈ ರಾಜ್ಯದ, ಈ ದೇಶದ ಮತ್ತು ಈ ಜಗತ್ತಿನ ಎಲ್ಲಾ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳಿಗೆ ಸುಲಭ ಪರಿಹಾರ ಸಾಧ್ಯ. ಆಗ ಮಾತ್ರ ಸರ್ವರೂ ಸಮೃದ್ಧಿ ಮತ್ತು ಸಾಮರಸ್ಯದಿಂದ ಬದುಕಲು ಸಾಧ್ಯ. ಈ ಜಗತ್ತನ್ನೆ ಪೋಷಿಸುವ ಸರ್ವಶಕ್ತವಾದ ಈ ಸೃಷ್ಟಿಗೆ, ನಿಸರ್ಗಮಾತೆಗೆ ಇರದ ಬೇಧ, ಅಸಮಾನತೆ ಮತ್ತು ತಾರತಮ್ಯ ತೃಣವು, ಅಲ್ಪರೂ, ಪರಾವಲಂಬಿತರೂ ಮತ್ತು ಸಮಾನ ಹುಟ್ಟಿನವರು ಆದ ನಮಗೆ ಏಕೆ? ಈ ಸಮಾಜ ತಾರತಮ್ಯತೆಯನ್ನು ಧಿಕ್ಕರಿಸದಿದ್ದಲ್ಲಿ, ನಿಸರ್ಗ ನ್ಯಾಯದ ಸಮಾನತೆಯನ್ನು ಒಪ್ಪಿ ಅನುಸರಿಸದಿದ್ದಲ್ಲಿ ಮಾನವನ ಬದುಕಿನ ಮೂಲ ಸಾರವಾದ ಮನುಷ್ಯತ್ವದ ಒಡಲಿಗೆ ಈ ಜಾತಿ–ಧರ್ಮದ ಗೆದ್ದಲು ಹಿಡಿದು ನಮ್ಮ ಬದುಕು, ಈ ಬದುಕಿನ ನೆಮ್ಮದಿ, ಪ್ರಗತಿ ಮತ್ತು ಸಾಮರಸ್ಯ ನಾಶವಾಗಿ ನಾವು ಸರ್ವನಾಶವಾಗುವುದು ಖಚಿತ. ಇಲ್ಲದಿದ್ದಲ್ಲಿ ಈ ಜಾತಿ–ಧರ್ಮದ ಸಮಸ್ಯೆಗಳು ಮುಂದಡಿ ಇಡಬೇಕಾದ ಸಾಮಾಜಿಕ ಪ್ರಗತಿಯ ಕಾಲುಗಳನ್ನು ಇದ್ದಷ್ಟು ಕಾಲ ಈ ಜೀವನದ ಸವಿರಸವನ್ನು ಅನುಭವಿಸಲು ಆಗದೆ ಸಂಘರ್ಷದಲ್ಲಿ, ತಾರತಮ್ಯದಲ್ಲಿ ಕೊನೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ನಾವು ಬದಲಾವಣೆಯಾಗದಿದ್ದಲ್ಲಿ ಸಹ ಮಾನವರನ್ನು ನೋಡಲು ಆಗದೆ, ಸಂಬಂಧಗಳನ್ನು ಬೆಳೆಸಲು ಆಗದೆ ಮತ್ತು ಪರಸ್ಪರ ಸಹಕರಿಸಿ ಸಾಮರಸ್ಯದಿಂದ ಬದುಕಲೂ ಆಗದೆ ನಮ್ಮದಲ್ಲದ ತಪ್ಪಿಗೆ, ವಿಚಾರವಿಲ್ಲದ ಆಚಾರಗಳಿಗೆ ಮತ್ತು ಅಮಾನವೀಯ ವಿಕಾರ ಸಂಪ್ರದಾಯಗಳ ಸಿದ್ಧಾಂತಗಳಿಗೆ ಈ ನಮ್ಮ ಜೀವ ಮತ್ತು ಜೀವನವನ್ನು ನಿರುಪಯುಕ್ತಗೊಳಿಸಿಕೊಳ್ಳಬೇಕಾಗುತ್ತದೆ.

ಅರಿತು ಬಾಳಿದರೆ ಬದುಕು. ಇಲ್ಲದಿದ್ದಲ್ಲಿ ಮತ್ತೆ ಮತ್ತೆ ಅದೇ ಚಿಂತೆ–ಜಾತಿ, ಧರ್ಮ ಅಸಮಾನತೆ, ಅನ್ಯಾಯ, ಶೋಷಣೆ ಮತ್ತು ಜಾತಿ–ಧರ್ಮಗಳ ಸಂಘರ್ಷ; ಜುಜುಬಿ ಜಿಲೇಬಿ ಮೀಸಲಾತಿಯ ಪರ ಮತ್ತು ವಿರುದ್ಧ ವಾದಗಳು, ಜಾತಿ ಧರ್ಮ ಸಂಘಟನೆ–ಸಮಾವೇಶಗಳು, ಜಾತಿ–ಧರ್ಮದ ಜಗತ್‌ಗುರುಗಳ ಅಟ್ಟಹಾಸ ಮತ್ತು ವೈಭವ, ಹೃದಯ–ಮನಸ್ಸು ಮತ್ತು ಬದುಕುಗಳ ಅಂತರ, ಮತ್ತದೇ ರಕ್ತದ ಓಕುಳಿ, ಕಾದಾಟ–ಗಲಭೆ, ನೊಂದವರು ಸುರಿಸುವ ಕಣ್ಣೀರು, ಪರಸ್ಪರ ಅಪನಂಬಿಕೆ ಮತ್ತು ಅಸಮಧಾನ ಈ ದೇಶಕ್ಕೆ ನಿತ್ಯ ನಿರಂತರ ಬದುಕಾಗುತ್ತದೆ. ಈ ದೇಶದ ಜನ ಎಚ್ಚರವಾಗುತ್ತಾರೊ, ಇಲ್ಲ ಹಾಗೆ ಅಜ್ಞಾನದ ಹುಂಬರಾಗಿ, ಹುಚ್ಚರಾಗಿ ಉಳಿಯುತ್ತಾರೊ ಕಾಲವೆ ನಿರ್ಣಯಿಸಬೇಕು. ಬದಲಾವಣೆ ನಿರೀಕ್ಷಿಸುವ, ಹಂಬಲಿಸುವ ಮತ್ತು ಬೋಧಿಸುವ 'ನಾನು' ಮೊದಲು ನನ್ನ ಮೇಲರಿಮೆಯನ್ನು ಮತ್ತು ನನ್ನ ಕೀಳರಿಮೆಯನ್ನು ಕಿತ್ತೆಸೆದು ಬದಲಾಗಬೇಕು. ಮನುಷ್ಯತ್ವವನ್ನು ಒಪ್ಪಿ, ಪ್ರಾಮಾಣಿಕವಾಗಿ ಬದುಕಲ್ಲಿ ಅನುಸರಿಸಬೇಕು ಮತ್ತು ಅದರ ಸುಖವನ್ನು ಆನಂದಿಸಬೇಕು. ಏಕೆಂದರೆ, ಬದಲಾವಣೆ ಯಾವತ್ತೂ ಹೇಳುವ 'ನನ್ನಿಂದಲೆ', 'ನನ್ನಂತಹ ಅನೇಕರಿಂದಲೆ' ಆರಂಭವಾಗಬೇಕು. ಆಗ ಮಾತ್ರ ಈ ದೇಶಕ್ಕೊಂದು ಭವಿಷ್ಯ, ಎಲ್ಲರಿಗೂ ಸರ್ವಸಮಾನ, ಶೋಷಣೆ ರಹಿತ ಮತ್ತು ಸರ್ವಾಂಗ ಸುಂದರ ಮಾನವೀಯ ಬದುಕು ಸಾಧ್ಯ ಎಂದು ಒಪ್ಪಬಹುದು. ■

ಕವನ

ಒಂಟಿ ಮರವೂ ಮೈದಾನವೂ



ವಿ.ಎಸ್ ಶಾನ್‌ಭಾಗ್

ಆಟದ ಬಟ್ಟ ಬಯಲ
ಸಮತಟ್ಟಾದ ನೆಲದ ಮಧ್ಯೆ ನಿಂತಿದೆ
ಒಂಟಿ ಮರ,
ನಿಘಂಟಿನ ಶಬ್ದದಂತೆ, ಹಾಕಿ ರುಜುವಿನಂತೆ
ಅರ್ಥ ಹುಡುಕುವ ಖಯಾಲಿ ಇದ್ದರೆ, ಬರೆದಿಟ್ಟ
ಪರಿವಿಡಿಯಂತೆ

ಕುತೂಹಲದ ದಾಸ್ತಾನು
ಬಿಚ್ಚುವವರಿದ್ದಾರೆ ಈ ಮೈದಾನಿನ ತುಂಬ
ಟೂರ್ನಮೆಂಟು ನಡೆದಾಗ ಪೆಪ್ಪರ ಮಿಂಟಿನ ಹಾಗೆ ಜನ
ನೆರಳ ಅಡಿಗೆ ಕುಂತು
ಮಾತು ಬಿಡಿಸಿ ಮನಸ್ಸು ಹಗುರಗೊಳಿಸಿ
ವಿಮರ್ಶಾ ಲೇಖನದ ಕಂತು ಕಂತು
ಉದಾರೀ ಕರಣದ ಹೊಸ ಚರಣ
ಮುಕ್ತ ಛಂದಸ್ಸಿನ ನವ್ಯ ಕವಿತೆ

ಮೈದಾನ ಊರಿಗೆ
ಸಂಧಾನಕ್ಕೆ ನಿಂತ ರಾಯಭಾರಿ
ಮಚ್ಚೆ ಕೆಳಗೆ ಹೊಕ್ಕುಳು ಅಲುಗಿದ
ಮಕ್ಕಳಿಗೆ ಚಂದಮಾಮ ಕಥೆ ಹೇಳಿದ
ಇಲ್ಲಿ ಕೂಡಿದವರ ಹಿಂದೆ
ಕಳೆದವರ ಸಾಲು
ಸೋತರೂ ಬಿಡದ ಅಹವಾಲು
ಅಂಗುಲ ಹುಳುವಿನ ಪರಕಾಯ
ಮತ್ತೆ ಎಂದಿನ ಸವಾಲು

ಇದ್ದಕ್ಕಿದ್ದಂತೆ ಭೂತ
ವರ್ತಮಾನ ಪ್ರಶ್ನಿಸಿದಂತೆ
ಊರ ಮಂದಿ ಕೊನೆಗೂ ಹಿಡಿದರು ದೊಂದಿ
ದೊಂಬಿ, ಬಟ್ಟಲೊಳಗೆ ಬೆತ್ತಲೆಯಾದ ಮಂದಿ
ಉತ್ಕಟ, ರೋಚಕಗೊಳಿಸಿದ ಕಥೆಗಳ
ಸುದ್ದಿ, ತಿಣುಕಿದಂತಹ ಸರ್ಕಾರದ ಬುದ್ಧಿ
ಆದೇಶ ಹೊರಡಿಸಿತು ಕಾಡು ಕಡಿದು ಮೈದಾನ
ಮಾಡುವಂತೆ ಊರ ಮಧ್ಯೆ
ಕಾಡಿಸಿ ಹಲವರ ನಿದ್ದೆ
ಗಾಳಿಯಲ್ಲೂ ಒಣಗದೆ ಒದ್ದೆ

ಉಬ್ಬು ತಗ್ಗುಗಳ, ದಾರಿ ದಿಬ್ಬಗಳ ಈ ಅಂಗಾತ ಜಾಗ
ಸಪಾಟಾಗುವ ಕ್ರೀಯೆಯಲ್ಲಿ
ಹೇಗೋ ಈ ಒಂಟಿಮರ, ನೆರಳ ಹಿಡಿದು ನಿಂತಿತು
ಪ್ರತಿಬಿಂಬದಂತೆ, ನಡೆದ ನಾಟಕದ ಶಿರ್ಷಿಕೆಯಂತೆ
ಸಂಜಯನ ಸಾಕ್ಷಿಯಂತೆ, ಭಾವಗೀತೆಗಳ ಮಧ್ಯೆ
ಗಝಲ್‌ನಂತೆ

ತಳಮಳದ ದಿನಗಳಲಿ, ಮರದ ನೆರಳು ಪ್ರೀತಿಗೆ
ಅಕ್ಕರೆಯ ಅಕ್ಷರಗಳು ಕವಿತೆಗೆ
ಸಂದಂತೆ, ಮರ ಕರುಳ ಸಂಗಾತಿ
ಒಂಟಿ ಇರಬಹುದು ಮರ,
ಕುಡಿಯೊಡೆದ ಶಬ್ದ ತೀರದಂತೆ ಧ್ವನಿಸಿ
ಮಗ್ಗುಲ ಬದಲಿಸಿ ಕೈಯ ಬಳಸಿ, ಮೈಯ ತುಂಬಾ
ಸಂದೇಶ ಕಳುಹಿಸಿದಂತೆ
ಮೌನದ ಗಣಿಯೊಳಗೆ ಕುಂತ ಮಾತುಗಳ ಹೊರ ತೆಗೆದು
ಪದ್ಯಗಳ ಬರೆದಂತೆ, ಸನ್ನಾಟಕ್ಕೆ
ಬುದ್ಧನಿಗೆ, ವೃಕ್ಷದಿಂದ ವೃಕ್ಷಸ್ಥಳದವರೆಗೆ ಸಂದಂತೆ

ಈಗಲೂ ನಿಂತಿದೆ ಮರ
ಮೈದಾನದ ಸಾಕ್ಷಿ ಪ್ರಜ್ಞೆಯಂತೆ
ಊರು ಪಟ್ಟಣವಾಗಿ, ಪೊಟ್ಟಣ ಕಟ್ಟಿದರೆ ಇತಿಹಾಸ
ಹೆಬ್ಬೆರಳ ರುಜುವಾತಾಗಿ
ಸಂದಂತೆ

ದಲಿತರ ಮೀಸಲಾತಿ

ವರ್ಗೀಕರಣದ ಸುತ್ತ-ಮುತ್ತ

■ ನರಸಿಂಹ ಗುಂಜಹಳ್ಳಿ

ಭಾರತದಲ್ಲಿ ಜಾತಿವ್ಯವಸ್ಥೆಯ ಲಕ್ಷಣವೆಂದರೆ ಶೋಷಣೆ ವಿರುದ್ಧ ಹೋರಾಡುತ್ತಿರುವ ಶೋಷಿತರೇ ಕೊನೆಗೆ ಶೋಷಕರಾಗಿ ಪರಿವರ್ತನೆಯಾಗಿ ಬದಲಾಗುತ್ತಾರೆ. ತಳ ಸಮುದಾಯಗಳ ವಿಶೇಷ ಲಕ್ಷಣವೆಂದರೆ ಹಂಚಿ ತಿನ್ನುವ ಗುಣಲಕ್ಷಣ. ಆದರೆ ಇದು ಶಿಕ್ಷಣ, ಅಧಿಕಾರ, ಸಂಪತ್ತುಗಳಿಸುವವರೆಗೂ ಇರುತ್ತದೆ. ಗಳಿಸಿದ ನಂತರ ಕಿತ್ತು ತಿನ್ನುವ ಸ್ವಾರ್ಥಗುಣ ಹೆಚ್ಚಾಗಿ ಕಂಡುಬರುತ್ತದೆ. ಈ ಗುಣವನ್ನು ಭಾರತದಲ್ಲಿ ದಲಿತ ಮಧ್ಯಮವರ್ಗ ಅಳವಡಿಸಿಕೊಂಡಿದೆ.

ಮೀಸಲಾತಿ ಎಂದರೆ ಒಂದು ಜನಾಂಗ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ, ಬೌದ್ಧಿಕವಾಗಿ ಶತ ಶತಮಾನಗಳಿಂದ ಶೋಷಣೆಗೆ ಒಳಗಾಗಿ, ಸಂವಿಧಾನಾತ್ಮಕ ಸೌಲಭ್ಯಗಳಿಂದ ವಂಚಿತರಾದ ಸಮುದಾಯಕ್ಕೆ ಈ ಸ್ಥಿತಿಗಳಿಂದ ಬಿಡುಗಡೆಗೊಳ್ಳಲು ಕೆಲವು ಸಂವಿಧಾನಾತ್ಮಕ ವಿಶೇಷ ಸೌಲಭ್ಯಗಳೇ ಮೀಸಲಾತಿ. ಇದರ ಗುರಿ ಸಾಮಾಜಿಕ ನ್ಯಾಯ. ಇದು ಸಮಾನತೆಯ ದೇಶ ಕಟ್ಟವುದಕ್ಕೆ ಬಹುಮುಖ್ಯವಾದದ್ದು.

ಮಹಾತ್ಮ ಜ್ಯೋತಿ ಬಾಫುಲೆಯವರ ಪ್ರಭಾವದಿಂದ ದೇಶದಲ್ಲಿ ಮೀಸಲಾತಿ ಪ್ರಥಮವಾಗಿ ಪ್ರಾರಂಭ ಮಾಡಿದ್ದು ಕೊಲ್ಲಾಪುರದ ಛತ್ರಪತಿ ಶಾಹುಮಹಾರಾಜರು, ತಮ್ಮ ಪ್ರಾಂತ್ಯದ ಆಡಳಿತದಲ್ಲಿ ಸಾಮಾಜಿಕ ಸಮಾನತೆಗಾಗಿ ದಲಿತರಿಗೆ ಪ್ರತ್ಯೇಕವಾಗಿ ಶೇ.50 ರಷ್ಟು ಮೀಸಲಾತಿಯನ್ನು ಜುಲೈ 26, 1902ರಲ್ಲಿ ಜಾರಿಗೆ ತಂದರು. ತಮಿಳುನಾಡಿನ ಪೆರಿಯಾರ್, ಶಾಹುಮಹಾರಾಜ ಮತ್ತು ಸ್ವಾಮಿವಿವೇಕಾನಂದರ ಪ್ರಭಾವದಿಂದ ಕರ್ನಾಟಕದ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಪ್ರಾಂತ್ಯದಲ್ಲಿ ಶೂದ್ರ ಮತ್ತು ಅಸ್ಪೃಶ್ಯರಿಗೆ ಶೇ.75ರಷ್ಟು ಮೀಸಲಾತಿಯನ್ನು 1921ರಲ್ಲಿ ಕಲ್ಪಿಸಿದರು. 1890ರಲ್ಲಿ ಅಯೋತೋದಾಸ ಪಂಡಿತರು ಬ್ರಿಟಿಷರ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ದಲಿತರಿಗೆ ಮೀಸಲಾತಿಗೆ ಒತ್ತಾಯಿಸಿದರು. 1928ರಲ್ಲಿ ಸೈಮನ್ ಕಮಿಷನ್, 1930ರಲ್ಲಿ ದುಂಡುಮೇಜಿನ ಪರಿಷತ್‌ನ ಮುಂದೆ ಡಾ.ಬಿ.ಆರ್.ಅಂಬೇಡ್ಕರ್‌ರವರ ಹೋರಾಟದ ಫಲವಾಗಿ 1932ರಲ್ಲಿ ದ್ವಿಮತದಾನ ಪದ್ಧತಿ ಮತ್ತು ಪ್ರತ್ಯೇಕ ಕ್ಷೇತ್ರಗಳ ಬದಲಾಗಿ ಮೀಸಲಾತಿ ಸ್ಥಾನಗಳು ಪೂನಾ ಒಪ್ಪಂದದಲ್ಲಿ ಲಭಿಸಿದವು. ಅದು ಸಂವಿಧಾನದಲ್ಲಿ ಸ್ಥಾನ ಪಡೆಯಿತು. 1950ರಲ್ಲಿ ಸಂವಿಧಾನವನ್ನು ಭಾರತ ಅಂಗೀಕರಿಸಿದಾಗ ಪರಿಶಿಷ್ಟ ಜಾತಿ, ಪಂಗಡಗಳ ಅಂದರೆ ಅಸ್ಪೃಶ್ಯರನ್ನು ಮತ್ತು ದಲಿತರನ್ನು ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯವಾಗಿ ಮುಂದುವರೆದ ಜಾತಿಗಳ ಸಮಾನ ಮಟ್ಟಕ್ಕೆ ತರುವ ಸಲುವಾಗಿ ಮೀಸಲಾತಿಯನ್ನು ನಿಗದಿತ ಸಮಯದವರೆಗೆ ಜಾರಿಗೆ ತರಲಾಯಿತು.

ಮೀಸಲಾತಿಗಾಗಿ ಪರಿಶಿಷ್ಟ ಜಾತಿ ಪಟ್ಟಿಯನ್ನು ಬ್ರಿಟಿಷ್ ಸರಕಾರ 1911ರ ಜನಗಣತಿ ಸಂದರ್ಭದಲ್ಲಿ ಅಸ್ಪೃಶ್ಯರನ್ನು ಗುರುತಿಸಲು ಈ 10 ಮಾನದಂಡಗಳನ್ನು ರೂಪಿಸಿತು.

1. ಬ್ರಾಹ್ಮಣರ ಶ್ರೇಷ್ಠತೆಯನ್ನು ತಿರಸ್ಕರಿಸುವವರು.
2. ಬ್ರಾಹ್ಮಣರ ಅಥವಾ ಇನ್ನಾವುದೇ ಹಿಂದು ಗುರುಗಳಿಂದ ಮಂತ್ರ, ಸಂಸ್ಕಾರ ಸ್ವೀಕರಿಸದವರು.
3. ವೇದಗಳನ್ನು ಧಿಕ್ಕರಿಸುವವರು.
4. ಹಿಂದು ದೇವತೆಗಳನ್ನು ಪೂಜಿಸದವರು.
5. ಬ್ರಾಹ್ಮಣರಿಂದ ಸೇವೆ ಪಡೆಯಲಾರದವರು.
6. ಹಿಂದು ದೇವಾಲಯಗಳ ಒಳಗೆ ಪ್ರವೇಶ ಮಾಡಲಾರದವರು.
7. ಬ್ರಾಹ್ಮಣ ಪುರೋಹಿತರನ್ನು ಹೊಂದದವರು.
8. ಅಪವಿತ್ರತೆ ಮೈಲಿಗೆಗೆ ಕಾರಣರಾಗುವವರು.
9. ಶವವನ್ನು ಹೂಳುವವರು.
10. ದನ ತಿನ್ನುವವರು,

ಈ ಹತ್ತು ಅಂಶಗಳ ವ್ಯಾಪ್ತಿಗೆ ಬರುವ ಜಾತಿಗಳನ್ನು ಪ್ರಥಮವಾಗಿ 1911ರ ಜನಗಣತಿಯಲ್ಲಿ ಅಸ್ಪೃಶ್ಯರು ಎಂದು, 1921ರ ಜನಗಣತಿಯಲ್ಲಿ ನಿಮ್ನವರ್ಗ ಎಂದು 1931ರ ಜನಗಣತಿಯಲ್ಲಿ ಪರಿಶಿಷ್ಟಜಾತಿ ಎಂದು ಹೆಸರಿಸಿ ದಾಖಲಿಸಲಾಯಿತು(ಡಾ. ಎಚ್.ಟಿ. ಪೋತೆ: 2006; ಪು-253). ಈ ಮೇಲಿನ ಹತ್ತು ಅಂಶಗಳು ಅಸ್ಪೃಶ್ಯರ ಜ್ಞಾನ, ವಿದ್ಯಾರ್ಹತೆ, ರಾಜಕೀಯ, ಆರ್ಥಿಕ, ಸಂಸ್ಕೃತಿಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಆದ್ದರಿಂದ ಮೀಸಲಾತಿಗೆ ಅಸ್ಪೃಶ್ಯತೆಯೇ ಮಾನದಂಡವಾಗಿತ್ತು. ಆದರೆ ಇಂದು ನಮ್ಮನ್ನು ಆಳುವವರು ತಮ್ಮ ಓಟು ಬ್ಯಾಂಕ್ ರಾಜಕಾರಣಕ್ಕಾಗಿ ಅಸ್ಪೃಶ್ಯರಲ್ಲದ ಕೆಲವು ಸ್ಪೃಶ್ಯ(ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳನ್ನು ಪರಿಶಿಷ್ಟಜಾತಿ ಪಟ್ಟಿಯಲ್ಲಿ ಸೇರಿಸಿದ್ದಾರೆ. ಕಳೆದ ಎಪ್ಪತ್ತರ ದಶಕದಿಂದ ಎಸ್. ಸಿ ಪಟ್ಟಿಗೆ ಹಲವಾರು ಜಾತಿಗಳು ಸೇರ್ಪಡೆಗೊಂಡು

ಈಗ ಒಟ್ಟು 101 ಜಾತಿಗಳು ಎಸ್.ಸಿ ಪಟ್ಟಿಯಲ್ಲಿವೆ. ಅಸ್ಪೃಶ್ಯರಿಗೆ ಸಿಗಬೇಕಾದ ಮೀಸಲಾತಿ ಸೌಲಭ್ಯಗಳು ಸ್ಪೃಶ್ಯ(ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳು ಪಡೆದುಕೊಳ್ಳುತ್ತಿದ್ದಾರೆ. ಸಾಮಾಜಿಕ, ಸಾಂಸ್ಕೃತಿಕ ಹಿನ್ನಲೆಯಲ್ಲಿ ಮಾತನಾಡುವುದಾದರೆ ಈ ಸ್ಪೃಶ್ಯ (ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳು ಮೀಸಲಾತಿ ಪಟ್ಟಿಯಲ್ಲಿರುವುದು ಅಸಂಗತ. ಹಾಗಂತ ಅವರಿಗೆ ಸಂವಿಧಾನಬದ್ಧ ಹಕ್ಕುಗಳು ದೊರೆಯಬಾರದು ಎಂದು ಅವರು ಆರ್ಥಿಕವಾಗಿ ಪ್ರಬಲರೆಂದು ನಾನು ಹೇಳುತ್ತಿಲ್ಲ. ಅಸ್ಪೃಶ್ಯರು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯಿಂದ ನರಳುತ್ತಿದ್ದರೆ ಸ್ಪೃಶ್ಯ ಜಾತಿಯವರು ಆರ್ಥಿಕ ಅಸಮಾನತೆಯಿಂದ ಮಾತ್ರ ನರಳುತ್ತಿದ್ದಾರೆ. ನಮ್ಮ ಸಂವಿಧಾನದ ಪ್ರಕಾರ ಮೀಸಲಾತಿಯ ಮಾನದಂಡ ಸಾಮಾಜಿಕ ಅಸಮಾನತೆ ಹೊರತು ಆರ್ಥಿಕ ಅಸಮಾನತೆಯು ಮಾನದಂಡವಲ್ಲ. ಅಸ್ಪೃಶ್ಯತೆಯೇ ನಿವಾರಣೆಗೆ ಮೀಸಲಾತಿಯನ್ನು ಜಾರಿಗೆ ತರಲಾಯಿತು. ಅದಕ್ಕೆ ಅಸ್ಪೃಶ್ಯತೆಯೆ ಮಾನದಂಡವಾಗಿತ್ತು.

ಮೀಸಲಾತಿಯಿಂದ ದಲಿತರು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಸ್ಥಾನ ಪಡೆದುಕೊಳ್ಳುತ್ತಾರೆಂದು ನಂಬಲಾಗಿತ್ತು. ಆದರೆ ಇಂದು ಮೀಸಲಾತಿ ಪಡೆದುಕೊಳ್ಳುತ್ತಿರುವವರು ಹಿಂದುಳಿದ ವರ್ಗಗಳು ಹಾಗೂ ಸ್ಪೃಶ್ಯ (ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳು. ನಿಜವಾದ ದಲಿತರಿಗೆ ಮೀಸಲಾತಿ ಸೌಲಭ್ಯಗಳು ಸಿಗುತ್ತಿಲ್ಲ. ದೇಶವನ್ನು ಆಳುವ ಮೇಲುಜಾತಿಯವರು ದಲಿತರ ಮೀಸಲಾತಿ ಪಟ್ಟಿಯಲ್ಲಿ ಸ್ಪೃಶ್ಯ(ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳನ್ನು ಸೇರಿಸಿ ಆ ಸೌಲಭ್ಯಗಳ್ನು ಅವರು ಪಡೆದುಕೊಳ್ಳುವಂತೆ ಮಾಡಿ ಅಸ್ಪೃಶ್ಯ ಜಾತಿಗಳನ್ನು ಮೇಲೆ ಬರಲಾರದಂತೆ ಮಾಡಿದ್ದಾರೆ.

ಸ್ಪೃಶ್ಯ (ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳು ಸಾಮಾಜಿಕ ಅಸಮಾನತೆಯಿಂದ ನರಳುತ್ತಿಲ್ಲ. ಅವರು ಉತ್ಪಾದಿಸುವ, ವಿತರಿಸುವ ಸರಕುಗಳನ್ನು ಮೇಲುಜಾತಿಯವರು ಸ್ವೀಕರಿಸುತ್ತಾರೆ. ಇದರಿಂದ ಸ್ಪೃಶ್ಯ ಜಾತಿಗಳ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುತ್ತಾ ಅಭಿವೃದ್ಧಿ ಹೊಂದುತ್ತಿದ್ದಾರೆ. ಸಾಮಾಜಿಕ, ಆರ್ಥಿಕ ಬೆಳವಣಿಗೆಗಳು ರಾಜಕೀಯ ಅಧಿಕಾರವನ್ನು ತಂದುಕೊಡುತ್ತವಂತೆ, ಇದರಿಂದ ಸಮಾಜದ ಎಲ್ಲಾ ಜಾತಿಗಳ ಜೊತೆಗೆ ಬೆರೆಯಲು ಸುಲಭವಾಗುತ್ತದೆ. ಇದೆಲ್ಲ ಅಸ್ಪೃಶ್ಯ ಜಾತಿಗಳಿಗೆ ಬರುವುದಿಲ್ಲ. ಆದ್ದರಿಂದ ಸ್ಪೃಶ್ಯ-ಅಸ್ಪೃಶ್ಯ ಎರಡನ್ನೂ ಒಟ್ಟಿಗೆ ಅಳೆಯುವುದು ನ್ಯಾಯವಲ್ಲ.

ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾದ ಮಾದಿಗರು ಹೆಚ್ಚಿನವರು ಭೂರಹಿತರು, ಕೃಷಿಕಾರ್ಮಿಕ, ಪೌರಕಾರ್ಮಿಕ, ಚರ್ಮಗಾರಿಕೆ ಕೆಲಸಗಾರರಾಗಿ ಕೆಲಸಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಇವರು ತಮ್ಮ ಮಾನವೀಯ ಹಕ್ಕುಗಳಿಂದ ವಂಚಿತರಾಗಿದ್ದಾರೆ ಹಾಗೂ ಹಲವಾರು ಸಮಸ್ಯೆಗಳಿಂದ ನರುಳುತ್ತಿದ್ದಾರೆ. ದಲಿತರಲ್ಲಿ ಮಾದಿಗ ಜನಾಂಗವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಎಲ್ಲಾ ನೆಲೆಗಳಲ್ಲಿ ದೀರ್ಘ ಕಾಲದಿಂದಲೂ ಎಲ್ಲಾ ವಿಧದ ಅನ್ಯಾಯ ತುಳಿತಗಳಿಗೆ ಒಳಗಾದ ಸಮುದಾಯ. 1991ರ ಜನಗಣತಿಯ ಪ್ರಕಾರ ದಕ್ಷಿಣ ಭಾರತದಲ್ಲಿ ಮಾದಿಗರ ಜನಸಂಖ್ಯೆ ಶೇ.50ರಷ್ಟು. 1975ರ ಎಲ್.ಜಿ. ಹಾವನೂರು ವರದಿಯ ಪ್ರಕಾರ ಪರಿಶಿಷ್ಟರಲ್ಲಿ ಶೇ. 57.2ರಷ್ಟು ಮಾದಿಗರು, ಒಂದು ಅಂದಾಜಿನಂತೆ ಕರ್ನಾಟದಲ್ಲಿರುವ ಮಾದಿಗರ ಜನಸಂಖ್ಯೆ 85 ಲಕ್ಷ. ಸಂವಿಧಾನದತ್ತವಾಗಿ ಬಂದಿರುವ ಮೀಸಲಾತಿ ನಮಗೆ ಸರಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ. 15ರಲ್ಲಿ ಸಿಗಬೇಕಾದ ಪ್ರಮಾಣ ಶೇ. 8ರಷ್ಟು, ಆದರೆ ಇದುವರೆಗೆ ಸರಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನಮಗೆ ದಕ್ಕಿರುವುದು ಕೇವಲ ಶೇ. 2ರಷ್ಟು ಮಾತ್ರ. ಬಹುಸಂಖ್ಯಾತರಾದ ನಮಗೆ ನ್ಯಾಯಯುತ ಮೀಸಲಾತಿ ದೊರೆತಿಲ್ಲವೆಂಬ ಅತೃಪ್ತಿಯಿಂದ ಮೀಸಲಾತಿ ವರ್ಗೀಕರಣಕ್ಕಾಗಿ ಮಾದಿಗರು ರಾಜ್ಯದಲ್ಲಿ 1996ರಿಂದ ಹೋರಾಟ ಪ್ರಾರಂಭಿಸಿದರು.

ಅವರ ಹೋರಾಟಕ್ಕೆ ಪ್ರೇರಣೆ ದೊರೆತಿದ್ದು ಆಂಧ್ರ ಪ್ರದೇಶದಲ್ಲಿ ಪ್ರತ್ಯೇಕ ಮೀಸಲಾತಿಗಾಗಿ ಆರಂಭಗೊಂಡ ಮಾದಿಗರ ಚಳವಳಿಯಿಂದ. ಇದು ಮೀಸಲಾತಿಯಲ್ಲಿಯೇ ಮೀಸಲಾತಿ ಜಾರಿಗೆ ತರಲು ನಡೆಸಿದ ಚಳವಳಿ ಎಂದೇ ಪ್ರಸಿದ್ಧಿ ಪಡೆದಿತ್ತು. ಆಂಧ್ರದ ಚಂದ್ರಬಾಬು ನಾಯ್ಡುವಿನ ಸರಕಾರ ನ್ಯಾಯಮೂರ್ತಿ ಪಿ. ರಾಮಚಂದ್ರರಾಜು ಆಯೋಗದ ಶಿಫಾರಸ್ಸಿನಂತೆ 1997ರಲ್ಲಿ ದಲಿತರಿಗೆ ಜನಸಂಖ್ಯೆಗೆ ಅನುಗುಣವಾಗಿ ಉದ್ಯೋಗ ಹಾಗೂ ಶಾಲಾ-ಕಾಲೇಜು ಪ್ರವೇಶಗಳಿಗೆ ಸಂಬಂಧಿಸಿದಂತೆ ಈಗಿರುವ ಶೇ. 15ರ ಮೀಸಲಾತಿಯಲ್ಲಿ ವರ್ಗೀಕರಣ ಮಾಡಿದರು.

ಇದರ ವಿರುದ್ಧ ಅಲ್ಲಿನ ಮಾಲಾ ಜಾತಿಯವರು ಆಂಧ್ರದ ಹೈಕೋರ್ಟ್‌ಗೆ ಹೋದರು. ಅಲ್ಲಿನ ಹೈಕೋರ್ಟ್ ಕೂಡ ಏನೂ ಹೇಳಲಿಲ್ಲ. ಅದನ್ನು ಸುಮ್ಮನೆ ರಾಜ್ಯಪಾಲರ ವಿವೇಚನೆಗೆ ಕಳಿಸಿತು. ಇದರಿಂದ ಅಲ್ಲಿನ ರಾಜ್ಯಪಾಲರು ಗಾಬರಿಗೊಳಗಾದರು. ಕೇಂದ್ರ ಸರಕಾರ ಪರಿಶಿಷ್ಟ ಜಾತಿಗಳನ್ನು ವರ್ಗೀಕರಿಸುವ ಹಕ್ಕು ಪಡೆದಿದೆ. ಹಾಗೆ ವರ್ಗೀಕರಿಸಿದ ಜಾತಿಗಳನ್ನು ಪುನರ್‌ವಿಂಗಡಿಸುವ ಅಧಿಕಾರ ರಾಜ್ಯ ಸರಕಾರಗಳಿಗೆ ಇದೆ. ಇದನ್ನು ಅರ್ಥಮಾಡಿಕೊಳ್ಳದೇ ಈ ವಿಷಯದಲ್ಲಿ ಆಂಧ್ರದ ರಾಜ್ಯಪಾಲರು ಆತುರ ಗಾಬರಿಗಳಿಂದಾಗಿ ಯಾವ ನಿಲುವನ್ನೂ ತೆಗುದುಕೊಳ್ಳದೇ ಅದನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಆಯೋಗಕ್ಕೆ ರವಾನಿಸಿ ಗೊಂದಲ ಸೃಷ್ಟಿಸಿದರು. ಆಗ ಆಯೋಗದ ಅಧ್ಯಕ್ಷರು ಚಿತ್ರದುರ್ಗದ ಎಚ್. ಹನುಮಂತಪ್ಪ. ಇವರು ಇದನ್ನು ಆಂಧ್ರದ ಮಾಲಾ ಮತ್ತು ಮಾದಿಗ ಜಾತಿಯವರನ್ನು ಕರೆದು ಚರ್ಚಿಸಿ ಇತ್ಯರ್ಥ ಪಡಿಸದೇ ರಾಷ್ಟ್ರಪತಿಗಳ ಅಂಗಳಕ್ಕೆ ಹೊತ್ತುಹಾಕಿದರು. ಕೊನೆಗೆ ಆಗಿನ ರಾಷ್ಟ್ರಪತಿ ಕೆ.ಆರ್. ನಾರಾಯಣರು 1999ರಲ್ಲಿ ಆಂಧ್ರದ ಮೀಸಲಾತಿ ವರ್ಗೀಕರಣಕ್ಕೆ ಸಮ್ಮತಿಸಿ ಅಂಕಿತ ಹಾಕಿದರು. ಆದರೆ ಮತ್ತೆ ಆಂಧ್ರದ ಮಾಲಾ ಜಾತಿಯವರು ರಾಷ್ಟ್ರಪತಿಯವರ ಆದೇಶದ ವಿರುದ್ಧ ಆಂಧ್ರದ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದರು. ಈ ತಡೆಯಾಜ್ಞೆಯನ್ನು ಅಲ್ಲಿನ ಮಾದಿಗರು ಕೋರ್ಟ್‌ನಲ್ಲಿ ಆಕ್ಷೇಪಿಸಿದರು.

ಆಂಧ್ರಪ್ರದೇಶದ ಉಚ್ಚನ್ಯಾಯಾಲಯವು ಈ ದಾವೆಯ ನಿವಾರಣೆಗೆ ಐವರು ನ್ಯಾಯಮೂರ್ತಿಗಳ ವಿಭಾಗೀಯ ಪೀಠ ರಚಿಸಿತು. ಅದು ಪ್ರತಿಯೊಂದನ್ನೂ ಅಧ್ಯಯನ ಮಾಡಿ 8-12-2000ರಂದು ಸಂವಿಧಾನದ ವಿಧಿ 341(2) ಕ್ಕೂ ಮತ್ತು ಮೀಸಲಾತಿ ವರ್ಗೀಕರಣಕ್ಕೂ ಇಮಾಮ್ ಸಾಬಿಗೂ, ಗೋಕುಲಾಷ್ಟಮಿಗೂ ಇರುವ ಸಂಬಂಧ. ಪರಿಶಿಷ್ಟ ಜಾತಿಯ ಪಟ್ಟಿಗೆ ಯಾವುದಾದರೂ ಹೊಸ ಜಾತಿಯನ್ನು ಸೇರಿಸುವುದು ಅಥವಾ ಆ ಪಟ್ಟಿಯಲ್ಲಿರುವ ಯಾವುದಾದರೂ ಜಾತಿಯನ್ನು ಕೈಬಿಡುವುದು ಇದರ ಬಗೆಗೆ ನಿರ್ಣಯಿಸುವ ವಿಶೇಷ ಅಧಿಕಾರವನ್ನು ಈ ವಿಧಿಯು ಸಂಸತ್ತಿಗೆ ನೀಡಿದೆ. ಅಂದಾಗ, ಮೀಸಲಾತಿ ವರ್ಗೀಕರಣವು ಈ ವಿಧಿಯ ಕವಚದ ಅಂಚಿಗೂ ಬರುವಂತಹುದಲ್ಲ, ಹೀಗಾದಾಗ, ಪರಿಶಿಷ್ಟ ಜಾತಿಯಲ್ಲಿ ಸಾಮಾಜಿಕ ನ್ಯಾಯ ಎತ್ತಿಹಿಡಿಯಲು ರೂಪಿಸಿರುವ ಶಾಸನವು ಸಂವಿಧಾನ ಬಾಹಿರವಲ್ಲ. ಮತ್ತು ಹರಿತವಾದ ಸಾಮಾಜಿಕ ವಿಶ್ಲೇಷಣೆಯ ಕಾರ್ಯವು ನ್ಯಾಯಾಂಗದ ಕರ್ತವ್ಯವಲ್ಲ. ಇದು ನ್ಯಾಯಾಂಗ ಪೀಠದ ಖಚಿತ ನಿರ್ಣಯ ಎಂದೂ ಹಾಗೂ ದಲಿತ ಜಾತಿಗಳ ಮಧ್ಯದ ಅಸಮಾನತೆ ಗುರುತಿಸುವುದು ಮತ್ತು ಆ ಅಸಮಾನತೆ ಅಳಿಸಲು ಶಾಸನ, ಆದೇಶ ಹೊರಡಿಸುವುದು ಸರ್ಕಾರದ ಹೊಣೆಗಾರಿಕೆ ಎಂದೂ ನ್ಯಾಯಾಲಯ ಅಭಿಪ್ರಾಯಪಟ್ಟಿತು (ಪ್ರೊ॥ ಸಿ.ಕೆ. ಮಹೇಶ್; 2002, ಪು: 93-94). ಈ ತೀರ್ಪಿನಿಂದ ಆಂಧ್ರದ ಮಾದಿಗರು ಸಂತೋಷಗೊಂಡರು ಆದರೆ ಈ ಆದೇಶವನ್ನೂ ಪ್ರಶ್ನಿಸಿ ಅಲ್ಲಿನ ಮಾಲಾ ಜಾತಿಯವರು ಸುಪ್ರೀಂಕೋರ್ಟ್‌ಗೆ ಹೋದರು. ಈ ಕೇಸು ಇನ್ನೂ ಇತ್ಯರ್ಥವಾಗಿಲ್ಲ.

ಕಳೆದ ಮೂರು ದಶಕಗಳಿಂದ ತೀವ್ರವಾಗಿ ಚರ್ಚೆಗೆ ಒಳಗಾಗಿರುವ ವಿಚಾರ ಒಳಮೀಸಲಾತಿ. 1962ರಲ್ಲಿ ಹಿಂದುಳಿದ ವರ್ಗಗಳಲ್ಲಿ ಒಳಮೀಸಲಾತಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಮಾದಿಗರು ಪರಿಶಿಷ್ಟರಲ್ಲಿ ಒಳಮೀಸಲಾತಿಗಾಗಿ ದನಿ ಎತ್ತಿದರು. ಹಿಂದುಳಿದ ವರ್ಗಗಳ ಒಳಮೀಸಲಾತಿಯನ್ನು ವೈಜ್ಞಾನಿಕವೆಂದು ಪ್ರತಿಪಾದಿಸಲಾಗಿದೆ. ಆದರೆ ದಲಿತರ ಮೀಸಲಾತಿ ಮಾತ್ರ ವರ್ಗೀಕರಣ ಮಾಡದೇಯಿರುವುದು ಆಶ್ಚರ್ಯ. ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆಗನುಸಾರವಾಗಿ ಅಧಿಕಾರದಲ್ಲಿ ಪಾಲು ಪಡೆಯುವುದು ಎಲ್ಲಾ ಶೋಷಿತರ ಹಕ್ಕು. ಹಾಗೂ ಸಮಾನತೆ ನ್ಯಾಯದಲ್ಲಿ ಪಾಲು ಪಡೆಯಲು ಅರ್ಹರೂ ಕೂಡ.

ಕರ್ನಾಟಕ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇ.32ರ ಮೀಸಲಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲಾಗಿದೆ. ಹರಿಯಾಣ (ವಾಲ್ಮೀಕಿ ಮತ್ತು ಸಿಖ್ ಜನಾಂಗಗಳಿಗೆ) ಪಂಜಾಬುಗಳಲ್ಲಿ ದಲಿತರಲ್ಲಿ ಒಳಮೀಸಲಾತಿ ಜಾರಿಯಲ್ಲಿದೆ. ಇತ್ತೀಚೆಗೆ ತಮಿಳುನಾಡಿನಲ್ಲಿ ನ್ಯಾಯಮೂರ್ತಿ ತಿರು ಜನಾರ್ಧನಂ ಆಯೋಗದ ಶಿಫಾರಸ್ಸಿನಂತೆ ದಲಿತರಿಗೆ ಮೀಸಲಾತಿ ವರ್ಗೀಕರಣ ಮಾಡಲಾಗಿದೆ. ಇದನ್ನು ಆಕ್ಷೇಪಿಸಿ ಕೋರ್ಟ್‌ಗೆ

ಸಲ್ಲಿಸಿದ ಅರ್ಜಿಯನ್ನು ಅಲ್ಲಿನ ಮಧುರೈ ನ್ಯಾಯಾಲಯ ತಿರಸ್ಕರಿಸಿದೆ.

ರಾಜ್ಯದಲ್ಲಿ ಮಾದಿಗರ ಹೋರಾಟದ ಒತ್ತಡದಿಂದ ಧರ್ಮಸಿಂಗ್ ಸರಕಾರ 2005 ರ ಸೆಪ್ಟೆಂಬರ್‌ನಲ್ಲಿ ಪರಿಶಿಷ್ಟ ಜಾತಿಯಲ್ಲಿನ ಸಾಂವಿಧಾನಿಕ ಮೀಸಲಾತಿ ಸೌಲಭ್ಯ ಹಂಚಿಕೆಯಲ್ಲಿನ ತಾರತಮ್ಯ ನಿವಾರಿಸಲು ನೇಮಿಸಿದ್ದ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗವು 12 ಕೋಟಿ ವೆಚ್ಚದಲ್ಲಿ 7 ವರ್ಷ (ಆಂಧ್ರದಲ್ಲಿ 8 ತಿಂಗಳು, ತಮಿಳುನಾಡಿನಲ್ಲಿ 3 ತಿಂಗಳು ಅಲ್ಲಿನ ದಲಿತರ ಮೀಸಲಾತಿ ವರ್ಗೀಕರಣದ ಆಯೋಗಗಳು ಸಮೀಕ್ಷೆ ನಡೆಸಿವೆ) ಗಳ ಕಾಲ ರಾಜ್ಯಾದ್ಯಂತ ಹರಡಿರುವ ಪರಿಶಿಷ್ಟ ಜಾತಿಗಳಿಗೆ ಸೇರಿದ 20 ಲಕ್ಷ 54 ಸಾವಿರ ಕುಟುಂಬಗಳು ಹಾಗೂ ಸಮಾರು 96 ಲಕ್ಷ 60 ಸಾವಿರ ಜನಸಂಖ್ಯೆಯ ಕುರಿತು ವಿಸ್ತೃತ ಸರ್ವೆಕಾರ್ಯ ನಡೆಸಿ ಜಾತಿವಾರು ಜನಸಂಖ್ಯೆಯನ್ನು ಹಾಗೂ ಆರ್ಥಿಕ ಸ್ಥಿತಿಗಳನ್ನು ಸಮೀಕ್ಷೆ ನಡೆಸಿದೆ. ಹಾಗೂ ರಾಜ್ಯಾದ್ಯಂತ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಎಸ್.ಸಿ. ಕೆಟಗರಿಗೆ ಸೇರಿದ ಒಂದು ಲಕ್ಷದ 58 ಸಾವಿರ ನೌಕರರ ಸರ್ವೇಕ್ಷಣೆ ನಡೆಸಿದ್ದಾರೆ. ಕರ್ನಾಟದಲ್ಲಿ ಎಸ್.ಸಿ. ಕೆಟಗರಿಯಡಿ ಬರುವ 101 ಜಾತಿಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತಿಗತಿಗಳನ್ನು ಅರಿಯಲು 141 ಪ್ರಶ್ನಾವಳಿಗಳನ್ನು ಒಳಗೊಂಡ ಫಾರಂನಲ್ಲಿ ಮಾಹಿತಿ ಸಂಗ್ರಹಿಸಿ ಅವುಗಳನ್ನು ವಿಶ್ಲೇಷಣೆ ಮತ್ತು ಆಳವಾಗಿ ಅಧ್ಯಯನ ಮಾಡಿ ವೈಜ್ಞಾನಿಕ ಹಾಗೂ ಆಚರಣಯೋಗ್ಯವಾದ ವರದಿಯನ್ನು ನೀಡಿದೆ. ಅದು ಜಾತಿವಾರು ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ವರ್ಗೀಕರಣಕ್ಕೆ ಶಿಫಾರಸ್ಸು ಮಾಡಿದೆ. ಆ ಆಯೋಗವು ಜನಸಂಖ್ಯೆಯಲ್ಲಿ ಶೇ. 33.47ರಷ್ಟಿರುವ ಮಾದಿಗ ಮತ್ತದರ ಒಳಪಂಗಡಕ್ಕೆ ಶೇ.6, ಜನಸಂಖ್ಯೆಯಲ್ಲಿ ಶೇ. 32ರಷ್ಟಿರುವ ಹೊಲೆಯ ಮತ್ತದರ ಒಳಪಂಗಡಕ್ಕೆ ಶೇ.5, ಸ್ಪೃಶ್ಯ(ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳಿಗೆ ಶೇ.3 ಹಾಗೂ ಇತರರಿಗೆ (ಸರ್ವೆಯ ಸಂದರ್ಭದಲ್ಲಿ ಸಮಾರು 6 ಲಕ್ಷ ಜನರು ಜಾತಿಯ ಹೆಸರು ಹೇಳಿಲ್ಲ, ಅಂತವರಿಗೆ) ಶೇ. 1ರಂತೆ ಒಳಮೀಸಲಾತಿ ಹಂಚಿಕೆ ಮಾಡಬೇಕೆಂದು ಸರಕಾರಕ್ಕೆ ಆಯೋಗವು ಶಿಫಾರಸ್ಸು ಮಾಡಿದೆ.

ಆಂಧ್ರದಲ್ಲಿ ಹೊಲೆಯ ಬಂಧುಗಳು ಒಳ ಮೀಸಲಾತಿಯನ್ನು ವಿರೋಧಿಸಿ ಕೋರ್ಟ್‌ಗೆ ಹೋಗಿರುವುದರಿಂದ ಅಲ್ಲಿ ಸಮಸ್ಯೆಯಾಗಿದೆ. ಆದರೆ ಕರ್ನಾಟಕದಲ್ಲಿ ಅಸ್ಪೃಶ್ಯ ಜಾತಿಯ ಪ್ರಬಲ ಕೋಮುಗಳಾದ ಹೊಲೆಯ ಮತ್ತು ಮಾದಿಗರು ಒಂದಾಗಿ ಒಳಮೀಸಲಾತಿ ಜಾರಿಗೆ ಒತ್ತಾಯಿಸುತ್ತಿರುವುದರಿಂದ ಆಂಧ್ರದಂತೆ ಇಲ್ಲಿ ಸಮಸ್ಯೆ ಉದ್ಭವಿಸುವುದಿಲ್ಲ. ಸ್ವಾತಂತ್ರ್ಯ, ಸಂವಿಧಾನಕ್ಕೆ ನಿಜವಾದ ಅರ್ಥ ಬರಬೇಕಾದರೆ ಸರಕಾರ ಈ ಕೂಡಲೇ ಸದಾಶಿವ ಆಯೋಗದ ವರದಿಯ ಶಿಫಾರಸ್ಸಿನಂತೆ ಪರಿಶಿಷ್ಟರ ಪಟ್ಟಿಯಲ್ಲಿನ ಜಾತಿಗಳ ಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು. ಇದು ಸರಕಾರ ಪರಿಶಿಷ್ಟರಿಗೆ ನೀಡಿರುವ ಶೇ.15ರಲ್ಲಿನ ಹಂಚಿಕೆಯಾಗಿರುವುದರಿಂದ ಸಂವಿಧಾನಾತ್ಮಕ ಬಿಕ್ಕಟ್ಟು ಉದ್ಭವಿಸಲಾರದು.

ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆಗನುಸಾರವಾಗಿ ಅಧಿಕಾರದಲ್ಲಿ ಪಾಲು ಪಡೆಯುವುದು ಎಲ್ಲಾ ಶೋಷಿತ ಜಾತಿಗಳ ಹಕ್ಕು, ಹಾಗೂ ಸಮಾನತೆಯಲ್ಲಿ ಪಾಲು ಪಡೆಯಲು ಅರ್ಹರು ಕೂಡ. ತಮ್ಮ ಹಕ್ಕು ಮತ್ತು ಸೌಲಭ್ಯಗಳಿಂದ ವಂಚಿತರಾದವರನ್ನು ಮನಗಂಡು ದಲಿತರೆಲ್ಲರೂ ಒಳಮೀಸಲಾತಿಗಾಗಿ ಸಹಕರಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್ ಆಶಯ ಕೂಡ ಯಾವುದೇ ಜಾತಿಗೆ ಪ್ರಾತಿನಿಧ್ಯತೆಯನ್ನು ನಿಗದಿ ಮಾಡುವ ಕಾಲಕ್ಕೆ ಜನಸಂಖ್ಯೆ ಪ್ರಮಾಣವು ಒಂದು ಮಾನದಂಡವಾಗಬೇಕು, ಏಕೆಂದರೆ ಪ್ರತಿಯೊಂದು ಜಾತಿ ಪ್ರತ್ಯೇಕ ಸಂಸ್ಕೃತಿ, ಅಸ್ತಿತ್ವ, ಪರಂಪರೆ ಹೊಂದಿದೆ. ಆದ್ದರಿಂದ ದೇಶದ ಸಕಲ ಸಂಪತ್ತು, ಆದಾಯ, ಅಧಿಕಾರ ಪ್ರತಿಯೊಂದು ಜಾತಿಯ ಜನಸಂಖ್ಯೆಗನುಗುಣವಾಗಿ ವಿತರಿಸಬೇಕು ಎಂಬುದಾಗಿತ್ತು. ಒಟ್ಟಾರೆ ಎಲ್ಲಾ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಆರ್ಥಿಕ, ರಾಜಕೀಯ, ಶೈಕ್ಷಣಿಕ ಆಡಳಿತ ರಂಗಗಳಲ್ಲಿ ಪ್ರಾತಿನಿಧ್ಯತೆ ಮತ್ತು ಪಾಲು ಪಡೆಯಬೇಕೆಂಬುದು ಅವರ ಸಮಗ್ರ ಆಲೋಚನೆಯ ತಿರುಳು.

ಪರಿಶಿಷ್ಟ ಜಾತಿಗಳಲ್ಲಿ ಮೀಸಲಾತಿ ಸೌಲಭ್ಯ ಅಸಮಾನವಾಗಿ ಹಂಚಿಕೆಯಾಗಿರು ವುದು ಪ್ರತಿಯೊಬ್ಬರಿಗೆ ಗೊತ್ತಿದೆ. ತಮ್ಮ ಪಾಲಿನ ಅನ್ನವನ್ನು ತಾವೇ ತಿನ್ನುವುದು ನಿಸರ್ಗದ ನಿಯಮ ಮತ್ತು ಸಾಮಾಜಿಕ ನ್ಯಾಯ. ಇನ್ನೊಬ್ಬರು ತಿನ್ನುವುದು ಪ್ರಕೃತಿಗೆ ವಿರುದ್ಧ ಮತ್ತು ಅಮಾನವೀಯವಾದದ್ದು. ಇದೊಂದು ಶೋಷಣೆಗೆ ರಹದಾರಿ ಕೂಡ.

ಕಳೆದ ಮೂರು ದಶಕಗಳಿಂದ ತೀವ್ರವಾಗಿ ಚರ್ಚೆಗೆ ಒಳಗಾಗಿರುವ ವಿಚಾರ ಒಳಮೀಸಲಾತಿ. 1962ರಲ್ಲಿ ಹಿಂದುಳಿದ ವರ್ಗಗಳಲ್ಲಿ ಒಳಮೀಸಲಾತಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಮಾದಿಗರು ಪರಿಶಿಷ್ಟರಲ್ಲಿ ಒಳಮೀಸಲಾತಿಗಾಗಿ ದನಿ ಎತ್ತಿದರು. ಹಿಂದುಳಿದ ವರ್ಗಗಳ ಒಳಮೀಸಲಾತಿಯನ್ನು ವೈಜ್ಞಾನಿಕವೆಂದು ಪ್ರತಿಪಾದಿಸಲಾಗಿದೆ. ಆದರೆ ದಲಿತರ ಮೀಸಲಾತಿ ಮಾತ್ರ ವರ್ಗೀಕರಣ ಮಾಡದೇಯಿರುವುದು ಆಶ್ಚರ್ಯ. ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆಗನುಸಾರವಾಗಿ ಅಧಿಕಾರದಲ್ಲಿ ಪಾಲು ಪಡೆಯುವುದು ಎಲ್ಲಾ ಶೋಷಿತರ ಹಕ್ಕು. ಹಾಗೂ ಸಮಾನತೆ ನ್ಯಾಯದಲ್ಲಿ ಪಾಲು ಪಡೆಯಲು ಅರ್ಹರೂ ಕೂಡ.

ಮೀಸಲಾತಿ ಜಾರಿಗೆ ಬಂದಾಗಿನಿಂದ ಇದರ ಬಗ್ಗೆ ಆಗಿರುವ ಪ್ರಚಾರದಷ್ಟು ದಲಿತರ ಬದುಕು ಉದ್ಧಾರವಾಗಿಲ್ಲ. ಹಾಗೂ ಸಮರ್ಪಕವಾಗಿ ಅದು ಅವರಿಗೆ ತಲುಪಿಲ್ಲ. ಇಷ್ಟು ವರ್ಷವಾದರೂ ದಲಿತರ ಬದುಕು ಮಾತ್ರ ಬದಲಾವಣೆ ಆಗಲಿಲ್ಲ, ಸಾಮಾಜಿಕ ನ್ಯಾಯ ಸಿಗಲೇಯಿಲ್ಲ. ಸರಕಾರ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಹಾಗೂ ಆಧುನಿಕರಣದ ಪ್ರಭಾವದಿಂದ ಹುದ್ದೆಗಳ ಕಡಿತ ಹೀಗೆ ಹಲವಾರು ಕಾರಣಗಳಿಂದ ಆಳುವ ವರ್ಗಗಳು ಪರೋಕ್ಷವಾಗಿ ದಲಿತರಿಗೆ ಸಿಗಬೇಕಾದ ಮೀಸಲಾತಿಯನ್ನು ತಪ್ಪಿಸುತ್ತಿದ್ದಾರೆ.

ಜನವರಿ 26, 1950ರಲ್ಲಿ ಭಾರತ ಸರಕಾರ ಸಂವಿಧಾನವನ್ನು ಅಂಗೀಕರಿಸಿದಾಗ ದಲಿತರನ್ನು ಮುಂದುವರೆದ ಜಾತಿಗಳೊಂದಿಗೆ ಸಮನಾಗಿ ನಿಲ್ಲಿಸುವ ಸಲುವಾಗಿ ಮೀಸಲಾತಿ ತರಲಾಯಿತು. ಆದರೆ ಸ್ವತಂತ್ರ್ಯ ಬಂದು 65 ವರ್ಷ ಕಳೆದರೂ ಅದರ ಮೂಲ ಉದ್ದೇಶ ಇನ್ನೂ ಈಡೇರಿಲ್ಲ. ಬದಲಾಗಿ 1991ರಿಂದ ಜಾಗತೀಕರಣ, ಉದಾರೀಕರಣ ನೀತಿಗಳಿಂದ ದಲಿತರ ಬದುಕು ಪಾತಾಳಕ್ಕೆ ಕುಸಿದಿದೆ ಹಾಗೂ ಸರಕಾರ ಸ್ವಾಮ್ಯದ ಕಂಪನಿಗಳು, ಸಾರ್ವಜನಿಕ ಸೇವಾಕ್ಷೇತ್ರಗಳನ್ನು ಖಾಸಗೀಕರಿಸುತ್ತಿರುವುದರಿಂದ ದಲಿತರ ಉದ್ಯೋಗಗಳಿಗೆ ಸಂಚಕಾರ ಬಂದು ದಲಿತರು ಬೀದಿಪಾಲಾಗಿದ್ದಾರೆ.

ಒಂದು ಜಾತಿಯನ್ನು ಮತ್ತೊಂದು ಜಾತಿ ಶೋಷಿಸುವುದನ್ನು ಅಂಬೇಡ್ಕರವರು ವಿರೋಧಿಸುವುದರ ಜೊತೆಗೆ ಒಂದು ರಾಷ್ಟ್ರವನ್ನು ಮತ್ತೊಂದು ರಾಷ್ಟ್ರ ಶೋಷಿಸುವುದನ್ನು ಪ್ರತಿಭಟಿಸಿದ್ದಾರೆ. ಜಾಗತೀಕರಣವು ಮೀಸಲಾತಿಯನ್ನು ಅಪ್ರಸ್ತುತವಾಗಿಸುತ್ತ ಪ್ರಜಾಪ್ರಭುತ್ವದ ನೆಲೆಗಳನ್ನು ಸಡಿಲಗೊಳಿಸುತ್ತಿದೆ. ಬ್ರಾಹ್ಮಣ್ಯವು ಮೀಸಲಾತಿಯನ್ನು ತಪ್ಪಿಸಲು ಮೊದಲಿನಿಂದಲೂ ಶತ ಪ್ರಯತ್ನ ಮಾಡುತ್ತಿದೆ.

ದಲಿತರಿಗೆ ಮೀಸಲಾತಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಪ್ರಜ್ಞೆ ಬೆಳೆಯಲು ಪರೋಕ್ಷವಾಗಿ ಕಾರಣವಾಗುತ್ತದೆ. ಸಮ ಸಮಾಜ ನಿರ್ಮಾಣಕ್ಕಾಗಿ, ಸಾಮಾಜಿಕ ನ್ಯಾಯದ ಸಲುವಾಗಿ ಸೃಷ್ಟಿಯಾದ ಮೀಸಲಾತಿ ನೀತಿಯನ್ನು ಆಳುವ ವರ್ಗ ವಿರೂಪಗೊಳಿಸಿದೆ. ಇದನ್ನು ದಲಿತರ, ಶೋಷಿತರ ಕಣ್ಣೊರೆಸುವ ಒಂದು ತಂತ್ರವನ್ನಾಗಿಸಿದೆ. ದೇಶದಲ್ಲಿ ಮೀಸಲಾತಿ ಸಮರ್ಪಕವಾಗಿ ಜಾರಿಯಾಗದೇ ಇರುವುದು ಇಂದಿನ ಶೋಷಿತ, ದಲಿತ ಸಮುದಾಯಗಳ ಶೇ. 75ರಷ್ಟು ಸಮಸ್ಯೆಗಳಿಗೆ ಕಾರಣವಾಗಿದೆ. ಬದಲಾವಣೆ ಕಾನೂನಿನಲ್ಲಿ ಮಾತ್ರ ಆದರೆ ಸಾಲದು, ಸಮಾಜದ ಮನಸ್ಸುಗಳು ಕೂಡ ಬದಲಾಗಬೇಕು ಹಾಗೂ ಸಮಾಜ ಪೂರ್ವಾಗ್ರಹ ಪೀಡಿತವಾಗಬಾರದು. ಇಲ್ಲದಿದ್ದರೆ ದಲಿತರ ಬದುಕು ಇನ್ನೂ ನರಕವಾಗುತ್ತದೆ.

ಅಸ್ಪೃಶ್ಯರನ್ನು ಸಮಾಜದಿಂದ ಬಹಿಷ್ಕರಿಸಿದ್ದಾರೆ ಹಾಗೂ ಶತ ಶತಮಾನಗಳಿಂದ ಆಳುವ ವರ್ಗಗಳು ಮತ್ತು ಪುರೋಹಿತಶಾಹಿಗಳು ಅವರನ್ನು ಶೋಷಣೆ ಮಾಡಿದ್ದಾರೆ. ದೇಶದ ಸಂಪತ್ತಿನ ಉತ್ಪಾದನೆಯಲ್ಲಿ ಅವರ ಶ್ರಮದ ಪಾಲು ಹೆಚ್ಚು ಇದ್ದರೂ ಕೂಡ ಆ ಶ್ರಮದ ಬೆಲೆ ಅವರಿಗೆ ಸಿಗದಂತೆ ಆಳುವ ವರ್ಗಗಳು ದೋಚಿಕೊಂಡಿದ್ದಕ್ಕಾಗಿ ಜಾತಿ ವ್ಯವಸ್ಥೆಯಿರುವವರೆಗೆ ಅಸ್ಪೃಶ್ಯರಿಗೆ ಮೀಸಲಾತಿ ಕೊಡಬೇಕು.

ಸಮ ಸಮಾಜ ನಿರ್ಮಾಣಕ್ಕಾಗಿ ಕಂಡುಕೊಂಡ ಹಲವಾರು ಮಾರ್ಗಗಳಲ್ಲಿ ಮೀಸಲಾತಿ ಕೂಡ ಒಂದು. ಇದು ಒಂದು ಕಾಲದಲ್ಲಿ ಅಸ್ಪೃಶ್ಯರಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಇಂದು ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಮುಂದುವರೆದ ಜಾತಿಗಳ ಬಡವರಿಗೂ ಮೀಸಲಾತಿ ಅವಕಾಶಗಳು ಲಭಿಸಿವೆ. ಇಂದು ಮೀಸಲಾತಿ ಪಡೆಯುತ್ತಿರುವ ಹಿಂದುಳಿದ ವರ್ಗದವರು ಮಂಡಲ್ ವರದಿ ಜಾರಿಯಾಗುವ

ಸಂದರ್ಭದಲ್ಲಿ ಬ್ರಾಹ್ಮಣಶಾಹಿಗಳ ಕುತಂತ್ರದಿಂದ ಅದರ ವಿರುದ್ಧ ಪ್ರತಿಭಟನೆ ಮಾಡಿದರು.

ಭಾರತದಲ್ಲಿ ದಲಿತರು ಜಾಗತೀಕರಣದಿಂದ ಅತೀ ಹೆಚ್ಚು ಭಾದಿತರಾಗಿದ್ದಾರೆ. ಅಸಂಘಟಿತ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಉಂಟಾದ ಉದ್ಯೋಗಗಳ ಕಡಿತ, ಮೀಸಲಾತಿ ಅಡಿಯಲ್ಲಿ ಉದ್ಯೋಗಗಳು ಭರ್ತಿಯಾಗದೇ ಇರುವುದು, ಜನಸಮೂಹವನ್ನು ಸಬಲೀಕರಿಸುವ ಶಿಕ್ಷಣ ವ್ಯಾಪಾರೀಕರಣವಾಗುತ್ತಿರುವುದು, ಗ್ರಾಮೀಣ ಆರ್ಥಿಕತೆಯ ಕೃಷಿಯೇತರ ಕ್ಷೇತ್ರಗಳಲ್ಲಿ ವಿದೇಶ ಹೂಡಿಕೆಗಳು ಕೂಡ ಹೆಚ್ಚು ಪೆಟ್ಟು ನೀಡಿವೆ, ಹಾಗೂ ದಲಿತರ ಮೇಲಿನ ದೌರ್ಜನ್ಯಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ.

ಸಮಾನ ಭೂ ಹಂಚಿಕೆಯಾದರೆ ಸಾಮಾಜಿಕ ನ್ಯಾಯ ಜಾರಿಗೆ ತರಲು ಅಳವಡಿಸಿಕೊಂಡಿರುವ ಇನ್ನುಳಿದ ಎಲ್ಲಾ ಮಾರ್ಗಗಳು ಸುಲಭವಾಗಿ ತೆರೆದುಕೊಳ್ಳುತ್ತವಂತೆ. ಜಾತಿ ಎಂಬ ಸಮನ್ವಯದ ಜೊತೆಗೆ ಭೂಮಿಯ ಮಾಲೀಕತ್ವದ ಸಮನ್ವಯ ತುಳುಕು ಹಾಕಿಕೊಂಡಿದೆ. ಇಂದಿಗೂ ಶೇ.81ರಷ್ಟು ದಲಿತರು ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಭೂ ರಹಿತ ಕೃಷಿ ಕಾರ್ಮಿಕರು. ಇವರು ಕೂಲಿಗಾಗಿ ಮೇಲುಜಾತಿ–ವರ್ಗಗಳನ್ನು ಅವಲಂಭಿಸಿದ್ದಾರೆ. ಈ ಸ್ಥಿತಿ ಬದಲಾಗಬೇಕಾದರೆ ಭೂಮಿ ಮರು ಹಂಚಿಕೆಯಾಗಬೇಕು. ಜಾಗತೀಕರಣ ಜಾರಿಗೊಳ್ಳುವುದಕ್ಕಿಂತ ಮುಂಚೆ ಎಲ್ಲಾ ರಾಜಕೀಯ ಪಕ್ಷಗಳ ಭೂ ಸುಧಾರಣೆ

ಎಂಬುದು ತಮ್ಮ ಪ್ರಣಾಳಿಕೆಗಳಲ್ಲಿ ಕಾರ್ಯಸೂಚಿಯಾಗಿತ್ತು. ಆದರೆ 1991ರಲ್ಲಿ ಆರ್ಥಿಕ ಉದಾರೀಕರಣ ಆರಂಭಗೊಂಡಾಗಿನಿಂದ ಭೂ ಸುಧಾರಣೆ ಎಂಬ ಅಜೆಂಡ ಬದಲಾಗಿ ಕಾರ್ಪೋರೇಟ್ ಕೃಷಿ ಮಹತ್ವ ಪಡೆಯಲಾರಂಭಿಸಿತು. ಅಂದರೆ ಭೂ ಹಂಚಿಕೆ ಪರಿಕಲ್ಪನೆ ಹೋಗಿ ದೊಡ್ಡ ದೊಡ್ಡ ಹಿಡುವಳಿಗಳ ಮೂಲಕ ಜಾಗತಿಕ ಕೃಷಿ ಮಾರುಕಟ್ಟೆಗೆ ಬೇಕಾದ ಉತ್ಪನ್ನಗಳನ್ನು ಬೆಳೆಯುವ ಪರಿಕಲ್ಪನೆ ಬಲ ಪಡೆಯಿತು. ಸರಕಾರಗಳು ಭೂ ಕಾಯ್ದೆಗಳನ್ನು ರಚಿಸಿ ದೊಡ್ಡ ದೊಡ್ಡ ಕಾರ್ಪೋರೇಟ್ ಹಿಡುವಳಿಗಳು ರೂಪುಗೊಳ್ಳುವುದಕ್ಕೆ ಸಹಾಯ ಮಾಡಿದರು. ಇದರಿಂದ ಒಂದು ತುಂಡು ಭೂಮಿಯೊಂದಿಗೆ ಸ್ವಂತ ಬದುಕು ಕಟ್ಟಿಕೊಳ್ಳುವ ದಲಿತರ ಕನಸು ಧ್ವಂಸವಾಯಿತು.

ಭಾರತದಲ್ಲಿ ಜಾತಿವ್ಯವಸ್ಥೆಯ ಲಕ್ಷಣವೆಂದರೆ ಶೋಷಣೆ ವಿರುದ್ಧ ಹೋರಾಡುತ್ತಿರುವ ಶೋಷಿತರೇ ಕೊನೆಗೆ ಶೋಷಕರಾಗಿ ಪರಿವರ್ತನೆಯಾಗಿ ಬದಲಾಗುತ್ತಾರೆ. ತಳ ಸಮುದಾಯಗಳ ವಿಶೇಷ ಲಕ್ಷಣವೆಂದರೆ ಹಂಚಿ ತಿನ್ನುವ ಗುಣಲಕ್ಷಣ. ಆದರೆ ಇದು ಶಿಕ್ಷಣ, ಅಧಿಕಾರ, ಸಂಪತ್ತುಗಳಿಸುವವರೆಗೂ ಇರುತ್ತದೆ. ಗಳಿಸಿದ ನಂತರ ಕಿತ್ತು ತಿನ್ನುವ ಸ್ವಾರ್ಥಗುಣ ಹೆಚ್ಚಾಗಿ ಕಂಡುಬರುತ್ತದೆ. ಈ ಗುಣವನ್ನು ಭಾರತದಲ್ಲಿ ದಲಿತ ಮಧ್ಯಮವರ್ಗ ಅಳವಡಿಸಿಕೊಂಡಿದೆ.

ಕಳೆದ 30 ವರ್ಷಗಳಿಂದ ಭೂ ಸುಧಾರಣೆ, ಹಸಿರುಕ್ರಾಂತಿ, ಪಂಚಾಯತ್ ರಾಜ್ ವ್ಯವಸ್ಥೆಗಳ ಪ್ರಭಾವ ಹಾಗೂ 1991ರ ನಂತರ ಜಾರಿಗೆ ಬಂದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಮುಕ್ತ ಮಾರುಕಟ್ಟೆಯ ಆರ್ಥಿಕ ನೀತಿಗಳಿಂದ ದಲಿತ ಸಮುದಾಯದಲ್ಲಿ ಒಂದು ಸ್ವಾರ್ಥನಿಷ್ಠ ದಲಿತ ಮಧ್ಯಮವರ್ಗ ಉದಯವಾಗಿದೆ. ಈ ವರ್ಗ ಮತ್ತು ಮೀಸಲಾತಿ ಪಡೆದುಕೊಂಡ ದಲಿತ ನೌಕರವರ್ಗಗಳು ಸಂಪೂರ್ಣವಾಗಿ ಸಾಂಸ್ಕೃತೀಕರಣ ಮತ್ತು ಬ್ರಾಹ್ಮಣೀಕರಣಗೊಂಡಿವೆ. ತನ್ನ ಸಮುದಾಯದ ಜೊತೆ ಸಂಬಂಧಗಳನ್ನು ಕಡಿದುಕೊಂಡು ವರ್ಗ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಿದೆ. ಇದು ಮೇಲುಜಾತಿಯ ಮಧ್ಯಮ ವರ್ಗದ ಗುಣಲಕ್ಷಣಗಳನ್ನು ಹೊಂದಿದೆ. ಈ ವರ್ಗ ತನ್ನ ಸಮುದಾಯದ ಮೇಲೆ ದೌರ್ಜನ್ಯಗಳು ನಡೆದರೂ ಕೂಡ ಪ್ರತಿಭಟಿಸದೇ ಮೌನವಾಗಿರುತ್ತದೆ. ಆದ್ದರಿಂದ ಶೋಷಿತ ದಲಿತ ಸಮುದಾಯ ಈ ವರ್ಗದಿಂದ ನೈತಿಕ, ರಾಜಕೀಯ, ಆರ್ಥಿಕ ಸಂಪನ್ಮೂಲವನ್ನು ನಿರೀಕ್ಷಿಸುವುದು ಕಷ್ಟವಾಗುತ್ತಿದೆ. ಈ ಎಲ್ಲಾ ಕಾರಣಗಳಿಂದ ದಲಿತ ಚಳವಳಿಗಳು ಕಳೆಗುಂದಿವೆ.

ಅಸ್ಪೃಶ್ಯರಿಗೆ ಮೀಸಲಾತಿ ವರ್ಗೀಕರಣ ಮಾಡುವುದಕ್ಕೆ ಆಳುವವರ್ಗ–ಜಾತಿಗಳಿಗೆ ಇಚ್ಛೆಯಿಲ್ಲ. ಶೋಷಿತರ ಮಧ್ಯೆ ಅತೃಪ್ತಿ, ಅಪನಂಬಿಕೆ, ಅಸಹನೆ ಬಿತ್ತಿ ದಲಿತರಲ್ಲಿ ಆಂತರಿಕ ಬಿಕ್ಕಟ್ಟು ಸೃಷ್ಟಿಸುವ ತಂತ್ರಗಾರಿಕೆ ಹೊಂದಿದ್ದಾರೆ. ಶೋಷಿತರು ಬಡಿದಾಡಿಕೊಂಡಿದ್ದರೆ ಆಳುವವರಿಗೆ ಶೋಷಿಸಲು ಅವಕಾಶವಿರುತ್ತದೆ. ಇಲ್ಲದಿದ್ದರೆ ದಲಿತರಿಂದ ವಿರೋಧ ಭಾವನೆ ಕಟ್ಟಿಕೊಂಡು ತಮ್ಮ ಶೋಷಣೆಗೆ ಸಂಚಕಾರ ಬರುತ್ತದೆ ಎಂಬ ಭಯ.

ಅಲ್ಪಸಂಖ್ಯಾತ ಬ್ರಾಹ್ಮಣರು ಶೇ. 90ರಷ್ಟು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಈ ಎಲ್ಲವುಗಳನ್ನು ಗ್ರಹಿಸಿ ಭಾರತದಲ್ಲಿ ಜನಸಂಖ್ಯೆಯಾಧಾರಿತ ಮೀಸಲಾತಿ ಹಂಚಿಕೆಯಾಗಬೇಕೆನ್ನುವುದು ಅಂಬೇಡ್ಕರ್‌ರವರ ವಾದವಾಗಿತ್ತು. ಹೊಲೆಮಾದಿಗರು ಒಳಮೀಸಲಾತಿಯನ್ನು ಪಡೆದರೂ ವಿಘಟನೆಗೊಳ್ಳದೇ ಈ ದೇಶದಲ್ಲಿ ಜಾತಿವ್ಯವಸ್ಥೆ, ಅಸ್ಪೃಶ್ಯತೆ ಇರುವವರೆಗೂ ಮತ್ತು ಖಾಸಗೀವಲಯದಲ್ಲೂ ಮೀಸಲಾತಿ ಹಾಗೂ ಅದರ ಉಳಿವಿಗಾಗಿ ಹೋರಾಟ ಮಾಡಬೇಕು. ಇದರ ಅವಶ್ಯಕತೆ ದಲಿತರಿಗೆ ಇದೆ. ಅದನ್ನು ಬಳಸಿಕೊಂಡು ಜಾತಿ ವಿನಾಶಮಾಡದೇ ಹೋದರೆ ಉಳಿಗಾಲವಿಲ್ಲ.

ದೇಶದಲ್ಲಿ ದಲಿತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದ್ದರಿಂದ ತಮಿಳುನಾಡಿನಲ್ಲಿರುವ ಶೇ. 69 ಮೀಸಲಾತಿಯಂತೆ ಕರ್ನಾಟಕದಲ್ಲೂ ಹೆಚ್ಚಿಸಿ ಜಾತಿಗಳ ಜನಸಂಖ್ಯೆಗನುಗುಣವಾಗಿ ಮೀಸಲಾತಿ ವಿಂಗಡಣೆ ಮಾಡಬೇಕು. ಮೀಸಲಾತಿ ಅಸಮರ್ಪಕ ವಿತರಣೆ ಅಸಮಾನ ಹಂಚಿಕೆಯಿಂದ ದಲಿತ ಜಾತಿಗಳಲ್ಲಿ ಆಂತರಿಕ ಬಿಕ್ಕಟ್ಟು ಸೃಷ್ಟಿಯಾಗಿ ಸಂಬಂಧಗಳು ಕಳೆಯುತ್ತಿವೆ. ಇಂದು ಶೋಷಕ ಜಾತಿಗಳು ಒಂದಕ್ಕೊಂದು ಹತ್ತಿರವಾಗುತ್ತಿವೆ. ಆದರೆ ಶೋಷಿತ ಜಾತಿಗಳು ಒಂದಕ್ಕೊಂದು ದೂರವಾಗುವ ಬದಲು ಒಳಮೀಸಲಾತಿ ಕುರಿತು ದಲಿತರು ಒಟ್ಟಿಗೆ ಕುಳಿತು ಚರ್ಚಿಸಬೇಕು. ಇದನ್ನು ಲಾಭ– ನಷ್ಟದ ದೃಷ್ಟಿಯಿಂದ ಪರಿಗಣಿಸದೇ, ತಾಂತ್ರಿಕ ಕಾರಣಗಳಿಂದ ನೋಡದೇ ನ್ಯಾಯ, ಮಾನವೀಯ ಕಲ್ಪನೆಗಳಿಂದ ವಿಚಾರ ಮಾಡಬೇಕು ಮತ್ತು ಅದರ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಚರ್ಚಿಸಬೇಕು. ಅದರ ಅನುಷ್ಠಾನಕ್ಕೆ ಒತ್ತಾಯಿಸಬೇಕು. ದಲಿತರಿಂದಲೇ ದಲಿತರಿಗೆ ಶೋಷಣೆಯಾಗಬಾರದು ಎಂದರೆ ಸರಕಾರ ಕೂಡಲೇ ಒಳಮೀಸಲಾತಿ ಜಾರಿಗೆ ತರಬೇಕು. ಮೀಸಲಾತಿ ವರ್ಗೀಕರಣ ಮಾಡಿದರೆ ದಲಿತರ ಜಾತಿ–ಜಾತಿಗಳಲ್ಲಿ ಸಮಾನತೆ, ಸೌಹಾರ್ದತೆ, ಜಾತ್ಯಾತೀತತೆ, ಸ್ನೇಹವು ಬೆಳೆಯುತ್ತದೆ. ಒಳಮೀಸಲಾತಿ ನಂತರ ಕೂಡ ದಲಿತರು ಒಗ್ಗಟ್ಟಾಗಿರುವುದು ಇಂದು ಅವಶ್ಯಕವಾಗಿದೆ.

ಒಂದು ಜಾತಿಯನ್ನು ಮತ್ತೊಂದು ಜಾತಿ ಶೋಷಿಸುವುದನ್ನು ಡಾ.ಬಿ.ಆರ್.ಅಂಬೇಡ್ಕರವರು ವಿರೋಧಿಸುವುದರ ಜೊತೆಗೆ ಒಂದು ರಾಷ್ಟ್ರವನ್ನು ಮತ್ತೊಂದು ರಾಷ್ಟ್ರ ಶೋಷಿಸುವುದನ್ನು ಪ್ರತಿಭಟಿಸಿದ್ದಾರೆ. ಜಾಗತೀಕರಣವು ಮೀಸಲಾತಿಯನ್ನು ಅಪ್ರಸ್ತುತವಾಗಿಸುತ್ತ ಪ್ರಜಾಪ್ರಭುತ್ವದ ನೆಲೆಗಳನ್ನು ಸಡಿಲಗೊಳಿಸುತ್ತಿದೆ. ಬ್ರಾಹ್ಮಣ್ಯವು ಮೀಸಲಾತಿಯನ್ನು ತಪ್ಪಿಸಲು ಮೊದಲಿನಿಂದಲೂ ಶತ ಪ್ರಯತ್ನ ಮಾಡುತ್ತಿದೆ. ಆದ್ದರಿಂದ ಒಳಮೀಸಲಾತಿಪರ ಹೋರಾಟಗಾರರು ಬ್ರಾಹ್ಮಣ್ಯಶಾಹಿ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ, ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ವಿರುದ್ಧ ಹೋರಾಟ ಮಾಡುತ್ತಾ ಅಸ್ಪೃಶ್ಯ ಸಮುದಾಯದಲ್ಲಿ ಪರ್ಯಾಯ ಜನಪರ ಆಲೋಚನೆ, ಪರ್ಯಾಯ ವ್ಯವಸ್ಥೆ ಕಲ್ಪಿಸುವ ಮಹತ್ವದ ಹೊಣೆಗಾರಿಕೆ ಇದೆ. ಇಂತಹವುಗಳನ್ನು ಮಾಡಿರುವುದರಿಂದಲೇ ಬುದ್ಧ, ಬಸವ, ಮಾರ್ಕ್ಸ್, ಅಂಬೇಡ್ಕರ್, ಲೆನಿನ್, ಮಾವೋ, ಪೆರಿಯಾರ್, ಪ್ರೊ॥ ಬಿ, ಕೃಷ್ಣಪ್ಪರವರ ಹೋರಾಟಗಳು ಚರಿತ್ರೆಯಲ್ಲಿ ಬಹಳ ಪ್ರಧಾನವಾಗಿವೆ. ■

ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ



ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಇವುಗಳ ಬಗೆಗೆ ನಿರ್ಮಾಣ ಮಾಡಿರುವ ಅಭಿಪ್ರಾಯದ ಸ್ವರೂಪ

ಶಿಕ್ಷಣ ಮತ್ತು 'ಸಾಮಾಜಿಕ ನ್ಯಾಯ' ಈ ಎರಡನ್ನೂ ಅನೇಕ ಸಲ ಒಟ್ಟೊಟ್ಟಿಗೇ ಚರ್ಚೆಗೆ ಎತ್ತಿಕೊಳ್ಳುವುದಿದೆ. ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ವಲಯಗಳ ಗಂಭೀರ ಚರ್ಚೆಗಳಲ್ಲಿ ಇದನ್ನು ಕಾಣುತ್ತಿದ್ದೇವೆ. ಶಿಕ್ಷಣದಿಂದ ಅಥವಾ ಶಿಕ್ಷಣ ವಂಚಿತರಿಗೆ ಶಿಕ್ಷಣ ಕೊಡುವುದರ ಮೂಲಕ 'ಸಾಮಾಜಿಕ ನ್ಯಾಯ'ವನ್ನು ನಿರ್ಮಾಣ ಮಾಡಬಹುದು ಎಂದು ಹೇಳಲಾಗುತ್ತಿದೆ. ಈ ಬಗೆಯ ಚರ್ಚೆ ವ್ಯಾಪಕವಾಗಿ ನಡೆಯುತ್ತಿದೆ. ವಾಸ್ತವವಾಗಿ ಈ ಎರಡನ್ನೂ ಹಾಗೆ ಜೋಡಿಸಿ ಚರ್ಚೆ ಮಾಡುತ್ತಿರುವುದರ ಮರ್ಮವೇನು? ಶಿಕ್ಷಣದ ಘೋಷಿತ ಉದ್ದೇಶ ಏನಾಗಿದೆ? ಮತ್ತು ವಾಸ್ತವ ಪರಿಸ್ಥಿತಿ ಏನಾಗಿದೆ? ಶಿಕ್ಷಣದಿಂದ 'ಸಾಮಾಜಿಕ ನ್ಯಾಯ'ವನ್ನು ನಿರ್ಮಾಣ ಮಾಡಲು ಸಾಧ್ಯವೆ? ಒಂದು ವೇಳೆ ಶಿಕ್ಷಣದಿಂದ 'ಸಾಮಾಜಿಕ ನ್ಯಾಯ' ನಿರ್ಮಾಣ ಆಗುವುದಾದರೆ ಎಂತಹ 'ಸಾಮಾಜಿಕ ನ್ಯಾಯ'ವನ್ನು ನಿರ್ಮಾಣ ಮಾಡಬಹುದು? ಈ ಪ್ರಶ್ನೆಗಳ ಸ್ವರೂಪವನ್ನು ಮತ್ತು ಅವುಗಳ ಸಮಸ್ಯೆಯ ಒಳರೂಪವನ್ನು ಕುರಿತು ಚರ್ಚೆ ಮಾಡುವ ಅಗತ್ಯವಿದೆ. ಈ ವ್ಯಾಪ್ತಿಯ ಕೆಲವು ಚರ್ಚೆಗಳನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗುವುದು.

ಇಡಿಯಾಗಿ ಶಿಕ್ಷಣ ವ್ಯವಸ್ಥೆ ಇವತ್ತು ಏನಾಗಿದೆ ಎಂಬುದು ಒಂದು ಆಯಾಮ. ಶಿಕ್ಷಣದಿಂದ ಸಮಾಜದ ಬೇರೆ ಬೇರೆ ಸ್ತರದವರು ಏನನ್ನು ಬಯಸುತ್ತಿದ್ದಾರೆ ಎಂಬುದು ಇನ್ನೊಂದು ಆಯಾಮ. ಶಿಕ್ಷಣದ ಮೇಲೆ ಏನನ್ನು ಆರೋಪಿಸಲಾಗಿದೆ ಅಥವಾ ಶಿಕ್ಷಣದಿಂದ ಏನನ್ನು ಅಪೇಕ್ಷೆ/ ನಿರೀಕ್ಷೆ ಮಾಡಲಾಗುತ್ತಿದೆ ಎಂಬುದು ಮತ್ತೊಂದು ಆಯಾಮ. ಇದೇ ರೀತಿಯಲ್ಲಿ 'ಸಾಮಾಜಿಕ ನ್ಯಾಯ' ಎಂಬುದು ಏನಾಗಿದೆ, ಸಮಾಜದ ಬೇರೆ ಬೇರೆ ಸ್ತರದವರು ಯಾವ ಯಾವ ಬಗೆಯ 'ಸಾಮಾಜಿಕ ನ್ಯಾಯ'ವನ್ನು ಅಪೇಕ್ಷೆ/ ನಿರೀಕ್ಷೆ ಮಾಡುತ್ತಿದ್ದಾರೆ ಎಂಬ ಹಲವು ಆಯಾಮಗಳು ಈ ಚರ್ಚೆಯಲ್ಲಿ ಬರುತ್ತವೆ.

ಶಿಕ್ಷಣವನ್ನು ಸಾಮಾಜಿಕ ಅರಿವು ನೀಡುವ ಶಕ್ತಿ ಎಂದು ಹೆಸರಿಸಲಾಗಿದೆ; ಹಾಗೆಂದು ಬಿಂಬಿಸಲಾಗಿದೆ ಮತ್ತು ಅದನ್ನು ನಂಬಿಸಿ ಒಪ್ಪಿಸಲಾಗಿದೆ. ಆದರೆ ಶಿಕ್ಷಣವು ಎಂತಹ ಸಾಮಾಜಿಕ ಅರಿವನ್ನು ಕೊಡುತ್ತಿದೆ ಎಂಬುದನ್ನಾಗಲಿ ಇಲ್ಲವೆ ಸಮಾಜದ ಬೇರೆ ಬೇರೆ ಸ್ತರದವರು ಶಿಕ್ಷಣದೊಂದಿಗೆ ಎಂತಹ ಸಂಬಂಧವನ್ನು ಇಟ್ಟುಕೊಂಡಿದ್ದಾರೆ ಎಂಬುದನ್ನಾಗಲಿ ಗಂಭೀರ ಆಲೋಚನೆಗೆ ಹಚ್ಚಿನೋಡಿಲ್ಲ. ಇದರ ಜೊತೆಗೆ ಶಿಕ್ಷಣವನ್ನು ಸಾಮಾಜಿಕ ಬದಲಾವಣೆಯ ಮಹಾನ್ ಶಕ್ತಿಶಾಲಿ ಸಾಧನವೆಂದೂ ಹೆಸರಿಸಲಾಗಿದೆ; ತೀರ್ಮಾನಿಸಲಾಗಿದೆ; ಹಾಗೆಂದು ಕೊಂಡಾಡಲಾಗಿದೆ. ಇವು ಶಿಕ್ಷಣದ ಬಗೆಗೆ ಮಾಡಲಾಗಿರುವ ಅಭಿಪ್ರಾಯಗಳು, ಮೌಲ್ಯಪ್ರಜ್ಞೆಗಳು ಮತ್ತು ನಂಬಿಕೆಗಳು. ಅಂದರೆ ಶಿಕ್ಷಣದ ಮೇಲೆ ಕೆಲವು ನಂಬಿಕೆಗಳನ್ನು ನಿರ್ಮಾಣ ಮಾಡಲಾಗಿದೆ ಮತ್ತು ಸಮಾಜದ ವಿವಿಧ ವರ್ಗದ ಜನರಲ್ಲಿ ಅವು ಗಟ್ಟಿಯಾಗಿ ಬೇರೂರುವಂತೆ ಮಾಡಲಾಗಿದೆ. ಹಾಗಿರುವುದರಿಂದ ಶಿಕ್ಷಣವನ್ನು ಕುರಿತು ವಿವರಿಸುವಾಗ, ಅದನ್ನು ಚರ್ಚಿಸುವಾಗ ಈ ಸ್ಥಾಪಿತ ನಂಬಿಕೆಗಳ ಮೂಲಕ ಪ್ರವೇಶ ಮಾಡುವ ರೂಢಿ ಗಟ್ಟಿಯಾಗಿ ಬೆಳೆದಿದೆ. ಈ ದೃಷ್ಟಿಯಿಂದ ಯಾಕಾಗಿ ಶಿಕ್ಷಣದ ಮೇಲೆ ಅಂತಹ ನಂಬಿಕೆಗಳನ್ನು ನಿರ್ಮಾಣ ಮಾಡಲಾಯಿತು ಎಂಬುದನ್ನು ಆಲೋಚಿಸುವ ಅಗತ್ಯವಿದೆ.

ಇವತ್ತು 'ಸಾಮಾಜಿಕ ನ್ಯಾಯ' ಎಂಬುದು ಜನಜೀವನದ ಎಲ್ಲ ವಲಯಗಳಲ್ಲಿ ಪ್ರಸ್ತಾಪವಾಗುತ್ತಿರುವ ಬಹಳ ಮುಖ್ಯವಾದ ವಿಷಯವಾಗಿದೆ. ಸಾರ್ವಜನಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ವಲಯಗಳಲ್ಲಿ ಮಾತ್ರವಲ್ಲದೆ ಕೌಟುಂಬಿಕ ನೆಲೆಯವರೆಗೆ ಇದು ವ್ಯಾಪಿಸಿದೆ; ವಿಸ್ತರಿಸಿದೆ. 'ಸಾಮಾಜಿಕ ನ್ಯಾಯ'ವನ್ನು ಕುರಿತು ಜಾಗತಿಕ ಮಟ್ಟದಲ್ಲಿ ಚರ್ಚೆ ಸಂವಾದಗಳು ನಡೆಯುತ್ತಿವೆ; ನಿರ್ಣಯಗಳು ಮಂಡನೆಯಾಗುತ್ತಿವೆ. ಸಾಮ್ರಾಜ್ಯಶಾಹಿ ಶಕ್ತಿಗಳು, ಎನ್.ಜಿ.ಓ.ಗಳ ಮೂಲಕ ಸಂಘಟಿಸಿದ ಜಾಗತಿಕ ಮಟ್ಟದ ವೇದಿಕೆಗಳು, ಆಳುವ ವರ್ಗಗಳು ತಮ್ಮ ಹಿತಾಸಕ್ತಿಯಲ್ಲಿ 'ಸಾಮಾಜಿಕ ನ್ಯಾಯ'ವನ್ನು ನಿರೂಪಿಸುತ್ತಿವೆ; ವ್ಯಾಖ್ಯಾನಿಸುತ್ತಿವೆ. ಇನ್ನೊಂದು ಕಡೆ ವಿಶಾಲವಾದ ಶೋಷಿತ ಜನಸಮುದಾಯಗಳು, ಹೋರಾಟ ಹಾಗೂ ಚಳವಳಿಗಳು ತಮ್ಮ ಹಿತಾಸಕ್ತಿಯಲ್ಲಿ 'ಸಾಮಾಜಿಕ ನ್ಯಾಯ' ಎಂಬುದನ್ನು ನಿರೂಪಿಸುತ್ತಿವೆ; ವ್ಯಾಖ್ಯಾನಿಸುತ್ತಿವೆ. ಈ ದೃಷ್ಟಿಯಿಂದ 'ಸಾಮಾಜಿಕ ನ್ಯಾಯ' ಎಂಬುದಕ್ಕೆ ಏಕೈಕ ವಿವರಣೆ, ಏಕೈಕ ನಿರೂಪಣೆ ಮತ್ತು ಏಕೈಕ ವೈಚಾರಿಕ ಚೌಕಟ್ಟು ಸಾಧ್ಯವಿಲ್ಲ. ಆದರೆ ಹೊರಗಿನ ಸಾಮಾನ್ಯ ನಂಬಿಕೆಗೆ ಮಾತ್ರ 'ಸಾಮಾಜಿಕ ನ್ಯಾಯ' ಎಂಬುದು ಎಲ್ಲರಿಗೂ ಒಂದೇ ಎಂಬಂತೆ ಬಿಂಬಿತವಾಗುತ್ತಿದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ 'ಸಾಮಾಜಿಕ ನ್ಯಾಯ' ಎಂಬುದು ಎಲ್ಲರಿಗೂ ಒಂದೇ ಎಂಬಂತೆ ಒಪ್ಪಿಸಿ, ನಂಬಿಸಲಾಗಿದೆ.

ಶಿಕ್ಷಣದ ಘೋಷಿತ ಉದ್ದೇಶ

ಶಿಕ್ಷಣಕ್ಕೆ ಪ್ರಸಿದ್ಧವಾದ ಒಂದು ಘೋಷಿತ ಉದ್ದೇಶವಿದೆ. ಅಕ್ಷರ ಕಲಿಸುವುದು, ಅಕ್ಷರ ಕಲಿಸುವ ಮೂಲಕ ಓದಲು, ಬರೆಯಲು ಕಲಿಸುವುದು, ಆ ಮೂಲಕ ಶಿಕ್ಷಣ ಪಡೆಯುವವರಿಗೆ ಅರಿವನ್ನು, ತಿಳಿವನ್ನು ನೀಡುವುದು. ಜ್ಞಾನವನ್ನು ನೀಡುವುದು, ಜ್ಞಾನವನ್ನು ಕೊಡುವುದು ಇತ್ಯಾದಿ. ಇದನ್ನೆ ಬೇರೆ ಮಾತುಗಳಲ್ಲಿ ವಿವರಿಸುವುದಾದರೆ ಅಜ್ಞಾನದ ಕಡೆಯಿಂದ ಬೆಳಕಿನೆಡೆಗೆ ತರುವುದು, ಬದುಕಲು ಕಲಿಸುವುದು, ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಕಲಿಸುವುದು ಇತ್ಯಾದಿ.

ಈಗ ಜಾರಿಯಲ್ಲಿರುವ ಶಿಕ್ಷಣವು ಬ್ರಿಟೀಶರ ಬಳುವಳಿ ಎಂಬುದನ್ನು ಮತ್ತೆ ವಿವರಿಸುವ ಅಗತ್ಯವಿಲ್ಲ. ಅದನ್ನು ಅಂದು ಜಾರಿ ಮಾಡಿದವರಿಗೆ ಯಾವ ಉದ್ದೇಶವಿತ್ತು

> **ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಎಲ್ಲಾ ಬಗೆಯ ಅಸಮಾನತೆಗಳು ಹಾಗೇ ಇರಲಿ. ಆದರೆ ಶಿಕ್ಷಣದ ಮೂಲಕ ಅಸಮಾನತೆಗಳಿಲ್ಲದ 'ಸಾಮಾಜಿಕ ನ್ಯಾಯ'ವನ್ನು ನಿರ್ಮಾಣ ಮಾಡಬಹುದು ಎಂಬುದು ಒಂದು ಹಗಲು ಕನಸು. ಆದರೆ ಈ ಹಗಲುಗನಸಿಗೂ ತನ್ನದೇ ಆದ ಕಿಮ್ಮತ್ತು ಇದೆ. ಅದೇನೆಂದರೆ 'ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ' ಎಂಬ ವಿಷಯವು ವ್ಯವಸ್ಥೆಯ ಎಲ್ಲಾ ಬಗೆಯ ಅಸಮಾನತೆಗಳನ್ನು ಮುಚ್ಚಿಟ್ಟು, ಶಿಕ್ಷಣವನ್ನು ಕುರಿತು ಮೇಲ್‌ಸ್ತರದಲ್ಲಿ ಕೇವಲ ಭಜನೆ ಮಾಡುವಂತಹ ವೈಚಾರಿಕತೆಯನ್ನು ಹುಟ್ಟುಹಾಕಿದೆ.**

ಎಂಬುದನ್ನೂ ಮತ್ತೆ ವಿವರಿಸುವ ಅಗತ್ಯವಿಲ್ಲ. ಶಿಕ್ಷಣದ ವಾಸ್ತವ ಪರಿಸ್ಥಿತಿ ಏನಾಗಿದೆ ಎಂಬುದು ನಮ್ಮ ಮುಂದಿರುವ ಮುಖ್ಯ ಪ್ರಶ್ನೆ. ಅಂದು ಮೆಕಾಲೆಯ ಉದ್ದೇಶ ಏನಿತ್ತೊ ಅದೇ ಉದ್ದೇಶದ ಸ್ವರೂಪವೇ ಇಂದಿಗೂ ಬದಲಾಗದೇ ಹಾಗೇ ಉಳಿದುಕೊಂಡು ಬಂದಿದೆ ಎಂದು ಹೇಳಲಾಗುವುದಿಲ್ಲ. ಕಾಲ ಬದಲಾದಂತೆ, ಕಾಲದ ಅಗತ್ಯಗಳು ಬದಲಾದಂತೆ, ಸಾಮಾಜಿಕ ಅಗತ್ಯಗಳು, ಅವಶ್ಯಕತೆಗಳು ಬದಲಾದಂತೆ ಶಿಕ್ಷಣದ ಉದ್ದೇಶಗಳೂ ಬದಲಾಗುತ್ತಲೆ ಬಂದಿವೆ; ಬದಲಾಗಲೇಬೇಕು.

ಶಿಕ್ಷಣದ ಘೋಷಿತ ಉದ್ದೇಶದ ಸ್ವರೂಪ ಒಂದಿದ್ದರೆ, ಅದರ ಪರಿಣಾಮದ ತುದಿಯ ಉದ್ದೇಶ ಮತ್ತೊಂದಾಗಿದೆ. ಜ್ಞಾನವನ್ನು ಕೊಡುವುದು; ಪಡೆಯುವುದು, ತಿಳುವಳಿಕೆಯನ್ನು ಕೊಡುವುದು; ಪಡೆಯುವುದು ಇತ್ಯಾದಿ ವಿವರಣೆಗಳನ್ನು ಎಷ್ಟೇ ಕೊಟ್ಟರೂ ಕೂಡ ಶಿಕ್ಷಣವು ಪ್ರಜಾಪ್ರಭುತ್ವದಲ್ಲಿ ಸರಕಾರದ ವ್ಯಾಪ್ತಿಯಲ್ಲಿ ಇರುವುದಕ್ಕೂ ಮತ್ತು ಖಾಸಗಿಯವರ ಕೈಯಲ್ಲಿರುವುದಕ್ಕೂ ಬಹಳ ವ್ಯತ್ಯಾಸವಿದೆ ಎಂಬುದನ್ನು ಒಪ್ಪಲೇಬೇಕು. ಈ ದೃಷ್ಟಿಯಿಂದ ಶಿಕ್ಷಣವನ್ನು ಮರುಪರಿಶೀಲಿಸುವ ಅಗತ್ಯವಿದೆ.

ಸಾಮಾಜಿಕ ನ್ಯಾಯದ ಸಾಮಾಜಿಕ ಸ್ವರೂಪ

ಸಮಾಜದಲ್ಲಿ ವಂಚನೆಗೆ ಒಳಗಾದ ಜನರಿಗೆ 'ಸಾಮಾಜಿಕ ನ್ಯಾಯ'ದ ಅಗತ್ಯವಿದೆ ಎಂಬ ಒತ್ತಾಯ ಬರುತ್ತಿದೆ. 'ಸಾಮಾಜಿಕ ನ್ಯಾಯ'ವನ್ನು ನಿರ್ಮಾಣ ಮಾಡುವ ಮೂಲಕ ಅವರಿಗೆ ಆಗಿರುವ ಅಥವಾ ಅವರಿಗೆ ಮಾಡಲಾಗಿರುವ ಅನ್ಯಾಯವನ್ನು ತಡೆಗಟ್ಟಬಹುದು ಇಲ್ಲವೆ ತೊಡೆದು ಹಾಕಬಹುದು ಎಂದು ನಂಬಲಾಗಿದೆ. 'ಸಾಮಾಜಿಕ ನ್ಯಾಯ' ಯಾಕಾಗಿ ಬೇಕು ಎಂಬ ಪ್ರಶ್ನೆಗೆ ಉತ್ತರ ಸರಳವಿರಬಹುದು. ಆದರೆ 'ಸಾಮಾಜಿಕ ನ್ಯಾಯ'ದ ಸ್ವರೂಪ ಯಾವುದು ಎಂಬುದು ಮಾತ್ರ ಅಷ್ಟು ಸರಳವಿಲ್ಲ. ಕೆಲವು ಸಮುದಾಯಗಳಿಗೆ ಸರಕಾರಿ ಸವಲತ್ತುಗಳು, ರಾಜಕೀಯ, ಶೈಕ್ಷಣಿಕ ಪ್ರಾತಿನಿಧ್ಯ ಎಷ್ಟು ಪ್ರಮಾಣದಲ್ಲಿ ಸಿಗಬೇಕಾಗಿತ್ತೊ ಅಷ್ಟು ಪ್ರಮಾಣದಲ್ಲಿ ಸಿಕ್ಕಿಲ್ಲ. ಒಂದು ಸಮುದಾಯದೊಳಗೇ ಕೆಲವು ಉಪ ಪಂಗಡಗಳಿಗೆ ಸರಕಾರಿ ಸವಲತ್ತುಗಳಲ್ಲಿ ತಾರತಮ್ಯವಾಗಿದೆ. ರಾಜಕೀಯ ಹಾಗೂ ಶೈಕ್ಷಣಿಕ ಅವಕಾಶ ಮತ್ತು ಸವಲತ್ತುಗಳು ಸ್ತ್ರೀ ಪುರುಷರಿಗೆ ಅಸಮಾನವಾಗಿ ಹಂಚಿಕೆಯಾಗಿವೆ. ಪ್ರದೇಶವಾರು ಹಂಚಿಕೆಯಲ್ಲಿ ತಾರತಮ್ಯವಾಗಿದೆ. ಇವೇ ಮುಂತಾದ ನೆಲೆಗಳಲ್ಲಿ 'ಸಾಮಾಜಿಕ ನ್ಯಾಯ'ದ ಕೊರತೆಯನ್ನು ವಿವರಿಸಲಾಗುತ್ತಿದೆ.

ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡುವಾಗ 'ಸಾಮಾಜಿಕ ನ್ಯಾಯ'ದ ಕೊರತೆಯನ್ನೂ ಪ್ರಸ್ತಾಪ ಮಾಡಲಾಗುತ್ತಿದೆ. ಒಂದು ಕಾಲದಲ್ಲಿ ಅಂಚಿನ ವಿಷಯವಾಗಿದ್ದ ಇದು ಈಗ ಕೇಂದ್ರದ ಮತ್ತು ಮುಂಚೂಣಿಯ ವಿಷಯವಾಗಿದೆ. ಹಾಗಾಗಿ 'ಸಾಮಾಜಿಕ ನ್ಯಾಯ'ದ ಬಗೆಗೆ ಹಲವು ವೇದಿಕೆಗಳಲ್ಲಿ ಚರ್ಚೆ, ಸಂವಾದಗಳು ನಡೆಯುತ್ತಿವೆ. ಈ ವಿಷಯವನ್ನು ಕುರಿತು ವೈಚಾರಿಕ ಬರವಣಿಗೆ, ಸ್ವತಂತ್ರ ಅಧ್ಯಯನಗಳು ಮತ್ತು ಸಂಶೋಧನೆಗಳು ನಡೆದಿವೆ; ನಡೆಯುತ್ತಿವೆ. ಹಾಗಾಗಿ ಸಾರ್ವಜನಿಕ ಜೀವನದಲ್ಲಿ, ರಾಜಕೀಯ ರಂಗದಲ್ಲಿ ಮತ್ತು ಬೌದ್ಧಿಕ ವಲಯದಲ್ಲಿ 'ಸಾಮಾಜಿಕ ನ್ಯಾಯ' ಕುರಿತ ಚರ್ಚೆಗೆ ಎಂದಿಲ್ಲದ ಮಹತ್ವ ಹಾಗೂ ಬೇಡಿಕೆ ಬಂದಿದೆ.

'ಸಾಮಾಜಿಕ ನ್ಯಾಯ' ಎಂಬುದು ಒಂದು ಬಗೆಯಲ್ಲಿ ಭೌತಿಕವಾಗಿ ವಸ್ತುರೂಪದ್ದು ಮತ್ತು ಅದು ಯಾರಲ್ಲಿ ಇಲ್ಲವೊ ಅವರಿಗೆ ಅದನ್ನು ಕೊಡಬಹುದು ಎಂಬಂತೆಯೇ ಅದನ್ನು ವಿವರಿಸಲಾಗುತ್ತಿದೆ. ಹಾಗಾಗಿಯೇ ಭೌತಿಕವಾಗಿ ವಸ್ತು ರೂಪದ ಕೊರತೆ ಯಾರಿಗೆ ಏನಿದೆಯೊ, ಅದನ್ನು ತುಂಬಿಸಿ ಕೊಡುವ ಮೂಲಕ 'ಸಾಮಾಜಿಕ ನ್ಯಾಯ' ಎಂಬುದನ್ನೂ ಕೊಡಬಹುದು ಎಂದು ವಿವರಿಸಲಾಗುತ್ತಿದೆ. ಹಾಗಾದರೆ 'ಸಾಮಾಜಿಕ ನ್ಯಾಯ'ದ ನಿಜವಾದ ಸ್ವರೂಪ ಯಾವುದು ಎಂಬುದನ್ನು ಚರ್ಚೆ ಮಾಡುವ ಅಗತ್ಯವಿದೆ.

ಸಾಮಾಜಿಕ ನ್ಯಾಯದ ರಾಜಕೀಯ ಸ್ವರೂಪ

'ಸಾಮಾಜಿಕ ನ್ಯಾಯ' ಎಂಬುದನ್ನು ಇದುವರೆಗಿನ ಚರ್ಚೆಗಳು ಸಮಗ್ರ ಬದುಕಿನ ಒಂದು ಆಂಶಿಕ ಸಂಗತಿಯನ್ನಾಗಿ ಮತ್ತು ಅಂಚಿನ ವಿಷಯವಾಗಿ ಮಾತ್ರ ವಿವರಿಸಿವೆ. ಅಂದರೆ ಅದು ಇಡಿಯಾಗಿ ಒಂದು ವ್ಯವಸ್ಥೆಗೇ ಸಂಬಂಧಪಟ್ಟದ್ದು ಎಂಬಂತೆ ಅದನ್ನು ಚರ್ಚೆ ಮಾಡಲು ಹೋಗಿಲ್ಲ. ಉದಾಹರಣೆಗೆ ಒಬ್ಬರು ಹಾಕಿಕೊಂಡಿರುವ ಬಟ್ಟೆ ಸ್ವಲ್ಪ ಹರಿದುಹೋಗಿದೆ. ಹರಿದು ಹೋದ ಜಾಗಕ್ಕೆ ಸ್ವಲ್ಪ ಪ್ಯಾಚ್ ಹಾಕಿಬಿಟ್ಟರೆ ಸಾಕು, ಅದರ ಸಮಸ್ಯೆ ಬಗೆಹರಿದಂತೆ ಆಯಿತು ಎಂಬಂತೆ ವಿವರಿಸಲಾಗಿದೆ. ಹಾಗಾಗಿ 'ಸಾಮಾಜಿಕ ನ್ಯಾಯ'ವನ್ನು ಕೇಳುತ್ತಿರುವ ಅಥವಾ ಅದನ್ನೊಂದು ಹಕ್ಕೊತ್ತಾಯವನ್ನಾಗಿ ಮಂಡಿಸುತ್ತಿರುವವರ ಧೋರಣೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಇದು ಕೇವಲ ರಿಪೇರಿಯ ಕೆಲಸ. ಈ ರಿಪೇರಿಯ ಕೆಲಸವನ್ನೇ 'ನ್ಯಾಯ' ಎಂತಲೂ, ಅದನ್ನೇ 'ಸಾಮಾಜಿಕ ನ್ಯಾಯ' ಎಂತಲೂ ಮೇಲಿಂದ ಮೇಲೆ ವಿವರಿಸಲಾಗುತ್ತಿದೆ. ಆದರೆ 'ಸಾಮಾಜಿಕ ನ್ಯಾಯ'ದ ಹಕ್ಕೊತ್ತಾಯ ಎಂತಹ ಸಮಾಜದಲ್ಲಿ ನಿರ್ಮಾಣವಾಗಿರುತ್ತದೆ ಎಂಬ ಬುಡದ ಪ್ರಶ್ನೆಯನ್ನು ಎತ್ತಬೇಕು.

'ಸಾಮಾಜಿಕ ನ್ಯಾಯ'ದ ಸ್ವರೂಪ ಯಾವುದು ಎಂಬುದನ್ನು ತಿಳಿಯಲು 'ಸಾಮಾಜಿಕ ಅನ್ಯಾಯ'ದ ಸ್ವರೂಪ ಯಾವುದು ಎಂಬುದನ್ನು ವಿವರಿಸಿಕೊಳ್ಳಬೇಕು. ಒಂದು ವೇಳೆ ಸಾಮಾಜಿಕ ಅನ್ಯಾಯದ ಸ್ವರೂಪವನ್ನು ತಪ್ಪಾದ ವಿಧಾನದಲ್ಲಿ ನಿರೂಪಿಸಿಕೊಂಡರೆ, 'ಸಾಮಾಜಿಕ ನ್ಯಾಯ'ದ ವಿವರಣೆ ಕೂಡ ತಪ್ಪಾಗುತ್ತದೆ. ಹಾಗಿದ್ದರೆ ಸಾಮಾಜಿಕ ನ್ಯಾಯದ ಸ್ವರೂಪದ ಗ್ರಹಿಕೆಗೆ, ಸಾಮಾಜಿಕ ಅನ್ಯಾಯದ ಸ್ವರೂಪದ ಗ್ರಹಿಕೆ ತಾತ್ವಿಕ ಬುನಾದಿ ಎಂಬುದನ್ನು ಸ್ವೀಕರಿಸಬೇಕು. ಸಾಮಾಜಿಕ ಅನ್ಯಾಯದ ಸ್ವರೂಪವನ್ನು ಬೇರೆ ಬೇರೆ ಧೋರಣೆಯವರು ಬೇರೆ ಬೇರೆ ನೆಲೆಗಳಲ್ಲಿ ನಿರೂಪಿಸಿದ್ದಾರೆ. ಒಂದು: ಸಮಾಜದಲ್ಲಿ ಸುಳ್ಳು, ಸುಲಿಗೆ, ದಬ್ಬಾಳಿಕೆ, ಮೋಸ, ಶೋಷಣೆ, ಭ್ರಷ್ಟಾಚಾರ ಇವೆಲ್ಲ ನಡೆಯುತ್ತಿವೆ. ಇವೆಲ್ಲವೂ ಅನ್ಯಾಯ ಎಂಬುದು ಒಂದು ಧೋರಣೆಯವರ ನಿರೂಪಣೆ. ಎರಡು: ಸತ್ಯ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ಕರ್ತವ್ಯ ಪಾಲನೆ ಇಲ್ಲ. ಇವೆಲ್ಲವೂ ಅನ್ಯಾಯ ಎಂಬುದು ಮತ್ತೊಂದು ಧೋರಣೆಯವರ ನಿರೂಪಣೆ. ಆದರೆ ಇವೆಲ್ಲವೂ ಮಾನವರ ವರ್ತನೆಗಳಿಗೆ ಸಂಬಂಧಿಸಿದವು. ಸಾಮಾಜಿಕ ನೆಲೆಯಲ್ಲಿ ಮೇಲ್‌ಸ್ತರಕ್ಕೆ ಸಂಬಂಧಿಸಿದವು. ಇವರ ಪ್ರಕಾರ ಸಾಮಾಜಿಕ ಅನ್ಯಾಯವನ್ನು ಹೋಗಲಾಡಿಸಬೇಕಾದರೆ ಸಮಾಜದಲ್ಲಿ 'ಒಳ್ಳೆಯತನ, ಸದ್ಭಾವನೆ' ಮುಂತಾದ ಮೌಲ್ಯಗಳು, ಮಾನವೀಯ ಮೌಲ್ಯಗಳು ನಿರ್ಮಾಣವಾಗಬೇಕು. ಆಗ ಸಾಮಾಜಿಕ ಅನ್ಯಾಯ ಇರುವುದಿಲ್ಲ ಎಂಬುದು ಅವರು ಸೂಚಿಸುವ ಮಾರ್ಗೋಪಾಯ.



ಆದರೆ ಸಾಮಾಜಿಕ ಅನ್ಯಾಯದ ಸ್ವರೂಪವನ್ನು ರಾಜಕೀಯ, ಆರ್ಥಿಕ ನೆಲೆಗಟ್ಟಿನಲ್ಲಿ ವಿವರಿಸಿಕೊಳ್ಳಬೇಕು. ಆಗ ಅದರ ತಳರೂಪ ಕಾಣತೊಡಗುತ್ತದೆ. ಇದುವರೆಗೆ ಸಾಮಾಜಿಕ ಅನ್ಯಾಯವನ್ನು ಕುರಿತ ಭಾಷಿಕ ನಿರೂಪಣೆಗಳು ಅದರ ಬೇರನ್ನು ಮುಚ್ಚಿಟ್ಟು ರೆಂಬೆಕೊಂಬೆಗಳನ್ನು ಮಾತ್ರ ವಿವರಿಸಿವೆ. ಇದು ಸಾಮಾಜಿಕ ಅನ್ಯಾಯದ ಸ್ವರೂಪವನ್ನು ತಿಳಿಯಲು ವೈಚಾರಿಕವಾಗಿ ದೊಡ್ಡ ಅಡ್ಡಿಯಾಗಿದೆ. ಸಾಮಾಜಿಕ ಅನ್ಯಾಯದ ಸ್ವರೂಪವನ್ನು ಈ ಮುಂದಿನ ಮಾತುಗಳಲ್ಲಿ ವಿವರಿಸಬಹುದು. ಒಂದು ವ್ಯವಸ್ಥೆಯಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳಿದ್ದರೆ ಅಲ್ಲಿ ಎಲ್ಲಾ ರೀತಿಯ ಶೋಷಣೆಗಳು ಇರುತ್ತವೆ. ಇರುವುದು ಮಾತ್ರವಲ್ಲ ಅವು ಹೊಸ ಹೊಸ ರೂಪಗಳಲ್ಲಿ ಸೃಷ್ಟಿಯಾಗುತ್ತಾ ಹೋಗುತ್ತವೆ. ಹಾಗಾಗಿ ವ್ಯವಸ್ಥೆಯಲ್ಲಿ ತಾನೇತಾನಾಗಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಸೃಷ್ಟಿಯಾಗಿರುತ್ತದೆ. ಈ ಮೂಲಭೂತ ಅಸಮಾನತೆಯೇ ಉಳಿದೆಲ್ಲ ಅಸಮಾನತೆ, ಅನ್ಯಾಯ ಮತ್ತು ಶೋಷಣೆಗಳಿಗೆ ಮೂಲಕ ಕಾರಣವಾಗಿರುತ್ತದೆ. ರಾಜಕೀಯ, ಆರ್ಥಿಕ ನೆಲೆಯ ಈ ಅಸಮಾನತೆಯನ್ನು ಮುಚ್ಚಿಟ್ಟು ಉಳಿದ ವಿಷಯಗಳನ್ನು ಪ್ರಧಾನವೆಂದು ಪರಿಗಣಿಸಲಾಗುವುದಿಲ್ಲ. ರಾಜಕೀಯ, ಆರ್ಥಿಕ ನೆಲೆಯ ಅಸಮಾನತೆಯನ್ನು ಮತ್ತು ಅನ್ಯಾಯವನ್ನು ಹೋಗಲಾಡಿಸುವ ಮೂಲಕ 'ಸಾಮಾಜಿಕ ನ್ಯಾಯ'ವನ್ನು ಸಮಾಜದಲ್ಲಿ ಕ್ರಮೇಣ ನಿರ್ಮಾಣ ಮಾಡಬಹುದು.

ಇದೊಂದು ಪ್ರಕ್ರಿಯೆ. ಇದು ಒಂದು ಘಟನೆ ಅಲ್ಲ.

ಶಿಕ್ಷಣದ ವಾಸ್ತವ ಪರಿಸ್ಥಿತಿ

ಶಿಕ್ಷಣದ ವಾಸ್ತವ ಪರಿಸ್ಥಿತಿ ಏನಾಗಿದೆ ಎಂಬುದನ್ನು ಪರಿಶೀಲಿಸುವ ಮೂಲಕ ಚರ್ಚೆಯನ್ನು ಮತ್ತೊಂದು ಆಯಾಮಕ್ಕೆ ತಿರುಗಿಸಬಹುದು. ಇವತ್ತು ಶಿಕ್ಷಣದ ಬಗ್ಗೆ ಗಂಭೀರವಾದ ವಿಮರ್ಶೆಗಳು ನಡೆಯುತ್ತಿವೆ. ಅಂತಹ ವಿಮರ್ಶೆಗಳ ಒಂದು ಮುಖ್ಯ ಅಂಶ ಇವತ್ತು ಶಿಕ್ಷಣವನ್ನು 'ಕೇಸರೀಕರಣ ಮಾಡಲಾಗುತ್ತಿದೆ. ಮೂಲಭೂತವಾದಿ ವಿಚಾರಗಳನ್ನು ಅದರಲ್ಲಿ ಜಾರಿಗೊಳಿಸಲಾಗುತ್ತಿದೆ' ಎಂದಿದೆ. ಇವತ್ತು ಶಿಕ್ಷಣ ಕೇವಲ ಕೇಸರೀಕರಣ ಮಾತ್ರ ಆಗುತ್ತಿಲ್ಲ. ಅದಕ್ಕಿಂತ ಮುಖ್ಯವಾಗಿ ಅದು ವ್ಯಾಪಾರೀಕರಣವಾಗುತ್ತಿದೆ. ವ್ಯಾಪಾರೀಕರಣದ ಈ ಜಾಲ ಪ್ರಿ-ಎಲ್.ಕೆ.ಜಿ.ಯಿಂದ ಶುರುವಾಗಿ ವಿದೇಶಿ ವಿಶ್ವವಿದ್ಯಾಲಯಗಳವರೆಗೆ ವ್ಯಾಪಿಸಿದೆ. ಕರ್ನಾಟಕದ ಸಾಮಾನ್ಯ ಚಿತ್ರಣದ ಮೂಲಕ ಹೇಳುವುದಾದರೆ ಕರ್ನಾಟಕದಲ್ಲಿ ಶೇಕಡ 75ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಖಾಸಗಿಯವರ ಕೈಯಲ್ಲಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಬಂಡವಾಳಗಾರರಲ್ಲಿ ಅನೇಕರನ್ನು ಕೆಲವರು ಪ್ರಗತಿಪರರು ಎಂದು ಕೊಂಡಾಡುತ್ತಿದ್ದಾರೆ. ಅಂತವರನ್ನು ಸಾಮಾಜಿಕ ಹೋರಾಟಗಾರರು ಎಂದು ಬಿಂಬಿಸುತ್ತಿದ್ದಾರೆ. ಇಂತಹ ವರ್ಣನೆಯಲ್ಲಿ ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡುತ್ತಿರುವ ಶೋಷಣೆ, ಅನ್ಯಾಯಗಳೆಲ್ಲ ಮುಚ್ಚಿಹೋಗುತ್ತಿವೆ.

ಒಂದು ಕಾಲದಲ್ಲಿ ಕೃಷಿ ವಲಯಕ್ಕೆ ಬಂಡವಾಳವನ್ನು ತೊಡಗಿಸಲಾಗುತ್ತಿತ್ತು. ನಂತರ ಕೈಗಾರಿಕಾ ವಲಯಕ್ಕೆ ಬಂಡವಾಳವನ್ನು ತೊಡಗಿಸುವುದು ಜಾರಿಗೆ ಬಂತು. ಇತ್ತೀಚೆಗೆ ಶಿಕ್ಷಣಕ್ಕೆ ಬಂಡವಾಳ ಹೂಡುವ ಕುತಂತ್ರಗಾರಿಕೆ ಬಲವಾಗಿ ಬೆಳೆದಿದೆ. ಈ ಮಾತಿಗೆ ಬಹಳ ವಿಶಾಲವಾದ ವ್ಯಾಪ್ತಿ ಇದೆ. ಇದು ಕೇವಲ ಸರಕಾರಿ ವ್ಯಾಪ್ತಿಯ ಶಿಕ್ಷಣ ಮತ್ತು ಖಾಸಗಿ ವಲಯದ ಶಿಕ್ಷಣ ಎಂದು ಸರಳವಾಗಿ ವಿಂಗಡಿಸುವ ವಿಷಯಕ್ಕೆ ಮಾತ್ರ ಸೀಮಿತವಾದುದಲ್ಲ. ಇದರಾಚೆಗೆ ಶಿಕ್ಷಣದ ಹಲವು ನೆಲೆಗಳಲ್ಲಿ ಹಣವನ್ನು ತೊಡಗಿಸಿ, ಅದನ್ನು ಅತಿವೇಗದಲ್ಲಿ ಎರಡುಮೂರು ಪಟ್ಟು ಮಾಡಿಕೊಳ್ಳುವ ಲಾಭಕೋರತನ ಹೆಚ್ಚಾಗುತ್ತಿದೆ. ಹೊರನೋಟಕ್ಕೆ ಅದು ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಪೂರಕ ಎಂಬಂತೆ ಕಾಣುತ್ತದೆ. ಆದರೆ ಅದರ ಒಳಸೂಕ್ಷ್ಮಗಳನ್ನು ಗಮನಿಸಿದರೆ ಅದರೊಳಗೆ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ನಯವಾದ ವಿಧಾನದಲ್ಲಿ ನೇರವಾಗಿ ಸುಲಿಗೆ ಮಾಡುವ ಬಹಿರಂಗ ದಬ್ಬಾಳಿಕೆ ನಡೆಯುತ್ತಿದೆ. ತರಗತಿಗಳಲ್ಲಿ ಪಾಠ ಮಾಡಿ ವಿದ್ಯಾರ್ಥಿಗಳನ್ನು ತಯಾರು ಮಾಡುವ ಕೆಲಸ ಕಡಿಮೆಯಾಗುತ್ತಿದೆ. ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಖಾಸಗಿ ಟ್ಯೂಶನ್‌ಗೆ ಹೋಗಲೇಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. ಖಾಸಗಿ ಶಾಲಾ ಕಾಲೇಜುಗಳಲ್ಲಿ ಒಬ್ಬ ವಿದ್ಯಾರ್ಥಿಗೆ (ಉದಾಹರಣೆಗೆ ಅಷ್ಟೆ) ಒಂದು ತಿಂಗಳಿಗೆ 100 ರೂಪಾಯಿ ಟ್ಯೂಶನ್ ಫೀ ಇದ್ದರೆ, ಅದೇ ವಿದ್ಯಾರ್ಥಿಯಿಂದ ಖಾಸಗಿ ಟ್ಯೂಶನ್‌ನಲ್ಲಿ ಮೂರುಪಟ್ಟು ಜಾಸ್ತಿ ಫೀ ವಸೂಲು ಮಾಡುತ್ತಾರೆ. ಪೋಷಕರು ಈ ಬಗ್ಗೆ ಯಾವುದೇ ಆಲೋಚನೆ ಮಾಡದೆ ಕೊಡುತ್ತಾರೆ. ಹೀಗೆ ಅನ್ಯಾಯವಾಗಿ ಹಣವನ್ನು ವಸೂಲು ಮಾಡುವ ಮತ್ತು ಅನ್ಯಾಯವಾಗಿ ಹಣವನ್ನು ಕೊಡುವ ವಿಧಾನವು ತಪ್ಪು ಮತ್ತು ಅಪರಾಧ ಎಂದು ಎರಡೂ ಕಡೆಯವರೆಗೆ ಅನಿಸುತ್ತಲೇ ಇಲ್ಲ. ಇದು ಎರಡೂ ಕಡೆಯವರಿಗೆ ಅತ್ಯಂತ ಸಹಜ ಎನಿಸಿದೆ. ಅಂದರೆ ಶಿಕ್ಷಣ ವಲಯದಲ್ಲಿ ಸುಲಿಗೆ ಎನ್ನುವುದು ಅತ್ಯಂತ ಸಾಮಾನ್ಯ ಸಂಗತಿ ಎನಿಸಿದೆ; ಅತ್ಯಂತ ಸಹಜ ಸಂಗತಿ ಎನಿಸಿದೆ.

ಶಿಕ್ಷಣದ ಬೇರೆ ಬೇರೆ ಹಂತಗಳಲ್ಲಿ, ಬೇರೆ ಬೇರೆ ವಿಷಯಗಳಿಗೆ ಟ್ರೈನಿಂಗ್ ಕೊಡುವ ತಂತ್ರಗಳನ್ನು ರೂಪಿಸಲಾಗಿದೆ. ಮೆಮೊರಿ ಪವರ್ ಜಾಸ್ತಿ ಮಾಡುವುದು, ವ್ಯಕ್ತಿತ್ವವನ್ನು ರೂಪಿಸುವುದು, ಹ್ಯಾಡ್‌ರೈಟಿಂಗ್ ಇಂಪ್ರೂವ್ ಮಾಡುವುದು ಇತ್ಯಾದಿ ಒಂದೆ ಎರಡೆ, ನೂರಾರು ಬಗೆಯ ಕೊರತೆಗಳನ್ನು ಸೃಷ್ಟಿ ಮಾಡಲಾಗಿದೆ. ಅಂತಹ ಕೊರತೆಗಳನ್ನು ತುಂಬಿಸಿಕೊಡುವುದಕ್ಕಾಗಿ ಬಗೆಬಗೆಯ ಟ್ರೈನಿಂಗ್‌ಗಳನ್ನು ಸೃಷ್ಟಿ ಮಾಡಲಾಗಿದೆ. ಅಲ್ಲೆಲ್ಲ ವ್ಯಾಪಕ ಪ್ರಮಾಣದಲ್ಲಿ ಹಣದ ಸುಲಿಗೆ ನಡೆದಿದೆ; ನಡೆಯುತ್ತಿದೆ. ಪೋಷಕರನ್ನು ಮತ್ತು ವಿದ್ಯಾರ್ಥಿಗಳನ್ನು ಏಕಕಾಲಕ್ಕೆ ಆರ್ಥಿಕವಾಗಿ ಸುಲಿಗೆ ಮಾಡುವ ಈ ಕೆಲಸ ಯಾರಲ್ಲಿಯೂ ಕಿಂಚಿತ್ ಪ್ರಮಾಣದ ಮುಜುಗರ, ಅಸಹನೆ ಮತ್ತು ಭಿನ್ನಮತವನ್ನು ಮೂಡಿಸುತ್ತಿಲ್ಲ.

ಇದು ಕೇವಲ ಆರ್ಥಿಕ ಸುಲಿಗೆ ಮಾತ್ರವಲ್ಲ; ಇದನ್ನು ಹಾಗೆ ಕೇವಲ ಆರ್ಥಿಕ ಸುಲಿಗೆ ಎಂದು ಸರಳೀಕರಿಸಬಾರದು. ಆರ್ಥಿಕ ಸುಲಿಗೆಯ ಜೊತೆಗೆ ಇದು ಸಾಮಾಜಿಕ ಅಭಿಪ್ರಾಯವನ್ನೂ ಬಹಳ ಗಟ್ಟಿಯಾಗಿ ಸೃಷ್ಟಿ ಮಾಡಿದೆ. ಅದೇನೆಂದರೆ ಹೊರಗಿನಿಂದ ಕೃತಕವಾಗಿಯೊ, ನಯವಾದ ಬಲಾತ್ಕಾರದಿಂದಲೊ ಹಣಕಾಸು ಸುಲಿಗೆ

> **'ಸಾಮಾಜಿಕ ನ್ಯಾಯ' ಎಂಬುದನ್ನು ಇದುವರೆಗಿನ ಚರ್ಚೆಗಳು ಸಮಗ್ರ ಬದುಕಿನ ಒಂದು ಆಂಶಿಕ ಸಂಗತಿಯನ್ನಾಗಿ ಮತ್ತು ಅಂಚಿನ ವಿಷಯವಾಗಿ ಮಾತ್ರ ವಿವರಿಸಿವೆ. ಅಂದರೆ ಅದು ಇಡಿಯಾಗಿ ಒಂದು ವ್ಯವಸ್ಥೆಗೇ ಸಂಬಂಧಪಟ್ಟದ್ದು ಎಂಬಂತೆ ಅದನ್ನು ಚರ್ಚೆ ಮಾಡಲು ಹೋಗಿಲ್ಲ. ಉದಾಹರಣೆಗೆ ಒಬ್ಬರು ಹಾಕಿಕೊಂಡಿರುವ ಬಟ್ಟೆ ಸ್ವಲ್ಪ ಹರಿದುಹೋಗಿದೆ. ಹರಿದು ಹೋದ ಜಾಗಕ್ಕೆ ಸ್ವಲ್ಪ ಪ್ಯಾಚ್ ಹಾಕಿಬಿಟ್ಟರೆ ಸಾಕು, ಅದರ ಸಮಸ್ಯೆ ಬಗೆಹರಿದಂತೆ ಆಯಿತು ಎಂಬಂತೆ ವಿವರಿಸಲಾಗಿದೆ. ಹಾಗಾಗಿ 'ಸಾಮಾಜಿಕ ನ್ಯಾಯ'ವನ್ನು ಕೇಳುತ್ತಿರುವ ಅಥವಾ ಅದನ್ನೊಂದು ಹಕ್ಕೊತ್ತಾಯವನ್ನಾಗಿ ಮಂಡಿಸುತ್ತಿರುವವರ ಧೋರಣೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ.**

ಮಾಡುತ್ತಿರುವುದು ತಪ್ಪು ಎಂದನಿಸುತ್ತಲೇ ಇಲ್ಲ. ಇದು ಶಿಕ್ಷಣ ವಲಯದಲ್ಲಿ ಎಂತಹದ್ದೇ ದರೋಡೆ ನಡೆದರೂ ಅದನ್ನು ಪ್ರಶ್ನೆ ಮಾಡದೆ ಸ್ವೀಕರಿಸಿ, ಒಪ್ಪಿಕೊಂಡು ಹೋಗುವ ಸಾಮಾಜಿಕ ಮನೋಧರ್ಮವನ್ನು ನಿರ್ಮಾಣ ಮಾಡಿದೆ. ಈ ಸಾಮಾಜಿಕ ಮನೋಧರ್ಮ ಅತ್ಯಂತ ಅಪಾಯಕಾರಿಯಾದುದು. ಈ ಸಾಮಾಜಿಕ ಮನೋಧರ್ಮವೇ ಶಿಕ್ಷಣ ರಂಗದಲ್ಲಿ ನಡೆಯುತ್ತಿರುವ ಎಂತಹದ್ದೇ ಸುಲಿಗೆಯನ್ನು ಅದು ಸುಲಿಗೆ ಎಂದು ಗ್ರಹಿಸಲು ಬಿಡುತ್ತಿಲ್ಲ; ಬದಲಿಗೆ ಅದು 'ಸುಧಾರಣೆ, ಪ್ರಗತಿ, ವಿಕಸನ' ಇತ್ಯಾದಿಯಾಗಿ ನಂಬುವಂತೆ ಮಾಡಿದೆ. ಅಂದರೆ ಶೈಕ್ಷಣಿಕ ವಲಯದಲ್ಲಿ ಯಾವುದನ್ನು ಅನ್ಯಾಯ ಮತ್ತು ಶೋಷಣೆ ಎಂದು ಗುರುತಿಸಬೇಕಾಗಿತ್ತೊ ಅದನ್ನು ಹಾಗೆಂದು ಗುರುತಿಸಲು ಹೋಗುತ್ತಿಲ್ಲ.

ಇನ್ನು ಶೈಕ್ಷಣಿಕ ಪಠ್ಯಕ್ರಮದ ಸ್ವರೂಪ ಮತ್ತು ಅದು ಮಕ್ಕಳಲ್ಲಿ ಉಂಟುಮಾಡುತ್ತಿರುವ ಮನೋಧರ್ಮದ ಸ್ವರೂಪವನ್ನು ಚರ್ಚೆಗೆತ್ತಿಕೊಳ್ಳಬಹುದು. ಯಾವುದೇ ಹಂತದ ಮತ್ತು ಯಾವುದೇ ವಿಷಯದ ಪಠ್ಯಕ್ರಮದಲ್ಲಿ ಸಾಮಾಜಿಕ ಅನ್ಯಾಯದ ವಿಷಯಗಳನ್ನು ಮಕ್ಕಳಿಗೆ ಹೇಳಿಕೊಡುತ್ತಿಲ್ಲ; ಕಲಿಸುತ್ತಿಲ್ಲ. 'ಎಲ್ಲವೂ ಚೆನ್ನಾಗಿದೆ; ಎಲ್ಲದೂ ಚೆನ್ನಾಗಿದೆ' ಎಂಬಂತೆಯೇ ಮಕ್ಕಳಿಗೆ ಹೇಳಿಕೊಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಪ್ರಶ್ನೆ ಮಾಡುವ, ಸಂದೇಹ ವ್ಯಕ್ತಮಾಡುವ, ಭಿನ್ನಮತವನ್ನು ಹೂಡುವ ಆಲೋಚನ ಕ್ರಮವನ್ನು ಅವರಲ್ಲಿ ಹುಟ್ಟಿಸುತ್ತಿಲ್ಲ. ಸಮಾಜದಲ್ಲಿ ಸುಧಾರಣೆಯ ಹೆಸರಿನಲ್ಲಿ ನಡೆಸಲಾಗುತ್ತಿರುವ ಸುಲಿಗೆಯನ್ನು, ನ್ಯಾಯದ ಪೋಷಾಕಿನಲ್ಲಿ ನಡೆಸುತ್ತಿರುವ

ಅನ್ಯಾಯವನ್ನು ವೈಭವೀಕರಿಸಿ ಮಕ್ಕಳಿಗೆ ಕಲಿಸಲಾಗುತ್ತಿದೆ. ಪರಿಣಾಮವಾಗಿ ವಿಶಾಲವಾದ ಬಹುದೊಡ್ಡ ಒಂದು ತಲೆಮಾರನ್ನು ವ್ಯವಸ್ಥೆಯನ್ನು ಕುರಿತು ಯಾವುದೆ ಪ್ರಶ್ನೆ ಮಾಡದಂತೆ ತಯಾರು ಮಾಡಲಾಗುತ್ತಿದೆ. ಅವರ ಪ್ರಜ್ಞೆಯನ್ನು ಮತ್ತು ಅವರ ತಿಳುವಳಿಕೆಯನ್ನು ವ್ಯವಸ್ಥೆಯ ಎಲ್ಲಾ ಬಗೆಯ ಅನ್ಯಾಯ, ಅಸಮಾನತೆ ಮತ್ತು ಶೋಷಣೆಗಳನ್ನು ನಯವಾಗಿ ಒಪ್ಪಿಕೊಂಡು ಮತ್ತು ಅದಕ್ಕೆ ಹೊಂದಿಕೊಂಡು ಹೋಗುವಂತೆ ಪ್ರಚೋದಿಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ತಮ್ಮ ಮುಂದೆ ನಡೆಯುತ್ತಿರುವುದು ಬಿಡಿಯಾಗಿ ಯಾವುದೊ ಸನ್ನಿವೇಶ ತಪ್ಪು ಎಂದು ಕಂಡಾಗಲೂ ಅದನ್ನು ತಪ್ಪು ಎಂದು ತೀರ್ಮಾನಿಸುವ ಗೋಜಿಗೇ ಹೋಗದಂತೆ ತಡೆಯಲಾಗಿದೆ. ಸಾಮಾಜಿಕ ಸನ್ನಿವೇಶವೊಂದನ್ನು ವಿದ್ಯೆ ಕಲಿಯುವ ಮಕ್ಕಳು ಇಷ್ಟೊಂದು ನಿರ್ಜೀವವಾಗಿ ನೋಡುತ್ತಾರೆ ಎನ್ನುವುದಾದರೆ, ಇನ್ನು ಪಠ್ಯಕ್ರಮದೊಳಗೆ ಬರುವ ವಿಷಯ ವಸ್ತುಗಳಿಗೆ ಹೇಗೆ ತಾನೆ ಅವರು ಪ್ರತಿಕ್ರಿಯಿಸ್ಯಾರು? ಪಠ್ಯಕ್ರಮದೊಳಗಿನ ವಿಷಯಗಳಿಗೆ ಹೇಗೆ ಪ್ರಶ್ನೆಗಳ ಮೂಲಕ ಪ್ರವೇಶ ಮಾಡುವುದಿಲ್ಲವೊ ಅದೇ ರೀತಿಯಲ್ಲಿ ಸಾಮಾಜಿಕ ವಿಷಯಗಳಿಗೂ ಅವರು ಪ್ರಶ್ನೆಗಳ ಮೂಲಕ ಮತ್ತು ಭಿನ್ನಮತಗಳ ಮೂಲಕ ಪ್ರವೇಶ ಮಾಡಲಾರರು.

ಇಡಿಯಾಗಿ ವಿದ್ಯಾರ್ಥಿ ಸಮೂಹವನ್ನು ಗಮನಿಸಿದರೆ, ಬಹಳಷ್ಟು ವಿದ್ಯಾರ್ಥಿಗಳನ್ನು

ಡ್ರಾಪ್‌ಔಟ್ ಮಾಡಲಾಗುತ್ತಿದೆ. ಆ ಮೂಲಕ ಅವರು ಶಿಕ್ಷಣ ಪಡೆಯಬೇಕಾಗಿದ್ದ ಅವಕಾಶ ಮತ್ತು ಹಕ್ಕನ್ನು ಪರೋಕ್ಷ ವಿಧಾನದಲ್ಲಿ ಕಿತ್ತುಕೊಳ್ಳಲಾಗುತ್ತಿದೆ. ಅಕ್ಷರ ಶಿಕ್ಷಣ ಕಲಿಯಲು ಬರುವ ಮಕ್ಕಳ ಹಿನ್ನೆಲೆಗಳು ಒಂದೇ ರೀತಿಯಲ್ಲಿ ಇರುವುದಿಲ್ಲ. ಅವೆಲ್ಲ ಎಲ್ಲಾ ರೀತಿಯಿಂದಲೂ ಅಸಮಾನವಾಗಿರುತ್ತವೆ. ಹಲವು ರೀತಿಗಳಲ್ಲಿ ಅಸಮಾನ ಹಿನ್ನೆಲೆಯುಳ್ಳ ಮಕ್ಕಳನ್ನು ಅವರೆಲ್ಲ ಒಂದೇ ಹಿನ್ನೆಲೆಯಿಂದ ಬಂದಿರುತ್ತಾರೆ ಎಂದು ಪರಿಗಣಿಸಿ ಒಂದೇ ಬಗೆಯ ಪಠ್ಯವನ್ನು ರಚನೆ ಮಾಡುವ ಪದ್ಧತಿ ಹಾಗೆಯೇ ಮುಂದುವರಿದಿದೆ. ಹೀಗೆ ರಚನೆಯಾಗುವ ಪಠ್ಯ ಮತ್ತು ಪಠ್ಯಕ್ರಮಗಳು ಕೆಲವು ವಿದ್ಯಾರ್ಥಿಗಳನ್ನು ಮಾತ್ರ ತಮ್ಮ ಗಮನಕ್ಕೆ ತಂದುಕೊಳ್ಳುತ್ತವೆ; ಇನ್ನು ಬಹುಸಂಖ್ಯಾತ ಮಕ್ಕಳನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ಅಲ್ಪಸಂಖ್ಯೆಯ ಮಕ್ಕಳನ್ನು, ಅದರಲ್ಲೂ ಬಲಾಢ್ಯ ಹಿನ್ನೆಲೆಯ ಮಕ್ಕಳನ್ನು ಆಧರಿಸಿ ಪಠ್ಯಗಳು ಹಾಗೂ ಪಠ್ಯಕ್ರಮಗಳನ್ನು ರಚನೆ ಮಾಡಲಾಗುತ್ತಿದೆ. ಇಂತಹ ಪಠ್ಯ ಮತ್ತು ಪಠ್ಯಕ್ರಮಗಳು ತಮ್ಮ ರಚನೆಯ ವಿನ್ಯಾಸ, ವಸ್ತುವಿಷಯ ಹಾಗೂ ಧೋರಣೆಗೆ ಸಂಬಂಧಿಸಿ ಬಹುಸಂಖ್ಯೆಯ ಮಕ್ಕಳನ್ನು ನಿರಾಕರಿಸುತ್ತಿರುತ್ತವೆ. ಹೀಗೆ ಪಠ್ಯ ಹಾಗೂ ಪಠ್ಯಕ್ರಮಗಳೇ ತಮ್ಮ ರಚನೆ ಮತ್ತು ಉದ್ದೇಶಗಳ ಸ್ವರೂಪದಲ್ಲಿ ಅಸಂಖ್ಯಾತ ಮಕ್ಕಳನ್ನು ತಿರಸ್ಕರಿಸುತ್ತಿರುವುದರಿಂದ ಅವರಲ್ಲಿ ಅನೇಕರು ಡ್ರಾಪ್‌ಔಟ್ ಆಗುತ್ತಿದ್ದಾರೆ. ದುರಂತವೆಂದರೆ ಹೀಗೆ ಡ್ರಾಪ್‌ಔಟ್ ಆಗುತ್ತಿರುವವರನ್ನೇ ಅದಕ್ಕೆ ಹೊಣೆಗಾರರನ್ನಾಗಿ ಹಾಗೂ ಜವಾಬುದಾರರನ್ನಾಗಿ ಮಾಡಿ, ಅವರನ್ನೇ ಕಟಕಟೆಯ ಮೇಲೆ ನಿಲ್ಲಿಸಲಾಗುತ್ತಿದೆ. ಅಂತಹವರನ್ನು 'ದಡ್ಡರು' ಎಂದು ಪರಿಗಣಿಸಲಾಗುತ್ತಿದೆ. ಅಂದರೆ ಶೈಕ್ಷಣಿಕ ರಂಗವೇ ಯಾರ ಮಕ್ಕಳು ಮೇಲೆ ಬರಬೇಕು ಮತ್ತು ಯಾರ ಮಕ್ಕಳು ಮೇಲೆ ಬರಬಾರದು ಎಂಬುದನ್ನು ತನ್ನ ಅಂತರಂಗದೊಳಗೇ ಇಟ್ಟುಕೊಂಡಿದೆ. ಈ ವಸ್ತುಸ್ಥಿತಿಯು ಮಕ್ಕಳ ಕಲಿಯುವಿಕೆಯ ಪ್ರಕ್ರಿಯೆಯಲ್ಲೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ನಿರ್ಮಾಣ ಮಾಡಿದೆ ಹಾಗೂ ಅದನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುತ್ತಿದೆ. ಶಿಕ್ಷಣ ಪಡೆದು ತಮ್ಮ ಸ್ವತಂತ್ರ ಬದುಕನ್ನು ಕಟ್ಟಿಕೊಂಡವರು ಕೆಲವರು. ಶಿಕ್ಷಣ ಪಡೆಯಲಾಗದೆ ಆ ಮೂಲಕ ಸ್ವತಂತ್ರ ಬದುಕು ಕಟ್ಟಿಕೊಳ್ಳಲಾಗದೆ ತಮ್ಮ ತಲತಲಾಂತರದ ವೃತ್ತಿ ಮತ್ತು ಕಸುಬುಗಳನ್ನು ಅವಲಂಬಿಸಿರುವವರು ಅನೇಕರು. ಇದು ಇರುವ ಮತ್ತು ಆಗುತ್ತಿರುವ ವಸ್ತುಸ್ಥಿತಿ. ಇದನ್ನು ಮುಚ್ಚಿಟ್ಟು ಶಿಕ್ಷಣವು 'ಸಾಮಾಜಿಕ ನ್ಯಾಯ'ವನ್ನು ನಿರ್ಮಾಣ ಮಾಡಿದೆ, ಮಾಡುತ್ತದೆ ಎಂದು ಜಪ ಮಾಡಲು ಬರುವುದಿಲ್ಲ.

ವಿದ್ಯಾರ್ಥಿ ಸಮೂಹದಲ್ಲಿ ಸಾಮೂಹಿಕ ಪ್ರಜ್ಞೆಯನ್ನು ಸೃಷ್ಟಿಸುವ ಹಾಗೂ ರೂಪಿಸುವ ಯಾವುದೇ ಮಾರ್ಗೋಪಾಯಗಳು ನಮ್ಮ ಶೈಕ್ಷಣಿಕ ಪರಿಸರದಲ್ಲಿ ಇಲ್ಲ. ವಿದ್ಯಾರ್ಥಿಗಳು ಬಿಡಿಬಿಡಿಯಾಗಿ ತಮ್ಮ ಬದುಕನ್ನು ಕಟ್ಟಿಕೊಳ್ಳುವಂತಹ ದಾರಿಗಳನ್ನು ಅವರಿಗೆ ತೋರಿಸಲಾಗುತ್ತಿದೆ. ಇದಕ್ಕೆ ಅತ್ಯಂತ ತೀವ್ರವಾದ ಸ್ಪರ್ಧೆ ಮತ್ತು ಪೈಪೋಟಿಯೊಂದೇ ಉಳಿದಿರುವ ದಾರಿ ಎಂಬುದನ್ನು ಮೂರ್ತರೂಪದಲ್ಲಿ ಅವರ ನೇರ ಅನುಭವಕ್ಕೆ ತರಲಾಗುತ್ತಿದೆ. ಸ್ಪರ್ಧೆ ಹಾಗೂ ಪೈಪೋಟಿಗಳು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಗುಂಪು ಇಲ್ಲವೆ ವ್ಯಕ್ತಿಗಳ ನಡುವೆ ನಡೆಯುವ ಕ್ರಿಯೆ. ಈ ಗುಂಪು ಅಥವಾ ವ್ಯಕ್ತಿಗಳು ಸಮಾನ ಶಕ್ತಿಗಳಿಂದ ಕೂಡಿರುವುದಿಲ್ಲ. ಅವರ ನಡುವೆ ವಿವಿಧ ಬಗೆಯ ಅಸಮಾನತೆಗಳಿರುತ್ತವೆ. ಇದರಲ್ಲಿ ಬಲಾಢ್ಯರು ಗೆಲ್ಲುತ್ತಾರೆ; ದುರ್ಬಲರು ಸೋಲುತ್ತಾರೆ.

ವಿದ್ಯಾರ್ಥಿ ಸಮೂಹದಲ್ಲಿ ಅತ್ಯಂತ ತೀವ್ರವಾಗಿ ಬೆಳೆಸುತ್ತಿರುವ ಸ್ಪರ್ಧಾಮನೋಭಾವವು ಅವರಲ್ಲಿ ತೀವ್ರವಾದ ಅಸಹಾಯಕತೆ ಮತ್ತು ಅತಂತ್ರತೆಯನ್ನು ಗಟ್ಟಿಯಾಗಿ ನಿರ್ಮಾಣ ಮಾಡಿದೆ. ಅವರಲ್ಲಿ ಪರಸ್ಪರ ಕೂಡಿ ಬಾಳುವ ಸಾಮೂಹಿಕ ಪ್ರಜ್ಞೆಯು ಬೆಳೆಯದೆ, ಅದರ ಜಾಗದಲ್ಲಿ 'ನಾನು ಮಾತ್ರ ಬದುಕಬೇಕು; ನಾನೊಬ್ಬನೇ ಚೆನ್ನಾಗಿ ಬದುಕಬೇಕು; ನನ್ನ ಭೌತಿಕ ಜೀವನವನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಬೇಕು; ಅದಕ್ಕೆ ಎಂತಹದ್ದೇ ದಾರಿಯನ್ನು ತುಳಿದರೂ ಸರಿಯೇ' ಎಂಬ ಸಾಮಾಜಿಕವಾದ ವಿಕೃತ ಮನೋಭಾವವನ್ನು ಹುಟ್ಟುಹಾಕಿದೆ. ಅದನ್ನು ಅವರ ವ್ಯಕ್ತಿತ್ವದ ಭಾಗವನ್ನಾಗಿ ರೂಪಿಸಿದೆ. ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ಲಾಭಕ್ಕಾಗಿ ಅತ್ಯಂತ ತೀವ್ರವಾದ ಪೈಪೋಟಿ ಇದೆ. ಲಾಭ ಬರಬೇಕೆಂದರೆ ಪೈಪೋಟಿಯನ್ನು ಎದುರಿಸಬೇಕು. ಅಸಮಾನತೆಯನ್ನು ಮುಂದುವರಿಸಬೇಕು. ಅಸಮಾನತೆಯನ್ನು ಮುಂದುವರಿಸದಿದ್ದರೆ ಬಂಡವಾಳಶಾಹಿ ಮಾರುಕಟ್ಟೆಗೆ ಲಾಭವೇ ಬರುವುದಿಲ್ಲ. ಶಿಕ್ಷಣ ಕೂಡ ಒಂದು ತಲೆಮಾರನ್ನು ಅಸಮಾನತೆಯನ್ನು ಮುಂದುವರಿಸುತ್ತಿರುವ ಬಂಡವಾಳಶಾಹಿ ಮಾರುಕಟ್ಟೆಗೆ ಅತ್ಯಂತ ಪೂರಕವಾಗಿ ತಯಾರು ಮಾಡುತ್ತಿದೆ.

ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಎಲ್ಲಾ ಬಗೆಯ ಅಸಮಾನತೆಗಳು ಹಾಗೇ ಇರಲಿ. ಆದರೆ ಶಿಕ್ಷಣದ ಮೂಲಕ ಅಸಮಾನತೆಗಳಿಲ್ಲದ 'ಸಾಮಾಜಿಕ ನ್ಯಾಯ'ವನ್ನು ನಿರ್ಮಾಣ ಮಾಡಬಹುದು ಎಂಬುದು ಒಂದು ಹಗಲು ಕನಸು. ಆದರೆ ಈ ಹಗಲುಗನಸಿಗೂ ತನ್ನದೇ ಆದ ಕಿಮ್ಮತ್ತು ಇದೆ. ಅದೇನೆಂದರೆ 'ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ' ಎಂಬ ವಿಷಯವು ವ್ಯವಸ್ಥೆಯ ಎಲ್ಲಾ ಬಗೆಯ ಅಸಮಾನತೆಗಳನ್ನು ಮುಚ್ಚಿಟ್ಟು, ಶಿಕ್ಷಣವನ್ನು ಕುರಿತು ಮೇಲ್‌ಸ್ತರದಲ್ಲಿ ಕೇವಲ ಭಜನೆ ಮಾಡುವಂತಹ ವೈಚಾರಿಕತೆಯನ್ನು ಹುಟ್ಟುಹಾಕಿದೆ. ಈ ಹುಸಿ ವೈಚಾರಿಕತೆಯು ಮೋಸದಿಂದ ಕೂಡಿದೆ ಎಂಬುದನ್ನು ಅರಿಯದಂತೆ ಮಾಡಲಾಗಿದೆ.

ಶಿಕ್ಷಣವನ್ನು ಕುರಿತ ನಮ್ಮ ಬಹುತೇಕ ಗ್ರಹಿಕೆಗಳು ಪಾರ್ಶ್ವಿಕವಾಗಿವೆ; ಆಂಶಿಕವಾಗಿವೆ. ಶಿಕ್ಷಣವನ್ನು ಕುರಿತು ಚರ್ಚೆ ಮಾಡುವಾಗಲೆಲ್ಲ ಅದನ್ನು ಅಸಮಾನತೆ ಮತ್ತು ಅನ್ಯಾಯಗಳಿಂದ ಕೂಡಿರುವ ವ್ಯವಸ್ಥೆಯ ಕೇಂದ್ರದಲ್ಲಿಟ್ಟು ನೋಡಬೇಕಾಗಿದೆ. ಶಿಕ್ಷಣವು ಸಾಮಾಜಿಕ ಅಸಮಾನತೆ ಮತ್ತು ಅನ್ಯಾಯಗಳನ್ನು ಮುಂದುವರಿಸುತ್ತಿದೆಯೊ ಅಥವಾ ಅವುಗಳನ್ನು ಸಡಿಲಗೊಳಿಸುತ್ತಿದೆಯೊ ಎಂಬ ಪ್ರಶ್ನೆ ಬಂದಾಗ, ವ್ಯವಸ್ಥೆಯಂತೆಯೇ ಶಿಕ್ಷಣ ಎಂಬ ವೈಚಾರಿಕ ಸಮೀಕರಣ ಬೇಡವೆಂದರೂ ಬರುತ್ತದೆ. ■



ಕೊಲೆಗೆ ತಲೆದಂಡ ಏಟು ಎದಿರೇಟು?

ಯಾವುದೇ ವ್ಯಕ್ತಿಯ ಪ್ರಾಣವನ್ನು ಉದ್ದೇಶಪೂರ್ವಕವಾಗಿ ತೆಗೆಯುವುದು ಮಾನವ ಹಕ್ಕುಗಳ ಅತಿ ದುಷ್ಟ ದಮನ. ಮನುಷ್ಯ ಜೀವದ ಕುರಿತ ಆಳುವವರಿಗಿರುವ ಅಗೌರವ ಮರಣದಂಡನೆ. ಅದು ಕೊಲೆಯಷ್ಟೇ ಬರ್ಬರ. ಮರಣದಂಡನೆಗೆ ನಮ್ಮ ಸಮ್ಮತಿಯಿದೆ. ಭ್ರೂಣಹತ್ಯೆ ಅಪರಾಧವೆನಿಸುವುದಿಲ್ಲ. ದೇಶದ ಒಳಗೂ, ಹೊರಗೂ ಸುಭದ್ರತೆಗಾಗಿ ಸಂಭವಿಸುವ ಸಾವು-ನೋವುಗಳು ರಾಷ್ಟ್ರೀಯ ಬದುಕಿನಲ್ಲಿ ಅನಿವಾರ್ಯವೆಂದು ಭಾವಿಸುತ್ತೇವೆ. ಆದರೆ ಮಾನವಹಕ್ಕುಗಳ ಕುರಿತು ಮಾತನಾಡುತ್ತಿರುವ, ಮಾನವ ಘನತೆಯ ಉಲ್ಲಂಘನೆ ವಿರುದ್ಧ ತಕರಾರು ದಾಖಲಾಗುತ್ತಿರುವ ಕಾಲ ಇದು. ಅಪರಾಧ-ಶಿಕ್ಷೆ-ಜೈಲಿನ ಸ್ವರೂಪ ಎಲ್ಲವೂ ಮರು ವ್ಯಾಖ್ಯಾನಕ್ಕೆ ಒಳಪಡುತ್ತಿವೆ. ಅಪರಾಧಿಗಳನ್ನು ಕೂಡಿ ಹಾಕಿ ಶಿಕ್ಷೆ ನೀಡುವ ಸ್ಥಳ ಜೈಲು ಎಂಬ ಭಾವನೆ ಹೋಗಿ, ಸಾಮಾಜೀಕರಣಗೊಳ್ಳಲು ವಿಫಲವಾದ ಸಹಜೀವಿಗಳ ಪರಿವರ್ತನಾ ಸ್ಥಳ ಎನ್ನುವಷ್ಟರಮಟ್ಟಿಗೆ ಮಾನವ ಹಕ್ಕುಗಳ ವ್ಯಾಖ್ಯಾನ ಬದಲಾಗಿದೆ. ಹೀಗಿರುತ್ತ ಮರಣದಂಡನೆಯೆಂಬ ಶಿಕ್ಷೆ 2012ನೇ ಇಸವಿಯ ವಿಶ್ವಗ್ರಾಮಕ್ಕೆ ಅಗತ್ಯವಿದೆಯೆ ಎಂಬ ಪ್ರಶ್ನೆ ಏಳುತ್ತದೆ.

ಇದು ಗಾಂಧಿ ಮತ್ತು ಮಹಾವೀರ ಪ್ರತಿಪಾದಿಸಿದ ಅಹಿಂಸೆಯನ್ನು ರಾಷ್ಟ್ರಗಳು ಅನುಸರಿಸಬಹುದಾದ ಕಾಲವಲ್ಲ, ಹಾಗೆಯೇ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಹಿಂಸೆಯೇ ಇನ್ನೊಂದು ಮಹಾಯುದ್ಧವಾಗಿ ಬೆಳೆಯುವುದನ್ನು ನೋಡುತ್ತ ಸಹಿಸಿಕೊಳ್ಳುವ ಕಾಲವೂ ಅಲ್ಲ. ಹೀಗಿರುವಾಗ ನಮ್ಮ ಕಣ್ಣೆದುರು ಸಂಭವಿಸುವ ಎಷ್ಟೋ ವಿಷಯಗಳ ಕುರಿತು ಯೋಚಿಸುವುದನ್ನೇ ಮರೆಯುತ್ತೇವೆ ಅಥವಾ ಗೊಂದಲಗೊಳ್ಳುತ್ತೇವೆ. ಕಾಲದ ಈ ರೂಪಾಂತರಕ್ಕೆ ನಮ್ಮ ಮೌನವೂ, ದ್ವಂದ್ವಗಳೂ ಕಾರಣವಾಗಿವೆ.

ಭಯೋತ್ಪಾದನೆ ಮಾಡುವವರೇ ಭಯೋತ್ಪಾದನೆ ಕುರಿತು ಹೆಚ್ಚೆಚ್ಚು ಮಾತನಾಡತೊಡಗಿರುವ ವೈರುಧ್ಯ ನಮ್ಮ ಮುಂದಿದೆ. ಅಡ್ವಾಣಿ ವಿಶ್ವಸಂಸ್ಥೆಯಲ್ಲಿ ಭಯೋತ್ಪಾದನೆ ವಿರುದ್ಧ ಗುಡುಗಿದ್ದಾರೆ. ಅಮೆರಿಕ ಜಗತ್ತಿನ ಮೂಲೆಮೂಲೆಯನ್ನು ಭಯೋತ್ಪಾದನೆಯಿಂದ ಮುಕ್ತಗೊಳಿಸಿ ಸುರಕ್ಷಿತವಾಗಿಡುವೆನೆಂದು ಹೇಳುತ್ತ ಯುದ್ಧಕ್ಕೆ ನೆವಗಳ ಹುಡುಕುತ್ತಿದೆ. ಭಯೋತ್ಪಾದನೆ ಮತ್ತು ಯುದ್ಧ ಎಂಬೆರಡು ಉನ್ಮಾದಗಳು ಯುವಜನಾಂಗವನ್ನು ಅನಗತ್ಯ ಪ್ರಾಣಹಾನಿಗೆ ಸಿದ್ಧಗೊಳಿಸುತ್ತಿರುವಾಗಲೇ ಅಜ್ಮಲ್ ಕಸಾಬ್‌ಗೆ ಗಲ್ಲು ಶಿಕ್ಷೆ ಕಾಯಮ್ಮಾಗಿರುವ ಸುದ್ದಿ ಪ್ರಕಟವಾಗಿದೆ. ಜನಮಾನಸದಲ್ಲಿ ಕಸಾಬ್, ಅಫ್ಜಲ್ ಗುರು ಮತ್ತಿತರರು ವಿಚಾರಣೆಯ ಮೊದಲೇ ಎಂದೋ ಗಲ್ಲಿಗೇರಿದ್ದಾರೆ. ಕಸಾಬ್‌ಗೆ ಗಲ್ಲು ಶಿಕ್ಷೆಯಾಗುವ ಕ್ಷಣವನ್ನು ಹಲವರು ಕಾತರದಿಂದ ಎದುರು ನೋಡುತ್ತಿದ್ದಾರೆ. ತನ್ನ ಬೇಜವಾಬ್ದಾರಿಯುತ, ಅಪಾಯಕಾರಿ ನಡವಳಿಕೆಯಿಂದ ಹಲವು ಅಮೂಲ್ಯ ಜೀವಗಳನ್ನು ಬಲಿ ತೆಗೆದುಕೊಂಡ ಆತ ಅಪರಾಧಿಯಾಗಿರಬಹುದು. ಆದರೆ ಇನ್ನೂ ಇಪ್ಪತ್ತರ ಆಸುಪಾಸಿನ ತರುಣನಿಗೆ ಮರಣದಂಡನೆ ಎನ್ನುವ ಸುದ್ದಿ ಓದುವಾಗ ಒಂದು ದೇಶ, ಸರ್ಕಾರ ಅಥವಾ ಸಮಾಜ ಮಾನವ ಜೀವದ ಕುರಿತು ಎಂಥ ಧೋರಣೆ ಇಟ್ಟುಕೊಂಡಿವೆಯಲ್ಲ ಎಂದು ದಿಗ್ಭ್ರಮೆಯಾಗುತ್ತದೆ. ಮಾನವ ಜೀವದ ಘನತೆ ಕುರಿತು ಸಮಾಜವೊಂದರ ಅಭಿಪ್ರಾಯ ತಿಳಿಯಬೇಕಿದ್ದರೆ ಆ ದೇಶದ ಶಿಕ್ಷಾ ವಿಧಾನ ಮತ್ತು ನೀತಿಗಳತ್ತ ಗಮನ ಹರಿಸಬೇಕು. ಭಯೋತ್ಪಾದಕ ಕೃತ್ಯಗಳ ಕುರಿತು ದಿನಕ್ಕೊಂದು ವರದಿ ಬರುತ್ತಿರುವಾಗ; ಭಾರತದಲ್ಲಿ ಜೀವಂತ ಮನುಷ್ಯರನ್ನು ಸುಡುತ್ತಿರುವಾಗ, ಬೆರಳೆಣಿಕೆಯಷ್ಟು ಮಂದಿ ಮಾತ್ರ ಮರಣದಂಡನೆಗೊಳಗಾಗುತ್ತಿರುವಾಗ; ವಿದೇಶಿ ಭಯೋತ್ಪಾದಕನಿಗೆ ನೀಡಲಾಗುತ್ತಿರುವ ಈ ಶಿಕ್ಷೆಯ ಕುರಿತು ಚರ್ಚಿಸುವುದು ಅಪಾಯಕಾರಿ ಉದಾರತೆಯಂತೆ ತೋರಬಹುದು. ಅವೆಲ್ಲವನ್ನೂ ಗಮನಿಸುತ್ತಲೇ ಹಿಂಸೆ ಆಳದಲ್ಲಿ ಹೇಗೆ ಹಾಸುಹೊಕ್ಕಾಗಿದೆ ಎಂದು ಚರ್ಚಿಸುವುದು ಈ ಬರಹದ ಉದ್ದೇಶವಾಗಿದೆ.

ಯಾವುದೇ ವ್ಯಕ್ತಿಯ ಪ್ರಾಣವನ್ನು ಉದ್ದೇಶಪೂರ್ವಕವಾಗಿ ತೆಗೆಯುವುದು ಮಾನವ ಹಕ್ಕುಗಳ ಅತಿ ದುಷ್ಟ ದಮನ. ಮನುಷ್ಯ ಜೀವದ ಕುರಿತ ಆಳುವವರಿಗಿರುವ ಅಗೌರವ ಮರಣದಂಡನೆ. ಅದು ಕೊಲೆಯಷ್ಟೇ ಬರ್ಬರ. ಮರಣದಂಡನೆಗೆ ನಮ್ಮ ಸಮ್ಮತಿಯಿದೆ. ಭ್ರೂಣಹತ್ಯೆ ಅಪರಾಧವೆನಿಸುವುದಿಲ್ಲ. ದೇಶದ ಒಳಗೂ, ಹೊರಗೂ ಸುಭದ್ರತೆಗಾಗಿ ಸಂಭವಿಸುವ ಸಾವು-ನೋವುಗಳು ರಾಷ್ಟ್ರೀಯ ಬದುಕಿನಲ್ಲಿ ಅನಿವಾರ್ಯವೆಂದು ಭಾವಿಸುತ್ತೇವೆ. ಆದರೆ ಮಾನವಹಕ್ಕುಗಳ ಕುರಿತು ಮಾತನಾಡುತ್ತಿರುವ, ಮಾನವ ಘನತೆಯ ಉಲ್ಲಂಘನೆ ವಿರುದ್ಧ ತಕರಾರು ದಾಖಲಾಗುತ್ತಿರುವ ಕಾಲ ಇದು. ಅಪರಾಧ-ಶಿಕ್ಷೆ-ಜೈಲಿನ ಸ್ವರೂಪ ಎಲ್ಲವೂ ಮರು ವ್ಯಾಖ್ಯಾನಕ್ಕೆ ಒಳಪಡುತ್ತಿವೆ. ಅಪರಾಧಿಗಳನ್ನು ಕೂಡಿ ಹಾಕಿ ಶಿಕ್ಷೆ ನೀಡುವ ಸ್ಥಳ ಜೈಲು ಎಂಬ ಭಾವನೆ ಹೋಗಿ, ಸಾಮಾಜೀಕರಣಗೊಳ್ಳಲು ವಿಫಲವಾದ ಸಹಜೀವಿಗಳ ಪರಿವರ್ತನಾ ಸ್ಥಳ ಎನ್ನುವಷ್ಟರಮಟ್ಟಿಗೆ ಮಾನವ ಹಕ್ಕುಗಳ ವ್ಯಾಖ್ಯಾನ ಬದಲಾಗಿದೆ. ಹೀಗಿರುತ್ತ ಮರಣದಂಡನೆಯೆಂಬ ಶಿಕ್ಷೆ 2012ನೇ ಇಸವಿಯ ವಿಶ್ವಗ್ರಾಮಕ್ಕೆ ಅಗತ್ಯವಿದೆಯೆ

ಎಂಬ ಪ್ರಶ್ನೆ ಏಳುತ್ತದೆ.

ಜಗತ್ತಿನ ಮೂರನೇ ಎರಡರಷ್ಟು ದೇಶಗಳು ರದ್ದುಮಾಡಿರುವ ಈ ಶಿಕ್ಷೆ ಎರಡನೇ ಮಹಾಯುದ್ಧದ ನಂತರ ಕ್ರಮೇಣ ಇಳಿಮುಖವಾಗಿದೆ. ಎರಡನೇ ಮಹಾಯುದ್ಧದ ವಿನಾಶ ಆಧುನಿಕಗೊಳ್ಳತೊಡಗಿದ ಜಗತ್ತಿಗೆ ಹಿಂದೆಂದೂ ಕಲಿಯದ ಪಾಠ ಕಲಿಸಿತು. ಅಹಿಂಸೆ, ಯುದ್ಧದ ವಿನಾಶಕಾರೀ ಪರಿಣಾಮ, ಅಲಿಪ್ತ ನೀತಿಯ ಕುರಿತು ಎಲ್ಲರ ಗಮನ ಹರಿಯಿತು. ಮಹಾಯುದ್ಧದ ನಂತರ ವಿಶ್ವಸಂಸ್ಥೆ ಸ್ಥಾಪನೆಯಾದಾಗ ಕೇವಲ 8 ಸದಸ್ಯ ರಾಷ್ಟ್ರಗಳು ಮರಣದಂಡನೆಯನ್ನು ರದ್ದು ಮಾಡಿದ್ದವು. 1977ರಲ್ಲಿ 16 ದೇಶಗಳು ರದ್ದು ಮಾಡಿದ್ದವು. ಈಗ 97 ದೇಶಗಳು ರದ್ದುಪಡಿಸಿವೆ. ಬೆಲಾರಸ್ ಹೊರತುಪಡಿಸಿ ಯೂರೋಪಿನ ಎಲ್ಲ ದೇಶಗಳು ಮರಣದಂಡನೆ ರದ್ದುಪಡಿಸಿವೆ. ಅಮೆರಿಕದ 16 ರಾಜ್ಯಗಳು, ಕೆರಿಬಿಯನ್ ರಾಷ್ಟ್ರಗಳು, ಆಫ್ರಿಕಾ, ಮಧ್ಯ ಏಷ್ಯಾ ಮತ್ತು ಪೆಸಿಫಿಕ್ ಪ್ರದೇಶಗಳಲ್ಲಿ ಮರಣದಂಡನೆ ತುಂಬ ಕಡಿಮೆಯಾಗಿದೆ. ಪೂರ್ವ, ಪಶ್ಚಿಮ, ದಕ್ಷಿಣ ಏಷ್ಯಾಗಳಲ್ಲಿ ಮಾತ್ರ ಈಗಲೂ ಚಾಲ್ತಿಯಲ್ಲಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2007ರಿಂದ ಮೂರು ಬಾರಿ ಮರಣ ದಂಡನೆ ರದ್ದತಿಗೆ ಗೊತ್ತುವಳಿ ಅಂಗೀಕರಿಸಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಅಹಿಂಸೆಯ ವಕ್ತಾರನಾಗಿರುವ ಭಾರತ ಮಾತ್ರ ಮೂರೂ ಸಲ ಮರಣ ದಂಡನೆ ಪರವಾಗಿ ಮತನೀಡಿತು!

ಡಾ|| ಎಚ್. ಎಸ್. ಅನುಪಮಾ

12

ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಪ್ರಕಾರ ಚೀನಾದಲ್ಲಿ ಅತಿ ಹೆಚ್ಚು ಜನರನ್ನು ಗಲ್ಲಿಗೇರಿಸಲಾಗುತ್ತದೆ. ಚೀನಾ ಸರ್ಕಾರ ಗಲ್ಲಿಗೇರಿದವರ ಅಧಿಕೃತ ಅಂಕಿಅಂಶ ನೀಡುವುದಿಲ್ಲ, ಶಿಕ್ಷಿಸಲ್ಪಟ್ಟ ಸುದ್ದಿ, ವರದಿಯಿಂದ ಅದರ ಲೆಕ್ಕ ಸಿಗಬೇಕು ಅಷ್ಟೇ. 2011ರಲ್ಲಿ 21 ದೇಶಗಳು ಮರಣದಂಡನೆ ವಿಧಿಸಿದವು. ಕೆಲ ದೇಶಗಳ ಅಂಕಿಅಂಶಗಳು ಹೀಗಿವೆ:

ಚೀನಾ	4 ಸಾವಿರ
ಇರಾನ್	360
ಸೌದಿ ಅರೇಬಿಯಾ	82
ಇರಾಕ್	68
ಅಮೆರಿಕ	43
ಯೆಮನ್	41
ಉ.ಕೊರಿಯಾ	30
ಸೋಮಾಲಿಯಾ	10
ಸುಡಾನ್	7
ಬಾಂಗ್ಲಾ, ವಿಯೆಟ್ನಾಂ, ಟೈವಾನ್	5
ಸಿಂಗಪುರ	4
ಈಜಿಪ್ಟ್	1

ಕೈಗಾರಿಕೀಕರಣಗೊಂಡ ದೇಶಗಳಲ್ಲಿ ಮರಣದಂಡನೆ ಪ್ರಮಾಣ ಕಡಿಮೆಯಿದ್ದರೆ ಅಭಿವೃದ್ಧಿ ಹೊಂದುತ್ತಿರುವ ಏಷ್ಯಾ ದೇಶಗಳಲ್ಲಿ ಹೆಚ್ಚಿದೆ. ಅದಕ್ಕೆ ಸಾರ್ವಜನಿಕ ಬೆಂಬಲವಿದೆ; ಸರ್ಕಾರ ಮತ್ತು ಮಾಧ್ಯಮಗಳು ಅದರತ್ತ ಅಷ್ಟಾಗಿ ಗಮನ ಹರಿಸಿಲ್ಲ. ಕೊಲೆ, ದ್ರೋಹ, ಗೂಢಚಾರಿಕೆ, ಮಾದಕ ವಸ್ತು ಸಾಗಾಣಿಕೆ, ಮಾನವ ಸಾಗಾಣಿಕೆಯಂತಹ ಅಪರಾಧಗಳಲ್ಲದೇ, ಧಾರ್ಮಿಕ ಅಪರಾಧಗಳಿಗೆ ಅತಿ ಕಠೋರ ಶಿಕ್ಷೆ ವಿಧಿಸುವ ಕಾರಣಕ್ಕಾಗಿ ವಿಶ್ವದ ಮೂರನೇ ಒಂದು ರಾಷ್ಟ್ರಗಳು ಮರಣದಂಡನೆ ಶಿಕ್ಷೆಯನ್ನು ಜೀವಂತವಿಟ್ಟುಕೊಂಡಿವೆ.

ಶಿಕ್ಷೆ, ಅಪರಾಧಗಳೇ ಇಲ್ಲದ ನೆಲ ಯಾವುದೂ ಇಲ್ಲ. ಹಿಂಸೆಯ ಚರಿತ್ರೆ ಮಾನವ ಚರಿತ್ರೆಯಷ್ಟೇ ಹಳೆಯದು. ಹಿಂಸೆ ಹುಟ್ಟಿನೊಂದಿಗೇ ಮೈಯಲ್ಲಿ ಅಡಗಿ ಕುಳಿತ ಬೀಜವಾದರೆ ಅಹಿಂಸೆ ಹೊರ ಹರಿವಿನ ದಾರಿ ತೋರಿಸಬೇಕಾದ ಅಂತರಗಂಗೆ. ಅಲೆಮಾರಿ ಮನುಷ್ಯ ನೆಲೆ ನಿಂತ ಕ್ಷಣದಿಂದ ರಾಷ್ಟ್ರದ ಕಲ್ಪನೆ, ಗಡಿ-ಯುದ್ಧಗಳು ಶುರುವಾದವು. ರಕ್ಷಣೆಯ ನೆಪದಲ್ಲಿ ಸರಿ-ತಪ್ಪುಗಳು ವ್ಯಾಖ್ಯಾನಿಸಲ್ಪಟ್ಟವು. ಉಲ್ಲಂಘನೆಯನ್ನು ತಡೆಯಲು ಕಠಿಣ ಶಿಕ್ಷೆಗಳು ಜಾರಿಯಾದವು. ಧರ್ಮದ್ರೋಹ-ದೇಶದ್ರೋಹ-ರಾಜದ್ರೋಹಗಳೇ ಘೋರ ಅಪರಾಧಗಳೆನಿಸಿಕೊಂಡ ಅರಸೊತ್ತಿಗೆಯ ಕಾಲದಲ್ಲಿ ಹಲವು ಬರ್ಬರ, ಕ್ರೂರ ಶಿಕ್ಷೆಗಳು ಜಾರಿಯಾದವು. ಧರ್ಮಗಳು ಅರಸೊತ್ತಿಗೆಯನ್ನು ಕಾಪಾಡುವ, ಯಥಾಸ್ಥಿತಿ ಕಾಯ್ದುಕೊಳ್ಳುವ ಉಪಕರಣಗಳಾಗಿ ಉಳಿದುಕೊಂಡು ಬಂದವು. ಕೆಲವು ಧರ್ಮಗಳು ಧರ್ಮಸಂಸ್ಥಾಪನೆ ಮತ್ತು ಧರ್ಮರಕ್ಷಣೆಗಾಗಿ ಮಾಡುವ ಯುದ್ಧ ಹಾಗೂ ಪ್ರಾಣತ್ಯಾಗ ಮೋಕ್ಷ ನೀಡುವುದೆಂದು ಹೇಳಿ ಅದನ್ನು ಉತ್ತೇಜಿಸಿದವು. ಯುದ್ಧವೆಂಬ ಸಾಮೂಹಿಕ ಹಿಂಸೆಯನ್ನು ಒಪ್ಪಿಕೊಂಡ ಮೇಲೆ ಮರಣದಂಡನೆ ಒಪ್ಪುವುದು ಕಷ್ಟವಲ್ಲ.

ಇಂದು ಮರಣದಂಡನೆ ಜಾರಿಗೊಳ್ಳುತ್ತಿರುವ ಏಷ್ಯಾದ ಬಹುಪಾಲು ದೇಶಗಳು ಬೌದ್ಧ ಧರ್ಮ ಅಪ್ಪಿಕೊಂಡಂಥವು. ಬೌದ್ಧ ಧರ್ಮ ಅಧಿಕೃತ ಧರ್ಮವಾಗಿರುವ ಭೂತಾನ್ ಮರಣದಂಡನೆ ರದ್ದುಗೊಳಿಸಿದ್ದರೆ, ಥೈಲ್ಯಾಂಡ್ ಆ ಶಿಕ್ಷೆ ಉಳಿಸಿಕೊಂಡಿದೆ. ಹಾಗಾದರೆ ಜೀವಕಾರುಣ್ಯವನ್ನು ಬೋಧಿಸಿದ, ಪಂಚಶೀಲದಲ್ಲಿ ಕೊಲ್ಲುವುದರಿಂದ ದೂರವಿರಬೇಕೆಂದು ಹೇಳುವ ಬುದ್ಧನ ಅಹಿಂಸೆ ಯಾವುದು? 'ಧಮ್ಮಪದ'ದ 10ನೇ ಅಧ್ಯಾಯ 'ಎಲ್ಲರೂ ಶಿಕ್ಷೆಗೆ ಹೆದರುತ್ತಾರೆ, ಎಲ್ಲರೂ ಸಾವಿಗೆ ಹೆದರುತ್ತಾರೆ – ನಿನ್ನಂತೆಯೇ. ಅದಕ್ಕೇ ಯಾರನ್ನೂ ಕೊಲ್ಲಬೇಡ, ಯಾರ ಸಾವಿಗೂ ಕಾರಣನಾಗಬೇಡ' ಎಂದು ಹೇಳಿದ್ದರೆ; ಮತ್ತೊಂದೆಡೆ 'ತಪ್ಪಿತಸ್ಥನನ್ನು ಶಿಕ್ಷಿಸುವುದು ಅಪರಾಧವಲ್ಲ. ಮೊದಲು ಶಾಂತಿಯುತ ವಿಧಾನಗಳನ್ನು ಪರೀಕ್ಷಿಸು. ಅದು ಸಫಲವಾಗದಿದ್ದರೆ ನ್ಯಾಯದ ನಿಯಮಾವಳಿಯಂತೆ ನಡೆದುಕೋ. ಪ್ರಪಂಚದಲ್ಲಿ ಒಳ್ಳೆಯದು ಕಮ್ಮಿಯಿದೆ ಮತ್ತು ಕೆಟ್ಟದ್ದು ಹೇರಳವಾಗಿದೆ. ಒಳಿತಿನ ರಕ್ಷಣೆಗಾಗಿ ಸಾಧ್ಯವಿರುವ ಎಲ್ಲ ಉಪಾಯವನ್ನೂ ಬಳಸಿಕೊಳ್ಳಬೇಕು' ಎನ್ನುತ್ತಾನೆ

ಒಳಿತನ್ನು ರಕ್ಷಿಸಲು ಎಲ್ಲ ಉಪಾಯವನ್ನೂ ಬಳಸಿಕೋ ಎನ್ನುವ ವ್ಯಾಖ್ಯಾನದ ಬಗ್ಗೆಯೇ ಗೊಂದಲವಿದೆ. ಬೌದ್ಧ ಧರ್ಮ ಅನುಸರಿಸುವ ಬಹಳಷ್ಟು ದೇಶಗಳು ಮೊದಲಿನಿಂದ ಒಂದಲ್ಲ ಒಂದು ಅಪರಾಧಕ್ಕೆ ಮರಣ ದಂಡನೆ ವಿಧಿಸುತ್ತ ಬಂದಿವೆ. ಕ್ರಿ.ಶ. 818ರಲ್ಲಿ ಜಪಾನಿನ ಸಗ ಚಕ್ರವರ್ತಿ ಮೊತ್ತಮೊದಲ ಬಾರಿಗೆ ಮರಣದಂಡನೆ ರದ್ದುಗೊಳಿಸಿದ. ಪ್ರತೀಕಾರದ ಒಂದು ವಿಧಾನವಾಗಿ ಕೊಲ್ಲುವುದು ಖಾಸಗಿಯಾಗಿ ಚಾಲ್ತಿಯಲ್ಲಿದ್ದರೂ ಕ್ರಿ.ಶ. 1165ರ ತನಕ ಮರಣದಂಡನೆ ರದ್ದಾಗಿತ್ತು. ಈಗ ಜಪಾನಿನಲ್ಲಿ ಮರಣದಂಡನೆ ಇದೆಯಾದರೂ ವಿಧಿಸಿದ ಶಿಕ್ಷೆಯನ್ನು ಊರ್ಜಿತಗೊಳಿಸಿ ಸಹಿ ಮಾಡಲು ಕೆಲ ಬೌದ್ಧ ಅಧಿಕಾರಿಗಳು ನಿರಾಕರಿಸುತ್ತಾರೆ. ಅದಕ್ಕವರು ಬೌದ್ಧ ಧರ್ಮದಲ್ಲಿ ಬೋಧಿಸಲಾದ ಅಹಿಂಸೆಯ ಕಾರಣ ಕೊಡುತ್ತಾರೆ.

ಜುದಾಯಿಸಂ ಸೂಕ್ತ ಕಾರಣವಿದ್ದಲ್ಲಿ ಮರಣದಂಡನೆಯನ್ನು ಒಪ್ಪುತ್ತದೆ. ಪರಮ ಕರುಣಾಳು ಕ್ರಿಸ್ತನ ಧರ್ಮ ಕ್ಷಮೆಯನ್ನು ಬೋಧಿಸಿದರೂ, ಅಲ್ಲಿ ಯುದ್ಧ–ಮರಣದಂಡನೆಯ ಪರ–ವಿರೋಧ ಎರಡೂ ಅಭಿಪ್ರಾಯಗಳನ್ನು ಕಾಣಬಹುದು. ಇಸ್ಲಾಂ ಧರ್ಮದಲ್ಲಿ ಮರಣದಂಡನೆ ಒಪ್ಪಿತವಾಗಿದ್ದು ಅದನ್ನು ಯಾವ ಅಪರಾಧಗಳಿಗೆ ಯಾವ ರೀತಿ ಕೊಡಬಹುದೆಂದು ವಿವರಿಸಲಾಗಿದೆ. ಭಾರತ ಅನಾದಿಯಿಂದ ಯುದ್ಧದ ನಾಡು. ಇಲ್ಲಿನ ದೇವಾನುದೇವತೆಗಳು ಯುದ್ಧಪ್ರಿಯರು, ಬಲಿ ಬಯಸುವವರು. ಕತೆ ಪುರಾಣಗಳು ಯುದ್ಧ–ವೀರಮರಣಗಳ ವಿವರಣೆಗಳಿಂದ ತುಂಬಿಹೋಗಿವೆ. ಅಂಥವರ ನಡುವೆ ಯುದ್ಧ ಬೇಡವೆಂದ ಅಶೋಕ, ಜೀವಕಾರುಣ್ಯ ಬೋಧಿಸಿದ ಬುದ್ಧ ಹಾಗೂ ಅಹಿಂಸೆಯ ಪ್ರತಿಪಾದಕ ಮಹಾವೀರ ವಿಶೇಷ ವ್ಯಕ್ತಿಗಳಾಗಿ ಕಾಣಿಸುತ್ತಾರೆ. ಆದರೆ ಅಹಿಂಸೆಯೇ ಧರ್ಮವೆಂದು ಬೋಧಿಸಿದ ಭಾರತದಲ್ಲಿ ಮರಣದಂಡನೆ ಶಿಕ್ಷೆಗೆ ಲೆಕ್ಕವಿಲ್ಲದಷ್ಟು ಜೀವಗಳು ಬಲಿಯಾಗಿವೆ.

* * *

ಬ್ರಿಟಿಷರು ಭಾರತ ಬಿಟ್ಟುಹೋದ ಮೇಲೂ ಅವರು ಬಿಟ್ಟು ಹೋದ ಜೈಲು–ಶಿಕ್ಷಾಸಂಹಿತೆಗಳು ಹಾಗೇ ಉಳಿದುಕೊಂಡಿವೆ. ಸ್ವಾತಂತ್ರ್ಯಾನಂತರ ಮರಣದಂಡನೆ ಶಿಕ್ಷೆಯನ್ನು ಉಳಿಸಿಕೊಂಡಿರುವ ಕಾರಣ ಕೊಡುತ್ತಾ 1967ರಲ್ಲಿ 35ನೆಯ ಲಾ ಕಮಿಷನ್ ಹೇಳಿತ್ತು: 'ವಿಶಾಲ ಭೌಗೋಳಿಕ ವ್ಯಾಪ್ತಿಯ ಈ ದೇಶದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು; ಅದರ ನಿವಾಸಿಗಳ ವೈವಿಧ್ಯಮಯ ಸಾಮಾಜಿಕ ಬೆಳವಣಿಗೆ, ನೈತಿಕತೆ, ಶಿಕ್ಷಣದಲ್ಲಿರುವ ಅಂತರವನ್ನು ಗಮನಿಸಿ; ಜನಸಮುದಾಯದ ವೈವಿಧ್ಯತೆ ಹಾಗೂ ಈ ವೈವಿಧ್ಯಗಳ ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿಯನ್ನು ಮುಖ್ಯವಾಗಿ ಪರಿಗಣಿಸಿ ಭಾರತವು ಮರಣದಂಡನೆಯನ್ನು ರದ್ದುಗೊಳಿಸುವ ಅಪಾಯಕಾರಿ ಪ್ರಯೋಗ ಮಾಡಬಯಸುವುದು ತರವಲ್ಲ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ'.

1892ರ ಬ್ರಿಟಿಷ್ ಇಂಡಿಯಾ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಯಾವುದೇ ಕೊಲೆಗೆ ಕೊಡಬಹುದಾದ ನೈಸರ್ಗಿಕ ಸಹಜ ಶಿಕ್ಷೆ ಮರಣದಂಡನೆ. ಕೊಲೆಗೆ ತಲೆದಂಡವೇ ಸರಿಯಾದ ಶಿಕ್ಷೆ ಎಂಬ ನೀತಿ! ಮರಣದಂಡನೆ ಕೊಡುವುದು ಬೇಡವೆನಿಸಿದರೆ ನ್ಯಾಯಾಧೀಶರು ಏಕೆ ಬೇಡ ಎಂದು ಕಾರಣ ಕೊಡಬೇಕಿತ್ತು. 1973ರಲ್ಲಿ 1898ರ 367(5) ಸೆಕ್ಷನ್‌ಗೆ ಬದಲಾಗಿ 354(3) ಎಂಬ ಹೊಸ ಸೆಕ್ಷನ್ ಅನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪರಿಚಯಿಸಿತು. 1974ರಲ್ಲಿ ಇದನ್ನು ಅಳವಡಿಸಿಕೊಂಡು ಬಚನ್ ಸಿಂಗ್ ಕೇಸಿನಲ್ಲಿ ಸಾಂವಿಧಾನಿಕ ಪೀಠವು ನಿಯಮಾವಳಿಗಳನ್ನು ರೂಪುಗೊಳಿಸಿ, ಕೊಲೆಗೆ ಕೊಡಬಹುದಾದ ನೈಸರ್ಗಿಕ ಶಿಕ್ಷೆ ಜೀವಾವಧಿ ಜೈಲುವಾಸವೇ ಹೊರತು ಮರಣದಂಡನೆಯಲ್ಲ, ಅಕಸ್ಮಾತ್ ಮರಣದಂಡನೆ ವಿಧಿಸಬೇಕಾದರೆ ಅದಕ್ಕೆ ನ್ಯಾಯಾಧೀಶರು ಕಾರಣ ಕೊಡಬೇಕು ಎಂದು ಹೇಳಿ ಕೊಲೆ ಅಪರಾಧಿಗೆ ಕೊಡಬಹುದಾದ ಶಿಕ್ಷೆಯನ್ನು ಆಮೂಲಾಗ್ರವಾಗಿ ಬದಲಾಯಿಸಿತು. ನ್ಯಾ. ಪಿ.ಎನ್.ಭಗವತಿ 'ಅಪರೂಪದಲ್ಲಿ ಅಪರೂಪದ ಕೊಲೆ' ಎಂಬ ವ್ಯಾಖ್ಯಾನದಿಂದ ಎಂತಹ ಕೊಲೆಗಳಿಗೆ ಮರಣದಂಡನೆ ವಿಧಿಸಬಹುದು ಎಂದು ಸ್ಪಷ್ಟಪಡಿಸಿದರು. ಈಗ ಅದೇ ಸೂತ್ರ ಅನುಸರಿಸಿ ಅಪರಾಧ, ಅದರ ಸ್ವರೂಪ ಹಾಗೂ ಅಪರಾಧಿಯನ್ನು ಪರಿಗಣಿಸಿ ನ್ಯಾಯಾಧೀಶರು ಮರಣದಂಡನೆ ಶಿಕ್ಷೆ ನೀಡಬಹುದಾಗಿದೆ.

ಮರಣದಂಡನೆಯನ್ನು ನ್ಯಾಯಾಲಯದಲ್ಲಿ ಕೊನೆಯ ಬಾರಿ ಪ್ರಶ್ನಿಸಿದ್ದು 1992ರಲ್ಲಿ 'ಶಶಿ ನಾಯರ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ' ಎಂಬ ಕೇಸಿನಲ್ಲಿ. 1968ರ ಲಾ ಕಮಿಷನ್ ವರದಿಯನ್ನು ಉಲ್ಲೇಖಿಸುತ್ತಾ ಪ್ರಸ್ತುತ ಭಾರತದ ಪರಿಸ್ಥಿತಿ 1967ಕ್ಕಿಂತ ಬದಲಾಗಿರುವುದರಿಂದ ಮರಣದಂಡನೆ ರದ್ದುಗೊಳಿಸಬೇಕೆಂದು ಅದರಲ್ಲಿ ಕೋರಲಾಗಿತ್ತು. ಅದಕ್ಕೆ ಉತ್ತರಿಸಿದ ನ್ಯಾಯಪೀಠ, 'ಮರಣದಂಡನೆ ವಿಧಿಸುವುದಕ್ಕೆ ಸಾಮಾಜಿಕ ಕಾರಣಗಳಿವೆ. ಅದು ಅಪರಾಧ ತಡೆಗಟ್ಟುವ ಒಂದು ಶಕ್ತಿಯಾಗಿದೆ. 1967ಕ್ಕಿಂತ ಪರಿಸ್ಥಿತಿ ಈಗ ಭಿನ್ನವಾಗಿಲ್ಲ, ಕಾನೂನು ಮತ್ತು ಸುವ್ಯವಸ್ಥೆ ಇನ್ನೂ ಹದಗೆಡುತ್ತಿದೆ. ಹೀಗಿರುವಾಗ ಮರಣದಂಡನೆ ರದ್ದಾಗಬೇಕೆಂಬ ವಾದ ಸರಿಯಲ್ಲ' ಎಂದು ಅಭಿಪ್ರಾಯಪಟ್ಟು ಆ ಅಪೀಲನ್ನು ತಿರಸ್ಕರಿಸಿತು.

ಇದು ಕೋರ್ಟಿನ ಭಾವನೆಯಷ್ಟೇ ಅಲ್ಲ, ಗಲ್ಲು ಶಿಕ್ಷೆ ಇರಲಿ ಎನ್ನುವವರೆಲ್ಲ ಅದಕ್ಕೆ ಕೊಡುವ ಮುಖ್ಯ ಕಾರಣ ಇದೇ. ಆದರೆ ಒಂದು ಅಂಕಿಅಂಶ ನೋಡಿ: ಸ್ವಾತಂತ್ರ್ಯ ಬಂದ ನಂತರದ ವರ್ಷಗಳಲ್ಲಿ ಪ್ರತಿವರ್ಷ ಸರಾಸರಿ 150 ಜನರಿಗೆ ಗಲ್ಲು ಶಿಕ್ಷೆ ವಿಧಿಸಲಾಗುತ್ತಿತ್ತು. ನಂತರ 1965–74ರ ಅವಧಿಯಲ್ಲಿ ವರ್ಷಕ್ಕೆ ಸರಾಸರಿ 50 ಜನ ಗಲ್ಲಿಗೇರುತ್ತಿದ್ದರು. 1975–84ರಲ್ಲಿ ವಾರ್ಷಿಕ ಸರಾಸರಿ 12 ಜನ, 1985–94ರ ಅವಧಿಯಲ್ಲಿ ವಾರ್ಷಿಕ ಸರಾಸರಿ 4 ಜನ ಗಲ್ಲಿಗೇರಿದರು. 1995ರ ನಂತರ ವಿರಳಸಂಖ್ಯೆಯಲ್ಲಿ ಈ ಶಿಕ್ಷೆ ನೀಡಿದ್ದು 2004ರಲ್ಲಿ ಧನಂಜಯ ಚಟರ್ಜಿ ಗಲ್ಲಿಗೇರಿದ ಮೇಲೆ ಈ 8 ವರ್ಷಗಳಲ್ಲಿ ಯಾರಿಗೂ ಮರಣದಂಡನೆ ವಿಧಿಸಿಲ್ಲ. ಗಲ್ಲು ಶಿಕ್ಷೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತ ಹೋದಂತೆ ಅಪರಾಧ ಪ್ರಮಾಣವೂ ಕಡಿಮೆಯಾಗಿದೆ. ಗೃಹ ಸಚಿವಾಲಯ ಹೊರಡಿಸಿದ ಸುತ್ತೋಲೆಯ ಅಂಕಿಅಂಶಗಳಿಂದ ಅದು ತಿಳಿಯುತ್ತದೆ:

1974–78	85 ಸಾವಿರ ಕೊಲೆ ಪ್ರಕರಣ, 25 ಜನರಿಗೆ ಗಲ್ಲು
1980–1995	10 ಲಕ್ಷ ಕೊಲೆ ಪ್ರಕರಣ, 83 ಜನರಿಗೆ ಗಲ್ಲು
1995–99	5,94,000 ಕೊಲೆ, 25 ಜನರಿಗೆ ಗಲ್ಲು.
1999–2004	4.42 ಲಕ್ಷ ಕೊಲೆ, ಒಂದು ಗಲ್ಲು ಶಿಕ್ಷೆ.
2005ರಿಂದೀಚೆಗೆ	2.3 ಲಕ್ಷ ಕೊಲೆ, ಒಂದೂ ಗಲ್ಲು ಶಿಕ್ಷೆಯಿಲ್ಲ

ಇತ್ತೀಚೆಗೆ ಭಯೋತ್ಪಾದನೆ ಎಂಬ ಅರ್ಧ ಸತ್ಯ, ಮತ್ತರ್ಧ ಕಲ್ಪಿತ ಸಮಸ್ಯೆಯ ನಿಗ್ರಹಕ್ಕೆ ಕಠಿಣ ಕಾನೂನುಗಳು, ಗಲ್ಲು ಶಿಕ್ಷೆ ಬೇಕೆಂಬ ಮಾತು ಕೇಳಿಬರುತ್ತಿದೆ. ಆದರೆ ಭಯೋತ್ಪಾದನೆ ರಾಜಕೀಯ ಅಸ್ತ್ರವಾಗಿ ಬಳಕೆಯಾಗುತ್ತಿರುವುದು ನಮ್ಮ ಕಣ್ಮುಂದಿದೆ. ಸರ್ಕಾರಕ್ಕೆ ತನ್ನ ಗಡಿ ಕಾಯ್ದುಕೊಳ್ಳಲು; ಜನರಲ್ಲಿ ಶಿಸ್ತು, ದೇಶಪ್ರೇಮ ಉದ್ದೀಪಿಸಲು ಕೆಲವು ಹೀರೋಗಳು ಮತ್ತು ಕೆಲ ದುಷ್ಟರು ಬೇಕಾಗುತ್ತಾರೆ. ಕೋಮುದ್ವೇಷ ತುಂಬಿದ ಮನಸ್ಸುಗಳಿಗೆ ದೇಶಭಕ್ತಿ/ಧಾರ್ಮಿಕ ಪ್ರಜ್ಞೆ ಉದ್ದೀಪಿಸಲು ಉಗ್ರನಿರಬೇಕು ಮತ್ತು ಅವನನ್ನು ಶಿಕ್ಷಿಸಬೇಕು. ಆಳುವವರಿಗೆ ಶಿಸ್ತು ಕಾಪಾಡುವ ಅಸ್ತ್ರವಾಗಿ ಭಯೋತ್ಪಾದನೆ–ನಕ್ಸಲೀಯರ ದಾಳಿ, ಮರಣ ದಂಡನೆಗಳ ನೆವ ಬೇಕು. ಈ ವಿಷವರ್ತುಲದಿಂದ ಭಯೋತ್ಪಾದನೆಯೂ, ಕಠಿಣ ಕಾನೂನುಗಳೂ ದಿನಕ್ಕೊಂದು ಹೊಸರೂಪ ಪಡೆದು ಕಣ್ಮುಂದೆ ಬರುತ್ತಿವೆ.

ಸಾವು ಹುತಾತ್ಮರನ್ನು ಸೃಷ್ಟಿಸುತ್ತಿದೆ. ಹೀಗಿರುವಾಗ ಭಯೋತ್ಪಾದನೆ ನಿಗ್ರಹಿಸಲು ಗಲ್ಲುಶಿಕ್ಷೆ ಇರಲೆನ್ನುವುದು ಹಾಸ್ಯಾಸ್ಪದ ವಿವರಣೆಯಂತೆ ತೋರುತ್ತದೆ. ಪ್ರಾಣದ ಹಂಗು

(50ನೇ ಪುಟಕ್ಕೆ)

ಹೊಸ ಪುಸ್ತಕ

ದಲಿತ ಬದುಕು-ಮೆಲುಕು
ಲೇ: ಡಾ॥ ಎನ್. ಚಿನ್ನಸ್ವಾಮಿ ಸೋಸಲೆ
ಬೆಲೆ: ರೂ. 200/-

ದಮನಿತರ ಸಾಮಾಜಿಕ ಮತ್ತು ಚಾರಿತ್ರಿಕ ವಿದ್ಯಮಾನಗಳು ಚಿಂತನೆಗೆ ಹಚ್ಚುವ ಈ ಕೃತಿಯಲ್ಲಿ ಇಂದು ತಳ ಸಮುದಾಯಗಳ ಮೇಲೆ ಸನಾತನಿಗಳು ನಡೆಸುತ್ತಿರುವ ದೌರ್ಜನ್ಯ ಹಾಗೂ ಅಮಾನವೀಯ ಆಚರಣೆಗಳ ಕುರಿತ ವಿಚಾರಗಳು ಮನಕಲಕುವಂತೆ ನಿರೂಪಿತಗೊಂಡಿದೆ. ಭಾರತದಂತ ಬೃಹತ್ ರಾಷ್ಟ್ರದಲ್ಲಿ ದಲಿತರು ನಿರ್ವಹಿಸುತ್ತಿರುವ ಪ್ರಧಾನ ಪಾತ್ರ ಕುರಿತು ಆಳವಾದ ಅಧ್ಯಯನವಿದೆ. ಬಹುಮುಖ್ಯವಾಗಿ ದಲಿತರ ಮೇಲೆ ದೌರ್ಜನ್ಯ ಯಾಕೆ ಸಂಭವಿಸುತ್ತದೆ, ಅದರ ತಡೆಗೆ ಇರುವ ಸಂವಿಧಾನಿಕ ಕಾನೂನುಗಳು ಹಾಗೂ ಪರಿಣಾಮಗಳ ಆಗು-ಹೋಗುಗಳ ಕುರಿತ ವಿಶ್ಲೇಷಣೆ ಮತ್ತಷ್ಟು ಚಿಂತನೆಗೆ ಹೆಚ್ಚುತ್ತದೆ.
ಪ್ರ: **ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.**





ಭೂಮಿ ತಿರುಗುವ ಶಬ್ಧ
ಲೇ: ಚನ್ನಪ್ಪ ಅಂಗಡಿ
ಬೆಲೆ: ರೂ. 60/-

ತಳಸಮುದಾಯಗಳ ಸಾಂಸ್ಕೃತಿಕ ಸಂವೃದ್ಧಿಯಿಂದ ಮಾತನಾಡುವ ಇಲ್ಲಿನ ಕವನಗಳು ಸಾಮಾಜಿಕ, ರಾಜಕೀಯ ವಿಚಾರಗಳಿಗೆ ಪರ್ಯಾಯ ಚಿಂತನೆಯನ್ನು ಬಳಸುವ ಸೂಕ್ಷ್ಮತೆಯಿಂದ ಕೂಡಿವೆ. ವಚನ ಚಳವಳಿಯ ಆಶಯಗಳ ಬಗ್ಗೆ, ಜನಪದ ಬದುಕಿನ ಜೀವಪರ ಮೌಲ್ಯಗಳ ಬಗ್ಗೆ ಪ್ರತಿಪಾದಿಸುವ ಹಲವು ಕವನಗಳು ನಗರ-ಹಳ್ಳಿ ಬದುಕಿನ ಸಂಘರ್ಷಾತ್ಮಕ ನಡೆಯನ್ನು ವಿಶ್ಲೇಷಣೆಗೆ ಒಡ್ಡಿದಂತೆ ಮೂಡಿಬಂದಿವೆ. ತಮ್ಮ ಆಶಯಗಳನ್ನು ಸಾಂಸ್ಕೃತಿಕ ಪರಿಕರಗಳ ಮೂಲಕ ಅಭಿವ್ಯಕ್ತಿಸಲು ಲೇಖಕರಿಗೆ ಸಾಧ್ಯವಾಗಿರುವುದರಿಂದ ಕವಿತೆಗಳಿಗೊಂದು ಪರಿಣಾಮಕಾರಿ ಆಯಾಮ ಒದಗಿದೆ. ಇಲ್ಲಿ ಬಳಕೆಯಾದ ರೂಪಕ ಶೈಲಿಯ ಭಾಷೆ ಕನ್ನಡತನವನ್ನು ಶ್ರೀಮಂತಗೊಳಿಸಿದೆ.

ಕಾಯುತ್ತಿದ್ದಾರೆ
ಲೇ: ಡಾ॥ ಸಣ್ಣರಾಮ
ಬೆಲೆ: ರೂ. 90/-

ಈ ಸಂಕಲನದ ಕಥೆಗಳೆಲ್ಲವೂ ಸಮಾಜದ ಅಂಚಿಗೆ ತಳ್ಳಲ್ಪಟ್ಟವರ ಬದುಕಿನ ಸಂಕಷ್ಟಗಳನ್ನು ಹೇಳುವಂತ ಗುಣವುಳ್ಳವು. ಸಮಾಜವನ್ನು ಕಾಡುತ್ತಿರುವ ಅನೇಕ ಸಮಸ್ಯೆಗಳಿಗೆ ಕನ್ನಡಿ ಹಿಡಿದಿದ್ದು ರಾಜಕೀಯ, ಕೌಟುಂಬಿಕ, ಸಮುದಾಯಗಳ ದುರಂತದ ಬದುಕು- ಹೀಗೆ ಹತ್ತು ಹಲವು ವಿಷಯಗಳು ಒಡಮೂಡಿವೆ. ಲೋಕಾನುಭವದ ವ್ಯಥೆ ಸಂಕಷ್ಟಗಳೇ ಈ ಸಂಕಲನದ ಮುಖ್ಯ ವಸ್ತುವಾಗಿರುವುದರಿಂದ ಯಾವ ಪಂಥಕ್ಕೂ ಸೇರದ ಈ ಕಥೆಗಳು ಓದುಗರನ್ನು ಚಿಂತನೆಗೆ ತೊಡಗಿಸುವಲ್ಲಿ ಸಫಲತೆ ಪಡೆದಿವೆ.
ಪ್ರ: **ಶ್ರೀಪೀಠಂ ಪ್ರಕಾಶನ, ಶಿವಮೊಗ್ಗ.**





ಕಾಣದಾಯಿತೋ ಊರುಕೇರಿ
ಲೇ: ಬಿ. ಶ್ರೀನಿವಾಸ
ಬೆಲೆ: ರೂ. 60/-

ಈ ಸಂಕಲನದಲ್ಲಿನ ಬಹುತೇಕ ಕಥೆಗಳು ಬಳ್ಳಾರಿ ಸೀಮೆಯ ಗ್ರಾಮೀಣ ಬದುಕಿನ ಏಳುಬೀಳುಗಳನ್ನು ಚಿತ್ರಿಸಿವೆ. ಆಧುನಿಕ ಬಂಡವಾಳ ಮತ್ತು ಅದರ ರೀತಿ ರಿವಾಜುಗಳಿಂದ ನೆಲೆ ಕಳೆದುಕೊಳ್ಳುತ್ತಿರುವ ಜನರ ಸಂಕಟಗಳು ಕಥಾವಸ್ತುಗಳಾಗಿವೆ. ಒಂದು ಸೀಮೆಗೆ ಪ್ರವೇಶಿಸುವ ಹೊಸ ಬಗೆಯ ಯಂತ್ರಗಳು, ವಾಣಿಜ್ಯ ಸಂಬಂಧಗಳು, ಕೈಗಾರಿಕೆಗಳು ಮುಂತಾದ ಚಟುವಟಿಕೆಗಳು ಗ್ರಾಮೀಣ ಜೀವನದಲ್ಲಿ ಅದರಲ್ಲೂ ತಳ ಸಮುದಾಯಗಳಲ್ಲಿ ಉಂಟುಮಾಡುವ ಪಲ್ಲಟಗಳನ್ನು ವಿವಿಧ ಮುಖಗಳಿಂದ ಚಿತ್ರಿಸಿವೆ. ಕಾಲಮಾನದಲ್ಲಿ ಬಂದ ಬದಲಾವಣೆ ಬಡವರ ಬದುಕಿನ ಸಾಧ್ಯತೆಗಳನ್ನು ಕಿತ್ತುಕೊಂಡಿರುವುದಲ್ಲದೆ ಮಾನವೀಯ ಸಂಬಂಧಗಳ ನೆಲೆಗಟ್ಟನ್ನು ಕದಲಿಸಿದೆ ಎಂಬ ಹಳಹಳಿಕೆ ಇಲ್ಲಿನ ಕಥೆಗಳ ಮುಖ್ಯ ಗ್ರಹಿಕೆಯಾಗಿದೆ.

ಈ ಎರಡೂ ಪುಸ್ತಕಗಳ ಪ್ರಕಾಶಕರು: ಲಡಾಯಿ ಪ್ರಕಾಶನ, ಗದಗ.



ಓಶೋ ಎಂಬ ವಿದ್ರೋಹಿಯ ಕಥೆ
ಲೇ: ಡಾ॥ ರಾಜಶೇಖರ ಮಠಪತಿ(ರಾಗಂ)
ಬೆಲೆ: ರೂ. 125/-

ಓಶೋ ಎಂದೇ ಖ್ಯಾತರಾದ ಆಚಾರ್ಯ ರಜನೀಶರ ಕುರಿತು ತಾವು ಕಂಡುಂಡ, ಓದಿದ ಜೀವನಗಾಥೆಯನ್ನು ಅದ್ಭುತವಾಗಿ ತೆರೆದಿಟ್ಟಿರುವ ಲೇಖಕರು ಅವರನ್ನು ಒಪ್ಪಿಕೊಂಡೂ ಒಪ್ಪಿಕೊಳ್ಳದೆ, ಒಪ್ಪಿಕೊಳ್ಳದೆಯೂ ಒಪ್ಪಿಕೊಂಡಂತೆ ಬರೆವ ಮೂಲಕ ಓಶೋರನ್ನು ಕನ್ನಡೀಕರಿಸಿದ್ದಾರೆ. ಓಶೋ ಪ್ರಶ್ನೆಗಳಿಗೆ ನಿರುತ್ತರರಾಗುವ ಗಾಂಧೀಜಿಯ ಪ್ರಸಂಗಗಳು ಗಮನ ಸೆಳೆಯುತ್ತವೆ. ಅವರ ಬರಹ-ಬದುಕು ಅವೆರಡನ್ನೂ ಸಂಕ್ಷಿಪ್ತವಾಗಿ ಬೆಸೆಯುವ ಲೇಖಕರ ಯತ್ನ ಇಲ್ಲಿ ಸಾಫಲ್ಯ ಕಂಡಿದೆ. ರಜನೀಶ ಎಂದರೆ 'ಹೀಗೆ' ಎಂದುಕೊಳ್ಳುವ ಮನಸುಗಳಿಗೆ ಅವರು 'ಹೀಗಲ್ಲ' ಎಂದು ಹೇಳಲು ಈ ಕೃತಿ ಸಾಕ್ಷ್ಯ ಒದಗಿಸುತ್ತದೆ.
ಪ್ರ: **ತನುಮನು ಪ್ರಕಾಶನ, ಮೈಸೂರು.**



ಬಹುರೂಪಿ ಅರಸು
ಲೇ: ವಡ್ಡರ್ಸೆ ರಘುರಾಮ ಶೆಟ್ಟಿ
ಬೆಲೆ: ರೂ. 110/-

ದೇವರಾಜ ಅವರನ್ನು ಅತ್ಯಂತ ಹತ್ತಿರದಿಂದ ಕಂಡಿದ್ದ ಲೇಖಕರು ಎಲ್ಲಾ ಮುಖಗಳನ್ನು ಮುಚ್ಚುಮರೆಯಿಲ್ಲದೆ ದಾಖಲಿಸಿದ್ದಾರೆ. ಅರಸುರವರಂತಹ ಒಬ್ಬ ಸತ್ವಶಾಲಿ ಹಾಗೂ ಧೀಮಂತ ಜನನಾಯಕನ ರಾಜಕೀಯ ಅವಸಾನ ಹೇಗಾಯಿತು? ಯಾಕಾಯಿತು? ತಾವೇ ಬೆಳೆಸಿದ ಹಿಂದುಳಿದ ವರ್ಗಗಳ ನಾಯಕರು ಅವರ ರಾಜಕೀಯ ಪತನಕ್ಕೆ ಹೇಗೆ ಕಾರಣರಾದರು? ಅವರ ಬಾಲ್ಯ ಜೀವನ ಬೆಳೆದ ರೀತಿ, ಪುರೋಹಿತಶಾಹಿಗೆ ಶರಣಾದ ಬಗೆ, ಆ ಮೂಲಕ ತಂದುಕೊಂಡ ದುರಂತಗಳು ಸಮಚಿತ್ತವಾಗಿ ಅನಾವರಣಗೊಂಡಿವೆ.
ಪ್ರ: **ಸಪ್ನ ಬುಕ್ ಹೌಸ್, ಬೆಂಗಳೂರು.**

ಕೇಂದ್ರ ಲೋಕಸೇವಾ ಆಯೋಗ ತೋರೆಯಿರಿ

ತಮ್ಮ ಬಗೆಗಿರುವ ತಪ್ಪು ಕಲ್ಪನೆಯನ್ನು ಬದಲಾಯಿಸಲು ದಲಿತರಿಗೆ ಹೆಚ್ಚು ತಂತ್ರಜ್ಞರು, ಪ್ರಾಣಿ ಶಾಸ್ತ್ರತಜ್ಞರು, ಗಣಿತಶಾಸ್ತ್ರಜ್ಞರು, ಭೌತವಿಜ್ಞಾನಿಗಳು ಮುಂತಾದವರು ಬೇಕು. ವಿಜ್ಞಾನ, ಕಲೆ ಮುಂತಾದುವುಗಳಲ್ಲಿ ಉತ್ತಮ ಸಾಧನೆಗೈದಿರುವ ಜನಾಂಗ ಎಂದು ದಲಿತರನ್ನು ಸಹ ಗುರುತಿಸುವಂತಾಗಬೇಕು. ಮೇಲ್ಜಾತಿಯ ಯುವಕರು ಸುಲಭವಾಗಿ ಹಣ ಮಾಡುವ ಮಾರ್ಗಗಳನ್ನು ಹುಡುಕುತ್ತಾ ವಿಜ್ಞಾನದ ವಿಷಯಗಳನ್ನು ಕಲಿಯಲು ಹಿಂದೇಟು ಹಾಕುತ್ತಿರುವ ಈ ಸಂದರ್ಭದಲ್ಲಿ ದಲಿತರು ಈ ಸವಾಲನ್ನು ಸ್ವೀಕರಿಸಿ ವಿಜ್ಞಾನದ ಮೂಲಕ ದೇಶ ಸೇವೆ ಮಾಡಬೇಕು.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಭಾರತದ ಎಲ್ಲಾ ಸಂಸ್ಥೆಗಳಲ್ಲಿ ಕೇಂದ್ರ ಲೋಕಸೇವಾ ಆಯೋಗ (ಯು.ಪಿ.ಎಸ್.ಸಿ) ಅತ್ಯಂತ ನಂಬಲರ್ಹ ಸಂಸ್ಥೆಯಾಗಿದೆ. ಒಂದೆರಡು ಉದಾಹರಣೆಗಳನ್ನು ಬಿಟ್ಟರೆ, ಯು.ಪಿ.ಎಸ್.ಸಿಯು ಕಳಂಕ ರಹಿತವಾಗಿ ಉಳಿದಿದೆ. ಮಧ್ಯಮವರ್ಗದ ಯುವಕರು ಈ ಉತ್ತಮ ಸಂಸ್ಥೆಯಲ್ಲಿ ನಂಬಿಕೆ ಇರಿಸಿದ್ದಾರೆ. ಯು.ಪಿ.ಎಸ್.ಸಿಯ ಪರೀಕ್ಷೆಗಳನ್ನು ಪಾಸು ಮಾಡಲು ವರ್ಷಗಟ್ಟಲೆ ಅವರು ಶ್ರಮಪಡುತ್ತಾರೆ. ಈ ವಿಶಾಲವಾದ ದೇಶವನ್ನು ನಡೆಸಲು ಯು.ಪಿ.ಎಸ್.ಸಿ ಅತ್ಯುತ್ತಮ ಪ್ರತಿಭೆಗಳನ್ನು ಆರಿಸುತ್ತದೆ. ಸಾರ್ವಜನಿಕ ಸೇವೆಗಳ ಹೊರತು ದೇಶದ ವ್ಯವಹಾರಗಳನ್ನು ನಡೆಸಲು ಬೇರಾವುದೇ ವ್ಯವಸ್ಥೆಯನ್ನು ಯೋಚಿಸುವುದೂ ಕಷ್ಟ.

ಬ್ರಿಟಿಷರ ಬಳುವಳಿಯಾದ ಯು.ಪಿ.ಎಸ್.ಸಿ ಮೂಲಕ ದೇಶದ ಮೇಲ್ವರ್ಗಗಳು ಆಯಕಟ್ಟಿನ ಸ್ಥಳಗಳನ್ನು ಇಡಿಯುವುದರಲ್ಲಿ ಮೊದಲಿಗರಾದರು. ಮಧ್ಯಮವರ್ಗಗಳು ಅವರನ್ನಿಂಬಾಲಿಸಿದವು. ಕೆಳವರ್ಗಗಳೂ ಸಹ ಈ ಓಟದಲ್ಲಿ ಸೇರಿಕೊಂಡವು. ಆದುದರಿಂದ ಆಗಾಗ್ಗೆ ಶಾಲಾ ಉಪಾಧ್ಯಾಯರ ಮಕ್ಕಳು, ಪೊಲೀಸ್ ಕಾನ್ಸ್‌ಟೇಬಲ್‌ಗಳ ಮಕ್ಕಳು ಯು.ಪಿ.ಎಸ್.ಸಿ ಪರೀಕ್ಷೆಯನ್ನು ಪಾಸುಮಾಡಿರುವುದನ್ನು ನಾವು ಕಾಣುತ್ತೇವೆ. 1980ರ ನಂತರ ಹಿಂದುಳಿದ ರಾಜ್ಯಗಳಾದ ಬಿಹಾರ, ಉತ್ತರ ಪ್ರದೇಶ ಮತ್ತು ಒರಿಸ್ಸಾಗಳಂತಹ ರಾಜ್ಯಗಳ ಯುವಕರು ಹೆಚ್ಚುಹೆಚ್ಚಾಗಿ ಯು.ಪಿ.ಎಸ್.ಸಿ ಪರೀಕ್ಷೆ ತೆಗೆದುಕೊಳ್ಳಲಾರಂಭಿಸಿದರು. ನಾನು ಗಮನಿಸುತ್ತಿದ್ದಂತೆಯೇ ಮೇಲ್ವರ್ಗಗಳು ಯು.ಪಿ.ಎಸ್.ಸಿಯಿಂದ ಹಿಂದೆ ಸರಿದವು.

ಮೇಲ್ವರ್ಗಗಳ ಮಕ್ಕಳು ಈಗ ಅವಕಾಶಗಳಿಂದ ತುಂಬಿತುಳುಕುತ್ತಿರುವ ಹೊರದೇಶಗಳಿಗೆ ಹೋಗುತ್ತಿದ್ದಾರೆ. ಒಳ್ಳೆಯ ಸ್ಥಾನಗಳಲ್ಲಿರುವ ಜನರು ಈಗ ನನಗೆ ತಿಳಿದಂತೆ ತಮ್ಮ ಮಕ್ಕಳನ್ನು ಮಾಧ್ಯಮ ಶಾಲೆಗಳಿಗೆ ಸೇರಿಸುತ್ತಾರೆ. ಎಂ.ಬಿ.ಎಗಳು ಈಗಿನ ಹುಚ್ಚು. ಯು.ಪಿ.ಎಸ್.ಸಿ ಪರೀಕ್ಷೆಗಳನ್ನು ತೆಗೆದುಕೊಳ್ಳುವವರು "ನನಗೆ ಬಿಹಾರ ರಾಜ್ಯಕ್ಕೆ ಹಾಕಿದರೆ ಏನು ಮಾಡುವುದು" ಎಂದು ಯೋಚಿಸುತ್ತಾರೆ. ಉದಾಹರಣೆಗೆ ದೆಹಲಿ, ಮುಂಬೈ, ಬೆಂಗಳೂರು, ಪೂನಾದಲ್ಲಿನ ಮಕ್ಕಳು ಕೆಂಪುದೀಪದಿಂದ ಅಲಂಕೃತವಾದ, ಡ್ರೈವರುಗಳುಳ್ಳ, ಸರ್ಕಾರದಿಂದ ನೀಡಲಾದ ಅಂಬಾಸಿಡರ್ ಕಾರುಗಳಿಗೆ ಬದಲಾಗಿ ತಾವೇ ಕಾರು ಓಡಿಸುತ್ತಾ ಈ ನಗರಗಳ ಪಬ್‌ಗಳಲ್ಲಿ ಕಾಲಕಳೆಯಲು ಇಚ್ಛಿಸುತ್ತಾರೆ. ಈ ಮೇಲ್ವರ್ಗಗಳಿಗೆ ನಾಗರಿಕ ಸೇವಾ ಅಧಿಕಾರಿಗಳಿಗೆ ನೀಡುವ ದೊಡ್ಡ ಬಂಗಲೆಗಳಿಗಿಂತ ಉತ್ತಮ ಬಡಾವಣೆಗಳ ಎರಡು ಮಲಗುವ ಕೋಣೆಗಳುಳ್ಳ ಫ್ಲಾಟೇ ಶ್ರೀಮಂತವಾದುದು. ಜೀವನ ಮತ್ತು ಉದ್ಯೋಗ ಇವುಗಳ ವಿಚಾರದಲ್ಲಿ ಇದೊಂದು ಕ್ರಾಂತಿಕಾರಕ ಬದಲಾವಣೆ. ಈಗ ಜೀವನಕ್ಕೆ ಮೊದಲ ಆದ್ಯತೆ.

ಎಲ್ಲವೂ ತನ್ನದೇ ಆದ ಬೆಲೆಯೊಡನೆ ಬರುತ್ತದೆ. ಇರುವ ಅಭ್ಯರ್ಥಿಗಳಲ್ಲಿ ಅತ್ಯುತ್ತಮವಾದವರನ್ನು ರಾಜ್ಯವನ್ನು ನಡೆಸಲು ಯು.ಪಿ.ಎಸ್.ಸಿ ಆರಿಸುತ್ತಿದ್ದರೂ, ಅನೇಕರು ಈ ಮೂಲಕವೆ ಅನುಪಯುಕ್ತರಾಗುತ್ತಾರೆ. ಲೆಕ್ಕವಿಲ್ಲದಷ್ಟು ಇಂಜಿನಿಯರ್‌ಗಳು, ಡಾಕ್ಟರುಗಳು ಮತ್ತು ಮುಂದಿನ ವಿಜ್ಞಾನಿಗಳು ಯು.ಪಿ.ಎಸ್.ಸಿಯಿಂದ ಸೆಳೆಯಲ್ಪಡುತ್ತಾರೆ. ಗೋರಕ್‌ಪುರ ಮತ್ತು ಮುಂಬೈ ವಿಶ್ವ ವಿದ್ಯಾಲಯಗಳಿಂದ ಬರುವ ಪದವೀಧರರೇ ರಾಷ್ಟ್ರವನ್ನು ಉತ್ತಮವಾಗಿ ನಡೆಸಬಲ್ಲರು. ಹಾಗಾದಲ್ಲಿ ಖ್ಯಾತ ಐಐಟಿಗಳು ಮತ್ತು ವೈದ್ಯಕೀಯ ವಿದ್ಯಾಲಯಗಳಿಂದ ಹೊರಬರುವ ವೃತ್ತಿನಿರತ ಪದವೀಧರರನ್ನೇಕೆ ಫೈಲ್ ತಯಾರಿಸುವ, ಕಂದಾಯ ಶೇಖರಿಸುವ ಕೆಲಸಗಳಲ್ಲಿ ಅನುಪಯುಕ್ತಗೊಳಿಸಬೇಕು?

ದಲಿತರು ಮತ್ತು ಆದಿವಾಸಿಗಳಿಗೂ ಸಹ ಯು.ಪಿ.ಎಸ್.ಸಿ ಅತ್ಯುತ್ತಮ ಸೇವೆ ಸಲ್ಲಿಸಿದೆ. ಈ ಮೂಲಕ ಐತಿಹಾಸಿಕವಾಗಿ ಹಿಂಸೆಗೀಡಾಗಿದ್ದ ಸಾಮಾಜಿಕ ವರ್ಗಗಳ ಜನರೂ ಸಹ ಸರ್ಕಾರಿ ಸೇವೆಗಳ ರುಚಿಯುಂಡರು. ದಲಿತ ಮತ್ತು ಆದಿವಾಸಿಗಳಿಂದ ಬಂದ ಅಧಿಕಾರಿಗಳು ಆಯಾ ಜನಾಂಗಗಳಿಗೆ ಅನುಕರಿಸಬಹುದಾದ ಮಾದರಿಗಳಾದರು. ಆದರೆ ಇದಕ್ಕೆ ಅವರು ತೆತ್ತ ಬೆಲೆಯೆಷ್ಟು?

ಯು.ಪಿ.ಎಸ್.ಸಿ ದಲಿತರಲ್ಲೂ ಅತ್ಯಂತ ಬುದ್ಧಿವಂತರನ್ನು ತನ್ನತ್ತ ಸೆಳೆಯಿತು. ಯು.ಪಿ.ಎಸ್.ಸಿ ಇಲ್ಲದಿದ್ದಲ್ಲಿ ದಲಿತರೂ ಸಹ ಅನೇಕ ತಂತ್ರಜ್ಞರು, ವಿಜ್ಞಾನಿಗಳು ಮತ್ತು ಚಿಂತಕರನ್ನು ನೀಡುತ್ತಿದ್ದರು. ಏನಾಗುತ್ತಿದೆ ಎಂದರೆ ನಾಗರಿಕ ಸೇವೆಗಳಿಗೆ ಸೇರಲು ಯತ್ನಿಸಿ ಸೋತ ದಲಿತರು ಕೊನೆಗೆ ಹೇಗೊ ಒಂದು ಪಿಎಚ್.ಡಿ ಸಂಪಾದಿಸಿ ಕಾಲೇಜು ಉಪಾನ್ಯಾಸಕರು ಅಥವಾ ಪ್ರಾಧ್ಯಾಪಕರು ಆಗಿಬಿಡುತ್ತಾರೆ. ನನ್ನ ವಿಶ್ವವಿದ್ಯಾಲಯದ ದಿನಗಳಲ್ಲಿ ತಮ್ಮ ಕೊನೆಯ ಆಯ್ಕೆಯಾಗಿ ಅಧ್ಯಾಪಕ ಹುದ್ದೆಗಳನ್ನು ಆರಿಸಿಕೊಳ್ಳುವ ಅನೇಕ ಸ್ನೇಹಿತರನ್ನು ನಾನು ನೋಡಿದ್ದೇನೆ. ದಲಿತರಲ್ಲದವರ ವಿಷಯದಲ್ಲಿಯೂ ಇದು ನಿಜ. ಇದಕ್ಕೆ ಅಪವಾದಗಳಿಲ್ಲದೆ ಇಲ್ಲ. ಪಿಹೆಚ್.ಡಿ ಮಾಡುವುದನ್ನು ತಮ್ಮ ಮೊದಲ ಆಯ್ಕೆಯಾಗಿ ಆರಿಸಿಕೊಂಡವರೂ ಇದ್ದಾರೆ.

ತಂತ್ರಜ್ಞರು, ವಿಜ್ಞಾನಿಗಳು, ಯೋಜನಾ ತಜ್ಞರು ಮತ್ತು ಚಿಂತಕರು ರಾಷ್ಟ್ರವನ್ನು ಉತ್ತಮವಾಗಿ ನಡೆಸಬಲ್ಲರು. ಇವರು ತೀರ್ಮಾನಿಸಿದ್ದನ್ನು ನಾಗರಿಕ

ಸೇವೆಯಲ್ಲಿರುವವರು ಜಾರಿಗೆ ತರಬಲ್ಲರಷ್ಟೆ. ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳು ಕಾನೂನನ್ನು ರೂಪಿಸುತ್ತವೆ. ಅವುಗಳನ್ನು ಜಾರಿಗೊಳಿಸಲು ಅಷ್ಟೇನೂ ಬುದ್ಧಿವಂತಿಕೆ ಬೇಕಾಗಿಲ್ಲ. ಹೈಸ್ಕೂಲ್ ಓದಿದ ಕಾನ್ಸ್‌ಸ್ಟೇಬಲ್ ಕೂಡ ಸುಲಭವಾಗಿ ಕಾನೂನನ್ನು ಜಾರಿಗೆ ತರಬಲ್ಲ.

ವಿವಿಧ ಕಾರಣಗಳಿಗಾಗಿ ದಲಿತರಿಗೆ ಇಂದು ಬೇರೆಲ್ಲಾ ಸಾಮಾಜಿಕ ವರ್ಗಗಳಿಗಿಂತ ಹೆಚ್ಚು ಜನ ಚಿಂತಕರು, ಮತ್ತು ವಿಜ್ಞಾನಿಗಳು ಬೇಕಾಗಿದ್ದಾರೆ. ಉದಾಹರಣೆಗೆ ದಲಿತರಿಗೆ ಐ.ಎ.ಎಸ್ ಮತ್ತು ಐ.ಪಿ.ಎಸ್ ಅಧಿಕಾರಿಗಳಿಗಿಂತ ಹೆಚ್ಚು ಜನ ಅರ್ಥಶಾಸ್ತ್ರಜ್ಞರು, ಶಿಕ್ಷಣ ತಜ್ಞರು ಮತ್ತು ಯೋಜನಾತಜ್ಞರು ಬೇಕಾಗಿದ್ದಾರೆ.

ದಲಿತರ, ಆದಿವಾಸಿಗಳ ಕ್ಷೇಮ ನೋಡಿಕೊಳ್ಳುವ ಯಾವುದೇ ಇಲಾಖೆ ಅಥವಾ ಮಂತ್ರಾಲಯಕ್ಕೆ ಬೇಟಿ ನೀಡಿ. ಪ್ರತಿ ವರ್ಷ ದೊಡ್ಡ ಮೊತ್ತದ ಹಣ ಖರ್ಚಾಗದೆ ಹಿಂತಿರುಗುವುದು ನಿಮಗೆ ತಿಳಿಯುತ್ತದೆ. ದಲಿತರ ಅಭಿವೃದ್ಧಿಗಾಗಿ ಮೀಸಲಾಗಿರುವ ಹೆಚ್ಚು ಯೋಜನೆಗಳು ಸೋಲುತ್ತವೆ. ಬಹಳ ಚರ್ಚೆಗೆ ಗುರಿಯಾಗಿರುವ ವಿಶೇಷ ಘಟಕ ಯೋಜನೆ (ಎಸ್.ಸಿ.ಪಿ) ಒಂದು ಉದಾಹರಣೆ. ಮೆಟ್ರಿಕ್ ನಂತರದ ಸ್ಕಾಲರ್ ಶಿಪ್ ಒಂದು ಅಪವಾದ ಮಾತ್ರ.

ತಮ್ಮ ಬಗೆಗಿರುವ ತಪ್ಪು ಕಲ್ಪನೆಯನ್ನು ಬದಲಾಯಿಸಲು ದಲಿತರಿಗೆ ಹೆಚ್ಚು ತಂತ್ರಜ್ಞರು, ಪ್ರಾಣಿ ಶಾಸ್ತ್ರತಜ್ಞರು, ಗಣಿತಶಾಸ್ತ್ರಜ್ಞರು, ಭೌತವಿಜ್ಞಾನಿಗಳು ಮುಂತಾದವರು ಬೇಕು. ವಿಜ್ಞಾನ, ಕಲೆ ಮುಂತಾದುವುಗಳಲ್ಲಿ ಉತ್ತಮ ಸಾಧನೆಗೈದಿರುವ ಜನಾಂಗ ಎಂದು ದಲಿತರನ್ನು ಸಹ ಗುರುತಿಸುವಂತಾಗಬೇಕು. ಮೇಲ್ಜಾತಿಯ ಯುವಕರು ಸುಲಭವಾಗಿ ಹಣ ಮಾಡುವ ಮಾರ್ಗಗಳನ್ನು ಹುಡುಕುತ್ತಾ ವಿಜ್ಞಾನದ ವಿಷಯಗಳನ್ನು ಕಲಿಯಲು ಹಿಂದೇಟು ಹಾಕುತ್ತಿರುವ ಈ ಸಂದರ್ಭದಲ್ಲಿ ದಲಿತರು ಈ ಸವಾಲನ್ನು ಸ್ವೀಕರಿಸಿ ವಿಜ್ಞಾನದ ಮೂಲಕ ದೇಶ ಸೇವೆ ಮಾಡಬೇಕು. ಇದರಲ್ಲಿ ದಲಿತ ಮಧ್ಯಮ ವರ್ಗದ ಪಾತ್ರ ಮುಖ್ಯ.

ಎಲ್ಲಾ ಸಮಾಜಗಳಲ್ಲಿಯೂ ಮಧ್ಯಮ ವರ್ಗ ತಳವರ್ಗಗಳಿಗೆ ಮಾದರಿಯಾಗುತ್ತದೆ. ದಲಿತ ಮಧ್ಯಮ ವರ್ಗ ಸಹ ಈ ಪಾತ್ರವನ್ನು ನಿರ್ವಹಿಸುವುದರಲ್ಲಿ ಹಿಂದೆ ಬೀಳಬಾರದು. ಅದು ಮೊದಲು ಕೇಂದ್ರ ಮತ್ತು ರಾಜ್ಯ ಲೋಕ ಸೇವಾ ಆಯೋಗದ ಪರೀಕ್ಷೆಗಳನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು. ಇದರಿಂದ ಎರಡು ಉದ್ದೇಶಗಳು ನೆರವೇರುತ್ತವೆ. ಹೀಗೆ ಖಾಲಿಯಾದ ಹುದ್ದೆಗಳು ದಲಿತ ಕೆಳವರ್ಗಗಳಿಗೆ ದೊರಕಿ ದಲಿತ ಮಧ್ಯಮ ವರ್ಗ ದೊಡ್ಡದಾಗುತ್ತದೆ. ಮತ್ತು ಸಮುದಾಯದ ಉತ್ತಮ ಮಕ್ಕಳು ಸಮುದಾಯ ಮತ್ತು ದೇಶದ ಚಿಂತಕರಾಗಿ, ಹೊಸ ರೀತಿಯಲ್ಲಿ ಯೋಚಿಸುವವರಾಗಿ ಮತ್ತು ವಿಜ್ಞಾನಿಗಳಾಗಿ ಉತ್ತಮ ಸೇವೆ ನೀಡುತ್ತಾರೆ.

ಬಾಬಾ ಸಾಹೇಬ್ ಅಂಬೇಡ್ಕರ್ ಕಾಲದಲ್ಲಿಯೂ ನಾಗರಿಕ ಸೇವೆಗಳಿದ್ದವು. ಆದರೆ ಅವರು ಎಲ್ಲಿ ಹೆಚ್ಚಿನ ಬುದ್ಧಿಮತ್ತೆ ಬೇಕಿತ್ತೊ ಆ ರಂಗಗಳನ್ನು ಆರಿಸಿಕೊಂಡರು.

* * *

ಪಶ್ಚಿಮದ ಸಂಸ್ಕೃತಿಯ ಸೂಚಕಗಳು ಟೀಕೆಗೊಳಗಾಗಿರುವುದು ಭಾರತ ಬದಲಾಗುತ್ತಿರುವುದರ ಸೂಚಕವಾಗಿದೆ. ಈ ಬದಲಾವಣೆ ತರುತ್ತಿರುವುದು ಜಾಗತೀಕರಣದ ನಂತರದ ಸಾಧನ ಸಲಕರಣೆಗಳು ಮತ್ತು ಉಡುಪುಗಳು. ಇದನ್ನೆ ಚಿಂತಕ ಡಾ.ಅಂಬೇಡ್ಕರ್ ಕನಸು ಕಂಡಿದ್ದು. ಪಶ್ಚಿಮದ ನಾಗರೀಕತೆಯ ಮಾದರಿಯಲ್ಲಿ ಭಾರತವನ್ನು ಮರುಕಟ್ಟುವುದು ಅವರ ಉದ್ದೇಶವಾಗಿತ್ತು.

ಈ ವಾರದ ಪ್ರಾರಂಭದಲ್ಲಿ, ನಿಖರವಾಗಿ ಹೇಳಬೇಕೆಂದರೆ ಜುಲೈ 23ರಂದು, ಉತ್ತರ ದೆಹಲಿಯಿಂದ ಸುಮಾರು ನೂರು ಮೈಲು ದೂರವಿರುವ ಒಂದು ಹಳ್ಳಿಯಲ್ಲಿ ಒಂದು ಅದ್ಭುತ ನಡೆಯಿತು. ಪಶ್ಚಿಮ ಉತ್ತರ ಪ್ರದೇಶದ ಮುಜಾಫರ್‌ನಗರ ಜಿಲ್ಲೆಯ ಗ್ರಾಮಾಂತರ ಪ್ರದೇಶದ ಒಂದು ಹಳ್ಳಿಯಲ್ಲಿ ಯುವತಿಯರು ಡೆನಿಮ್ ಬಟ್ಟೆಗಳನ್ನು ಸುಟ್ಟರು. ಈ ಅತಿರೇಕದ ಘಟನೆಯನ್ನು ಟಿ.ವಿಗಳಲ್ಲಿ ಎಲ್ಲರೂ ನೋಡಬಹುದಿತ್ತು. ಈ ಯುವತಿಯರು 'ಪಶ್ಚಿಮದ ಪೋಷಾಕುಗಳನ್ನು ಸುಡಿ' ಎಂದು ಘೋಷಣೆ ಕೂಗುತ್ತಾ ಮನೆಮನೆಗೆ ಹೋಗಿ ಜೀನ್ಸ್ ಪ್ಯಾಂಟುಗಳನ್ನು ಶೇಖರಿಸುತ್ತಿದ್ದರು. ಪಶ್ಚಿಮ ಎಂದರೆ ಪಾಶ್ಚಿಮಾತ್ಯ ದೇಶಗಳು. ಈ ಎಳೆಯ ಬಾಲೆಯರನ್ನು ಕರೆದೊಯ್ಯುತ್ತಿದ್ದ ಗಂಡಸರೂ ಎದ್ದುಕಾಣುತ್ತಿದ್ದರು.

ಈ ಘಟನೆ ನನ್ನನ್ನು ಯೋಚನಾಪರನಾಗಿ ಮಾಡಿತು. ನಿನ್ನೆಯವರೆಗೂ ಜೀನ್ಸ್ ತೊಟ್ಟು ಶಕ್ತಿಶಾಲಿಗಳಾಗಿದ್ದ ಈ ಅಸಹಾಯಕ ಹೆಣ್ಣುಮಕ್ಕಳು ಆ ಸುಂದರ ಪೋಷಾಕನ್ನು ಅವರೇ ಸುಡುತ್ತಿದ್ದರು. ಅವರು 'ಪಶ್ಚಿಮದ ಪೋಷಾಕನ್ನು ಸುಡಿ' ಎಂದು ಹೇಳುತ್ತಾ ಒಂದು ಸಂಸ್ಕೃತಿಯನ್ನೆ ಸುಡುತ್ತಿದ್ದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪಶ್ಚಿಮದ ಸಂಸ್ಕೃತಿ ಕಬ್ಬು ಬೆಳೆಯುತ್ತಾ ನಿದ್ರಿಸುವ ಈ ಹಳ್ಳಿಯನ್ನು ಸೂಚಕವಾಗಿಯಾದರೂ ಸದ್ದುಗದ್ದಲವಿಲ್ಲದೆ ಪ್ರವೇಶಿಸಿತ್ತು.

ಪಶ್ಚಿಮದ ಪೋಷಾಕನ್ನು ಸುಡುವ ಈ ಘಟನೆಗೆ ಅನೇಕ ದಿನಗಳ ಮೊದಲು, ಪಶ್ಚಿಮ ಉತ್ತರಪ್ರದೇಶದ ಈ ಜಿಲ್ಲೆಗಳಲ್ಲಿ ಖಾಪ್ ಪಂಚಾಯತ್ ಎಂದು ಕರೆಯಲ್ಪಡುವ ಅನೇಕ ಹಳ್ಳಿ ಸಭೆಗಳು ನಡೆದಿದ್ದವು. ಇವುಗಳಲ್ಲಿ ಹಿರಿಯರು, ಹುಡುಗಿಯರು ಮಾರ್ಕೆಟ್‌ಗಳಲ್ಲಿ ಮತ್ತು ಕಾಲೇಜುಗಳಲ್ಲಿ ಜೀನ್ಸ್ ಹಾಕಿಕೊಳ್ಳುವುದನ್ನು ಮತ್ತು ಮೊಬೈಲ್ ಫೋನ್ ಇಟ್ಟುಕೊಳ್ಳುವುದರ ಮೇಲೆ

• ಅಂಬೇಡ್ಕರ್ ಯುಗ

ಬಹಿಷ್ಕಾರ ಹಾಕಿದ್ದರು. ಈ ಬಹಿಷ್ಕಾರ ಟಿ-ಶರ್ಟ್‌ಗಳಿಗೂ ಚಾಚಿತ್ತು. ಜೀನ್ಸ್‌ನಿಂದ ಟಿ-ಶರ್ಟ್‌ಗಳಿಗೆ ಚಾಚಿದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಹಳ್ಳಿಯ ಹಿರಿಯರಿಗೆ ಜೀನ್ಸ್ ಹಾಕುವುದು ಹೆಚ್ಚು ಪ್ರಚೋದನಕಾರಿಯಾಗಿ ಕಂಡಿತು. ಜೀನ್ಸ್‌ಗಳಲ್ಲಿ ಹೆಣ್ಣಿನ ದೇಹ ಹೆಚ್ಚು ಕಾಣಪಡುತ್ತಿದ್ದು ಹುಡುಗರಿಂದ ಲೈಂಗಿಕ ಚುಡಾಯಿಸುವಿಕೆಯನ್ನು ಆಹ್ವಾನಿಸುತ್ತದೆ ಎಂಬುದು ಅವರ ವಾದ. ನಿಜ ಹೇಳಬೇಕೆಂದರೆ ಹೆಣ್ಣಿನ ದೇಹವನ್ನು ಹೆಚ್ಚು ಎದ್ದು ಕಾಣುವಂತೆ ಮಾಡುವುದು ಸೀರೆ. ಜೀನ್ಸ್‌ಗಳು ಅದನ್ನು ರಕ್ಷಿಸುತ್ತವೆ. ಸೀರೆ ಜತೆ ತೊಡುವ ರವಿಕೆಗಳು ಹೆಣ್ಣಿನ ದೇಹ ಹೆಚ್ಚು ಎದ್ದು ಕಾಣುವಂತೆ ಮಾಡುತ್ತವೆ. ಟಿ-ಶರ್ಟ್‌ಗಳು ರಕ್ಷಿಸುತ್ತವೆ. ಆದರೆ ಹಳ್ಳಿಯ ಹಿರಿಯರು ತಮ್ಮ ವಾದಗಳಲ್ಲಿ ಯಾವಾಗಲೂ ಮುಂದಿರುತ್ತಾರೆ. ಜೀನ್ಸ್ ಮತ್ತು ಟಿ-ಶರ್ಟ್‌ಗಳು ಪಶ್ಚಿಮದ ಧಿರಿಸುಗಳು. ಅವು ನಮ್ಮ ದೇಶದ ಸಂಸ್ಕೃತಿಯನ್ನು ನಾಶಪಡಿಸಲು ಬಂದಿವೆ. ಇವುಗಳ ಜತೆಗೆ ಮೊಬೈಲ್ ಫೋನ್‌ಗಳು ಕೈಗೆ ಬಂತೆಂದರೆ ಎಳೆಯ ಹೃದಯಗಳು ಸ್ವಾತಂತ್ರ್ಯದ ಅನುಭವನ್ನು ಸವಿಯುತ್ತವೆ. ಅವರು ಸುಲಭವಾಗಿ ಯಾರನ್ನಾದರೂ ಸಂಪರ್ಕಿಸಬಹುದು. ಮುಖತಃ ಸಂಧಿಸಿ ಸಿಕ್ಕುಹಾಕಿಕೊಳ್ಳವ ಭಯವಿಲ್ಲ. ಇವುಗಳ ಕಾರಣವಾಗಿ ಗಂಡು ಹೆಣ್ಣುಗಳು ಪ್ರೀತಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ ಮತ್ತು ಅನೇಕ ಪ್ರೇಮಿಗಳು ಬೇರೆ ಪ್ರದೇಶಗಳಿಗೆ ಓಡಿಹೋಗುತ್ತಾರೆ. ಇದೂ ಸಹ ಪಶ್ಚಿಮದ ಸಂಸ್ಕೃತಿ, ನಮ್ಮ ಸಂಸ್ಕೃತಿಯನ್ನು ಹಾಳು ಮಾಡುತ್ತಿದೆ ಎಂಬುದು ಅವರ ಅನಿಸಿಕೆ.

ಪಶ್ಚಿಮದ ಸಂಸ್ಕೃತಿಯ ಸೂಚಕಗಳು ಟೀಕೆಗೊಳಗಾಗಿರುವುದು ಭಾರತ ಬದಲಾಗುತ್ತಿರುವುದರ ಸೂಚಕವಾಗಿದೆ. ಈ ಬದಲಾವಣೆ ತರುತ್ತಿರುವುದು ಜಾಗತೀಕರಣದ ನಂತರದ ಸಾಧನ ಸಲಕರಣೆಗಳು ಮತ್ತು ಉಡುಪುಗಳು. ಇದನ್ನೆ ಚಿಂತಕ ಡಾ.ಅಂಬೇಡ್ಕರ್ ಕನಸು ಕಂಡಿದ್ದು. ಪಶ್ಚಿಮದ ನಾಗರೀಕತೆಯ ಮಾದರಿಯಲ್ಲಿ ಭಾರತವನ್ನು ಮರುಕಟ್ಟುವುದು ಅವರ ಉದ್ದೇಶವಾಗಿತ್ತು.

> **ಸಮಾಜವಾದಿಗಳು ಕಮ್ಯುನಿಸ್ಟ್‌ರ ಜೊತೆ ಸೇರಿ ಸಗಟು ಮಾರಾಟದಲ್ಲಿ ವಿದೇಶೀ ನೇರ ಬಂಡವಾಳವನ್ನು ತಡೆಹಿಡಿದಿದ್ದಾರೆ. ಇದರಿಂದ ಅವರು ಎಷ್ಟೋ ದಶಲಕ್ಷ ಕೆಳವರ್ಗದ ಭಾರತೀಯರ ಭವಿಷ್ಯವನ್ನು ತಡೆಹಿಡಿದಿದ್ದಾರೆ. ಪ್ರಪಂಚದುದ್ದಕ್ಕೂ ಸಗಟು ಮಾರಾಟ ಕೈಗಾರಿಕೆ ಕಡಿಮೆ ಶಿಕ್ಷಣ ಮತ್ತು ತರಬೇತಿ ಹೊಂದಿದವರಿಗೆ ಲಕ್ಷಾಂತರ ಹುದ್ದೆಗಳನ್ನು ಸೃಷ್ಟಿಸುತ್ತಿದೆ. ಹೆಚ್ಚು ಸಂಬಳ ಸೌಲತ್ತುಗಳು ಇಲ್ಲದಿದ್ದರೂ ಈ ವಲಯದ ಹೆಚ್ಚು ಹುದ್ದೆಗಳು ಕೆಳವರ್ಗದವರ ಮಕ್ಕಳಿಗೆ ಹೋಗುತ್ತವೆ.**

20ನೇ ಶತಮಾನದ ಎಲ್ಲ ಮುಂಚೂಣಿ ನಾಯಕರಲ್ಲಿ ಡಾ.ಅಂಬೇಡ್ಕರ್ ಒಬ್ಬರೇ ಸೂಟು ಬೂಟುಗಳನ್ನು ಧರಿಸುತ್ತಿದ್ದವರು. ಅವರ ಕಾಲದ ಎಲ್ಲಾ ಅಥವಾ ಹೆಚ್ಚು ನಾಯಕರು ಸೂಟು ಬೂಟುಗಳನ್ನು ಹೀಗಳೆದವರೇ. ಅವರು ಹಾಕುತ್ತಿದ್ದುದು ಅರ್ಧ ತುಂಡರಿಸಿದ ಶೂಗಳು ಅಥವಾ ಸ್ಯಾಂಡಲ್‌ಗಳು. ಇದಕ್ಕೆ ಅಪವಾದವಾದ ಅಂಬೇಡ್ಕರ್ ಸರಿಯಾದ ಶೂಗಳನ್ನು ಧರಿಸುತ್ತಿದ್ದರು.

ಹೆಚ್ಚು ನಾಗರೀಕವಾದ ನಗರೀಕೃತ ಭಾರತಕ್ಕೆ ಬರುವುದಾದರೆ, ಅಂಬೇಡ್ಕರ್ ಹಾಕಿದ ಉಡುಪನ್ನೆ ಶಾಲೆಗಳು ತಮ್ಮ ವಿದ್ಯಾರ್ಥಿಗಳು ತೊಡುವಂತೆ ಹೇಳುತ್ತಿವೆ. ತಂದೆ ತಾಯಿಗಳು ತಮ್ಮ ಮಕ್ಕಳು ಹಳ್ಳಿಯ ಉಡುಪನ್ನೇ ತೊಡಬೇಕೆಂದು ಕೇಳುತ್ತಿದ್ದಾರೆಯೇ? ಸರ್ಕಾರಿ ಕಛೇರಿಗಳಿಗೆ ತಂದೆ ತಾಯಿಗಳು ತಮ್ಮ ಹಳ್ಳಿಯ ಉಡುಪಿನಲ್ಲಿಯೇ ಹೋಗುತ್ತಾರೆಯೇ?

ನಿಶ್ಚಯವಾಗಿ 21ನೇ ಶತಮಾನ ಅಂಬೇಡ್ಕರ್ ಅವರಿಗೆ ಸೇರಿದ್ದು. ಅಂಬೇಡ್ಕರ್ 21ನೇ ಶತಮಾನದ ಭಾರತದ ನಾಡಿಮಿಡಿತವನ್ನು ಸರಿಯಾಗಿ ಗ್ರಹಿಸಿದ್ದರು. ಅವರು ಭಾರತ ಮುಂದೆ ಧರಿಸುವ ಆ ಉಡುಪಿನ ಉಪಯೋಗವನ್ನು ವೇಗಗೊಳಿಸಬಯಸಿದ್ದರು. ಭಾರತ ಹೊಸ ಶತಮಾನಕ್ಕೆ ಕಾಲಿಡಲು ತಯಾರಾಗಿರಬೇಕು ಎಂಬುದು ಅವರ ಉದ್ದೇಶವಾಗಿತ್ತು.

ಡಾ. ಅಂಬೇಡ್ಕರ್ ಇಂಗ್ಲಿಷನ್ನು ಪ್ರೀತಿಸಿದರು. ಅವರು ಇಂಗ್ಲಿಷನ್ನು 'ಹುಲಿಯ ಹಾಲು' ಎಂದು ವರ್ಣಿಸಿದರು. ಇದರ ಉದ್ದೇಶ ಇಂಗ್ಲಿಷಿನ ಪ್ರಾಮುಖ್ಯತೆಯನ್ನು ಒತ್ತಿ ಹೇಳುವುದಾಗಿತ್ತು. ಅವರು ಇಂಗ್ಲಿಷನ್ನು ಭಾರತದ ಸಂಪರ್ಕ ಭಾಷೆಯಾಗಿ ಮತ್ತು ರಾಷ್ಟ್ರ ಭಾಷೆಯಾಗಿ ಮಾಡಬಯಸಿದ್ದರು. ಇಪ್ಪತ್ತನೇ ಶತಮಾನದ ಹೆಚ್ಚು ನಾಯಕರು ದೇಶ ಭಾಷೆಗಳನ್ನು ವೈಭವೀಕರಿಸಿದ್ದರು.

ಆದರೆ ಇಂದು ಭಾರತದ ಮಧ್ಯಮ ವರ್ಗಗಳು ತಮ್ಮ ಮಕ್ಕಳ ಶಿಕ್ಷಣಕ್ಕೆ ದೇಶಿಭಾಷೆಗಳ ಶಾಲೆಗಳನ್ನು ಆಶಿಸುತ್ತವೆಯೇ? ಭಾರತದ ಹೆಚ್ಚು ತಂದೆ-ತಾಯಿಗಳು ಉಚಿತ ದೇಸಿಭಾಷೆಯ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುವುದಕ್ಕಿಂತ ಹಣ ಕೊಟ್ಟಾದರೂ ಇಂಗ್ಲಿಷ್ ಶಾಲೆಗಳಿಗೆ ಸೇರಿಸುತ್ತಾರೆ. ತನ್ನ ಮಾಹಿತಿ ತಂತ್ರಜ್ಞಾನದ ಮೇಲಿನ ಹಿಡಿತಕ್ಕಾಗಿ ಭಾರತ ಪ್ರಪಂಚದ ಕಣ್ಣಲ್ಲಿ ಮೆಚ್ಚುಗೆಯನ್ನು ಗಳಿಸಿದೆ. ಇದು ಇಂಗ್ಲಿಷ್ ಜ್ಞಾನದಿಂದ ಮಾತ್ರ ಸಾಧ್ಯವಾಗಿದೆ. ಇಂಗ್ಲಿಷ್ ಮೇಲಿನ ಪ್ರಭುತ್ವದ ಮೂಲಕ ಭಾರತ ಬೆಳಗುವುದು ಸಾಧ್ಯ ಎಂಬುದನ್ನು ಅಂಬೇಡ್ಕರ್ ಊಹಿಸಿದ್ದರು.

ಡಾ.ಅಂಬೇಡ್ಕರರು ಅಮೆರಿಕದಲ್ಲಿ ಓದಿದ್ದರು ಮತ್ತು ಭಾರತಕ್ಕೆ ಅಮೆರಿಕಾದ ಅವಶ್ಯಕತೆಯನ್ನು ಕಂಡುಕೊಂಡಿದ್ದರು. ತಮ್ಮ 1952ರ ಸಂಸತ್ ಚುನಾವಣಾ ಪ್ರಣಾಳಿಕೆಯಲ್ಲಿ ಅವರು ಹೀಗೆ ಬರೆದಿದ್ದರು.

"ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಚೀನಾವನ್ನು ಖಾಯಂ ಸದಸ್ಯನಾಗಿ ಮಾಡಲು ಭಾರತ ಹೋರಾಡಬೇಕಾಯಿತು. ಇದೊಂದು ವಿಶೇಷ. ತನ್ನ ಹಿತ ಕಾಪಾಡಿಕೊಳ್ಳಲು ಚೀನಾ ತಾನೆ ಹೋರಾಡಲು ಸಮರ್ಥವಿರುವಾಗ ಭಾರತ ಏಕೆ ಇದಕ್ಕಾಗಿ ಹೋರಾಡಬೇಕು? ಇಂದು ಭಾರತ ಮತ್ತು ಅಮೆರಿಕಾದ ಮಧ್ಯೆ ಇರುವ ವೈಷಮ್ಯಕ್ಕೆ ಭಾರತ ಚೀನಾದ ಪರವಾಗಿ ಹೋರಾಡಿದ್ದೆ ಕಾರಣವಾಗಿದೆ. ಫಲಿತಾಂಶವಾಗಿ ಭಾರತ ಅಮೇರಿಕದಿಂದ ಯಾವುದೇ ಆರ್ಥಿಕ ಅಥವಾ ತಾಂತ್ರಿಕ ಸಹಾಯ ಪಡೆಯುವುದು ಅಸಾಧ್ಯವಾಗಿದೆ".

ಚೀನಾ ಪರವಾಗಿ ಹೋರಾಡಿದ್ದಕ್ಕೆ ಭಾರತಕ್ಕೆ ಸಿಕ್ಕಿದ ಪಾರಿತೋಷಕವಾದರೂ ಏನು? 1962ರ ಯುದ್ಧದಲ್ಲಿ ದೊರೆತ ಒದೆಗಳಷ್ಟೆ. ಚೀನಾ ಯುದ್ಧವನ್ನು ತನ್ನಂತಾನೆ ನಿಲ್ಲಿಸಿದ್ದರಿಂದ ಭಾರತ ಪ್ರಪಂಚದ ಕಣ್ಣಲ್ಲಿ ಅತೀವ ಅವಮಾನ ಅನುಭವಿಸಿತು.

ಭಾರತ ಇಂದು ಏನು ಮಾಡುತ್ತಿದೆ? ಅದು ಅಮೇರಿಕಾ ಜತೆ ಸ್ನೇಹ ಬೆಳೆಸಲು ಶ್ರಮಿಸುತ್ತಿದೆ. ಭಾರತದ ವಿದ್ಯಾರ್ಥಿಗಳು ತಮ್ಮ ಶಿಕ್ಷಣಕ್ಕಾಗಿ ಎಲ್ಲಿಗೆ ಹೋಗುತ್ತಿದ್ದಾರೆ? ಚೀನಾಕ್ಕೆ ಹೋಗುತ್ತಿದ್ದಾರೆಯೇ?

20ನೇ ಶತಮಾನದ ಭಾರತದಲ್ಲಿ ನೂರಾರು ಪ್ರಪಂಚ ಮಟ್ಟದ ನಾಯಕರಿದ್ದರೂ ಅವರಲ್ಲಿ ಹೆಚ್ಚು ಜನ ತತ್ವಜ್ಞಾನಿಗಳಾಗಿರಲಿಲ್ಲ. ಅಂಬೇಡ್ಕರ್ ಮೊದಲು ತತ್ವಜ್ಞಾನಿ. ನಾಯಕರು ಮತ್ತು ತತ್ವಜ್ಞಾನಿಗಳಲ್ಲಿ ಇರುವ ವ್ಯತ್ಯಾಸ ಇದು. ನಾಯಕರು ತಮ್ಮ ಕಾಲಮಾನದಲ್ಲಿ ಹೇಳುವ ಸಮಸ್ಯೆಗಳನ್ನು ಗುರುತಿಸಿ ಅವುಗಳ ನಿವಾರಣೋಪಾಯಗಳನ್ನು ಕಂಡುಕೊಳ್ಳುತ್ತಾರೆ. ಆದರೆ ತತ್ವಜ್ಞಾನಿಗಳು ಮುಂದಿನ ಪೀಳಿಗೆಗಳು ಎದುರಿಸಬಹುದಾದ ಸಮಸ್ಯೆಗಳ ಬಗ್ಗೆ ಯೋಚಿಸಬಲ್ಲರು ಮತ್ತು ಆ ಪೀಳಿಗೆಗಳನ್ನು ತಾವೇ ಆ ಸಮಸ್ಯೆಗಳ ಪರಿಹಾರೋಪಾಯ ಕಂಡುಕೊಳ್ಳುವಂತೆ ತಯಾರು ಮಾಡಬಲ್ಲರು.

ಡಾ.ಅಂಬೇಡ್ಕರ್ ಅವರು 21ನೇ ಶತಮಾನದ ಭಾರತ ಮತ್ತು ಅದರ ಸಮಸ್ಯೆಗಳ ಬಗ್ಗೆ ಯೋಚಿಸಿದ್ದರು. ಅವುಗಳ ಪರಿಹಾರೋಪಾಯಗಳನ್ನು ತಯಾರಿಸಿಟ್ಟಿದ್ದರು. ಭಾರತ ಇಂದು ಅವುಗಳನ್ನು ಅನುಸರಿಸುತ್ತಿದೆ.

ನಿಶ್ಚಯವಾಗಿ 21ನೇ ಶತಮಾನದ ಭಾರತ ಅಂಬೇಡ್ಕರ್‌ರಿಗೆ ಸೇರಿದೆ. ದಲಿತರು 21ನೇ ಶತಮಾನವನ್ನು ತಮ್ಮದಾಗಿ ಮಾಡಿಕೊಳ್ಳಬಲ್ಲರೆ? ಎಳೆಯ ದಲಿತರು ಈ ಬಗ್ಗೆ ತೀರ್ಮಾನಿಸಬೇಕು.

* * *

1990ರ ಸುಮಾರಿಗೆ ಭಾರತ ಮತ್ತು ಚೀನಾ ಎರಡೂ ಹೆಚ್ಚು ಕಡಿಮೆ ಒಂದೇ ಜಿ.ಡಿ.ಪಿ ಹೊಂದಿದ್ದವು. ಸುಮಾರು ಎರಡು ದಶಕಗಳಲ್ಲಿ ಚೀನಾ ಎಲ್ಲಾ ರಂಗಗಳಲ್ಲಿಯೂ ಭಾರತಕ್ಕಿಂತ ಮುಂದಿದೆ. ಮಾಹಿತಿ ತಂತ್ರಜ್ಞಾನ ಒಂದು ಮಾತ್ರ ಅಪವಾದವಾಗಿದೆ. ಮಾಹಿತಿ ತಂತ್ರಜ್ಞಾನದಲ್ಲಿ ಭಾರತದ ಸಾಧನೆ ಹೆಚ್ಚು ಸಂಖ್ಯೆಯಲ್ಲಿ ಭಾರತೀಯರು ಇಂಗ್ಲಿಷ್ ಜ್ಞಾನ ಹೊಂದಿರುವುದರಿಂದ ಮಾತ್ರ ಸಾಧ್ಯವಾಗಿದೆ.

ಚೀನಾ ಅತಿವೇಗವಾಗಿ ಬೆಳೆಯಲು ಕಾರಣಗಳೇನು? ಚೀನಾ ಭಾರತವನ್ನು ಹಿಂದಿಕ್ಕಿರುವುದಕ್ಕೆ ಅನೇಕ ಕಾರಣಗಳಿವೆ. ರಫ್ತು ರಂಗವನ್ನೆ ನೋಡಿ. ಚೀನಾದ ರಫ್ತು

ಸಮಾಜವಾದಿಗಳು ಸಾಮಾಜಿಕ ಕ್ರಾಂತಿಯನ್ನು ತಡೆಹಿಡಿಯುತ್ತಿದ್ದಾರೆ

2000 ಬಿಲಿಯನ್ ಡಾಲರ್ ಹತ್ತಿರವಿದೆ. ಭಾರತದ್ದು ಸುಮಾರು 300 ಬಿಲಿಯನ್ ಡಾಲರ್. ಚೀನಾ ಮತ್ತು ಭಾರತದ ನಡುವೆ ಈ ದೊಡ್ಡ ಕಂದಕವೇಕೆ? ಇದಕ್ಕೆ ಅನೇಕ ಕಾರಣಗಳಿರಬಹುದು.

ಆದರೆ ಚೀನಾದ ಆರ್ಥಿಕ ಕ್ಷೇತ್ರವನ್ನು ದೂಡುತ್ತಿರುವ ಒಂದು ಅಂಶವನ್ನು ನಾವು ಪರೀಕ್ಷಿಸೋಣ. ಚೀನಾದ ವಸ್ತುಗಳು ಪ್ರಪಂಚದ ಎಲ್ಲ ಮಳಿಗೆಗಳಲ್ಲಿಯೂ ದೊರೆಯುತ್ತವೆ. ಹೇಗೆ ಚೀನಾದ ವಸ್ತುಗಳು ಪ್ರಪಂಚದೆಲ್ಲಾ ಕಡೆ ತಲುಪಿದವು? ಭಾರತದ ವಸ್ತುಗಳೇಕೆ ತಲುಪುತ್ತಿಲ್ಲ?

ಅಮೆರಿಕಾದ ವಾಲ್‌ಮಾರ್ಟ್ ಪ್ರಪಂಚದ ಅತಿ ದೊಡ್ಡ ಸರಣಿ ಸಗಟು ಮಾರಾಟ ಮಳಿಗೆ. ಮತ್ತು ಪ್ರಪಂಚದಲ್ಲೆ ಅತಿ ಹೆಚ್ಚು ಜನರಿಗೆ ಕೆಲಸ ನೀಡುವ ಖಾಸಗಿ ವಲಯದ ಅತಿ ದೊಡ್ಡ ಯಜಮಾನ. ಫ್ರಾನ್ಸ್ ಮೂಲದ ಕಾರ್‍ರೆಫೋರ್ ಪ್ರಪಂಚದ ಎರಡನೆ ದೊಡ್ಡ ಸರಣಿ ಸಗಟು ಮಾರಾಟ ಮಳಿಗೆ. ಬ್ರಿಟಿಷ್ ಮೂಲದ 'ಟೆಸ್ಕೊ' ಮೂರನೆ ದೊಡ್ಡದು ಮತ್ತು ಜರ್ಮನಿ ಮೂಲದ 'ಮೆಟ್ರೊ' ನಾಲ್ಕನೆ ದೊಡ್ಡ ಸರಣಿ ಸಗಟು ಮಾರಾಟ ಮಳಿಗೆ.

ಪ್ರಪಂಚದ ನಾಲ್ಕೂ ದೊಡ್ಡ ಸರಣಿ ಸಗಟು ಮಾರಾಟ ಮಳಿಗೆಗಳೂ ಚೀನಾದಲ್ಲಿ ತಮ್ಮ ಮಳಿಗೆಗಳನ್ನು ತೆರೆಯಲು ಅವಕಾಶ ಪಡೆದವು. ಫ್ರೆಂಚ್ ಕಾರ್‍ರೆಫೋರ್ 1995ರಲ್ಲಿ ಚೀನಾಕ್ಕೆ ಬಂತು. ವಾಲ್‌ಮಾರ್ಟ್ ಮತ್ತು ಮೆಟ್ರೊ 1996ರಲ್ಲಿ ಬಂದವು. ಟೆಸ್ಕೊ 2004ರಲ್ಲಿ ಚೀನಾ ಪ್ರವೇಶಿಸಿತು. ಇವಲ್ಲದೆ ಇನ್ನೂ ಅನೇಕ ವಿದೇಶಿ ಮಳಿಗೆಗಳು ಚೀನಾದಲ್ಲಿ ವ್ಯವಹಾರ ನಡೆಸುತ್ತಿವೆ.

ಈ ವಿದೇಶಿ ಸಗಟು ಮಾರಾಟ ಮಳಿಗೆಗಳೇ ಚೀನಾದ ಉತ್ಪಾದನೆಗಳನ್ನು ಪ್ರಪಂಚದ ಮೂಲೆಮೂಲೆಗಳಿಗೂ ತಲುಪಿಸಿರುವುದು. ವಾಲ್‌ಮಾರ್ಟ್ ಉದಾಹರಣೆಯನ್ನೇ ತೆಗೆದುಕೊಳ್ಳಿ ವಾಲ್‌ಮಾರ್ಟ್‌ನ ಚೀನಾದೊಳಗಿನ ವಾರ್ಷಿಕ ಮಾರಾಟ ಎಂದೂ ಎಂಟುಬಿಲಿಯನ್ ಡಾಲರನ್ನೂ ತಲುಪಿಲ್ಲ.

ವಾಲ್‌ಮಾರ್ಟ್ ಪ್ರಪಂಚದೆಲ್ಲಾ ಕಡೆ ಇದೆ. ಅದಕ್ಕೆ ತನ್ನದೇ ಆದ ಯಾವ ಉತ್ಪಾದನೆಯೂ ಇಲ್ಲ. ಪ್ರಪಂಚದಾದ್ಯಂತ ಅದರ ವಾರ್ಷಿಕ ವ್ಯವಹಾರ 420 ಬಿಲಿಯನ್ ಡಾಲರ್ ಹತ್ತಿರ ಹತ್ತಿರ. ಅದರ ಆದಾಯದ ಶೇಕಡ ಎಪ್ಪತ್ತರಷ್ಟು ಮಾಲನ್ನು ಅದು ಚೀನಾದಿಂದಲೇ ಕೊಳ್ಳುತ್ತದೆ. ಸುಮಾರು 20,000 ಚೀನಾ ಉತ್ಪಾದನಾದಾರರು ವಾಲ್‌ಮಾರ್ಟ್‌ಗೆ ಸರಂಜಾಮು ಒದಗಿಸುವವರಾಗಿದ್ದಾರೆ. ವಾಲ್‌ಮಾರ್ಟ್ ಚೀನಾದಲ್ಲಿ ಒಂದು ಲಕ್ಷ ನೌಕರರನ್ನು ಹೊಂದಿದೆ. ಅವರಲ್ಲಿ ಶೇಕಡ 99.9ರಷ್ಟು ಚೀನಾದವರೆ.

ವಾಲ್‌ಮಾರ್ಟ್‌ನಂತೆ ಇತರೆ ಎಲ್ಲಾ ವಿದೇಶಿ ಸಗಟು ಮಾರಾಟದಾರರು ತಮ್ಮ ಹೊರದೇಶಗಳ ವ್ಯವಹಾರಕ್ಕೆ ಚೀನಾದಿಂದಲೇ ವಸ್ತುಗಳನ್ನು ಖರೀದಿಸುತ್ತಾರೆ. ಜೊತೆಗೆ ಚೀನಾದ ಈ ಸಗಟು ಮಾರಾಟ ರಂಗ ಚೀನಾ ರೈಲ್ವೆಯಲ್ಲಿರುವುದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿದೆ.

ಆದುದರಿಂದ ವಿದೇಶಿ ಸಗಟು ಮಾರಾಟದಾರರು ಚೀನಾದ ಉತ್ಪಾದನೆಗಳನ್ನು ಪ್ರಪಂಚದ ಎಲ್ಲಾ ಭಾಗಗಳಿಗೂ ತಲುಪಿಸಿದರು. ಇದರಿಂದ ಅದು ಭಾರತಕ್ಕಿಂತ ಬಹಳ ಮುಂದಿರಲು ಸಾಧ್ಯವಾಯಿತು ಎಂಬುದರಲ್ಲಿ ಆಶ್ಚರ್ಯವೇನು? ಚೀನಾದ ಆರ್ಥಿಕ ಅದ್ಭುತದಲ್ಲಿ ಈ ವಿದೇಶಿ ಸಗಟು ಮಾರಾಟದಾರರ ಕೊಡುಗೆ ಮಹತ್ವದ್ದು.

ಆದರೆ ಅದೇಕೆ ಭಾರತದಲ್ಲಿ ಸಾಧ್ಯವಾಗಿಲ್ಲ? ವಾಲ್‌ಮಾರ್ಟ್ ಏಕೆ ಭಾರತ ಪವೇಶಿಸಲು ಇನ್ನೂ ಅಷ್ಟು ಕಷ್ಟಪಡುತ್ತಿದೆ? ಗುಣಮಟ್ಟದಲ್ಲಿ ಉತ್ತಮವಿದ್ದರೂ ಭಾರತದಲ್ಲಿ ತಯಾರಾದ ವಸ್ತುಗಳು ಪ್ರಪಂಚದ ವಿವಿಧ ಭಾಗಗಳನ್ನು ಮುಟ್ಟದಿರಲು ಕಾರಣವೇನು?

ದೋತಿ–ಕುರ್ತಾಗಳನ್ನು ಧರಿಸಿದ ಭಾರತದ ನಾಯಕರು ಭಾರತವನ್ನು ಹಿಂದುಳಿಸಿದ್ದಾರೆ. ಜ್ಯೋತಿ ಬಸು ಭಾರತದ ಒಂದೇ ಒಂದು ರಾಜ್ಯವನ್ನು ಹಾಳುಮಾಡಿದರು. ಆದರೆ ರಾಮ್ ಮನೋಹರ್ ಲೋಹಿಯಾ ಇಡೀ ಉತ್ತರ ಭಾರತವನ್ನು ಹಾಳುಮಾಡಿದರು. ಉತ್ತರ ಪ್ರದೇಶವನ್ನು ಆಳುತ್ತಿರುವ ಅವರ ಅನುಯಾಯಿಗಳು ವಾಲ್‌ಮಾರ್ಟ್ ರಾಜ್ಯವನ್ನು ಪ್ರವೇಶಿಸಿದರೆ ಅದನ್ನು ಸುಡುವುದಾಗಿ ಬೆದರಿಕೆ ಹಾಕಿದ್ದಾರೆ. ಬಿಹಾರವನ್ನು ಆಳುತ್ತಿರುವ ಲೋಹಿಯಾರ ಮತ್ತೊಬ್ಬ ಅನುಯಾಯಿ ವಿದೇಶಿ ಸಗಟು ಮಾರಾಟದಾರರು ಭಾರತಕ್ಕೆ ಬರುವುದರ ವಿರೋಧಿ.

ಭಾರತದ ಸಮಾಜವಾದಿಗಳು ಒಂದು ರೀತಿಯ ಪರಾವಲಂಬಿಜೀವಿಗಳು. ಅವರು ಇತರರ ರಕ್ತಹೀರಿ ಬದುಕುತ್ತಾರೆ. ಬಿಹಾರವನ್ನೇ ತೆಗೆದುಕೊಳ್ಳಿ. ನಿತೀಶ್‌ಕುಮಾರ್ ಒಬ್ಬ ಲೋಹಿಯಾವಾದಿ. ಬಿಹಾರವನ್ನು ಒಂದು ವಿಶೇಷ ರಾಜ್ಯ ಎಂದು ಘೋಷಿಸಬೇಕೆಂದು ಅವರು ಬಯಸುತ್ತಾರೆ. ಆ ರಾಜ್ಯ ಸಂಕಷ್ಟದಲ್ಲಿರುವುದಾಗಿಯೂ ಮತ್ತು ಆ ರಾಜ್ಯವನ್ನು ಮತ್ತು ಅಲ್ಲಿನ ಜನರನ್ನು ರಕ್ಷಿಸಬೇಕಾದರೆ ವಿಶೇಷ ನಿಧಿಯ ಅವಶ್ಯಕತೆ ಇದೆ ಎಂದೂ ಅವರು ಹೇಳುತ್ತಾರೆ. ಉತ್ತರ ಪ್ರದೇಶದ ಅಖಿಲೇಶ್ ಯಾದವ್ ತಮ್ಮ ರಾಜ್ಯ ಮತ್ತು

ಜನರನ್ನು ರಕ್ಷಿಸುವುದಕ್ಕೋಸ್ಕರ ವಿಶೇಷ ಸಹಾಯ ಕೇಳುತ್ತಾ ಭಿಕ್ಷಾಪಾತ್ರೆಯೊಡನೆ ದೆಹಲಿಗೆ ಬರುತ್ತಾರೆ. ಆದರೆ ನಿತೀಶ್ ಮತ್ತು ಅಖಿಲೇಶ್ ಇಬ್ಬರೂ ವಿದೇಶೀ ಸಗಟು ಮಾರಾಟಗಾರರು ಅವರ ರಾಜ್ಯಗಳಿಗೆ ಬರುವುದನ್ನು ವಿರೋಧಿಸುತ್ತಾರೆ.

ಹಾಗೆಂದರೆ ಏನು? ಭಾರತದ ಉಳಿದೆಲ್ಲಾ ರಾಜ್ಯಗಳೂ ತಮಗೆ ಸಾಧ್ಯವಾದ ಮಾರ್ಗಗಳಿಂದ ಸಂಪತ್ತನ್ನು ಸೃಷ್ಟಿಸಬೇಕು. ಉತ್ತರ ಪ್ರದೇಶ ಮತ್ತು ಬಿಹಾರದಂತ ಸಮಾಜವಾದಿ ರಾಜ್ಯಗಳು ತಮ್ಮ ಜನರನ್ನು ಆ ರಾಜ್ಯಗಳ ಉತ್ಪತ್ತಿಯಿಂದ ಸಾಕಬೇಕು ಎಂತಲೇ? ಹಾಗೆಯೇ ದೆಹಲಿ ಮತ್ತು ಮುಂಬೈಗಳಂತಹ ನಗರಗಳು ಸಗಟು ಮಾರಾಟ ಮಳಿಗೆಗಳನ್ನು ತೆರೆಯಲಿ. ಅಲ್ಲಿ ನಮ್ಮ ಯುವಕರಿಗೆ ಹುದ್ದೆ ದೊರೆಯುತ್ತದೆ ಎಂತಲೇ?

ಇದು ಭಾರತದ ದುರ್ದೈವ. ಭಾರತದ ಸಮಾಜವಾದಿಗಳು ಕಮ್ಯುನಿಸ್ಟರಿಗಿಂತ ಕಡೆಯಾದವರು. ಸಂಪತ್ತನ್ನು ಸೃಷ್ಟಿಸುವುದು ಅವರಿಗೆ ಒಂದು ಶಾಪದಂತೆ. ಉದ್ಯೋಗ ಸೃಷ್ಟಿಸುವುದನ್ನೂ ಸಹ ಅವರು ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಾರೆ. ಸರ್ಕಾರ ಯಾವ ರೀತಿಯ ಹುದ್ದೆಗಳನ್ನು ಸೃಷ್ಟಿಸುತ್ತಾ ಹೋಗಬೇಕು? ಪೊಲೀಸ್ ಕಾನ್ಸ್‌ಟೇಬಲ್‌ಗಳೇ, ಮತ್ತು ಶಾಲಾ ಉಪಾಧ್ಯಾಯರೇ, ಎಂಬುದನ್ನು ಸಮಾಜವಾದಿಗಳು ಬಲ್ಲರು. ರೈಲ್ವೆಯನ್ನೂ ಇದಕ್ಕೆ

ಹೆಚ್ಚಾಗಿ ಮೇಲ್ಜಾತಿಯವರಿಂದಲೇ ನಡೆಯಲ್ಪಡುತ್ತಿರುವ ಖಾಸಗಿ ಶಾಲೆಗಳು ದಲಿತ ಮಕ್ಕಳಿಗೆ ಪ್ರವೇಶವನ್ನು ನಿರಾಕರಿಸುತ್ತಿಲ್ಲ. ಅದು ಜಾತಿ ಪದ್ಧತಿ ದಲಿತರ ಮೇಲೆ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಲಿದೆ ಎಂಬುದನ್ನು ತೋರಿಸುತ್ತದೆ. ಅದು ವೇಗವಾಗುವಂತೆ ನಾವು ನೋಡಿಕೊಳ್ಳಬೇಕು. ಜಾತಿಯನ್ನು ಬಲ ಪ್ರಯೋಗದಿಂದ ಕೊನೆಗೊಳಿಸಲಾಗುವುದಿಲ್ಲ. ವಿವಿಧ ಜಾತಿಗಳಿಗೆ ಸೇರಿದ ಪ್ರಜೆಗಳ ಸಾಮಾಜಿಕ ಒಗ್ಗಟ್ಟನ್ನು ಬಲ ಪ್ರಯೋಗದಿಂದ ಕಟ್ಟಲಾಗುವುದಿಲ್ಲ.

ಸೇರಿಸಬಹುದು.

ಚೀನಾದಲ್ಲಿ ಸಗಟು ಮಾರಾಟಗಾರರು ಚೀನಾದ ರೈಲ್ವೆಗಿಂತ ಹೆಚ್ಚು ಹುದ್ದೆಗಳನ್ನು ನೀಡಿರುವ ರೀತಿಯಲ್ಲಿಯೇ ಭಾರತದಲ್ಲಿಯೂ ಸಹ ವಿವಿಧ ಸಗಟು ಮಾರಾಟದಾರರು ಭಾರತೀಯ ರೈಲ್ವೆಗಿಂತ ಹೆಚ್ಚು ಹುದ್ದೆಗಳನ್ನು ಸೃಷ್ಟಿಸಬಲ್ಲರು.

ಆದರೆ, ಸಮಾಜವಾದಿಗಳು ಕಮ್ಯುನಿಸ್ಟ್‌ರ ಜೊತೆ ಸೇರಿ ಸಗಟು ಮಾರಾಟದಲ್ಲಿ ವಿದೇಶೀ ನೇರ ಬಂಡವಾಳವನ್ನು ತಡೆಹಿಡಿದಿದ್ದಾರೆ. ಇದರಿಂದ ಅವರು ಎಷ್ಟೋ ದಶಲಕ್ಷ ಕೆಳವರ್ಗದ ಭಾರತೀಯರ ಭವಿಷ್ಯವನ್ನು ತಡೆಹಿಡಿದಿದ್ದಾರೆ. ಪ್ರಪಂಚದುದ್ದಕ್ಕೂ ಸಗಟು ಮಾರಾಟ ಕೈಗಾರಿಕೆ ಕಡಿಮೆ ಶಿಕ್ಷಣ ಮತ್ತು ತರಬೇತಿ ಹೊಂದಿದವರಿಗೆ ಲಕ್ಷಾಂತರ ಹುದ್ದೆಗಳನ್ನು ಸೃಷ್ಟಿಸುತ್ತಿದೆ. ಹೆಚ್ಚು ಸಂಬಳ ಸೌಲತ್ತುಗಳು ಇಲ್ಲದಿದ್ದರೂ ಈ ವಲಯದ ಹೆಚ್ಚು ಹುದ್ದೆಗಳು ಕೆಳವರ್ಗದವರ ಮಕ್ಕಳಿಗೆ ಹೋಗುತ್ತವೆ.

ಇಂದು ದೇಶದಲ್ಲಿ ಯಾವುದೇ ಸೈನ್ಯ ಅಥವಾ ಪೊಲೀಸ್ ನೋಂದಾವಣೆ ಕೇಂದ್ರಗಳಿಗೆ ನೀವು ಭೇಟಿ ನೀಡಿ. ಯಾವ ವರ್ಗದ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಸೇರುತ್ತಿದ್ದಾರೆ ಎಂಬುದು ಸುಲಭವಾಗಿ ನಿಮಗೆ ಅರ್ಥವಾಗುತ್ತದೆ. ಇಂತಹ ಕೇಂದ್ರಗಳಲ್ಲಿ ಅದರಲ್ಲೂ ಉತ್ತರ ಭಾರತದಲ್ಲಿ ನಾಮುಂದು ತಾಮುಂದು ಎಂದು ಒಬ್ಬರ ಮೇಲೊಬ್ಬರು ಬೀಳುವ ಪರಿಸ್ಥಿತಿ ಇದೆ. ನಮ್ಮ ಯುವಕರು ತಾಳ್ಮೆ ಕಳೆದುಕೊಳ್ಳುತ್ತಿದ್ದಾರೆ. ಅವರು ನಗರ ಪ್ರದೇಶಗಳಲ್ಲಿ ಕೆಲಸ ಮಾಡಲು ಇಚ್ಛಿಸುತ್ತಾರೆ. ಚೀನಾ ತನ್ನ ದಶಲಕ್ಷಗಟ್ಟಲೆ ಯುವಕರನ್ನು ಸಗಟು ಮಾರಾಟ ಕೈಗಾರಿಕೆಯೊಳಗೆ ಸೆಳೆದುಕೊಂಡಿತು. ಭಾರತದಲ್ಲಿ ಸಮಾಜವಾದಿಗಳು ಸಾಮಾಜಿಕ ಕ್ರಾಂತಿಯನ್ನು ತಡೆಗಟ್ಟುತ್ತಿದ್ದಾರೆ.

* * *

ಲಾರ್ಡ್ ಮೆಕಾಲೆ ಅವರ ಆಧುನಿಕ ಶಿಕ್ಷಣ ವ್ಯವಸ್ಥೆ 1854ರಲ್ಲಿ ಜಾರಿಗೆ ಬಂತು. ಈ ನೂತನ ಶಿಕ್ಷಣ ವ್ಯವಸ್ಥೆಯ ಪ್ರಾಮುಖ್ಯತೆ ಎಂದರೆ ಶಾಲೆಗಳನ್ನೂ ಸೇರಿದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನೂ ಸಾರ್ವಜನಿಕ ಆಸ್ತಿಯ ಮೇಲೆ ಕಟ್ಟಬೇಕೆಂದು ವಿಧಿಸಿದ್ದು. ಇದು ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶಿಸುವ ಅವಕಾಶವನ್ನು ದಲಿತರಿಗೂ ನೀಡಿತು. ಇದಕ್ಕೆ ಮೊದಲು ಶಾಲೆಗಳು ದೇವಸ್ಥಾನಗಳಲ್ಲಿ ಅಥವಾ ಮಸೀದಿಗಳಲ್ಲಿ ನಡೆಯುತ್ತಿದ್ದವು. ಅಸ್ಪೃಶ್ಯರು ಇಂತಹ ಪರಂಪರಾಗತ ಶಾಲೆಗಳನ್ನು ಪ್ರವೇಶಿಸುವ ಸಾಧ್ಯತೆಯಿರಲಿಲ್ಲ.

ಆದರೆ ಶಾಲೆಗಳು ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣವಾದಾಗಲೂ ಸಹ ಮೇಲ್ಜಾತಿ ಸಮಾಜ ದಲಿತ ಮಕ್ಕಳು ಶಾಲಾ ಕಟ್ಟಡಗಳಿಗೆ ಪ್ರವೇಶಿಸುವುದನ್ನು ವಿರೋಧಿಸಿತು. ಕೆಲ ವೇಳೆ ಶಾಲೆಗೆ ಬಂದ ದಲಿತ ಮಕ್ಕಳನ್ನು ಹಿಡಿದು ಬಡಿಯಲಾಗುತ್ತಿತ್ತು ಅವರ ಮನೆ ಮತ್ತು ಬೆಳೆಗಳನ್ನು ನಾಶಪಡಿಸಲಾಗುತ್ತಿತ್ತು. ಅನೇಕ ಸಲ ಬ್ರಿಟಿಷ್ ಸರ್ಕಾರ ಬಲ ಪ್ರಯೋಗಿಸಿದಾಗ ತಂದೆ-ತಾಯಿಗಳೆ ತಮ್ಮ ಮಕ್ಕಳನ್ನು ಶಾಲೆಗಳಿಂದ ಹಿಂದಕ್ಕೆ ಕರೆಸಿಕೊಳ್ಳುತ್ತಿದ್ದರು. ಬ್ರಿಟಿಷ್ ಭಾರತ ಸರ್ಕಾರ ಮತ್ತು ಜಾತಿ ಸಮಾಜದ ನಡುವಿನ ಈ ಹೋರಾಟ ನಡೆಯುತ್ತಾ ಹೋಯಿತು.

ಕೊನೆಗೆ ಭಾರತ ಶಿಕ್ಷಣ ಆಯೋಗ (1882) (ಇದನ್ನು ಹಂಟರ್ ಆಯೋಗ ಎಂದೂ ಕರೆಯುತ್ತಾರೆ), ವಿಲಿಯಮ್ ವಿಲ್ಸನ್ ಹಂಟರ್ ಅವರ ನೇತೃತ್ವದಲ್ಲಿ ದಲಿತರಿಗೆ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸುವ ಯೋಜನೆಯನ್ನು ಮುಂದಿಟ್ಟಿತು.

ವಿಶೇಷ ಶಾಲೆಗಳು ಎಂದು ಕರೆಯಲ್ಪಡುವ ಪ್ರತ್ಯೇಕ ಶಾಲೆಗಳು ಭಾರತದುದ್ದಕ್ಕೂ ಕಾಣಿಸಿಕೊಂಡವು. ನಿಜ ಹೇಳಬೇಕೆಂದರೆ ಭಾರತ ಸ್ವತಂತ್ರವಾದ ಮೇಲೂ ಅಂತಹ ಶಾಲೆಗಳು ಪ್ರತ್ಯೇಕ ಶಾಲಾ ವ್ಯವಸ್ಥೆಯಡಿ ಉದಯಿಸುತ್ತಲೇ ಹೋದವು. ನಾನೂ ಸಹ ನನ್ನ ಹಳ್ಳಿಯಲ್ಲಿನ ಅಂತಹ ಶಾಲೆಯಿಂದಲೇ ಬಂದುದು. ಹಳ್ಳಿಯಲ್ಲಿ ದಲಿತರಿಂದಲೇ ಸ್ಥಾಪಿಸಲಾದ ಒಂದೇ ಶಾಲೆಗೂ ದಲಿತರಲ್ಲದೆ ಮೇಲ್ವರ್ಗಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಮಕ್ಕಳೂ ಬರುತ್ತಿದ್ದರು.

ಹಂಟರ್ ಕಮಿಷನ್ ಆದ ಮೇಲೆ ಬಹಳಷ್ಟು ಬದಲಾವಣೆಗಳು ಬಂದಿವೆ. ಈಗ ಶಾಲೆಗಳಲ್ಲಿ ಪ್ರತ್ಯೇಕತೆ ಅಪರೂಪ. ಎಲ್ಲ ಜಾತಿಗಳ, ಧರ್ಮಗಳ, ಜನಾಂಗಗಳ ಮಕ್ಕಳು ಒಂದೇ ಕೊಠಡಿಯಲ್ಲಿ ಕಲಿಯುತ್ತಾರೆ.

ಆದರೆ ಇದ್ದಕ್ಕಿದ್ದಂತೆ ಕೇವಲ ಒಂದು ದಶಕದಲ್ಲಿ ಶಾಲೆಗಳು ಜಾತಿ ಹಣೆಪಟ್ಟಿಯನ್ನು ಪಡೆದುಕೊಳ್ಳುತ್ತಿವೆ. ಉತ್ತರ ಪ್ರದೇಶದ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳೆಂದರೆ ದಲಿತರು ಮತ್ತು ಇತರೆ ಹಿಂದುಳಿದ ಜಾತಿಗಳ ಮಕ್ಕಳು ಕಲಿಯುವ ಶಾಲೆಗಳು. ಹೆಚ್ಚು ಕಡಿಮೆ ಉತ್ತರ ಪ್ರದೇಶದ ಗ್ರಾಮಾಂತರದ ಎಲ್ಲಾ ಹಳ್ಳಿಗಳಲ್ಲಿಯೂ ಅಥವಾ ಎರಡೂ ಮೂರು ಹಳ್ಳಿಗಳಿಗೆ ಒಂದರಂತೆ ಇಂಗ್ಲಿಷ್ ಕಲಿಸುವ ಖಾಸಗಿ ಶಾಲೆಗಳು ತಲೆ ಎತ್ತಿವೆ. ಮೇಲ್ಜಾತಿಯ ಎಲ್ಲಾ ಮಕ್ಕಳು ಖಾಸಗಿ ಶಾಲೆಗಳನ್ನು ಸೇರುತ್ತಾರೆ. ದಲಿತ ಮತ್ತು ಇತರೆ ಹಿಂದುಳಿದ ಜಾತಿಗಳ ಮಕ್ಕಳನ್ನೂ ಸಹ, ಅವರು ಫೀ ಕಟ್ಟುವುದಾದರೆ, ಈ ಶಾಲೆಗಳಿಗೆ ಸ್ವಾಗತಿಸಲಾಗುತ್ತದೆ. ಬಹಳ ಜನ ದಲಿತ ಮಕ್ಕಳು ಇಂತಹ ಖಾಸಗಿ ಶಾಲೆಗಳನ್ನು ಸೇರಿ ಮೇಲ್ಜಾತಿಯ ಮಕ್ಕಳೊಡನೆ ಕಲಿಯುತ್ತಿದ್ದಾರೆ.

ಇದೊಂದು ನಗೆಬರಿಸುವಂತಹ ವಿಚಾರ. ಇದನ್ನು ಊಹಿಸುವುದೂ ಕಷ್ಟ, ಇದನ್ನು ನಂಬಲಿಕ್ಕಾಗದು. ಅದು ಹೇಗೆ ಸರ್ಕಾರಿ ಶಾಲೆಗಳು ಜಾತಿ ಹಣೆಪಟ್ಟಿ ಕಟ್ಟಿಕೊಳ್ಳುತ್ತವೆ!

ಹೊಸ ಎರಡು ಶಾಲಾ ವ್ಯವಸ್ಥೆ

ಆದರೆ ಖಾಸಗಿ ಶಾಲೆಗಳು ಜಾತ್ಯಾತೀತವಾಗಿರುತ್ತವೆ!

ಕೋತಿಯೊಂದನ್ನು ನೀವೆಷ್ಟೇ ಪ್ರೀತಿಸಿ. ಅದಕ್ಕೆ ನೀವೆಷ್ಟೇ ಬಾಳೆಹಣ್ಣು ಕೊಡಿ. ಆದರೆ ನೀವು ಅದರ ಕೈಗೆ ಕತ್ತಿ ಮಾತ್ರ ನೀಡಬೇಡಿ. 'ಬಾಬು' ಎಂದು ಕರೆಯಲ್ಪಡುವ ಅಧಿಕಾರಿವರ್ಗಕ್ಕೆ ಸಾರ್ವಜನಿಕ ಯೋಜನೆ ತಯಾರುಮಾಡುವ ಅವಕಾಶವನ್ನಂತೂ ನೀಡಬೇಡಿ.

ಒಬ್ಬ ಬಾಬು ಈ ದೇಶದಲ್ಲಿ ಅಸ್ಪೃಶ್ಯತೆ ತೊಡೆದುಹಾಕಬೇಕೆಂದು ನಿರ್ಧರಿಸಿದ. ಆದುದರಿಂದ ಅವನು ಶಾಲೆಗಳಲ್ಲಿ ಮಧ್ಯಾಹ್ನದ ಊಟವನ್ನು ದಲಿತ ಮಹಿಳೆಯರೇ ತಯಾರು ಮಾಡಬೇಕೆಂದು ಆದೇಶ ಹೊರಡಿಸಿದ. ಮೇಲ್ಜಾತಿಯ ಮಕ್ಕಳು ಸರ್ಕಾರಿ ಶಾಲೆಗಳನ್ನು ತೊರೆದು ಖಾಸಗಿ ಶಾಲೆಗಳನ್ನು ಸೇರಿದರು. ಉತ್ತರ ಪ್ರದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗಿ ಶಾಲೆಗಳು ಫ್ಯಾಷನ್‌ಗಳಾಗಿಬಿಟ್ಟಿವೆ.

ಅಸ್ಪೃಶ್ಯತೆ ಕೇವಲ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯವಲ್ಲ. ಅದು ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದ್ದು. ನಿಜವಾಗಿಯೂ ಅದು ಒಂದು ಧಾರ್ಮಿಕ ವಿಚಾರ. ನಮಗೆ ತಿಳಿದಿರುವಂತೆ ಜಾತಿ ಪದ್ಧತಿಯನ್ನು ರಕ್ತ ಮತ್ತು ಕಸುಬಿನ ಸ್ವಚ್ಛತೆಯ ಮೇಲೆ ಕಟ್ಟಲಾಗಿದೆ. ಈ ರಕ್ತ ಮತ್ತು ಕಸುಬಿನ ಸ್ವಚ್ಛತೆಯ ಕಲ್ಪನೆಯನ್ನು ಸರ್ಕಾರ ತೊಡೆದುಹಾಕಬಲ್ಲದೆ? ಶೇಕಡ ಇಂತಿಷ್ಟು ಜನ ಬ್ರಾಹ್ಮಣರು ಕಸ ತೆಗೆಯುವವರಾಗಬೇಕು ಮತ್ತು ಶೇಕಡ ಇಂತಿಷ್ಟು ಕಸ ತೆಗೆಯುವವರು ಪೂಜಾರಿಗಳಾಗಬೇಕು ಎಂದು ಕಾನೂನು ಮಾಡಬಲ್ಲದೆ? ಪ್ರತಿ ತಂದೆ-ತಾಯಿ ತಮ್ಮ ಮಕ್ಕಳನ್ನು ತಮ್ಮ ಜಾತಿಯ ಹೊರಗೆ ಮದುವೆ ಮಾಡಿಕೊಡಬೇಕು ಎಂದು ಸರ್ಕಾರ ಕಾನೂನು ಮಾಡಬಲ್ಲದೆ?

ಹಾಗೆಯೇ, ಸರ್ಕಾರ ಮೇಲ್ಜಾತಿ ಮಕ್ಕಳನ್ನು ದಲಿತ ಮಹಿಳೆಯರು ತಯಾರಿಸಿದ ಆಹಾರ ತಿನ್ನಲು ಒತ್ತಡ ಹೇರಬಲ್ಲದೆ? ಹೌದು, ಯಾರೋ ಒಬ್ಬರು ಅಂತಹ ನಿರ್ದೇಶನ ನೀಡಿದರು. ಅದರ ಪರಿಣಾಮವನ್ನು ನಾವಿಂದು ನೋಡುತ್ತಿದ್ದೇವೆ. ಮೇಲ್ಜಾತಿ ಮಕ್ಕಳು ಇಂದು ಖಾಸಗಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಸ್ಕಾಲರ್‌ಶಿಪ್‌ಗಳು, ಸಮವಸ್ತ್ರ, ಪುಸ್ತಕಗಳು, ನೋಟ್‌ಪುಸ್ತಕಗಳು ಮತ್ತು ಮಧ್ಯಾಹ್ನದ ಊಟ ಮುಂತಾದವುಗಳನ್ನು ಉಚಿತವಾಗಿ ಪಡೆಯುವ ಆಸೆಯಿಂದ ದಲಿತ ಮತ್ತು ಇತರೆ ಹಿಂದುಳಿದ ವರ್ಗಗಳ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಬಂಧಿತರಾಗಿದ್ದಾರೆ.

ಈ ಶಾಲೆಗಳಲ್ಲಿನ ಹೆಚ್ಚು ಉಪಾಧ್ಯಾಯರುಗಳು ಮೇಲ್ಜಾತಿಗಳಿಗೆ ಸೇರಿದವರು. ಯಾರಿಗೆ ಕಲಿಸುತ್ತಿದ್ದೇವೆ ಎಂಬುದು ಅವರಿಗೆ ಗೊತ್ತು. ಅವರು ಕಲಿಸುವುದರಲ್ಲಿ ಆಸಕ್ತಿ ಕಳೆದುಕೊಂಡಿದ್ದಾರೆ. ಇದರ ಪರಿಣಾಮವಾಗಿ ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಬಹುತೇಕ ಸೊರಗಿದೆ. ಸರ್ಕಾರಿ ಶಾಲೆಯ 5ನೇ ತರಗತಿ ಪಾಸಾದ ವಿದ್ಯಾರ್ಥಿ ಖಾಸಗಿ ಶಾಲೆಗಳಲ್ಲಿ 3ನೇ ತರಗತಿಗೆ ಸೇರಿಕೊಳ್ಳುವ ಉದಾಹರಣೆಗಳಿವೆ. ಏಕೆಂದರೆ ಅವರಿಗೆ ಅವರ ಹೆಸರುಗಳನ್ನೇ ಸರಿಯಾಗಿ ಬರೆಯುವಷ್ಟು ಕಲಿಕೆಯೂ ಇರುವುದಿಲ್ಲ.

ಇದಕ್ಕಿಂತ ಅಪಾಯಕಾರಿಯಾದುದೆಂದರೆ ಎರಡೂ ಶಾಲಾ ಪದ್ಧತಿ ಬೆಳೆಯುತ್ತಿರುವ ಯುವಜನರ ತಲೆಯಲ್ಲಿ ಇನ್ನೂ ಹೆಚ್ಚು ವಿಷ ತುಂಬುತ್ತದೆ. ಹೆಚ್ಚಾಗಿ ಮೇಲ್ಜಾತಿಯವರಿಂದಲೇ ನಡೆಯಲ್ಪಡುತ್ತಿರುವ ಖಾಸಗಿ ಶಾಲೆಗಳು ದಲಿತ ಮಕ್ಕಳಿಗೆ ಪ್ರವೇಶವನ್ನು ನಿರಾಕರಿಸುತ್ತಿಲ್ಲ. ಅದು ಜಾತಿ ಪದ್ಧತಿ ದಲಿತರ ಮೇಲೆ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಲಿದೆ ಎಂಬುದನ್ನು ತೋರಿಸುತ್ತದೆ. ಅದು ವೇಗವಾಗುವಂತೆ ನಾವು ನೋಡಿಕೊಳ್ಳಬೇಕು. ಜಾತಿಯನ್ನು ಬಲ ಪ್ರಯೋಗದಿಂದ ಕೊನೆಗೊಳಿಸಲಾಗುವುದಿಲ್ಲ. ವಿವಿಧ ಜಾತಿಗಳಿಗೆ ಸೇರಿದ ಪ್ರಜೆಗಳ ಸಾಮಾಜಿಕ ಒಗ್ಗಟ್ಟನ್ನು ಬಲ ಪ್ರಯೋಗದಿಂದ ಕಟ್ಟಲಾಗುವುದಿಲ್ಲ.

ಜಾತಿ ಸಮಾಜದ ಈ ವ್ಯಾಕರಣವನ್ನು ಸಾರ್ವಜನಿಕ ಯೋಜನೆ ನಿರೂಪಿಸುವವರು ಎಚ್ಚರಿಕೆಯಿಂದ ಅರ್ಥಮಾಡಿಕೊಳ್ಳಬೇಕು. ಸಾರ್ವಜನಿಕ ಯೋಜನೆ ನಿರೂಪಿಸುವವರು ತಾವು ಏಕೆ ಈ ರಾಷ್ಟ್ರದಲ್ಲಿ ಮಲ ಹೊರುವ ಪದ್ಧತಿಯನ್ನು ಕೊನೆಗೊಳಿಸಲಾಗಿಲ್ಲ ಎಂಬುದಕ್ಕೆ ಉತ್ತರವನ್ನು ಈ ನಾಡಿಗೆ ನೀಡಬೇಕು.

ತನ್ನ ಇತಿಹಾಸದ ಈ ಘಟ್ಟದಲ್ಲಿ ಭಾರತ ಒಂದು ದೊಡ್ಡ ಬದಲಾವಣೆಯ ಸಂದಿಗ್ಧದಲ್ಲಿದೆ. ನಾವೆಲ್ಲರೂ ಮುನ್ನೋಡುತ್ತಿರುವ ಈ ಬದಲಾವಣೆಯನ್ನು ಶಾಲೆಗಳಲ್ಲಿ ದಲಿತ ಅಡಿಗೆಯವರನ್ನು ನೇಮಿಸುವಂತ ಒಂದು ಸಣ್ಣ ತಪ್ಪು ಅಡ್ಡದಾರಿಗೆಳೆಯಬಲ್ಲದು. ■

ನಿರ್ವಾಣ

■ ಯು.ಎನ್. ಸಂಗನಾಳಮಠ

ಸುದತ್ತ ಸುಭೂತಿಗೆ
ಅಂತಿಮವಾಗಿ
ಉಪದೇಶಿಸಿದ
ತಥಾಗತ

ವ್ಯಾಮೋಹ ಭ್ರಮಾಧೀನ
ಮಾನವ, ತನ್ನಂತಿಮ
ಸಾವಿನ ಹೊಸ್ತಿಲಲಿ
ಯಾವದೋ ನಿರೀಕ್ಷೆಯಲ್ಲಿರುವ
ಬಂಧನ ಕಳಚಿಕೊಳ್ಳುವ
ಜಿಜ್ಞಾಸೆ.
ಅದುವೆ ತಾನು ಹೊಂದುವ
ಮುಕ್ತಿ
ಎಂಬ ಪರಿಭಾವನೆ.

ಆದರೆ ಇವೆಲ್ಲ ಸ್ವಾರ್ಥ
'ನಾನು ನನ್ನದು
ನನ್ನಿಂದ ನನಗಾಗಿ'
ಎಂಬ ಭ್ರಮೆ ರಹಿತ
ಸ್ಥಿತಿ 'ನಿರ್ವಾಣ'.

ಈ ಜಗದಿಂ ಗತಿಸಿದ
ಅನಂತರ
'ನಾನು' ಇಲ್ಲಿ 'ಯಾರೂ' ಇಲ್ಲ
ಎಲ್ಲವೂ ಬಯಲು
ಬಯಲು ಬಯಲನ್ನು
ಅಪ್ಪಿದ ನಿರ್ವಯಲು

ಹಿಂದಿನ ಭ್ರಮೆ ಕನಸು
ಇವುಗಳಿಂದ ಅತೀತ
ಅಹಮಿಕೆ ನಿರ್ನಾಮ
ನಿರ್ವಾಣ. ■



ನಾವು ಅಳದಿದ್ದರೆ ಮತ್ತಾರು ಅಳಬೇಕು?

ದೊರೆ ತೈಮೂರ್ ಅತ್ಯಂತ ಕುರೂಪಿ, ಒಕ್ಕಣ್ಣಿನವ ಹಾಗೂ ಕುಂಟನಾಗಿದ್ದ. ಒಂದು ದಿನ ಮುಲ್ಲಾ ನಸ್ರುದ್ದೀನ್ ಆತನ ಜೊತೆಗಿದ್ದಾಗ, ತೈಮೂರನಿಗೆ ತನ್ನ ತಲೆ ತುರಿಕೆಯಾಯಿತು. ತನ್ನ ತಲೆ ತುರಿಸಿಕೊಂಡಾಗ ಕೂದಲು ವಿಪರೀತ ಉದ್ದ ಬೆಳೆದಿರುವುದು ಆತನ ಗಮನಕ್ಕೆ ಬಂದಿತು. ದೊರೆ ಕೂಡಲೇ ಅರಚಿದ, 'ಕ್ಷೌರಿಕನನ್ನ ಕರೆತನ್ನಿ!"

ಕ್ಷೌರಿಕನಿಗೆ ಕರೆಹೋಯಿತು. ಕ್ಷೌರಿಕ ಬಂದವನೆ ದೊರೆಯ ಕೂದಲನ್ನು ಕತ್ತರಿಸಿ ತನ್ನ ಮುಖ ನೋಡಿಕೊಳ್ಳಲೆಂದು ದೊರೆ ತೈಮೂರನ ಕೈಗೆ ಕನ್ನಡಿಯನ್ನು ನೀಡಿದ. ಕನ್ನಡಿಯಲ್ಲಿ ತನ್ನ ಕುರೂಪ ಮುಖ ನೋಡಿಕೊಂಡ ತಕ್ಷಣ ತೈಮೂರನಿಗೆ ಅಳುಬಂತು. ಜೋರಾಗಿ ಅಳತೊಡಗಿದ. ನಸ್ರುದ್ದೀನನಿಗೆ ದೊರೆ ಅಳುತ್ತಿರುವ ಕಾರಣ ಗೊತ್ತಿತ್ತು. ಅವನೂ ಸಹ ಆತನ ಜೊತೆಯಲ್ಲಿ ಜೋರಾಗಿ ಅಳತೊಡಗಿದ. ಇಬ್ಬರೂ ಕೆಲಕಾಲ ಅತ್ತರು. ಸುತ್ತಮುತ್ತಲ ಜನ ದೊರೆಗೆ ಸೌಂದರ್ಯ ಇರುವುದು ದೇಹದಲ್ಲಿ ಅಲ್ಲ ಹೃದಯದಲ್ಲಿ ಎಂದು ಸಾಂತ್ವನ ಹೇಳಿ ಸುಮ್ಮನಾಗಿಸಿದರು. ಆದರೆ ಮುಲ್ಲಾ ಅಳುತ್ತಲೇ ಇದ್ದ. ತೈಮೂರ್ ಆತನನ್ನು ಕುರಿತು, 'ನೋಡು ನಾನು ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಂಡಾಗ ನಾನು ಕುರೂಪಿಯೆಂದು ತಿಳಿಯಿತು. ನಾನೊಬ್ಬ ದೊರೆ, ಅತ್ಯಂತ ಸಿರಿವಂತ, ಬೇಕಾದಷ್ಟು ಹೆಂಡತಿಯರಿದ್ದಾರೆ, ಆದರೂ ನಾನೊಬ್ಬ ಕುರೂಪಿ. ಅದಕ್ಕೇ ದುಃಖವಾಯಿತು ಜೋರಾಗಿ ಅತ್ತೆ. ಆದರೆ ನೀನ್ಯಾಕೆ ಇನ್ನೂ ಅಳುತ್ತಿದ್ದೀಯೆ?' ಎಂದು ಕೇಳಿದ. ಅದಕ್ಕೆ ಮುಲ್ಲಾ, 'ನೀವೇನೊ ಒಂದು ಸಾರಿ ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಂಡು ತಡೆಯಲಾರದೆ ಅತ್ತುಬಿಟ್ಟಿರಿ. ಆದರೆ ನಾವು ನಿನ್ನ ಪ್ರಜೆಗಳು ಹಗಲು ರಾತ್ರಿ ಪ್ರತಿ ದಿನ ನಿಮ್ಮ ಮುಖ ನೋಡುತ್ತಲೇ ಇರಬೇಕಲ್ಲಾ? ಇನ್ನು ನಾವಲ್ಲದೆ ಮತ್ತಾರು ಅಳಬೇಕು ಹೇಳಿ?' ಎಂದು ತನ್ನ ಅಳು ಮುಂದುವರಿಸಿದ.



ಡಾ. ಜೆ. ಬಾಲಕೃಷ್ಣ

ಹುಲಿಯನ್ನೋಡಿಸುವ ಪುಡಿ

ಒಂದು ದಿನ ನಸ್ರುದ್ದೀನ್ ತನ್ನ ಮನೆಯ ಸುತ್ತಲೂ ಎಂಥದೋ ಪುಡಿ ಚಿಮುಕಿಸುತ್ತಿದ್ದ. ಆತನ ಪಕ್ಕದ ಮನೆಯಾತ ಕುತೂಹಲದಿಂದ,

'ಮುಲ್ಲಾ, ಏನದು? ಏನು ಚಿಮುಕಿಸುತ್ತಿದ್ದೀಯೆ?' ಎಂದು ಕೇಳಿದ.

'ನನ್ನ ಮನೆಗೆ ಹುಲಿ ಬಾರದಂತೆ ತಡೆಯಲು ಔಷಧದ ಪುಡಿ ಚಿಮುಕಿಸುತ್ತಿದ್ದೇನೆ' ಎಂದ ಮುಲ್ಲಾ.

'ಹುಲಿ! ಆದರೆ ಈ ನಗರದ ಸುತ್ತಮುತ್ತ ನೂರಾರು ಮೈಲಿಯವರೆಗೂ ಹುಲಿಗಳೇ ಇಲ್ಲವಲ್ಲ?' ಎಂತ ಪಕ್ಕದ ಮನೆಯಾತ.

'ತಿಳಿಯಿತೆ ನನ್ನ ಪುಡಿಯ ಮಹತ್ವ?' ಎಂದ ಮುಲ್ಲಾ ಪುಡಿ ಚಿಮುಕಿಸುತ್ತಾ.

ಮುಳ್ಳಿನ ಗಿಡ ಮತ್ತು ಸಾಲ

ಮುಲ್ಲಾ ನಸ್ರುದ್ದೀನನಿಗೆ ಸಾಲ ನೀಡಿದ್ದಾತ ಈ ದಿನ ಹೇಗಾದರೂ ಅವನಿಂದ ಸಾಲ ವಸೂಲಿ ಮಾಡಲೇಬೇಕೆಂಬ ನಿರ್ಧಾರದಿಂದ ಬಂದು ಜೋರಾಗಿ ಬಾಗಿಲು ತಟ್ಟಿದ.

'ನಾನು ನಿನಗೆ ನೀಡಿದ್ದ ಸಾಲದ ಹಣ ಹಿಂದಿರುಗಿಸು', ಗುಡುಗಿದ.

'ಖಂಡಿತಾ ಹಿಂದಿರುಗಿಸುತ್ತೇನೆ. ಇಷ್ಟು ದಿನ ತಡೆದಿದ್ದೀಯೆ. ಇನ್ನು ಸ್ವಲ್ಪ ದಿನ ಸಮಯ ಕೊಡು' ಎಂದ ಮುಲ್ಲಾ ಶಾಂತವಾಗಿ.

'ಇನ್ನೆಷ್ಟು ದಿನ?'

'ನೋಡು. ಈ ದಿನ ಬೆಳಿಗ್ಗೆ ನನ್ನ ಮನೆಯ ರಸ್ತೆ ಬದಿಯ ಬೇಲಿಗೆಂದು ಮುಳ್ಳಿನ ಗಿಡದ ಬೀಜಗಳನ್ನು ಬಿತ್ತನೆ ಮಾಡಿದ್ದೇನೆ'.

'ಅದಕ್ಕೆ?'

'ಆ ಬೀಜ ಮೊಳೆತು ಕೆಲವೇ ದಿನಗಳಲ್ಲಿ ಮೈಯೆಲ್ಲಾ ಮುಳ್ಳು ತುಂಬಿಕೊಂಡ ಗಿಡಗಳಾಗುತ್ತವೆ'.

'ಆಮೇಲೆ?'

'ನಿನಗೇ ಗೊತ್ತು. ಈ ರಸ್ತೆಯಲ್ಲಿ ಪ್ರತಿ ದಿನ ಹಲವಾರು ಜನ ಕುರಿಕಾಯುವವರು ಈ ರಸ್ತೆಯಲ್ಲಿ ಕುರಿ ಮೇಯಿಸಲು ಹೊಡೆದುಕೊಂಡು ಹೋಗುತ್ತಾರೆ.'

'ಅದಕ್ಕೂ ನನ್ನ ಸಾಲಕ್ಕೂ ಏನು ಸಂಬಂಧ?'

'ಸಂಬಂಧವಿದೆ, ಹೇಳುತ್ತೇನೆ ಕೇಳು. ಆ ರೀತಿ ಕುರಿಗಳು ಹಾದುಹೋಗುವಾಗ ಅವುಗಳ ಮೈ ಮುಳ್ಳಿಗೆ ಉಜ್ಜಿ ಅವುಗಳ ಉಣ್ಣೆ ಮುಳ್ಳುಗಳಲ್ಲಿ ಸಂಗ್ರಹವಾಗುತ್ತದೆ. ನಾನು ಅದನ್ನು ಸಂಗ್ರಹಿಸಿ ನನ್ನ ಹೆಂಡತಿಗೆ ಕೊಡುತ್ತೇನೆ. ಆಕೆ ಅದರಿಂದ ನೂಲು ತಯಾರಿಸಿಕೊಡುತ್ತಾಳೆ. ಆ ನೂಲಿನಿಂದ ನಾನು ಕಂಬಳಿ ನೇಯ್ದು ಅದನ್ನು ಮಾರಾಟ ಮಾಡಿ ನಿನ್ನ ಸಾಲ ತೀರಿಸುತ್ತೇನೆ.'

ಮುಲ್ಲಾನ ಮಾತು ಕೇಳಿ ಸಾಲ ನೀಡಿದವ ಜೋರಾಗಿ ನಕ್ಕ.

'ಗೊತ್ತಾಯಿತೆ, ನಾನು ಸಾಲ ಹಿಂದಿರುಗಿಸಿದಾಗ ನಿನಗೆ ಎಷ್ಟು ಸಂತೋಷವಾಗುವುದೆಂದು? ಈಗ ನಕ್ಕಿದ್ದು ಸಾಕು, ಹಣ ನಿನ್ನ ಕೈ ಸೇರಿದಾಗ ಉಳಿದ ಸಂತೋಷ ವ್ಯಕ್ತಪಡಿಸಿಕೊಳ್ಳುವಿಯಂತೆ. ಈಗ ಹೊರಡು' ಎಂದ ಮುಲ್ಲಾ.

'ನಾನೇನು ಹೇಳಲಿ? ನನ್ನ ಪಕ್ಕದ ಮನೆಯಾತ ನನಗೆ ಹಣ ಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದಾನೆ. ಇನ್ನೇನು ನೀವು ಆತನಿಗೆ ಮಾತನಾಡಲು ಅವಕಾಶ ಕೊಟ್ಟರೆ ನಾನು ಹಾಕಿಕೊಂಡಿರುವ ಬಟ್ಟೆ, ಸವಾರಿ ಮಾಡಿಕೊಂಡುಬಂದಿರುವ ಕತ್ತೆ ಎಲ್ಲವನ್ನೂ ತಾನೇ ನನಗೆ ಕೊಟ್ಟಿದ್ದೇನೆ ಎಂದುಬಿಡುತ್ತಾನೆ' ಎಂದ ನಸ್ರುದ್ದೀನ್. ಈ ಮಾತನ್ನು ಕೇಳಿದ ನೆರೆಮನೆಯಾತ ಖಂಜೂಸಿಗೆ ಗಂಟಲಲ್ಲಿ ಮೂಳೆ ಸಿಕ್ಕಿಹಾಕಿಕೊಂಡ ಹಾಗಾಯಿತು

ಮುಲ್ಲಾ ಮತ್ತು ಅಲ್ಲಾಹ್ ನಡುವಿನ ವ್ಯವಹಾರ

ಒಂದು ದಿನ ಮುಲ್ಲಾ ನಸ್ರುದ್ದೀನ್ ಅಲ್ಲಾಹ್‌ನ ಪ್ರಾರ್ಥನೆ ಮಾಡುತ್ತಾ, 'ಅಲ್ಲಾಹ್, ನೀನು ನನಗೆ ಸಾವಿರ ರೂಪಾಯಿಗಳ ಚೀಲದ ಕೊಡುಗೆ ನೀಡು. ಅದರಲ್ಲಿ ಒಂದು ರೂಪಾಯಿ ಕಡಿಮೆಯಿದ್ದರೂ ನಾನು ಸ್ವೀಕರಿಸುವುದಿಲ್ಲ' ಎಂದನು.

ಮುಲ್ಲಾನ ಪಕ್ಕದ ಮನೆಯಲ್ಲಿ ಒಬ್ಬ ಖಂಜೂಸಿ ಸಿರಿವಂತನಿದ್ದನು. ಮನೆಯ ಹೊರಗಡೆ ನಿಂತಿದ್ದ ಆತನಿಗೆ ಮುಲ್ಲಾನ ಮಾತು ಕೇಳಿ ತಮಾಷೆ ಮಾಡೋಣವೆನ್ನಿಸಿತು. ಆತ ಖಂಜೂಸಿಯಾಗಿದ್ದರೂ ಮುಲ್ಲಾ ಹಿಂದಿರುಗಿಸುವನೆಂದು ನಂಬಿ ಒಂದು ಚೀಲದಲ್ಲಿ 999 ರೂಪಾಯಿಗಳನ್ನು ತುಂಬಿ ಅದನ್ನು ಮುಲ್ಲಾನ ಮನೆಯ ಹೊಗೆ ಚಿಮಣಿಯಿಂದ ಒಳಕ್ಕೆ ಹಾಕಿದನು. ಪ್ರಾರ್ಥನೆ ಮಾಡುತ್ತಿದ್ದ ಮುಲ್ಲಾನಿಗೆ ಹಣದ ಚೀಲ ಬಿದ್ದ ಸದ್ದು ಕೇಳಿ ಆಶ್ಚರ್ಯವಾಯಿತು ಹಾಗೂ ದೇವರಿಗೆ ತನ್ನ ಪ್ರಾರ್ಥನೆ ತಲುಪಿತೆಂಬ ವಿನಮ್ರ ಭಾವನೆಯೂ ಬಂದಿತು. ತಕ್ಷಣ ಚೀಲ ತೆಗೆದು ಅದರಲ್ಲಿದ್ದ ಹಣ ಎಣಿಸಿ ನೋಡಿದ. 999 ರೂಪಾಯಿಗಳಷ್ಟೇ ಇತ್ತು. 'ಹೋ ಅಲ್ಲಾಹ್! ನಿನಗೆ ಮೊದಲೇ ಹೇಳಿದ್ದೆ ಸಾವಿರಕ್ಕೆ ಒಂದು ರೂಪಾಯಿಯೂ ಕಡಿಮೆ ಕೊಡಬೇಡವೆಂದು. ನಿನಗೆಲ್ಲೋ ಮರೆವಿರಬೇಕು. ಆಯಿತು ಇದನ್ನು ಸ್ವೀಕರಿಸುತ್ತೇನೆ. ಉಳಿದ ಒಂದು ರೂಪಾಯಿಯನ್ನು ಮರೆಯದೆ ನಾಳೆ ಕೊಟ್ಟುಬಿಡು' ಎಂದು ಹೇಳಿದ.

ಮುಲ್ಲಾನ ಮಾತನ್ನೇ ಕೇಳಿಸಿಕೊಳ್ಳುತ್ತಿದ್ದ ಪಕ್ಕದ ಮನೆಯ ಖಂಜೂಸಿ, 'ಇದೇನೋ ಎಡವಟ್ಟಾಯಿತಲ್ಲ' ಎಂದುಕೊಂಡು ಆತುರಾತುರವಾಗಿ ಮುಲ್ಲಾನ ಮನೆಯ ಬಾಗಿಲು ತಟ್ಟಿ ಆತನ ಹೊಗೆ ಚಿಮಣಿಯಿಂದ ಹಣ ಹಾಕಿದ್ದು ಅಲ್ಲಾಹ್ ಅಲ್ಲ ತಾನೇ ಎಂದು ಹೇಳಿ ನಡೆದದ್ದನ್ನೆಲ್ಲಾ ವಿವರಿಸಿ ತನ್ನ ಹಣ ಹಿಂದಿರುಗಿಸುವಂತೆ ಕೇಳಿದ.

ಆದರೆ ನಸ್ರುದ್ದೀನ್ ಒಪ್ಪಬೇಕಲ್ಲ! ತನ್ನ ಪ್ರಾರ್ಥನೆಗೆ ಉತ್ತರವಾಗಿ ದೇವರೇ ಆ ಹಣ ಕೊಟ್ಟಿದ್ದಾನೆ ಎಂದು ಹೇಳಿ ಅದನ್ನು ಹಿಂತಿರುಗಿಸಲು ನಿರಾಕರಿಸಿದ. 'ನೀನು ನನ್ನ ಹಣ ಹಿಂದಿರುಗಿಸದಿದ್ದರೆ ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗುತ್ತೇನೆ' ಎಂದು ಬೆದರಿಸಿದ. ಮುಲ್ಲಾ ಜಗ್ಗಲಿಲ್ಲ. ಆ ಖಂಜೂಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ, ಹಾಗೂ ನ್ಯಾಯಾಲಯದಿಂದ ಇಬ್ಬರಿಗೂ ಕರೆ ಬಂದಿತು.

ವಿಚಾರಣೆಯ ದಿನ ನೆರೆಮನೆಯ ಖಂಜೂಸಿ ಮುಲ್ಲಾನನ್ನು ನ್ಯಾಯಾಲಯಕ್ಕೆ ಕರೆದೊಯ್ಯಲು ಬಂದಾಗ ಮುಲ್ಲಾ, 'ಇಲ್ಲ ನನಗೆ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ. ಏಕೆಂದರೆ ನಾನು ಬಡವ, ನನ್ನಲ್ಲಿ ಒಳ್ಳೆಯ ಬಟ್ಟೆಗಳೇ ಇಲ್ಲ' ಎಂದ. ತನ್ನ ಹಣ ವಾಪಸ್ಸು ಪಡೆಯಲು ಹೇಗಾದರೂ ಮುಲ್ಲಾನನ್ನು ನ್ಯಾಯಾಲಯಕ್ಕೆ ಕರೆದೊಯ್ಯಲೇ ಬೇಕಾಗಿತ್ತು. 'ಆಯಿತು ನನ್ನ ಧಿರಿಸು ಹಾಗೂ ರುಮಾಲು ಕೊಡುತ್ತೇನೆ ನಡೆ' ಎಂದ. 'ಆದರೆ ನನ್ನ ಕತ್ತೆಗೆ ಕಾಲು ನೋವಾಗಿದೆ. ಅಷ್ಟು ದೂರ ಹೇಗೆ ನಡೆದು ಬರಲಿ?' ಎಂದು ಮತ್ತೊಂದು ರಾಗ ಎಳೆದ ಮುಲ್ಲಾ. ಹಣ ಕೊಟ್ಟ ಖಂಜೂಸಿ ಸಿಕ್ಕಿಹಾಕಿಕೊಂಡುಬಿಟ್ಟಿದ್ದ. ಅವನಿಗೆ ಹೇಗಾದರೂ ಮುಲ್ಲಾನಿಂದ ಹಣ ವಾಪಸ್ಸು ಪಡೆಯಲೇಬೇಕಿತ್ತು. 'ಆಯಿತಪ್ಪಾ ನನ್ನ ಕತ್ತೆಯನ್ನೇ ಕೊಡುತ್ತೇನೆ. ಬೇಗ ಹೊರಡು' ಎಂದು ತನ್ನ ಧಿರಿಸು, ರುಮಾಲು ಹಾಗೂ ಕತ್ತೆಯನ್ನು ಕೊಟ್ಟು ಮುಲ್ಲಾನನ್ನು ನ್ಯಾಯಾಲಯಕ್ಕೆ ಕರೆದೊಯ್ದ.

ನ್ಯಾಯಾಲಯದಲ್ಲಿ ನ್ಯಾಯಾಧೀಶರು ಪ್ರಕರಣವನ್ನು ಕೇಳಿ ತಿಳಿದು ಮುಲ್ಲಾನಿಂದ ವಿಚಾರಣೆ ಪ್ರಾರಂಭಿಸಿದರು. 'ಹೇಳು ನಿನ್ನ ವಾದವೇನಿದೆ?' ಎಂದರು.

'ನಾನೇನು ಹೇಳಲಿ? ನನ್ನ ಪಕ್ಕದ ಮನೆಯಾತ ನನಗೆ ಹಣ ಕೊಟ್ಟಿದ್ದಾನೆಂದು ಸುಳ್ಳು ಹೇಳುತ್ತಿದ್ದಾನೆ. ಇನ್ನೇನು ನೀವು ಆತನಿಗೆ ಮಾತನಾಡಲು ಅವಕಾಶ ಕೊಟ್ಟರೆ ನಾನು ಹಾಕಿಕೊಂಡಿರುವ ಬಟ್ಟೆ, ಸವಾರಿ ಮಾಡಿಕೊಂಡುಬಂದಿರುವ ಕತ್ತೆ ಎಲ್ಲವನ್ನೂ ತಾನೇ ನನಗೆ ಕೊಟ್ಟಿದ್ದೇನೆ ಎಂದುಬಿಡುತ್ತಾನೆ' ಎಂದ ನಸ್ರುದ್ದೀನ್.

ಈ ಮಾತನ್ನು ಕೇಳಿದ ನೆರೆಮನೆಯಾತ ಖಂಜೂಸಿಗೆ ಗಂಟಲಲ್ಲಿ ಮೂಳೆ ಸಿಕ್ಕಿಹಾಕಿಕೊಂಡ ಹಾಗಾಯಿತು. ಆತ ತಕ್ಷಣ ನ್ಯಾಯಾಧೀಶರಿಗೆ, 'ಹೌದು ಸ್ವಾಮಿ ಆತ ಹಾಕಿಕೊಂಡಿರುವ ಧಿರಿಸು, ಸವಾರಿ ಮಾಡಿಕೊಂಡು ಬಂದ ಕತ್ತೆ ಎಲ್ಲವೂ ನನ್ನದೆ. ಅಷ್ಟೇಕೆ, ಮುಲ್ಲಾ ಧರಿಸಿರುವ ರುಮಾಲು ಸಹ ನನ್ನದೇ' ಎಂದ ಏದುಸಿರಿನಿಂದ.

'ನಾನು ಹೇಳಲಿಲ್ಲವೆ ಸ್ವಾಮಿ? ಆತ ಎಷ್ಟು ಖಂಜೂಸಿಯೆಂಬುದು ಊರಿನವರಿಗೆಲ್ಲಾ ತಿಳಿದಿದೆ. ಆತ ಯಾರಿಗೂ ಎಂದಿಗೂ ಒಂದು ಚಿಕ್ಕಾಸೂ ನೀಡಿದವನಲ್ಲ. ಆದರೂ ಎಲ್ಲವೂ ತನ್ನದೇ ಎನ್ನುವವನು. ನೀವು ನನಗೆ ನ್ಯಾಯ ನೀಡಿ' ಎಂದ ಮುಲ್ಲಾ ನ್ಯಾಯಾಧೀಶರಿಗೆ ಕೈ ಮುಗಿಯುತ್ತಾ. ಅನಂತರ ನೆರೆಮನೆಯಾತನ ಕಡೆ ತಿರುಗಿ 'ಇನ್ನು ಮೇಲೆ ನನ್ನ ಮತ್ತು ಅಲ್ಲಾಹ್‌ನ ನಡುವಿನ ವ್ಯವಹಾರದಲ್ಲಿ ತಲೆಹಾಕಬೇಡ ತಿಳಿಯಿತೆ?' ಎಂದ. ಸಾಕ್ಷ್ಯಾಧಾರಗಳ ಮೇಲೆ ಮುಲ್ಲಾ ನಸ್ರುದ್ದೀನ್ ಆರೋಪದಿಂದ ಮುಕ್ತನಾದ.

ಕಿಟಕಿಯಲ್ಲಿ ತಲೆ

ಒಂದು ದಿನ ಮುಲ್ಲಾ ನಸ್ರುದ್ದೀನ್ ಒಬ್ಬ ವ್ಯಾಪಾರಿಯನ್ನು ವ್ಯಾಪಾರದ ವಿಷಯ ಮಾತನಾಡಲು ಆತನ ಮನೆಗೆ ಹೊರಟ. ಆ ವ್ಯಾಪಾರಿ ತನ್ನ ಮನೆಯ ಕಿಟಕಿಯಿಂದ ನಸ್ರುದ್ದೀನ್ ಬರುತ್ತಿದ್ದುದನ್ನು ಇಣಿಕಿ ನೋಡಿದ. ಆತನಿಗೆ ನಸ್ರುದ್ದೀನ್‌ನನ್ನು ಭೇಟಿಯಾಗುವುದು ಇಷ್ಟವಿರಲಿಲ್ಲ. ಬಾಗಿಲು ತಟ್ಟಿದಾಗ ವ್ಯಾಪಾರಿಯ ಮಗ ಬಾಗಿಲು ತೆರೆದ.

'ನಿಮ್ಮ ತಂದೆಯನ್ನು ಭೇಟಿಯಾಗಬೇಕಿತ್ತು' ಎಂದ ನಸ್ರುದ್ದೀನ್.

'ನಮ್ಮ ತಂದೆ ಹೊರಗೆ ಹೋಗಿದ್ದಾರೆ. ಅವರು ಸಂಜೆಯವರೆಗೂ ಬರುವುದಿಲ್ಲ' ಎಂದು ಸುಳ್ಳು ಹೇಳಿದ ಆತನ ಮಗ.

'ಆಯಿತು. ಇನ್ನು ಮೇಲೆ ಹೊರಗೆ ಹೋಗುವಾಗ ನಿಮ್ಮ ತಂದೆಯವರಿಗೆ ತಲೆಯನ್ನು ಕಿಟಕಿಯಲ್ಲಿ ಇಟ್ಟು ಹೋಗಬೇಡಿ ಎಂದು ಹೇಳು' ಎಂದ ನಸ್ರುದ್ದೀನ್.

(40ನೇ ಪುಟದಿಂದ)

ಕೊಲೆಗೆ ತಲೆದಂಡ ಏಟು ಎದಿರೇಟು?

ತೊರೆದು ತಮ್ಮ ತಾಯ್ನೆಲದಿಂದ ಮತ್ತೆಲ್ಲಿಗೋ ಬಂದಿಳಿಯುವವರು ಮರಣ ದಂಡನೆಗೆ ಹೆದರುವುದಿಲ್ಲ. ಪ್ರಾಣ ಕೊಡಲು ಸಿದ್ಧವಾಗಿಯೇ ಹೊರಟವರು ಜೀವಾವಧಿ ಜೈಲು ಶಿಕ್ಷೆಗೆ ಹೆದರಬಹುದೇ ಹೊರತು ಮರಣದಂಡನೆಗೆ ಹೆದರಲಾರರು.

ಈಗ ಶಿಕ್ಷೆಯೆಂದರೆ ದೈಹಿಕ ಹಿಂಸೆಯಲ್ಲ, ಮನಃಪರಿವರ್ತನೆ ಎಂಬ ಮಾತು ಕೇಳಿ ಬರುತ್ತಿದೆ. ಈಗ ಜೀವಾವಧಿ ಜೈಲೆಂದರೆ 14 ವರ್ಷ ಜೈಲುವಾಸ. ಆ ಅವಧಿಯನ್ನು ಹೆಚ್ಚಿಸಬಹುದು ಅಥವಾ ಪರಿವರ್ತನೆಯ ಲಕ್ಷಣ ತೋರದ ಖೈದಿಯನ್ನು ಹೆಚ್ಚು ವರ್ಷ ಕಾಲ ಜೈಲಿನಲ್ಲಿಟ್ಟುಕೊಳ್ಳಬಹುದು. 'ಶಿಕ್ಷೆ'ಯನ್ನೇ ನೀಡಬೇಕಿದ್ದರೆ ಜೀವಮಾನ ಪರ್ಯಂತ ವ್ಯಕ್ತಿಯನ್ನು ಜೈಲಿನಲ್ಲಿಡಬಹುದು. ಬಹುಶಃ ಯಾವುದೇ ಅಪರಾಧಕ್ಕೂ ಅದಕ್ಕಿಂತ ದೊಡ್ಡ ಶಿಕ್ಷೆ ಇರಲಾರದು. ಪಾರ್ಲಿಮೆಂಟ್ ಮೇಲಿನ ದಾಳಿಗೆ ಮರಣದಂಡನೆಗೊಳಗಾಗಿ ತಿಹಾರ್ ಜೈಲಿನಲ್ಲಿರುವ ಅಫ್ಜಲ್ ಗುರು ಕೆಲ ವರ್ಷಗಳ ಕೆಳಗೆ ಹೇಳಿದ್ದ, 'ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಎಲ್.ಕೆ.ಅಡ್ವಾಣಿಯೇ ಗೆದ್ದು ಪ್ರಧಾನಿಯಾಗಲಿ. ಆಗ ನನಗೆ ಮರಣದಂಡನೆ ವಿಧಿಸುವುದು ಖಂಡಿತ. ಅಲ್ಲಿಗೆ ಈ ಜೈಲು ಜೀವನ ಕೊನೆಯಾಗಬಹುದು.' ಈ ಹತಾಶ ಮಾತುಗಳಲ್ಲಿ ಮರಣದಂಡನೆಯ ಕ್ಷಣಗಣನೆ ಮಾಡುತ್ತಾ ದಿನದೂಡುವ ಕಷ್ಟ ಧ್ವನಿಸುತ್ತದೆ. ಈಗಲೂ ಕೆಳಕೋರ್ಟುಗಳಿಂದ ಸುಪ್ರೀಂಕೋರ್ಟಿನ ತನಕ ಮರಣದಂಡನೆ ಶಿಕ್ಷೆಯನ್ನು ಹಲವರಿಗೆ ನೀಡಲಾಗುತ್ತಿದೆ. ಆದರೆ ಮೇಲ್ಮನವಿ ಸಲ್ಲಿಸಿ ರಾಷ್ಟ್ರಪತಿಯವರ ಬಳಿ ಕ್ಷಮಾದಾನಕ್ಕೆ ಬರುವುದರಲ್ಲಿ ವರ್ಷಗಟ್ಟಲೆ ಕಳೆಯುತ್ತದೆ. ದಶಕಗಟ್ಟಲೆ ಕ್ಷಮಾದಾನಕ್ಕಾಗಿ ರಾಷ್ಟ್ರಪತಿ ಭವನದಲ್ಲಿ ಉಸಿರು ಬಿಗಿಹಿಡಿದು ಕಾಯುತ್ತಿರುವ ಕಡತಗಳಿವೆ. ಅಪಮಾನಿತ ಬದುಕನ್ನು ಸಾವಿಗಾಗಿ ಕಾಯುತ್ತ ಜೈಲಿನಲ್ಲಿ ಬದುಕುವುದು ಯಾವುದೇ ಅಪರಾಧಕ್ಕೆ ಕೊಡಬಹುದಾದ ಅತಿ ಕ್ರೂರ ಶಿಕ್ಷೆ. ಕ್ಷಮಾದಾನ ವಿಳಂಬದ ಕುರಿತು ಟೀಕೆಗಳು ಕೇಳಿಬರುತ್ತಿದ್ದು ಹತ್ತಾರು ವರ್ಷ ವಿಲೇವಾರಿಯಾಗದೇ ಉಳಿದಿದೆ ಎನ್ನುವುದೇ ಕ್ಷಮಾದಾನಕ್ಕೆ ಅರ್ಹತೆಯನ್ನು ದೊರಕಿಸುತ್ತದೆ ಎಂದು ಕೆಲವರು ವಾದಿಸಿದರೆ ಕ್ಷಮಾದಾನಕ್ಕೆ ಸಮಯ ಮಿತಿ ಅಳವಡಿಸಬೇಕೆನ್ನುವುದು ಮತ್ತೆ ಕೆಲವರ ವಾದ.

ನಮ್ಮ ಅಪರಾಧ ಕಾನೂನು ವ್ಯವಸ್ಥೆ ಫೂಲ್‌ಪ್ರೂಫ್ ವ್ಯವಸ್ಥೆಯಲ್ಲ. ಅದರಲ್ಲಿ ಸಾಕಷ್ಟು ನುಸುಳುವಿಕೆ ಸಾಧ್ಯವಿದೆ. ಇತ್ತೀಚೆಗೆ 20 ಮಾಜಿ ಸುಪ್ರೀಂಕೋರ್ಟ್ ನ್ಯಾಯಾಧೀಶರು ತಪ್ಪಾಗಿ ಮರಣ ದಂಡನೆ ಶಿಕ್ಷೆಗೊಳಗಾಗಿರುವ 13 ಅಪರಾಧಿಗಳನ್ನು ಗುರುತಿಸಿದ್ದನ್ನು ಉಲ್ಲೇಖಿಸಿ ಗಲ್ಲುಶಿಕ್ಷೆ ರದ್ದುಗೊಳಿಸುವಂತೆ ಕೋರಿದ್ದಾರೆ. ಬ್ರಿಟನ್ನಿನಲ್ಲೂ ಹೀಗೇ ಒಬ್ಬ ನಿರಪರಾಧಿ ಗಲ್ಲಿಗೇರಿದನೆಂದು ಸಾಬೀತಾದ ಬಳಿಕ ಅದರ ರದ್ಧತಿಗೆ ಹೋರಾಟ ತೀವ್ರವಾಗಿತ್ತು. ಆದರೆ ಯಾವ ಹೋರಾಟದಿಂದ ಹೋದ ಜೀವ ಮರಳಿ ಬಂದೀತು? ಗಲ್ಲಿಗೇರಿದವನ ಜೀವ ಅನವಶ್ಯವಾಗಿ ಹೋಗುವುದಷ್ಟೇ ಅಲ್ಲ, ಅವನ ಬಂಧುಮಿತ್ರರು ಉಳಿದ ಜೀವಿತಾವಧಿಗೆ ಅನುಭವಿಸುವ ಮಾನಸಿಕ ಹಿಂಸೆಗೆ ಯಾವ ಪರಿಹಾರ ಸಮನಾದೀತು? ತಪ್ಪಾಗಿ ವ್ಯಕ್ತಿಗಳು ಶಿಕ್ಷೆಗೊಳಗಾಗುವುದು, ದುಬಾರಿ ಉನ್ನತ ಕಾನೂನು ಸೇವೆ–ಇವು ಮರಣದಂಡನೆ ರದ್ದುಗೊಳಿಸಲು ಪ್ರಬಲ ಕಾರಣಗಳಾಗಿವೆ.

* * *

'ನ್ಯಾಯದ ಕಟ್ಟೆಯ ಮುಂದೆ ಎಲ್ಲರೂ ಒಂದೇ' ಎನ್ನುವ ಮಾತು ಕ್ಲಿಷೆಯದಾಯಿತು. ಅಪರಾಧಿಗಳು, ಅವರ ಹಿನ್ನೆಲೆ ಹಾಗೂ ಪಡೆದ ಶಿಕ್ಷೆಯನ್ನು ಹೋಲಿಸಿ ನೋಡಿದರೆ ಎಲ್ಲರೂ ಎಷ್ಟು ಅಸಮಾನರು ಎನ್ನುವ ಸತ್ಯ ಅರಿವಾಗುತ್ತದೆ. ಸತ್ಯಂ ರಾಜು, ಕನ್ನಿ ಮೊಳಿ, ರೆಡ್ಡಿ ಸೋದರರಂಥ 'ಗಣ್ಯ'ರನ್ನು ವಿಶೇಷ ಆದರದಿಂದ ನಡೆಸಿಕೊಳ್ಳುವ ಸಾಮಾಜಿಕ ವ್ಯವಸ್ಥೆ, ಬದುಕುವ ಅವಕಾಶವಿಲ್ಲದೇ ಹತಾಶೆಗೊಂಡು ಮೂಲಭೂತವಾದಿಗಳ ಆಮಿಷಕ್ಕೆ ಬಲಿಯಾದವರಿಗೆ ಗಲ್ಲು ತೋರಿಸುತ್ತದೆ. ಕೆಲ ನ್ಯಾಯಾಧೀಶರೇ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜಸ್ಟಿಸ್ ಕೃಷ್ಣ ಅಯ್ಯರ್, 'ಮರಣ ದಂಡನೆ ಶಿಕ್ಷೆಗೊಳಗಾದವರನ್ನು ಗಮನಿಸಿದರೆ ವರ್ಗ ಪೂರ್ವಗ್ರಹ ಹಾಗೂ ವರ್ಣ ತಾರತಮ್ಯ ಹೊಂದಿರುವುದು ತಿಳಿಯುತ್ತದೆ' ಎಂದು ಅಭಿಪ್ರಾಯಪಟ್ಟರೆ; ಜಸ್ಟಿಸ್ ಪಿ.ಎನ್.ಭಗವತಿ 'ಮರಣ ದಂಡನೆ ತಾರತಮ್ಯವನ್ನು ಎತ್ತಿ ತೋರಿಸುತ್ತದೆ, ಶಿಕ್ಷಿಸಲ್ಪಟ್ಟವರ ವರ್ಗ ಮತ್ತು ವರ್ಣ ಚಹರೆಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ. ಕೆಳ ವರ್ಗದ ಬಡಜನತೆ ಮಾತ್ರ ಈ ಅತಿ ಕಠೋರ ಶಿಕ್ಷೆಗೆ ಗುರಿಯಾಗಿದ್ದಾರೆ' ಎಂದು ಹೇಳಿದ್ದಾರೆ.

ಪ್ರಭಾವಿ ಮತ್ತು ಸಿರಿವಂತ ವರ್ಗ ನಡೆಸುವ ಚಟುವಟಿಕೆಗಳು ಸಾರ್ವಜನಿಕ ಬದುಕನ್ನು ಅಪಾಯಕ್ಕೊಡ್ಡಿದರೂ ಅವು ಗಮನಕ್ಕೆ ಬಾರದೇ ಹೋಗುತ್ತವೆ. ಸಾವಿರಾರು ಕೋಟಿ ರೂಪಾಯಿ ಹಗರಣಗಳು, ಪರಿಸರ ನಾಶ, ಸಂಪನ್ಮೂಲಗಳ ಅಸಮಾನ ಬಳಕೆಯಂತಹ ಬಿಳಿ ಕಾಲರ್ ಅಪರಾಧಗಳು ಎಲ್ಲೋ ಒಂದಷ್ಟು ದಿನ ಮಾಧ್ಯಮದ ಬಾಯಿಗೆ ಸಿಕ್ಕು ನಂತರ ಮುಚ್ಚಿಹೋಗುತ್ತವೆ. ಸಾವಿರಾರು ಕೋಟಿ ರೂಪಾಯಿ ಬೊಕ್ಕಸಕ್ಕೆ ನಷ್ಟ ಮಾಡಿ ಎಷ್ಟೋ ಜನರ ಬದುಕುವ ಸಂಪನ್ಮೂಲ ಕಬಳಿಸಿದ ವ್ಯಕ್ತಿ ಗಣ್ಯನೆನಿಸಿಕೊಳ್ಳುತ್ತಾನೆ. ಇದು ಬಹುಸಂಖ್ಯಾತ ಅವಕಾಶವಂಚಿತರಲ್ಲಿ ಹತಾಶೆಯನ್ನೂ, ಅಪರಾಧ ಪ್ರವೃತ್ತಿಯನ್ನೂ ಉದ್ದೀಪಿಸುತ್ತದೆ.



ಇತ್ತೀಚೆಗೆ ಭಯೋತ್ಪಾದನೆ ಎಂಬ ಅರ್ಧ ಸತ್ಯ, ಮತ್ತರ್ಧ ಕಲ್ಪಿತ ಸಮಸ್ಯೆಯ ನಿಗ್ರಹಕ್ಕೆ ಕಠಿಣ ಕಾನೂನುಗಳು, ಗಲ್ಲು ಶಿಕ್ಷೆ ಬೇಕೆಂಬ ಮಾತು ಕೇಳಿಬರುತ್ತಿದೆ. ಕೋಮುದ್ವೇಷ ತುಂಬಿದ ಮನಸ್ಸುಗಳಿಗೆ ದೇಶಭಕ್ತಿ/ಧಾರ್ಮಿಕ ಪ್ರಜ್ಞೆ ಉದ್ದೀಪಿಸಲು ಉಗ್ರನಿರಬೇಕು ಮತ್ತು ಅವನನ್ನು ಶಿಕ್ಷಿಸಬೇಕು. ಆಳುವವರಿಗೆ ಶಿಸ್ತು ಕಾಪಾಡುವ ಅಸ್ತ್ರವಾಗಿ ಭಯೋತ್ಪಾದನೆ–ನಕ್ಸಲೀಯರ ದಾಳಿ, ಮರಣ ದಂಡನೆಗಳ ನೆವ ಬೇಕು. ಈ ವಿಷವರ್ತುಲದಿಂದ ಭಯೋತ್ಪಾದನೆಯೂ, ಕಠಿಣ ಕಾನೂನುಗಳೂ ದಿನಕ್ಕೊಂದು ಹೊಸರೂಪ ಪಡೆದು ಕಣ್ಮುಂದೆ ಬರುತ್ತಿವೆ.

ಮರಣ ದಂಡನೆ ಶಿಕ್ಷೆ ಇರಬೇಕೇ ಬೇಡವೇ ಎನ್ನುವುದು ಕೇವಲ ಕಾನೂನಿನ ಸಮಸ್ಯೆಯಲ್ಲ. ಇದು ಗಂಭೀರವಾದ ಸಾಮಾಜಿಕ ಮತ್ತು ಜನಾಂಗೀಯ ಪ್ರಶ್ನೆಗಳನ್ನೂ ಒಳಗೊಂಡಿದೆ. ಏಕೆಂದರೆ ನಾವಿಲ್ಲಿ ವ್ಯವಹರಿಸುತ್ತಿರುವುದು ಒಂದು ಮನುಷ್ಯ ಜೀವದ ಜೊತೆಗೆ. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸೇರಿದಂತೆ ಹಲವು ಸಂಸ್ಥೆಗಳು ಮರಣ ದಂಡನೆ ವಿರುದ್ಧ ಜಾಗೃತಿ ಮೂಡಿಸಲು ಯತ್ನಿಸುತ್ತಿವೆ. ಇಡೀ ವರ್ಷಕ್ಕೆ ಕೆಲವು ನೂರು ಜನರ ಜೀವ ತೆಗೆಯುವ ಮರಣದಂಡನೆಯಷ್ಟೇ ಅಲ್ಲ, ಯಾವ ಅಪರಾಧವಿಲ್ಲದೇ, ವಿಚಾರಣೆಯಿಲ್ಲದೇ, ಆಳುವವರ ಅಚಾತುರ್ಯದ ನಿರ್ಧಾರಗಳಿಗೆ ವರ್ಷವೂ ಸಾವಿರಾರು ಜನ ಯುದ್ಧ, ರಕ್ಷಣೆಯ ಹೆಸರಲ್ಲಿ ಬಲಿಯಾಗುವುದನ್ನು ವಿರೋಧಿಸಲು ಇದೊಂದು ನೆಲೆಯಾಗಬಹುದೆಂಬ ಆಶಯ ಅಂಥ ಮನಸ್ಸುಗಳ ಹಿಂದಿದೆ. ಈ ಎಲ್ಲ ಸಾಧಕ ಬಾಧಕಗಳ ಜೊತೆಗೆ ಶಿಕ್ಷಾನೀತಿಯ ಕುರಿತೇ ದೇಶ ಗಂಭೀರವಾಗಿ ಯೋಚಿಸುವ ಕಾಲ ಬಂದಿದೆ. ಕೊಲೆ ಹೇಗೆ ಜೀವ ವಿರೋಧಿಯೋ ರಾಷ್ಟ್ರೀಯತೆಯ ಅಮಲು ಸೃಷ್ಟಿಸುವ ಯುದ್ಧ ಅಷ್ಟೇ ಮಾನವ ಹಕ್ಕು ವಿರೋಧಿ, ಮಾನವ ಕುಲ ವಿರೋಧಿ. ಜೀವ ಕಾರುಣ್ಯದ, ಮಾನವೀಯತೆಯ ಪರ ಇರುವವರು ಸಹಜೀವಿಗಳ ಹತ್ಯೆಯನ್ನು ಸಮರ್ಥಿಸಲಾಗದು. ಅದನ್ನು ಸಮರ್ಥಿಸಬಹುದಾದರೆ ಯಾವ ನೈತಿಕತೆಯೂ ದಕ್ಕಲಾರದು.

ಅಪರಾಧಕ್ಕೆ ಕೊಡುವ ಶಿಕ್ಷೆ ಸಮಾಜದ ನೈತಿಕತೆಯನ್ನು ಉತ್ತಮಗೊಳಿಸುವುದಿಲ್ಲ. ಕೊಲೆ ಮಾಡಿದವರನ್ನು ಜೈಲಿಗೆ ಕಳಿಸಿ ಮರಣದಂಡನೆ ನೀಡಿದ ಮಾತ್ರಕ್ಕೆ ಕೊಲೆ ಅಪರಾಧಗಳ ಪ್ರಮಾಣ ಕಡಿಮೆಯಾಗುವುದಿಲ್ಲ. ಕಾನೂನು ಸುವ್ಯವಸ್ಥೆ ಕಾಪಾಡುವ ಜೊತೆಗೆ ಕಾನೂನು ವಿರೋಧಿ ನಡವಳಿಕೆಗಳಿಗೆ ಜನರನ್ನು ಪ್ರೇರೇಪಿಸುವ ಅಂಶಗಳತ್ತ ಆಳುವವರ ಗಮನ ಹರಿಯಬೇಕು.

ಈಗ ಬುದ್ಧ ಮತ್ತೊಮ್ಮೆ ಮುಗುಳುನಗಬೇಕು.. ■

DR. AMBEDKAR INSTITUTE OF TECHNOLOGY

Aided By Govt. of Karnataka

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

ADMISSION OPEN FOR 2012-2013

Computer Lab

Chemistry Lab

Digital Library


Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intak
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

Students Selection through campus interview

PLACED IN 2010-11

556 STUDENTS

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH |
EUREKA FORBES LTD.

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

'SAMVADA' Kannada Monthly, NOVEMBER 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)









ಸಂವಾದ

ವಿಶೇಷಾಂಕ - 2013

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ನಿರಂತರವಾಗಿ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆ ಇದೀಗ ಹನ್ನೊಂದನೆ ವರ್ಷಕ್ಕೆ ದಾಪುಗಾಲಿಟ್ಟಿದೆ. ಪ್ರತಿ ವರ್ಷದಂತೆ ಈ ವರ್ಷವೂ ವಿಶೇಷಾಂಕ ಹೊರಬರಲಿದೆ.

ಕಳೆದ ವರ್ಷ ಪ್ರಕಟವಾದ ವಿಶೇಷಾಂಕ ಕೇವಲ ಒಂದೇ ವಾರದಲ್ಲಿ ಸಂಪೂರ್ಣ ಮಾರಾಟವಾಗಿ, ಓದುಗರ ಅಪಾರ ಬೇಡಿಕೆಯಿಂದಾಗಿ ಪುನರ್ ಮುದ್ರಣ ಕಂಡಿದ್ದು ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ ಕಂಡರಿಯದ ವಿದ್ಯಮಾನ. 2012ರ ಶ್ರೇಷ್ಠ ವಿಶೇಷಾಂಕವೆಂಬ ಹೆಗ್ಗಳಿಕೆ 'ಸಂವಾದ'ಕ್ಕೆ ಸಿಕ್ಕಿದ್ದು ನಿಮಗೆಲ್ಲಾ ತಿಳಿದೇ ಇದೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲ ಸಿಂಧುಗಳಾಗುತ್ತಿರುವ ಜನರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುರೂಪಿ ಸಂಸ್ಕೃತಿಯ ಜತೆಗೆ ಈ ನಾಡಿನ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವ ಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಸವಾಲುಗಳನ್ನು ಕುರಿತ ಲೇಖನಗಳನ್ನು 'ಸಂವಾದ ವಿಶೇಷಾಂಕ'ದಲ್ಲಿ ಪ್ರಕಟಿಸಲು ಯೋಜಿಸಲಾಗಿದೆ.

ಇಂಥ ಗಂಭೀರ ವಿಚಾರಗಳನ್ನೊಳಗೊಂಡ ವಿಶ್ಲೇಷಣಾತ್ಮಕ ಲೇಖನಗಳಲ್ಲದೆ ಕಥೆ, ಕವನ, ವಿಡಂಬನೆ, ವ್ಯಕ್ತಿ ಚಿತ್ರ, ಛಾಯಾಚಿತ್ರಗಳ ನುಡಿಬರಹ ಮುಂತಾದ ಲೇಖನಗಳನ್ನು ಬರೆದು ಕಳುಹಿಸಿಕೊಡುವುದರ ಮೂಲಕ 'ಸಂವಾದದ ವಿಶೇಷಾಂಕ' ಸುಂದರವಾಗಿ ಮೂಡಿಬರಲು ಸಹಕರಿಸಬೇಕೆಂದು ಕೋರುತ್ತೇವೆ.

ನಿಮ್ಮ ಲೇಖನಗಳು ನಮಗೆ ತಲುಪಲು ಕೊನೆಯ ದಿನಾಂಕ: 30-11-2012

ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ಅಥವಾ 'ಬರಹ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ **Page Maker** ಅಥವಾ **Word File**ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.

e-mail: samvaada@hotmail.com
honnapura@yahoo.co.in
ವಿಳಾಸ: ಸಂಪಾದಕರು, ಸಂವಾದ ಮಾಸ ಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ, ಬೆಂಗಳೂರು-560091.
ಮೊ: 9448048306, 080 - 23480278